
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


ಫೆಬ್ರವರಿ 27, 2013 ಪುಟ 20 ರೂ. 14/-

ಬಿಜಾಪುರ ಕಂಡ, ಕಾಣದ ಜನ



ಮಾನಗೇಡಿ ಬಿಜೆಪಿ


ಚುನಾವಣೆ ಮುನ್ನ ಸೀರೆ, ದುಡ್ಡು, ಬೀರು, ಸೈಟು ಆಮಿಷ



ಮದಾಸ್ ಸ್ತಿ ಎಷ್ಟು? ವನೂರು ಪ್ರಶ್ನೆ

ಕೃಷ್ಣಯ್ಯ ಶೆಟ್ಟಿಗೆ ಗೂಸಾ

ಾಹುಲ್‌ಗಾಗಿ ಫ್ಜಲ್ ಬಲಿ




B.M.T.C. ಜೀತಪದ್ಧತಿ



ಲಾಡೆನ್ ೊಂದವನು ಳಿದ ಕತೆ

ರೆಡ್ಡಿಯ ಫ್ರಂಟ್‌ಮ್ಯಾನ್ ಆಲಿಖಾನ್

ಬೈಂದೂರು ಬಿಜೆಪಿ ಟಿಕೆಟ್‌ಗಾಗಿ ಬಡಿದಾಟ



ಸಂಗೊಳ್ಳಿ ರಾಯಣ್ಣ 100 ದಿನ! ಕೋಟಿ?

ಕರಾವಳಿ ಅಲೆ ಮುಗಿಸಲು ಪಿತೂರಿ

ಕರ್ನಾಟಕ ಆರ್ಥಿಕತೆ ಗೋಷ್ಠಿಯಲ್ಲಿ ಕಿಕ್ಕಿರಿದಿದ್ದ ಜನ




ಸಂತೆಯೊಳಗೊಬ್ಬ ಸಂತ ರಹಮತ್ ಮಾತಿಗೆ ಕಿವಿಗೊಟ್ಟ ರೈತರು





ಬಿಜಾಪುರದಲ್ಲಿ ಕಂಡ ಜನ ಮತ್ತು ಕಾಣದ ಜನರ ಬಗ್ಗೆ...



ಪಾರ್ವತೀಶ ಬಿಡಿ ಚಿತ್ರಗಳು

"ಬಿಜಾಪುರದಲ್ಲಿ ಆಟೋ ಡ್ರೈವರ್‌ಗಳು ಸಮ್ಮೇಳನದ ಜಾಗಕ್ಕೆ ಕರೆದುಕೊಂಡು ಹೋಗಲು ನೂರುಪಾಯ್ ತಗೋತಿದಾರಂತೆ.,"

-ನಾವು ಸಾಹಿತ್ಯ ಸಮ್ಮೇಳನಕ್ಕೆ ಹೊರಡುವ ತಯಾರಿಯಲ್ಲಿದ್ದಾಗ ಫೋನ್ ಮಾಡಿದ ಬೆಂಗಳೂರಿನ ಮಿತ್ರರೊಬ್ಬರು ಹೀಗೆಂದು ದೂರಿದರು. ಆದರೆ ನಾವದನ್ನು ನಂಬಲಿಲ್ಲ. ಬಿಜಾಪುರದ ಜನಜೀವನ ಗೊತ್ತಿರದಿದ್ದ ಆ ಮಿತ್ರನ ಮಾತಿಗೆ ಗಮನವನ್ನೂ ನೀಡದೆ ಸೀದಾ ಬಿಜಾಪುರಕ್ಕೆ ಹೋಗಿ ಕೇವಲ ಹತ್ತು ರೂಪಾಯಿ ಕೊಟ್ಟು ಸೈನಿಕ ಶಾಲೆಯ ಆವರಣದಲ್ಲಿ ನಡೆಯುತ್ತಿದ್ದ ಸಮ್ಮೇಳನದ ಸ್ಥಳ ತಲುಪಿಕೊಂಡೆವು. ನಮಗೆಲ್ಲಾ ಬಿಜಾಪುರದೊಳಗಿನ ಓಡಾಟ ಚೆನ್ನಾಗಿ ಅಭ್ಯಾಸವಿತ್ತಾದ್ದರಿಂದ ಆಟೋದವರೊಂದಿಗೆ ಎಂತದ್ದೂ ಸಮಸ್ಯೆಯಾಗಲಿಲ್ಲ. ಬಿಜಾಪುರ ಗೊತ್ತಿರದಿದ್ದ ಸಾಹಿತಿ ಮಿತ್ರರಿಗೆ ಆಟೋದವರ ಬಗ್ಗೆ ಅನುಮಾನ ನಿವಾರಣೆಯಾಗಿರಲಿಲ್ಲ.

ಬಿಜಾಪುರದ ಸಾಹಿತ್ಯ ಸಮ್ಮೇಳನದ ಬಗ್ಗೆ ಹೇಳಲು ಹೊರಟವನು ಆಟೋದವರ ವಿಚಾರ ಹೇಳಬೇಕಾಗಿ ಬಂದದ್ದಕ್ಕೆ ಕಾರಣವೂ ಇದೆ.

ನಮಗೆ ನಮ್ಮದೇ ನೆಲದ ವೈವಿಧ್ಯಮಯ ಬದುಕಿನ ಲಯಗಳ ಪರಿಚಯವಿದ್ದರೆ ನಮ್ಮ ಗ್ರಹಿಕೆ, ಒಳನೋಟ, ಅಭಿವ್ಯಕ್ತಿಗಳು ಕೂಡ ಅಷ್ಟೇ ವೈವಿಧ್ಯಮಯಗೊಳ್ಳುತ್ತದೆ ತಾನೆ?

ಬಿಜಾಪುರದ ಆಟೋಗಳ ವೈಶಿಷ್ಟ್ಯ ಏನೆಂದರೆ ಅವೆಲ್ಲಾ ಬೆಂಗಳೂರಿನ ಬಿಟಿಎಸ್ ಬಸ್‌ಗಳಿದ್ದಂತೆ. ಆ ನಗರದ ಕೇಂದ್ರ ಭಾಗದಿಂದ ಹತ್ತಾರು ದಿಕ್ಕಿಗೆ ಹೊರಡುವ ಆಟೋಗಳು ಹಾದಿಯಲ್ಲಿ ಸಿಗುವ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಾ ಇಳಿಯಬೇಕಾದಲ್ಲಿ ಇಳಿಸಿ ಹತ್ತು ರೂ. ಪಡೆದು ಮುಂದೆ ಸಾಗುತ್ತಿರುತ್ತವೆ. ಆ ನಗರದಲ್ಲಿ ನೀವು ಎಲ್ಲೇ ಆಟೋ ಹತ್ತಿ ಮತ್ತೆಲ್ಲೋ ಇಳಿದರೂ ಆಟೋ ದರ ಕೇವಲ ಹತ್ತು ರೂಪಾಯಿ ಮಾತ್ರ. ಇದೊಂಥರಾ ಸಮೂಹ ಸಾರಿಗೆ concept.

ಒಂದು ವೇಳೆ ನಾವು ಹತ್ತುವ ಆಟೋಗೆ ಬೇರೆ ಪ್ರಯಾಣಿಕರನ್ನು ಹತ್ತಿಸಕೂಡದೆಂದು ನಾವೇ ಒತ್ತಾಯ ಮಾಡಿದರೆ ಮಾತ್ರ ಡ್ರೈವರ್‌ಗಳು ಪ್ರಯಾಣದ ದೂರ ಲೆಕ್ಕಹಾಕಿ ಐವತ್ತೋ, ನೂರೋ ಕೇಳುತ್ತಾರಷ್ಟೆ. ಬಿಜಾಪುರದ ಆಟೋವಾಲಾಗಳು ಕಷ್ಟಜೀವಿಗಳು ಮತ್ತು ನಗೆ ಬೀರುವ ಜನ. ಮೊನ್ನಿನ ಸಮ್ಮೇಳನಕ್ಕೆಂದು ಕರ್ನಾಟಕದ ಬೇರೆ ಪ್ರಾಂತ್ಯಗಳಿಂದ ಬಂದಿದ್ದ ಸಾಹಿತಿಗಳೇನಾದರೂ ಈ ಆಟೋ ಸಮೂಹ ಸಾರಿಗೆಯ ಅನುಭವ ಮಿಸ್ ಮಾಡಿಕೊಂಡಿದ್ದರೆ ಅದು ನಿಜಕ್ಕೂ ಅವರಿಗಾದ ನಷ್ಟವೇ ಹೌದು. ಈ ತರದ ಅನುಭವಗಳೆಲ್ಲಾ ಒಂದು ರೀತಿಯ leveller ಗಳಿದ್ದ ಹಾಗೆ.

ನಾವು ಈ leveller ಪದವನ್ನೂ ಸಪಾಟುಗೊಳಿಸುವುದು ಅಥವಾ ಒಂದೇ ತಕ್ಕಡಿಯಲ್ಲಿ ಹಾಕಿಬಿಡುವುದೆಂದುಕೊಂಡಲ್ಲಿ ಬಿಜಾಪೂರ ಸಮ್ಮೇಳನದಲ್ಲಿ ಅದು ಒಂದು ಮಟ್ಟಿಗೆ ಚೆನ್ನಾಗಿಯೇ ಆಗಿದೆ. ಅಲ್ಲಿಗೆ ಬಂದಿದ್ದ ಸಾಹಿತಿಗಳು, ಖ್ಯಾತನಾಮರು, ವಿಶೇಷ ಆಹ್ವಾನಿತರು, ಬುದ್ಧಿಜೀವಿ, ಕಲಾವಿದರನ್ನೆಲ್ಲಾ ಬಿಜಾಪುರದ ಜನ ಬಹಳ ಪ್ರೀತಿ ಅಭಿಮಾನದಿಂದಲೇ ಸಪಾಟೀಕರಣ ಮಾಡಿದರು. ರೈತರು, ವಿದ್ಯಾರ್ಥಿಗಳು, ಯುವಜನರು, ಗೃಹಿಣಿಯರು, ವೃದ್ಧರು, ಕಾರ್ಮಿಕರು, ಕೂಲಿಗಾರರೂ ಸೇರಿದ್ದಿರಬಹುದಾದ ಆ ಸಮಾವೇಶವು ಕಲ್ಪಿಸಿಕೊಳ್ಳಲಾಗದಂತಹ ಜನಜಾತ್ರೆಯಾಗಿತ್ತು, ಮತ್ತದು ಚೆನ್ನಾಗಿತ್ತು.

ನಮ್ಮ ಕಾಲದ ಕೆಲವು ಸಾಹಿತಿ, ಬುದ್ಧಿಜೀವಿಗಳ ಸಮಸ್ಯೆ ಏನೆಂದರೆ ಅವರ ಬಹುತೇಕ ಬಿಡುವಿನ ಸಮಯವು ಸಮಾನ ಮನಸ್ಕರೊಂದಿಗೆ ಮಾತ್ರ ಕಳೆಯುತ್ತಿರುತ್ತದೆ. ಸಾಹಿತಿಯಾದವರ ಒಡನಾಟಗಳೆಲ್ಲ ಇನ್ನಿತರ ಸಾಹಿತಿಗಳೊಂದಿಗೆ ಅಥವಾ ಹೆಚ್ಚೆಂದರೆ ತನ್ನನ್ನು ಮೆಚ್ಚುವ ಓದುಗರೊಂದಿಗೆ ಮಾತ್ರ ಇರುತ್ತವೆ. ಇನ್ನು ಕೆಲವು ಬುದ್ಧಿಜೀವಿಗಳು ಸೆಮಿನಾರುಗಳಲ್ಲಿ, ಬರವಣಿಗೆ ಹಾಗೂ ಸಮಾನ ಮನಸ್ಕರೊಂದಿಗಿನ ಬೌದ್ಧಿಕ ಚರ್ಚೆಯ ಜಗತ್ತಿನಲ್ಲಿರುತ್ತಾರೆ. ಇಂತವರು ರೈತರು, ಕೂಲಿಗಳು, ಯುವಜನರು, ಕಾರ್ಮಿಕರೊಂದಿಗೆ ಒಡನಾಟವಿರಿಸಿಕೊಳ್ಳದೆ ಹೋದರೆ ನಮ್ಮದೇ ಸಮಕಾಲೀನ ಬದುಕಿನ ಹೊಸ ಒಳನೋಟಗಳು ಸಿಗುವುದಾದರೂ ಹೇಗೆ?


ಪ್ರಖ್ಯಾತ ರಷ್ಯನ್ ಕ್ರಾಂತಿ ಕವಿ ಮಯಕೋವ್‌ಸ್ಕಿ 'ಒಳ್ಳೆಯ ಸಾಹಿತಿಯೊಬ್ಬ ತನ್ನ ಸಮಕಾಲೀನ ಬದುಕನ್ನೂ ಸೃಜನಶೀಲನಾಗಿ ದಾಖಲಿಸುತ್ತಿರುತ್ತಾನೆ' ಎಂದಿದ್ದ. ಚಿಲಿ ದೇಶದ ಕವಿ ಪಾಬ್ಲೊ ನೆರೂದ ಆ ದೇಶದ ಕೂಲಿ ಕಾರ್ಮಿಕರ, ಜನ ಸಾಮಾನ್ಯರ ಜೊತೆ ಬೆರೆತು ಅವರೆಲ್ಲರ ಪ್ರೀತಿ ಪಾತ್ರ ಕವಿ ಎನಿಸಿಕೊಂಡಿದ್ದ.

ಅದಕ್ಕಿಂತಲೂ ಮುಖ್ಯವಾದ ವಿಚಾರ ಏನೆಂದರೆ ನೆರೂದ ತನ್ನ ಪದ್ಯಗಳನ್ನು ಅವರಿಗೆಲ್ಲಾ ಓದಿ ಹೇಳುತ್ತಿದ್ದ. ಅನೇಕ ಸಾರಿ ಅವನು ಭಾಷಣ ಮಾಡುವಾಗ ಜನಸಾಮಾನ್ಯರು ಪದ್ಯ ಓದುವಂತೆ ಗೋಗರೆಯುತ್ತಿದ್ದರು.


ನೆರೂದ ಇದನ್ನೆಲ್ಲಾ ಸಂಭ್ರಮಿಸುತ್ತಿದ್ದ. ಅವರೊಂದಿಗಿನ ಒಡನಾಟಗಳು ಅವನ ಕಾವ್ಯಸಾಧನೆಗಳ canvas ಅನ್ನು ಹಿಗ್ಗಿಸುತ್ತಿದ್ದವು. ಮಾತ್ರವಲ್ಲ, ಅವನ ಕಾವ್ಯಾಭಿವ್ಯಕ್ತಿಯು ಇನ್ನಷ್ಟು ಸರಳವೂ ಹಾಗೂ ಹರಿತವೂ ಆದವು.

ಇಂತದನ್ನೆಲ್ಲಾ ಓದಿದಾಗ ನಮ್ಮಲ್ಲೂ ಜನಸಾಮಾನ್ಯರೂ ಸ್ಪಂದಿಸಬಲ್ಲಂತಹ ಬರಹ- ಭಾಷಣಗಳೇಕೆ ಬರುತ್ತಿಲ್ಲ ಎನಿಸುತ್ತದೆ. ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ ಮಾತ್ರಕ್ಕೆ ಇವೆಲ್ಲಾ ಸಾಧ್ಯವಾಗಿಬಿಡುತ್ತದೆಂಬ ಭ್ರಮೆಯೇನು ನಮಗೆ ಇರಬೇಕಾಗಿಲ್ಲ. ನನಗೆ ಗೊತ್ತಿರುವ ಹಾಗೆ ನಮ್ಮಲ್ಲಿ ಅನೇಕರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಹಿನ್ನೆಲೆ, ಸಾಂಸ್ಥಿಕ ಸ್ವರೂಪ, ಸರ್ಕಾರಿ ಮುಲಾಜುಗಳ ಬಗ್ಗೆ

ಶಾಲಾ ಮಕ್ಕಳ ಪುಸ್ತಕ ಖರೀದಿಯ ಸಂಭ್ರಮ



ಪುಸ್ತಕ ಮಳಿಗೆಯಲ್ಲಿ ಚಂಪಾ



ಆಕ್ಷೇಪಣೆಗಳಿವೆ. ಇನ್ನು ಕಸಾಪದೊಳಗಿನ ಜಾತೀಯತೆ, ಪ್ರತಿಗಾಮಿ ನಿಲುವುಗಳು, ಜಡತ್ವ, ಸೃಜನಶೀಲತೆಯ ಬರಡುತನಗಳ ಬಗ್ಗೆಯೂ ಸಕಾರಣವಾದ ದೂರುಗಳಂತೂ ಇದ್ದೇ ಇವೆ. ಆದರೆ ಬೇರೆಲ್ಲೂ ಕಾಣಸಿಗದಷ್ಟು ಜನ ಇಂತಹ ಸಮ್ಮೇಳನಗಳಲ್ಲಿ ಉತ್ಸಾಹದಿಂದ ಬಂದು ಭಾಗವಹಿಸುತ್ತಾರಲ್ಲ...

ನಾವೇಕೆ ಜನರಿಂದ ದೂರ ಉಳಿಯಬೇಕು?

ಹಾಗೆ ನೋಡಿದರೆ ರಾಜಕೀಯ ಪಕ್ಷಗಳ ರ್‍ಯಾಲಿಗಳಿಗೆ ಹಣ ಕೊಡದಿದ್ದರೆ ಜನ ಬರುವುದಿಲ್ಲ, ಸಿನಿಮಾದವರ ಕಾರ್ಯಕ್ರಮಗಳಿಗೆ ಜಾಸ್ತಿ ಜನ ಹೋಗುತ್ತಾರಾದರೂ ಅವೆಂದಿಗೂ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಜನರ ಸಂಖ್ಯೆಯ ಹತ್ತಿರಕ್ಕೂ ಬರುವುದಿಲ್ಲ, ಬಹಳ ಮುಖ್ಯವಾಗಿ ಯಾವುದೇ ಸಾಹಿತ್ಯ ಸಮ್ಮೇಳನಗಳಲ್ಲಿ crowd puller ತರದ ಸ್ಟಾರ್ ಸಾಹಿತಿಗಳ್ಯಾರೂ ಇರುವುದಿಲ್ಲ, ಆದರೂ ಜನ ಬಿಸಿಲು, ಧೂಳು ತರದ ಅನಾನುಕೂಲಗಳನ್ನು ಲೆಕ್ಕಿಸದೆ ಲಕ್ಷಾಂತರ ಸಂಖ್ಯೆಯಲ್ಲಿ ಬಂದು ಭಾಗವಹಿಸುವುದನ್ನು ಉಡಾಫೆಯಿಂದ ನೋಡಲಾಗದೆನಿಸುತ್ತದೆ.

ಇನ್ನು ಈ ಸಮ್ಮೇಳನಗಳಲ್ಲಿ ನಡೆಯುವ ಗಂಭೀರ ಗೋಷ್ಠಿಗಳು ಅದೆಷ್ಟು ಜನರಿಗೆ (ಸಾಮಾನ್ಯ ಜನರಿಗೆ) ಅರ್ಥವಾಗುತ್ತವೆ, ಜನ ಸುಮ್ಮನೆ ಉಮೇದಿಗೆ ಬಂದು ಕುಳಿತಿರುತ್ತಾರೆಂಬ ವಾದವೂ ಈ ಬಾರಿ ಪುನಃ ಕೇಳಿಬಂದಿದೆ. ಕೆಲವು ಪತ್ರಿಕಾ ವರದಿಗಳಲ್ಲೂ "ಹಾಲ್‌ಗಳು ಜನರಿಂದ ತುಂಬಿದ್ದರೂ ಸಹ ಜನ ಆಸಕ್ತಿಯಿಂದೇನೂ ಕೇಳಿಲ್ಲ" ಎಂದು ಹೇಳಲಾಗಿದೆ.

ಇದು ವಾಸ್ತವ ನಿಜ. ಆದರೆ ಇದನ್ನು break ಮಾಡುವುದು ಹೇಗೆ?

ಒಬ್ಬ ಭಾಷಣಕಾರನ ವಿಷಯ ಹಾಗೂ ತಿಳಿವಳಿಕೆಯ ಮಟ್ಟಕ್ಕೂ ಅಲ್ಲಿ ಸಭಿಕರಾಗಿರುವ ಜನಸಾಮಾನ್ಯರ ತಿಳಿವಳಿಕೆ ಹಾಗೂ ಗ್ರಹಿಸುವ ಶಕ್ತಿಗೂ ಹೆಚ್ಚಿನ ಅಂತರವಿದೆ ಇಂದಿಟ್ಟುಕೊಳ್ಳೋಣ. ಆಗ ಭಾಷಣಕಾರರೇ ತಮ್ಮ ಮಾತಿನ ಶೈಲಿ, ವಿಚಾರ ಮಂಡನೆಯ ಕ್ರಮವನ್ನು ಬದಲಿಸಿಕೊಂಡು ಜನಸಾಮಾನ್ಯರಿಗೂ ಅರ್ಥವಾಗಬಲ್ಲ ರೀತಿಯಲ್ಲಿ ಹೇಳಬಹುದಲ್ಲ..?

ಬಿಜಾಪುರದಲ್ಲಿ ಕರ್ನಾಟಕದ ಆರ್ಥಿಕತೆ ಕುರಿತಾದ ಗೋಷ್ಠಿ ಒಂದೂವರೆ ಗಂಟೆ ನಡೆಯಿತು. ತುಂಬಿತುಳುಕುತ್ತಿದ್ದ ಹಾಲ್‌ನಲ್ಲಿ ಬಂಜಗೆರೆ ಜಯಪ್ರಕಾಶ್, ವಾಸು, ನಟರಾಜ್ ಹುಳಿಯಾರ್ ಹಾಗೂ ಕೆ. ನೀಲಾ ತಮ್ಮ ವಿಚಾರಗಳನ್ನು ಚೂರೂ ಬೋರ್ ಹೊಡೆಸದಂತೆ ಮಾತನಾಡಿ ಚಪ್ಪಾಳೆಯ ಮೆಚ್ಚುಗೆ ಪಡೆದರು. ಆ ಜನ ಈಗಾಗಲೇ ಸೆಮಿನಾರುಗಳಲ್ಲಿ ಭಾಗವಹಿಸಿರುವ ಅಥವಾ ಕೊಂಚ ಮಟ್ಟಿನ ಬೌದ್ಧಿಕ ತಯಾರಿಯಿದ್ದ ಜನರೇನಾಗಿರಲಿಲ್ಲ ಎಂದುಕೊಂಡರೂ ಅವರಿಗೆಲ್ಲ ನಮ್ಮ ಕರ್ನಾಟಕ ಸರ್ಕಾರದ, ವಿದೇಶಿ ಕಂಪನಿಗಳ, ಜಾಗತೀಕರಣದ ನೀತಿಗಳು ಮತ್ತದರ ಪರಿಣಾಮಗಳು ಸ್ವಲ್ಪವಾದರೂ ಅರ್ಥವಾಗಿದ್ದಿರಬಹುದು.

ಅಲ್ಲೇ ನಾನಿನ್ನೊಂದು ದೃಶ್ಯ ಕಂಡೆ. ಸಮ್ಮೇಳನದ ಮುಖ್ಯ ವೇದಿಕೆಯಲ್ಲಿ ರಹಮತ್ ತರೀಕೆರೆಯವರು 'ಅನುಭಾವಿ ಸಾಹಿತ್ಯ' ಕುರಿತಂತೆ ಮಾತಿಗಿಳಿದಿದ್ದರು. ಇಪ್ಪತ್ತೈದು ಸಾವಿರ ಕೇಳುಗರಿದ್ದ ಗೋಷ್ಠಿ ಅದು. ಆ ವೇದಿಕೆಯ ಹೊರ ಭಾಗದಲ್ಲಿ ದೊಡ್ಡದೊಂದು ಸ್ಕ್ರೀನ ಹಾಕಿದ್ದು ಅಲ್ಲೂ ರಹಮತರ ಭಾಷಣ ಪ್ರಸಾರವಾಗುತ್ತಿತ್ತು. ಮುಖ್ಯವೇದಿಕೆ ಹಾಗೂ ಪುಸ್ತಕದಂಗಡಿಗಳ ಮಧ್ಯದ ಒಂದು ಆಟದ ಮೈದಾನದಷ್ಟಿದ್ದ ಆ ಜಾಗದಲ್ಲೂ ಜನ... ಜನ.. ಜನ. ಅಲ್ಲೊಂದಷ್ಟು ರೈತರು ಬಿಸಿಲಿನಲ್ಲಿ ಕೂತು 'ಸಂತೆಯೊಳಗೊಬ್ಬ ಸಂತ'ನಂತೆ ಕಾಣುತ್ತಿದ್ದ ರಹಮತರ ಮಾತನ್ನು ತಲೆದೂಗುತ್ತಾ ಕೇಳುತ್ತಿದ್ದರು.

ಆ ರೈತರು ಯಾರದೋ ಒತ್ತಾಯಕ್ಕೆ ಅಲ್ಲಿ ಕೂತಿರಲಿಲ್ಲ ಎಂಬುದು ನನಗೆ ಮುಖ್ಯ ಅನಿಸಿತು.

ಉಳಿದಂತೆ ಬೇರೆಲ್ಲಾ ಸಾಹಿತ್ಯ ಸಮ್ಮೇಳನಗಳಂತೆ ಬಿಜಾಪುರದಲ್ಲೂ ಕೊಂಚ ಅರಾಜಕತೆ, ಊಟದ ರಾದ್ಧಾಂತ, ಪುಢಾರಿಗಳ ಹಾರಾಟಗಳೆಲ್ಲಾ ಇದ್ದೇ ಇತ್ತು, ಒಂದು ಲಕ್ಷ ಜನರಿಗೆ ರೆಡಿ ಮಾಡಿಸಿದ್ದ ಊಟ ಮಾಡಲು ಒಂದೂವರೆ ಲಕ್ಷ ಜನ ಮುಗಿಬಿದ್ದರೆ ದೂರುವುದಾದರೂ ಯಾರನ್ನು?

ಕೇವಲ ಒಂದು ಸಾವಿರ ಜನ ಪಾಲ್ಗೊಳ್ಳುವ ಸಾಂಪ್ರದಾಯಿಕ ಮದುವೆಗಳಲ್ಲೂ ಊಟದ ಒಂದು ಪಂಕ್ತಿ ಮುಗಿದು ಎಂಜಲೆಲೆ ಎತ್ತುವ ಮೊದಲೇ ಇನ್ನೊಂದು ಪಂಕ್ತಿಯ ಜನ ಕುರ್ಚಿ-ಮೇಜು ಆಕ್ರಮಿಸಿಕೊಳ್ಳುವ 'ಮದುವೆ ಮಡೆಸ್ನಾನ'ದ ಧಾವಂತ ನಮ್ಮ ಜನರಿಗಿರುವಾಗ ಇನ್ನು ಲಕ್ಷಾಂತರ ಜನರಿಗೆ ಸರಿಯಾಗಿ ಊಟ ಹಾಕಿಸಿ ಸೈ ಅನಿಸಿಕೊಳ್ಳಲುಂಟೆ? ಇದೇ ಸಮ್ಮೇಳನದಲ್ಲಿ ಅದ್ಯಾರೋ ಉದ್ಧಟ ಮಹಿಳೆ ಸಮ್ಮೇಳನಕ್ಕೆ ಬಂದ ಮಹಿಳಾ ಪ್ರತಿನಿಧಿಗಳಿಗೆ ಕುಬಸದ ಕಣ ನೀಡಿ ಮಡಿಲಕ್ಕಿ ತುಂಬಿ ಕಳಿಸುತ್ತೇನೆಂದು ಘೋಷಿಸಿ ಕಸಾಸ ಅಧ್ಯಕ್ಷ ಹಾಲಂಬಿಯವರಿಂದ ಬೈಯ್ಸಿಕೊಂಡು ಹೊರ ಹಾಕಲ್ಪಟ್ಟರು. ಸಮ್ಮೇಳನಕ್ಕೆ ಪರೋಕ್ಷ ಹಿಂದೂತ್ವ ಲೇಪನ ನೀಡುವ ಕೆಲವರ ಕುಯುಕ್ತಿ ಅಲ್ಲಿ ಯಶಸ್ವಿಯಾಗಲಿಲ್ಲ.

ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ರಾಜ್ಯದೆಲ್ಲೆಡೆಯಿಂದ ಜನ ಯಾಕೆ ದಂಡೆತ್ತಿ ಬರುವಂತೆ ಲಕ್ಷಾಂತರ ಸಂಖ್ಯೆಯಲ್ಲಿ ಬರುತ್ತಾರೆ? ಇದೇನು ಕನ್ನಡ ಕರ್ನಾಟಕದ ಬಗೆಗಿನ ಅಭಿಮಾನವಾ? ಓದು ಬರಹಗಳ ಮೇಲಿನ ಮೋಹವಾ? ಅಥವಾ ಬರಿದೇ ದೊಡ್ಡ ಜಾತ್ರೆಯೊಂದರಲ್ಲಿ ಪಾಲ್ಗೊಳ್ಳುವ ಉಮೇದಾ? ಅಥವಾ ನಮ್ಮ ಬರಹಗಾರ-ಬುದ್ಧಿಜೀವಿಗಳಿಂದ ಜನ ಅಗಾಧವಾದದ್ದನ್ನೇನಾದರು ನಿರೀಕ್ಷಿಸುತ್ತಿದ್ದಾರಾ?

ನಾವಿದನ್ನು ಇನ್ನಷ್ಟು ಖಚಿತವಾಗಿ ಅರ್ಥೈಸಬೇಕಿದೆ.

ಅಂದಹಾಗೆ...

ಬಿಜಾಪುರ ಸಮ್ಮೇಳನದಲ್ಲಿ ಮೂರು ಕೋಟಿ ರೂಪಾಯಿಗಳಷ್ಟು ಪುಸ್ತಕಗಳು ಮಾರಾಟವಾಗಿವೆ!

ನಾವು ಜನರ ಬಗ್ಗೆ ಭರವಸೆ ಕಳೆದುಕೊಳ್ಳುವ ಅಗತ್ಯವಿಲ್ಲ, ಹತಾಶರಾಗುವುದು ಬೇಕಿಲ್ಲ ಎನಿಸುತ್ತದೆ.


ಕೊನೆಯದಾಗಿ

ಇದೇ ಸಮ್ಮೇಳನದ ಅವಧಿಯಲ್ಲಿ ಒಂದು ಕೋಟಿ ರೂಪಾಯಿಗಳಷ್ಟು ಮದ್ಯ ಮಾರಾಟವಾಗಿದೆ ಎಂತಲೂ ಸುದ್ದಿ ಇದೆ.

ಕನ್ನಡ ಓದುಗರು ಅಚಲ, ಆದರೆ ಸಾಹಿತಿಯೇ ಚಂಚಲ ಎನ್ನಲು ಇನ್ನೇನು ಪುರಾವೆ ಬೇಕು?

ಸಮ್ಮೇಳನದಲ್ಲಿ ಕಂಡ ಲಂಬಾಣಿ ಹಾಗೂ ಮುಸ್ಲಿಂ ಮಹಿಳೆಯರು






ಚಿತ್ರಗಳು : ಆನಂದ್ & ಮುರಳಿ ಮೋಹನ್ ಕಾಟಿ, ಸಂವಾದ

ದೆಹಲಿ ಯುವತಿಗೆ ಮರುಗಿದ ಮನ ಈಗ ಮೌನವಾಗಿರುವುದೇಕೆ?

ಆಕೆ ಯಾರು? ಆಕೆಯ ಹೆಸರೇನು? ಅವಳು ...ವಾಸ ಮಾಡುತ್ತಿದ್ದಳು? ಸುಮಾರು 23 ವರ್ಷ ...ವಸ್ಸಿನವಳಾಗಿರುವ ಅವಳನ್ನು ಹೆತ್ತವರು ಎಲ್ಲಿದ್ದಾರೆ?



...ಎಲ್ಲ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರವಿಲ್ಲ.

...ಉತ್ತರಗಳು ಗೊತ್ತಿರುವ ಆಕೆ ಕಳೆದ ಹನ್ನೊಂದು ...ಗಳಿಂದ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ...ರ್ತು ಚಿಕಿತ್ಸಾ ಘಟಕದಲ್ಲಿ ಪ್ರಜ್ಞೆ ಕಳೆದುಕೊಂಡು ...ಬದುಕು ಮತ್ತು ಸಾವಿನ ಮಧ್ಯೆ ತೊಯ್ದಾಡುತ್ತಿದ್ದಾಳೆ. ... ವೈದ್ಯರು ಈ ಯುವತಿಯ ಪ್ರಾಣವನ್ನು ರಕ್ಷಿಸಲು ...ಸಾಹಸ ಮಾಡುತ್ತಿದ್ದಾರೆ. ಆಕೆಯ ಮೆದುಳಿನಲ್ಲಿ ...ಸ್ರಾವವಾಗಿದ್ದರಿಂದ ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಆದರೂ ...ಯ ಸ್ಥಿತಿ ಗಂಭೀರವಾಗಿದೆ.

ಆದರೆ ಆಕೆಗೆ ಏನಾಯಿತು ಎಂಬುದನ್ನು ಕುರಿತು ಈಗ ಗೊತ್ತಾಗಿರುವ ಹಲವೇ ಹಲವು ಅಂಶಗಳಂತೂ ಭೀಕರವಾಗಿವೆ. ಫೆಬ್ರವರಿ 3ನೇ ತಾರೀಖು ಆಕೆ ಬೆಂಗಳೂರಿನ ಹೊರವಲಯದಲ್ಲಿರುವ ತಾವರೆಕೆರೆ ಪ್ರದೇಶದಲ್ಲಿ ಅಪ್ರಜ್ಞಾವಸ್ಥೆಯಲ್ಲಿ ಬಯಲೊಂದರಲ್ಲಿ ಬಿದ್ದಿದ್ದಳು. ಆಕೆಯ ದೇಹದ ಸುತ್ತ ಬಳಸಿ ಬಿಸಾಡಿದ್ದ ಕಾಂಡೋಮ್‌ಗಳಿದ್ದವು. ಖಾಲಿಯಾಗಿದ್ದ ಗುಂಡಿನ ಬಾಟಲಿಗಳಿದ್ದವು. ರಕ್ತಸಿಕ್ತವಾಗಿದ್ದ ದೊಡ್ಡದಾದ ಕಲ್ಲೊಂದಿತ್ತು. ಇವುಗಳಿಂದ ಆಕೆಯ ಮೇಲೆ ಸಾಮೂಹಿಕ ಲೈಂಗಿಕ ಅತ್ಯಾಚಾರವಾಗಿರುವುದು, ಆಕೆಯ ದೇಹದ ಮೇಲೆ ಬರ್ಬರ ದಾಳಿ ನಡೆದಿರುವುದು, ಇದೆಲ್ಲದರ ಪರಿಣಾಮವಾಗಿ ಆಕೆ ಪ್ರಜ್ಞೆ ಕಳೆದುಕೊಂಡಿರುವುದು ಸ್ಪಷ್ಟವಾಗುತ್ತದೆ.

ಇತ್ತೀಚೆಗೆ ದೇಶದ ರಾಜಧಾನಿ ದೆಹಲಿಯಲ್ಲೂ ಓರ್ವ ಯುವತಿಯ ಮೇಲೆ ಇಂತಹದ್ದೇ ಆಕ್ರಮಣ ನಡೆದು ಆಕೆ ತನ್ನ ಪ್ರಾಣವನ್ನೇ ಕಳೆದುಕೊಂಡಳು. ಈಗ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲೂ ಓರ್ವ ಯುವತಿ ಅಂತಹದ್ದೇ ದಾಳಿಗೆ ತುತ್ತಾಗಿದ್ದಾಳೆ, ಆದರೆ ದೆಹಲಿಯ ಯುವತಿಗಾಗಿ ಇಡೀ ದೇಶ ಮಿಡಿಯಿತು, ಪ್ರತಿಭಟಿಸಿತು, ಮಹಿಳೆಯರ ರಕ್ಷಣೆಗೆ ಹೊಸ ಕಾನೂನು ರಚನೆಯಾಗುವುದಕ್ಕೆ ದಾರಿಯಾಯಿತು. ಆದರೆ ಬೆಂಗಳೂರಿನ ಯುವತಿಯ ಬಗ್ಗೆ ಯಾರೂ ಕ್ಯಾರೆ ಅನ್ನುತ್ತಿಲ್ಲ.

ದೆಹಲಿಯ ಯುವತಿಯ ಮೇಲೆ ದಾಳಿ ನಡೆದಾಗ ಆಕೆಯೊಂದಿಗೆ ಅವಳ ಸ್ನೇಹಿತನಿದ್ದ, ಆಸ್ಪತ್ರೆಯಲ್ಲಿ ಆಕೆಯನ್ನು ನೋಡಿಕೊಳ್ಳಲು ಆಕೆಯ ತಂದೆ, ತಾಯಿ, ಸಹೋದರರಿದ್ದರು. ಆದರೆ ಬೆಂಗಳೂರಿನ ಯುವತಿಯೊಂದಿಗೆ ಯಾರೂ ಇಲ್ಲ. ಆಕೆಯ ಮೇಲೆ ದಾಳಿ ನಡೆದಾಗ ಆಕೆ ಎಂತಹ ಉಡುಗೆತೊಡುಗೆಗಳನ್ನು ತೊಟ್ಟಿದ್ದಳು ಎಂಬ ಮಾಹಿತಿಯನ್ನು ಬೆಂಗಳೂರಿನ ಎಲ್ಲಾ ಪೊಲೀಸ್ ಠಾಣೆಗಳಿಗೆ ರವಾನಿಸಿದ್ದರೂ ಎಲ್ಲೂ ಆಕೆಯ ವಿವರಗಳನ್ನು ಹೋಲುವ ತಮ್ಮ ಮಗಳು, ಸಹೋದರಿ, ಸಂಬಂಧಿ, ಸ್ನೇಹಿತೆ ನಾಪತ್ತೆಯಾಗಿದ್ದಾಳೆಂದು ದೂರು ದಾಖಲಾಗಿಲ್ಲ.

ಇದರಷ್ಟೇ ಮುಖ್ಯವಾಗಿ ಈಕೆಗಾಗಿರುವ ಅನಾಹುತವನ್ನರಿತು ಹೆಚ್ಚಿನ ಜನ ಮರುಗಿಲ್ಲ, ದನಿ ಎತ್ತಿಲ್ಲ, ಬೀದಿಗಿಳಿದಿಲ್ಲ, ಅಷ್ಟೇ ಅಲ್ಲ, 'ಮಹಿಳೆಯರ ರಕ್ಷಕ' ಎಂದು ಪೋಸು ಕೊಡುವ ಜಗದೀಶ್ ಶೆಟ್ಟರ್ ಅವರ ಬಿಜೆಪಿ ಸರ್ಕಾರ ಕೂಡ ಆಕೆಯತ್ತ ತಿರುಗಿಯೂ



ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್

ನೋಡಿಲ್ಲ, ಆಕೆಗೆ ಹೆಚ್ಚಿನ ಸೂಕ್ತ ಚಿಕಿತ್ಸೆ ನೀಡಬೇಕೆಂದು ಆದೇಶಿಸಿಲ್ಲ.

ರಾಜಕಾರಣಿಗಳ ಮಾತು ಬಿಡಿ.

ನಮಗೆಲ್ಲ ಏನಾಗಿದೆ?

ದೆಹಲಿಯ ಯುವತಿಯ ಅನಾಹುತಕ್ಕೆ ಮಿಡಿಯುವ ನಾವು ನಮ್ಮ ಹತ್ತಿರದಲ್ಲೇ ಅಂತಹದ್ದೇ ದಾಳಿಗೆ ಬಲಿಯಾದ ಯುವತಿಯತ್ತ ನಾವು ತಿರುಗಿಯೂ ನೋಡುತ್ತಿಲ್ಲ ಯಾಕೆ?

ಈಕೆಯ ಹೆಸರು, ವಿಳಾಸ, ಸಂಬಂಧಿಕರನ್ನು ಕುರಿತು ಗೊತ್ತಿಲ್ಲದಿರುವುದರಿಂದ ಸದ್ಯಕ್ಕೆ ಈಕೆ ಒಂದು ರೀತಿಯಲ್ಲಿ ಅನಾಥೆ ಎಂದೇ ಇಟ್ಟುಕೊಳ್ಳೋಣ. ಆದರೆ ನಮ್ಮ ಸಮಾಜ ಕೂಡ ಆಕೆಗಾಗಿ ಮರುಗದಿದ್ದರೆ; ದನಿ ಎತ್ತದಿದ್ದರೆ ನಾವೂ ಪ್ರಜ್ಞೆ ಕಳೆದುಕೊಂಡು ಅನಾಥರಾಗುವ ದಿನ ದೂರವಿಲ್ಲ ಎನಿಸುತ್ತಿದೆ. •

ಭಗತ್ ಸಿಂಗ್‌ರನ್ನೂ ಕೇಸರೀಕರಣಗೊಳಿಸಿದ ಕೋಮುವಾದಿಗಳು

ಶಿಕ್ಷಣದ ಕೇಸರೀಕರಣವಾಯಿತು, ಇತಿಹಾಸದ ...ರೀಕರಣವಾಯಿತು, ಸಂಸ್ಕೃತಿಯ ಕೇಸರೀಕರಣವಾಯಿತು, ...ಗ ನಮ್ಮ ದೇಶ ಕಂಡ ಶ್ರೇಷ್ಠ ಸಮಾಜವಾದಿ ಭಗತ್ ...ಗ್ ಅವರ ಕೇಸರೀಕರಣವೂ ನಡೆದುಹೋಗಿದೆ.


ಭಗತ್ ಸಿಂಗ್ ಅವರು ಮಾರ್ಕ್ಸ್‌ವಾದಿ ಆಗಿದ್ದರು, ... ಜಾತಿ, ಮತ, ಧರ್ಮಗಳ ಜನರನ್ನು ಒಗ್ಗೂಡಿಸಿ ...ಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಿದವರು. ...ರತೀಯ ಸಮಾಜವಾದಿ ಗಣತಂತ್ರ' ಸಂಘಟನೆಯನ್ನು ...ಸಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿದ್ದವರು. ...ಣಗಂಬದ ಸನಿಹದಲ್ಲೂ ತಮ್ಮ ಭಾರತ ಸಮಾಜವಾದಿ ... ಎಂದು ಘೋಷಿಸಿದವರು. ಅಂತಹ ಭಗತ್ ...ರನ್ನು ಹಿಂದೂತ್ವವಾದಿಗಳು ತಮ್ಮ ಅಜೆಂಡಾಗೆ ತಕ್ಕಂತೆ ...ರೀಕರಣಗೊಳಿಸಿದ ಘಟನೆ ಮೊನ್ನೆ ಉಜಿರೆಯಲ್ಲಿ ...ದಿದೆ.

...'ಕೇಸರಿ ಗೆಳೆಯರ ಬಳಗ' ಎಂಬ ಹಿಂದೂತ್ವವಾದಿ ...ಘಟನೆ ಇತ್ತೀಚೆಗೆ 'ಭಗತ್ ಸಿಂಗ್ ಟ್ರೋಫಿ' ಹೆಸರಲ್ಲಿ ...ದು ಕ್ರೀಡಾಸ್ಪರ್ಧೆಯನ್ನು ಏರ್ಪಡಿಸಿತ್ತು. ಅದನ್ನು ...ಯೋಜಿಸಿದ್ದ ಬುದ್ಧಿಹೀನ ಹಿಂದೂತ್ವವಾದಿಗಳು ಭಗತ್ ...ಗ್ ಅವರಿಗೆ ಮರ್ಯಾದೆ ಕೊಡುವ ಬದಲು ಘೋರ ...ಮಾನವನ್ನೇ ಮಾಡಿದರು. ಯಾಕೆಂದರೆ ಭಗತ್ ಸಿಂಗ್ ...ಯೂ ಕೋಮುವಾದಿ ಶಕ್ತಿಗಳನ್ನು ಸಹಿಸುತ್ತಿರಲಿಲ್ಲ. ...ರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುವ ಹಿಂದೂ ...ಹಾಸಭಾ ಸಂಘಟನೆಯನ್ನು ಭಗತ್ ಸಿಂತ್ 'ವಿಭಜನಕಾರಿ ... ಎಂದು ಜರಿದಿದ್ದರು. ಅಷ್ಟೇ ಅಲ್ಲ, ಜಾತ್ಯತೀತ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ಸ್ವಾತಂತ್ರ್ಯ ಹೋರಾಟದ ನೇತಾರ ಲಾಲಾಲಜಪತ್ ರಾಯ್ ಅವರು ಹಿಂದೂ ಮಹಾಸಭಾ ಸಂಘಟನೆಯನ್ನು ಸೇರಿಕೊಂಡಾಗ ಭಗತ್ ಸಿಂಗ್ ಸಿಡಿಮಿಡಿಗೊಂಡಿದ್ದರು. ಲಾಲಾಲಜಪತ್‌ರಾಯ್ ಅವರನ್ನು ಕುರಿತಂತೆ 'ಕಳೆದುಹೋದ ನಾಯಕ (ದಿ ಲಾಸ್ಟ್ ಲೀಡರ್)' ಎಂಬ ಶೀರ್ಷಿಕೆಯಡಿ ಕರಪತ್ರವನ್ನು ಬರೆದು ಹಂಚಿದ್ದರು. ಜೊತೆಗೆ 'ಪ್ರತಾಪ' ಪತ್ರಿಕೆಯಲ್ಲಿ ಲೇಖನವನ್ನು ಬರೆದಿದ್ದರು.

ಭಗತ್ ಸಿಂಗ್ ಕೋಮುವಾದ, ಜಾತಿವಾದ, ಮತಾಂಧತೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ದೇವರು ಮತ್ತು ಧರ್ಮ ಜನರ ವೈಯಕ್ತಿಕ ವಿಚಾರವೆಂದು ತನ್ನ ಸಂಘಟನೆಯ ಸದಸ್ಯರಿಗೆ ಸ್ಪಷ್ಟಪಡಿಸಿದ್ದರು. ಭಗತ್ ಸಿಂಗರ ನೆಚ್ಚಿನ ಸಂಗಾತಿಯೂ ಸ್ವಾತಂತ್ರ್ಯ ಹೋರಾಟಗಾರರೂ ಆದ ಅಜೇಯ್ ಘೋಷ್ ತಮ್ಮ ಕೃತಿ 'ಭಗತ್ ಸಿಂಗ್ ಆಂಡ್ ಹಿಸ್ ಕಾಮ್ರೇಡ್ಸ್'ನಲ್ಲಿ ಇದೆಲ್ಲದರ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.

ಭಗತ್ ಸಿಂಗ್ ಓರ್ವ ಕಟ್ಟಾ ನಾಸ್ತಿಕವಾದಿಯಾಗಿದ್ದು ಜೈಲಿನಲ್ಲಿ ತಮ್ಮ ಕೊನೆಯ ದಿನದಲ್ಲಿ 'ನಾನೇಕೆ ನಾಸ್ತಿಕನಾದೆ' ಎಂಬ ಕೃತಿಯನ್ನು ರಚಿಸಿದ್ದರು. ಜೀವನದ ಕೊನೆಕ್ಷಣದವರೆಗೂ, ನೇಣುಗಂಬದ ಸನಿಹದಲ್ಲೂ ಅವರು ನಾಸ್ತಿಕರಾಗಿದ್ದರು. ಅವರು ನೇಣುಗಂಬವನ್ನು ಏರುವ ಮುನ್ನ ನಡೆದ ಒಂದು ಪ್ರಸಂಗವನ್ನು ಜೈಲಿನ ವಾರ್ಡನ್ ಚತರ್ ಸಿಂಗ್ ಈ ರೀತಿ ದಾಖಲಿಸಿದ್ದಾರೆ:





"ನಾನು ಭಗತ್ ಸಿಂಗರಿಗೆ ಈ ನಿನ್ನ ಕೊನೆಯ ಕ್ಷಣದಲ್ಲಾದರೂ ದೇವರನ್ನು ನೆನೆ" ಎಂದು ಕಳಕಳಿಯಿಂದ ಬೇಡಿಕೊಂಡೆ. ಆದರೆ ನನ್ನ ಮಾತಿಗೆ ನಕ್ಕ ಭಗತ್ ಸಿಂಗ್ "ಅದು ಖಂಡಿತ ಸಾಧ್ಯವಿಲ್ಲ, ನಾನು ದೇವರನ್ನು ಎಂದೂ ನೆನೆಯಲಾರೆ. ಅದು ನನ್ನ ಧೈರ್ಯ ಭ್ರಷ್ಟತೆಯ ವಿಷಯವಾಗುತ್ತದೆ. ನಾನು ನಾಸ್ತಿಕನಾಗಿಯೇ ಸಾಯುತ್ತೇನೆ."

ಇಂತಹ ನಾಸ್ತಿಕವಾದಿಯನ್ನು ಹಾಗೂ ಸಮಾಜವಾದಿಯನ್ನು ಹಿಂದೂತ್ವವಾದಿಗಳು ಕೋಮುವಾದಿಯನ್ನಾಗಿ ಚಿತ್ರಿಸುವುದು ಹುತಾತ್ಮ ಭಗತ್ ಸಿಂಗ್ ಅವರಿಗೆ ಮಾಡಿದ ಘೋರ ಅವಮಾನವಲ್ಲದೆ ಇನ್ನೇನು?

ಒಮ್ಮೆ ಭಗತ್ ಸಿಂಗ್ ಬ್ರಿಟಿಷರಿಗೆ ಹೀಗೆ ಹೇಳಿದ್ದರು: "ನೀವು ನನ್ನನ್ನು ಕೊಲ್ಲಬಹುದು. ಆದರೆ ನನ್ನ ವಿಚಾರವನ್ನಲ್ಲ ಕೊಲ್ಲಲು ನಿಮ್ಮಿಂದಾಗುವುದಿಲ್ಲ, ಯಾಕೆಂದರೆ ವಿಚಾರಗಳು ಎಂದಿಗೂ ಸಾಯಲಾರವು."

ಭಗತ್ ಸಿಂಗ್ ಅವರ ಬಗೆಗೆ ಇದ್ಯಾವುದೂ ಗೊತ್ತಿಲ್ಲದ ಗೊತ್ತಿದ್ದರೂ ಮುಚ್ಚಿಡುವ ಸಂಘ ಪರಿವಾರ ಭಗತ್ ಸಿಂಗ್ ಅವರ ವಿಚಾರಗಳನ್ನು ಪ್ರತಿ ದಿನ ಕೊಲ್ಲುತ್ತಲೇ ಇದೆ. ಭಗತ್ ಸಿಂಗ್‌ರನ್ನು ಕೇಸರೀಕರಣಗೊಳಿಸಿದ ಕೋಮುವಾದಿಗಳು ಭಗತ್ ಸಿಂಗ್ ಅವರು ಬರೆದಿರುವ 'ನಾನೇಕೆ ನಾಸ್ತಿಕನಾದೆ' ಎಂಬ ಪುಸ್ತಕವನ್ನು ಓದುವುದು ಒಳಿತು. ಕನ್ನಡದಲ್ಲೂ ಈ ಪುಸ್ತಕ ಪ್ರಕಟಗೊಂಡಿದೆ.

- ಬಿ. ದಾಮೋದರ ಭಟ್, ಬೆಳ್ತಂಗಡಿ

ಲಂಕೇಶ್ ವಾರ್ಷಿಕೋತ್ಸವ ವಿಶೇಷಾಂಕ ಬರಹಗಳಿಗೆ ಆಹ್ವಾನ

ಮುಂದಿನ ಮಾರ್ಚ್ 10 ರಂದು ಶಿವಮೊಗ್ಗೆಯಲ್ಲಿ ನಡೆಯಲಿರುವ 'ಲಂಕೇಶ್ 78' ರ ವಾರ್ಷಿಕೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಪತ್ರಿಕೆಯ ವಿಶೇಷಾಂಕವೂ ಬರಲಿದೆ.


ಈ ಬಾರಿ ಓದುಗರಿಗಾಗಿ 'ನನ್ನ ಪ್ರೀತಿಯ ಮಲೆನಾಡು' ಎಂಬ ವಿಷಯ ನೀಡುತ್ತಿದ್ದೇವೆ. ಮಲೆನಾಡಿನ ಬದುಕಿನ ವೈವಿಧ್ಯಮಯವಾದ ಯಾವುದೇ ವಿಷಯವನ್ನಾದರೂ ಓದುಗರು 250 ಪದಗಳಿಗೆ ಮೀರದಂತೆ ಬರೆದು ಕಳುಹಿಸಿ. ಜೊತೆಗೆ ಲೇಖನಕ್ಕೆ ಪೂರಕವಾದ ಹಾಗೂ ಬರೆದವರ ಫೋಟೋ ಸಹ ಇರಲಿ.

ಅಂದಹಾಗೆ ಈ ವಿಷಯ ಕುರಿತು ಮಲೆನಾಡಿನವರು ಮಾತ್ರ ಬರೆಯಬೇಕೆಂದು ಭಾವಿಸಬೇಡಿ

ನಿಮ್ಮ ಬರಹ ಫೆಬ್ರವರಿ 25 ರೊಳಗೆ ನಮಗೆ ತಲುಪಲಿ. ಅಂಚೆ ಅಥವಾ ಕೊರಿಯರ್ ಅಲ್ಲದೆ ಫ್ಯಾಕ್ಸ್ 080-26604536 ಅಥವಾ email:glankesh@gmail.com ಗೂ ನುಡಿ/ಬರಹದಲ್ಲಿ ಟೈಪ್ ಮಾಡಿ ಕಳುಹಿಸಬಹುದು.

ಮಾನಗೇಡಿ ಬಿಜೆಪಿ; ಚುನಾವಣೆಗೂ ಮೊದಲೇ ಸೀರೆ, ಸೈಟು, ರೊಕ್ಕ, ಬೀರಿನ ಆಮಿಷ

ಕೃಷ್ಣಯ್ಯಶೆಟ್ಟಿಗೆ ಮತದಾರರ ಗೂಸಾ



ಬಹಿರಂಗವಾಗಿ ಸೀರೆ ಹಂಚುತ್ತಿರುವುದು

ಚುನಾವಣೆ ಇನ್ನೇನು ಸಮೀಪಿಸುತ್ತಿರುವಂತೆಯೇ ಕೃಷ್ಣಯ್ಯಶೆಟ್ಟಿಯ ಮಾಲೂರಿನಲ್ಲಿ ರಾಜ್ಯದಲ್ಲೆಂದೂ ಕಾಣದ ವಿಲಕ್ಷಣ ಜಿದ್ದಾಜಿದ್ದಿಯೊಂದು ಹಡೆಯುತ್ತಿದೆ!

ಅದು ಓಟು ಖರೀದಿ ಭರಾಟೆ. ಯಾವ ಮಟ್ಟಕ್ಕೆಂದರೆ ಹೊತ್ತಲ್ಲದ ಹೊತ್ತಲ್ಲಿ ಸಿಕ್ಕಸಿಕ್ಕ ಹಳ್ಳಿಗಳಿಗೆ ನುಗ್ಗಿ ಹೆಂಗಸರಿಗೆ ಸೀರೆ ಹಂಚುವ ಮಾಜಿ ಮಂತ್ರಿ ಕೃಷ್ಣಯ್ಯಶೆಟ್ಟಿಯನ್ನು ಗ್ರಾಮಸ್ಥರು ಕಂಡಕಂಡಲ್ಲಿ ಹಿಡಿದು ಬಡಿಯುತ್ತಿದ್ದಾರೆ. ಕಳೆದೊಂದು ವಾರದಿಂದ ಕೃಷ್ಣಯ್ಯಶೆಟ್ಟಿ ಈ ರೀತಿ ಗ್ರಾಮಸ್ಥರ ಕೈಯಲ್ಲಿ ಒದೆ ತಿನ್ನುತ್ತಿರುವುದು ಮೊನ್ನೆ ಹೆಚ್.ಎಸ್. ಕೋಟೆಯ ಪ್ರಕರಣವನ್ನೂ ಸೇರಿದಂತೆ ಹತ್ತನೇ ಬಾರಿ!

ಎಂಥವರಿಗೂ ಇದು ವಿಚಿತ್ರವೆನಿಸಬಹುದಾದರೂ ಸತ್ಯ ಗ್ರಾಮಸ್ಥರು ಕಳ್ಳಕಾಕರನ್ನು ಹಿಡಿದು ಬಡಿಯುವುದುಂಟು. ಹೆಣ್ಣುಮಕ್ಕಳ ಮೇಲೆ ಕೆಟ್ಟ ದೃಷ್ಟಿಯಿಟ್ಟವನನ್ನು ಕಟ್ಟಿ ಹಾಕುವುದುಂಟು. ಆದರೆ ಜನಕ್ಕೆ ಸೀರೆ ರವಿಕೆ ಹಂಚುತ್ತೇನೆಂದು, ಬೀರು-ಮಂಚ ಕೊಡುತ್ತೇನೆಂದು ಬಂದ ಶಾಸಕನೊಬ್ಬನನ್ನು ಜನ ಅಟ್ಟಾಡಿಸಿ ಹೊಡೆಯುತ್ತಾರೆಂದರೆ ಏನರ್ಥ?

ವಿಕಟವೆನ್ನಿ ವಿಚಿತ್ರವೆನ್ನಿ; ಕೃಷ್ಣಯ್ಯ ಶೆಟ್ಟಿಯಂಥ ಹಲಾಲುಟೋಪಿಯ ಓಟು ಖರೀದಿ ಹಾವಳಿಯ ವಿರುದ್ಧ ಆತನದೇ ಕ್ಷೇತ್ರ ಮಾಲೂರಿನ ಜನರೇ ರೋಸೆತ್ತಿದ್ದಾರೆ. ಮೊನ್ನೆ ಅಂದರೆ 2013ರ ಫೆಬ್ರವರಿ 8 ರ ರಾತ್ರಿ ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿಯ ಹೆಚ್.ಎಸ್. ಕೋಟೆ ಎಂಬ ಗ್ರಾಮಕ್ಕೆ ರಾತ್ರೋರಾತ್ರಿ ನುಗ್ಗಿ ಕೃಷ್ಣಯ್ಯಶೆಟ್ಟಿ ಲಾರಿ ಲೋಡಿನಷ್ಟು ಸೀರೆಗಳನ್ನು ಹೊತ್ತೊಯ್ದಿದ್ದ. ಇದಕ್ಕೂ ವಾರದ ಮೊದಲೇ ಆತನ ಚೇಲಾ ಒಬ್ಬ ಹಳ್ಳಿಗೆ ಬಂದಿದ್ದೇ ಸೀರೆಗಳ ಟೋಕನ್ನುಗಳನ್ನು ಹಂಚಿಹೋಗಿದ್ದ.

ಅಟ್ಟಾಡಿಸಿದ ರೈತಾಪಿ

ಇನ್ನೇನು ನೂರಾರು ಹೆಂಗಸರನ್ನು ಸೇರಿಸಿ ಶೆಟ್ಟಿ ಸೀರೆ ಹಂಚಲಾರಂಭಿಸಬೇಕೆನ್ನುವಷ್ಟರಲ್ಲೇ ಗ್ರಾಮದ ರೈತರು-ಯುವಕರೆಲ್ಲ ಏಕಾಏಕಿ ವೇದಿಕೆಗೆ ನುಗ್ಗಿದ್ದೇ ಕೃಷ್ಣಯ್ಯಶೆಟ್ಟಿಗೆ ಕಪಾಳಮೋಕ್ಷ ಮಾಡಿದ್ದಾರೆ. ಧಣಿಗೆ ಬೀಳುತ್ತಿದ್ದ ಒದೆಗೆ ಬಿಡಿಸಲೆಂದು ಬಂದ ಶೆಟ್ಟಿಯ ಪಿಎ ಜಯದೇವ್ ಎಂಬಾತ ನಿಗೂ ತಪರಾಕಿ ಬಿದ್ದಿದೆ. ಇನ್ನೇನು ಜನ ಕಂಬಕ್ಕೆ ಕಟ್ಟಿ ಹೊಡೆಯುವುದು ನಿಶ್ಚಿತವಾಗುತ್ತಿದ್ದಂತೆ ಶೆಟ್ಟಿ ಪಟಾಲಮ್ ಸೀರೆಗಳ ರಾಶಿಯನ್ನೂ ಲೆಕ್ಕಿಸದೇ ಓಡಿ ಬಂದಿದ್ದಾರೆ.

ಇದರ ಹಿಂದಿನ ದಿನವೇ ಮಾಲೂರಿನ ರಾಜೀವ್ ನಗರದಲ್ಲಿ ಸೀರೆ ಹಂಚಲು ಬಂದಿದ್ದ ಶೆಟ್ಟಿಗೆ ಅಲ್ಲಿನ ಜನ ಘೇರಾವ್ ಹಾಕಿ ಓಡಿಸಿದ್ದರು. ಅದಕ್ಕೂ ಮುನ್ನ ಮಾಲೂರು ಕಸಬಾ ಹೋಬಳಿಯ ಚಿಕ್ಕ ಕುಂತೂರು, ನೀಲಕುಂಟೆ ಅಗ್ರಹಾರ, ಭುವನಹಳ್ಳಿ, ಚಳಗನಹಳ್ಳಿಗಳಲ್ಲೂ ಜನ ರೊಚ್ಚಿಗೆದ್ದು ಸೀರೆ ಸಮೇತ ಶೆಟ್ಟಿ ಗ್ಯಾಂಗನ್ನು ಹಿಡಿದು ಅಟ್ಟಾಡಿಸಿದ್ದಾರೆ. ಫೆಬ್ರವರಿ 8ರಂದು ಹೆಚ್.ಎಸ್. ಕೋಟೆಯಲ್ಲಿ ಶೆಟ್ಟಿಯನ್ನು ಅಟ್ಟಾಡಿಸುತ್ತಿದ್ದ ಜನ ಬಳಸಿದ ಭಾಷೆಯ ಸ್ಯಾಂಪಲ್ಲೊಂದು ಹೀಗಿತ್ತು. 'ಹಲ್ಕಾ ನನ್ನ ಮಗನೇ... ನಿನ್ ಹೆಂಡ್ತಿಗೆ ಬೇಕಾದ್ರೆ ನಾವು ಸೀರೆ ಕೊಡಿಸ್ತೀವಿ. ನೀನೇನೋ ಬಂದು ನಮ್ ಹೆಣ್ಣುಮಕ್ಕಳಿಗೆ ಸೀರೆಕೊಡಿಸೋದು? ಹೆಂಡ್ತೀರಿಗೆ ಸೀರೆ ಕೊಡಿಸೋ ಇಷ್ಟು ಯೋಗ್ಯತೆಯಿಲ್ಲದ ನಾಮರ್ಧರೇನೋ ನಾವೆಲ್ಲಾ...!'

ಇದು ಪುಢಾರಿಯೊಬ್ಬನ ದುಡ್ಡಿನ ದರ್ಪದ ವಿರುದ್ಧ ಮತದಾರರು ಯಾವ ಮಟ್ಟಿಗೆ ರೊಚ್ಚಿಗೆದ್ದಿದ್ದಾರೆಂಬುದಕ್ಕೆ ಒಂದು ನಿದರ್ಶನ ಮಾತ್ರ.

ಮಾಲೂರು ಶಾಸಕ ಕೃಷ್ಣಯ್ಯಶೆಟ್ಟಿ ಮಾಜಿ ಮುಜರಾಯಿ ಮಂತ್ರಿ. ನಗರ ನೀರು ಸರಬರಾಜು ಮಂಡಳಿಗೆ ಹಾಲಿ ಅಧ್ಯಕ್ಷ. ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಪ್ರಭಾಕರ್‌ಗಿಂತಲೂ ಸರಿಸುಮಾರು 50 ಸಾವಿರಕ್ಕೂ ಅಧಿಕ ಮತಗಳ ಲೀಡು ಪಡೆದು ಶಾಸಕರಾದರು. ಗುರು ಯಡ್ಡಿಯ ಜೊತೆಗೇ ಪರಪ್ಪನ ಅಗ್ರಹಾರ ಜೈಲಿಗೂ ಹೋಗಿ ಬಂದರು. ಹೌಸಿಂಗ್ ಬೋರ್ಡ್ ಜಮೀನು ಖರೀದಿ ಹಗರಣ, ಡೀನೋಟಿಫಿಕೇಷನ್ ಏಳೂವರೆ ಕೋಟಿಯ ಬ್ಯಾಂಕ್ ವಂಚನೆ ಬಿಡಿಎ ಆಸ್ತಿ ಲೂಟಿ; ಹೀಗೆ ತಿರುಪತಿ ಲಡ್ಡು, ಗಂಗಾಜಲ ಗಿಮ್ಮಿಕ್ ಮಾಡಿಕೊಂಡೇ ಜೈಲು ಯೋಗವನ್ನೂ ಅನುಭವಿಸಿದವನು ಕೃಷ್ಣಯ್ಯಶೆಟ್ಟಿ.

ಈ ಬಾರಿ ಪತ್ನಿ...?

ಜೈಲು ಪಾಲಾದ ಬಿಜೆಪಿಯ ಮಂತ್ರಿಗಳ ಪೈಕಿ ಕಟ್ಟಾನಾಯ್ದು ಬಿಟ್ಟರೆ ದೊಡ್ಡ ಮಟ್ಟದ ಅಸಹ್ಯಕ್ಕೀಡಾಗಿದ್ದು ಕೃಷ್ಣಯ್ಯಶೆಟ್ಟಿಯೆ. ಯಡ್ಡಿ ಬಿಜೆಪಿ ತೊರೆದ ಕೆಜೆಪಿ ಕಟ್ಟಿದಾಗ ನಿಯತ್ತಿಗೆ ಬದ್ಧಾದರೂ ಶೆಟ್ಟಿ ಬಿಜೆಪಿ ತೊರೆಯಬೇಕಿತ್ತು. ಹಾಗಾಗಲಿಲ್ಲ. 'ನೀನು ಮಾಡಿದ ಯಡವಟ್ಟಿನಿಂದಾಗಿ ನಾವು ಜೈಲು ಪಾಲಾಗಬೇಕಾಯ್ತು...!' ಎಂದು ಯಡ್ಡಿ ಮಕ್ಕಳು ಅಟ್ಟಾಡಿಸಿ ಹೊಡೆದಿದ್ದರಿಂದಾಗಿ ಶೆಟ್ಟಿ ಯಡ್ಡಿಯ ತಲೆ ಹಾಕುವುದನ್ನೇ ಬಿಟ್ಟುಬಿಟ್ಟ. ಚೋದ್ಯವೆಂದರೆ ಒಂದೂವರೆ ತಿಂಗಳುಗಳ ಕಾಲ ಜೈಲಲ್ಲೇ ಇದ್ದರೂ ಬಿಜೆಪಿ ಹೈಕಮಾಂಡ್ ಮಾತ್ರ ಆತನನ್ನು ನಗರ ನೀರು ಸರಬರಾಜು ಮಂಡಳಿಯ ಅಧ್ಯಕ್ಷಗಿರಿಯಿಂದ ಅಲ್ಲಾಡಿಸಲಿಲ್ಲ.

ಜೈಲೊಳಗಿದ್ದೇ ಸರ್ಕಾರಿ ನಿಗಮವೊಂದಕ್ಕೆ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ ಕೀರ್ತಿ ಕೃಷ್ಣಯ್ಯಶೆಟ್ಟಿಗೇ ಸಲ್ಲಬೇಕು. ಜೊತೆಗೆ ತನ್ನ ಲೂಟಿ, ಅಕ್ರಮಗಳನ್ನು ಮುಚ್ಚಿಕೊಳ್ಳುವುದಕ್ಕಾದರೂ ಆತನಿಗೆ ಮತ್ತೆ ಎಮ್ಮೆಲ್ಲೆಯಾಗಲೇಬೇಕು. ಇಂಥದೊಂದು ಹರಕತ್ತಿಗೆ ಬಿದ್ದ ಕೃಷ್ಣಯ್ಯಶೆಟ್ಟಿಗೆ ಈ ಬಾರಿ ಏನೇ ತಲೆಕೆಳಗಾದರೂ ಮಾಲೂರಿನ ಜನತೆ ತನಗೆ ಓಟು ಕೊಡಲಾರರೆಂಬುದು ಗೊತ್ತಾಗಿ ಹೋಗಿದೆ. ಬಿಜೆಪಿಯ ದುರಾಡಳಿತ ಮತ್ತು ಭ್ರಷ್ಟಾಚಾರದ ವಿರುದ್ಧ ಜನಕ್ಕಿರುವ ಆಕ್ರೋಶವೂ ಅರ್ಥವಾಗಿದೆ. ಅದಕ್ಕೆ ತನ್ನ ಬದಲು ತನ್ನ ಪತ್ನಿ ಸುನೀತಾಶೆಟ್ಟಿಯನ್ನು ಕಾಂಗ್ರೆಸ್ಸಿಗೆ ಸೇರಿಸಿ ಅದು ಬರಕತ್ತಾಗದಿದ್ದರೆ ಬಿಜೆಪಿಯಿಂದಲೇ ನಿಲ್ಲಿಸಿ ಗೆಲ್ಲಿಸುವ ದುರಾಶೆ!


ಹಾಗಂತ ಮಾಲೂರಿನ ಜನ ಕೇಳಬೇಕಲ್ಲ- ಇಪ್ಪತ್ತು ಕೋಟಿಯಾದರು ಸರಿ ಈ ಬಾರಿ ಮಾಲೂರನ್ನು ಹಿಡಿಯಲೇಬೇಕೆಂಬುದು ಶೆಟ್ಟಿಯ ದುರ್ಬುದ್ಧಿ. ಅನೇಕರಿಗಿದು ಅಚ್ಚರಿಯೆನಿಸಬಹುದು. ರಾಜ್ಯದ ಬೇರಾವುದೇ ರಾಜಕಾರಣಿ ಬಿಜೆಪಿಯ ಮಂತ್ರಿ ಇಷ್ಟೊಂದು ಆತುರಗೆಟ್ಟು ಓಟಿನ ಬೇಟೆಗಿಳಿದಿರಲಿಲ್ಲ. ಆ ಪಾಟಿ ರೊಕ್ಕ ಮಾಲೂರಿನಲ್ಲಿ ಹರಿದಾಡುತ್ತಿದೆ.

ಪ್ರತಿನಿತ್ಯ ಮಾಲೂರು ತಾಲ್ಲೂಕು ಕಚೇರಿಯೆದುರು ಜನಕ್ಕೆ ಬಿಟ್ಟೀ ಊಟ, ತಾಲ್ಲೂಕಿನ ಎಲ್ಲಾ ಶಿಕ್ಷಕರಿಗೆ ಸೈಟು, ಪ್ರತಿ ಹಳ್ಳಿಗೂ ಹೋಗಿ ಬಿಟ್ಟೀ ಸೀರೆ ಹಂಚುವುದು, ತಾಲ್ಲೂಕಿನ ಶಾಲಾಮಕ್ಕಳಿಗೆಲ್ಲ ಬಿಟ್ಟೀ ಪುಸ್ತಕ ವಿತರಣೆ, ರೈತರಿಗೆ ಬಿಟ್ಟೀ ಹಸುಗಳು. ಸಿಕ್ಕಸಿಕ್ಕವರಿಗೆಲ್ಲ ಗಾಡ್ರೆಜ್ ಬೀರುಗಳು, ಮಂಚ, ಹೀಗೆ ಎಲೆಕ್ಷನ್ ಪೂರ್ವಭಾವಿಯಾಗಿ ಜನರನ್ನು ಭಿಕ್ಷುಕರನ್ನಾಗಿ ಮಾಡಲು ಏನೇನು ಬೇಕೋ ಎಲ್ಲವನ್ನೂ ಶೆಟ್ಟಿ ಮಾಡಲಾರಂಭಿಸಿದ್ದಾನೆ.

ದಿನದ ಯಾವುದೇ ಮಧ್ಯಾಹ್ನ ಮಾಲೂರಿನ ತಾಲ್ಲೂಕು ಕಚೇರಿಯೆದುರು ಯಾರೇ ಬಂದರೂ ಅಂಥವರಿಗೆ ಕೃಷ್ಣಯ್ಯಶೆಟ್ಟಿಯ ಬಿಟ್ಟೀ ಊಟ ಲಭ್ಯ. ವ್ಯಾನ್ ಒಂದರಲ್ಲಿ ಹಂಡೆಗಟ್ಟಲೇ ಅನ್ನ, ಸಾಂಬಾರು ಹೊತ್ತು ತಂದು ತಾಲ್ಲೂಕು ಕಚೇರಿಯೆದುರಿನ ಫುಟ್‌ಪಾತಿನಲ್ಲಿ ಶೆಟ್ಟಿಯ ಬಂಟರು ಬಡಿಸಲಾರಂಭಿಸುತ್ತಾರೆ. ತಾಲ್ಲೂಕು ಕಚೇರಿಗೆ ಬರುವ ರೈತರಿಗೆ ತನ್ನ ತಂದೆ ಎಸ್. ನಾರಾಯಣಶೆಟ್ಟಿ ಮೆಮೊರಿಯಲ್ ಟ್ರಸ್ಟ್‌ನಿಂದ ಪ್ರತಿನಿತ್ಯ ಅನ್ನದಾನವೆಂಬುದು ಶೆಟ್ಟಿಯ ಕಪಟ ನಾಟಕವಾದರೂ ಅದರ ಹಿಂದಿನ ಮರ್ಮವೇ ಬೇರೆ.

ಬಿಟ್ಟೀ ಅನ್ನದ ಮರ್ಮ!

ಹೀಗೆ ಯಾರ್‍ಯಾರಿಗೋ ಬಿಟ್ಟಿ ಅನ್ನ-ಸಾಂಬಾರ್ ಹಂಚುವ ಶೆಟ್ಟಿ ಇದಕ್ಕೆ ನಯಾಪೈಸೆಯನ್ನೂ ತನ್ನ ಜೇಬಿನಿಂದ ಹಾಕುವುದಿಲ್ಲ. ಮಾಲೂರು ತಾಲ್ಲೂಕೊಂದರಲ್ಲೇ ನೂರರಷ್ಟು ನ್ಯಾಯಬೆಲೆ ಅಂಗಡಿಗಳಿವೆ. ಪ್ರತಿ ರೇಷನ್ ಡಿಪೋ ಮಾಲಿಕನೂ ಶೆಟ್ಟಿಗೆಂದು ಪ್ರತಿ ತಿಂಗಳು ಎರಡು ಮೂಟೆ



ಅಕ್ಕಿ, 50 ಕೆ.ಜಿ. ಗೋಧಿ, 25 ಕೆ.ಜಿ. ಸಕ್ಕರೆ ಮತ್ತು 5 ಸಾವಿರ ರೂಪಾಯಿ ರೊಕ್ಕ ಮಡಗಲೇಬೇಕ ಎಮ್ಮೆಲ್ಲೇಗೆಂದು ಇಷ್ಟೆಲ್ಲ ಲಂಚ ಕೊಟ್ಟ ನ್ಯಾಯಬೆ ಅಂಗಡಿಯಾತ ಇನ್ನು ತನ್ನ ಮಾಮೂಲಿ ಎಂದು ಮತ್ತೆರ ಮೂಟೆ ಹೊಡೆಯದೇ ಇರುತ್ತಾನಾ?

ಎಮ್ಮೆಲ್ಲೆಗೆ ಕೊಡುವ ಲಂಚದ ಬಾಬತ್ತನ್ನೂ ಜನ ಹಂಚಬೇಕಾದ ಅಕ್ಕಿ, ಗೋಧಿ, ಸಕ್ಕರೆಯ ಮೂಲಕವ ರಿಕವರಿ ಮಾಡಿಕೊಳ್ಳಬೇಕೆಂದರೆ, ಯಾವ ನ್ಯಾಯಬೆ ಅಂಗಡಿ ತಾನೇ ನ್ಯಾಯವಾಗಿ ಜನಕ್ಕೆ ರೇಷನ್ ಕೊಡಲ ಸಾಧ್ಯ?

ಕೃಷ್ಣಯ್ಯಶೆಟ್ಟಿಯ ಅನ್ನದಾನದ ಮರ್ಮ ಜನಕ್ಕೆ ಚೆನ್ನಾಗ ಅರ್ಥವಾಗಿದ್ದರ ಫಲವಾಗಿ ಮೂಲತಃ ಮಾಲೂರಿನವರ್‍ಯಾರು ಎಮ್ಮೆಲ್ಲೇಯ ಬಿಟ್ಟೀ ಊಟಕ್ಕೆ ಸಾಲುಗಟ್ಟುವುದಿ ಅಕ್ಕಪಕ್ಕದ ಬಂಗಾರಪೇಟೆ ಕೆಜಿಎಫ್‌ಗಳಿಂದ ಪ್ರತಿನಿ ಕೂಲಿನಾಲಿಗೆಂದು ಮಾಲೂರಿಗೆ ಬರುವವರು, ಭಿಕ್ಷುಕರಷ್ಟೆ ತಟ್ಟೆ ಹಿಡಿದು ನಿಲ್ಲುವ ಶೆಟ್ಟಿ ಅನ್ನದಾನದಿಂದಾಗಿ ತಾ ಭಿಕ್ಷುಕರೆನಿಸಿಕೊಳ್ಳಬೇಕಾ ಎಂಬುದು ಮಾಲೂರಿನ ರೈತ ಆಕ್ರೋಶ.

ಒಂದೆಡೆ ಜನಕ್ಕೆ ಬಿಟ್ಟೀ ಊಟ ಹಾಕಿಸುತ್ತೇನೆಂದ ಕೊಚ್ಚಿಕೊಳ್ಳುತ್ತಲೇ ಶಾಸಕ ಶೆಟ್ಟಿಯಾಗಲೇ ಸುಲಿಗೆ ನಿಂತಿದ್ದಾನೆಂಬುದಕ್ಕೆ ಮಾಲೂರಿನ ಪ್ರತಿ ಸರ್ಕಾರಿ ಕಚೇರಿಯ ಇಟ್ಟಿಗೆಗಳೂ ಸಾಕ್ಷಿ ಹೇಳುತ್ತವೆ. ಇದಕ್ಕೆ ಯಾರೇ ರೈ ಪೋಡಿ ಮಾಡಿಸಬೇಕೆಂದರೆ ತಹಶೀಲ್ದಾರ್‌ಗೆ ಕನಿಷ್ಠ ಲಕ್ಷ ರೂಪಾಯಿ ಲಂಚ ಕಕ್ಕಲೇಬೇಕು. ಸಬ್‌ರಿಜಿಸ್ಟ್ರಾರ ಕಚೇರಿಯಲ್ಲಿ ಯಾರೇ ರೈತ ತನ್ನ ಭೂಮಿಯನ್ನು ರಿಜಿಸ್ಟ್ರೇಷ ಮಾಡಿಸಿಕೊಳ್ಳಬೇಕೆಂದರೆ ಎಮ್ಮೆಲ್ಲೆಗೆಂದೇ 2 ಲ ರೂಪಾಯಿಗಳ ಹೆಚ್ಚಿಗೆ ಲಂಚ ತೆರಬೇಕು. ಪ್ರತಿನಿ ತಹಶೀಲ್ದಾರ್ ಕಚೇರಿಯಲ್ಲಿ ಎಷ್ಟು ಪೋಡಿಯಾಯಿತು ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಎಷ್ಟು ಎಕ ರಿಜಿಸ್ಟ್ರೇಷನ್ನಾಯಿತು, ಮುನ್ಸಿಪಾಲ್ಟಿಯಲ್ಲಿ ಯಾವ ಆಸ್ತಿ ಯಾ ಹೆಸರಿಗೆ ಖಾತೆಯಾಯಿತೆಂದು ಕಣ್ಣಿಡುವುದಕ್ಕೆಂದ ಎಮ್ಮೆಲ್ಲೇಯ ಚೇಲಾಗಳಿದ್ದಾರೆ. ಈ ಪೈಕಿ ಇರುಬನಹ ನಾಗರಾಜರೆಡ್ಡಿ ತಹಶೀಲ್ದಾರ್ ಕಚೇರಿಯ ಮೇಲೆ ಕಣ್ಣಿಟ್ಟ ದೊಡ್ಡಶಿವಾರದ ಬಿಜೆಪಿ ಜಿಲ್ಲಾ ಪಂಚಾಯ್ತಿ ಮೆಂಬರ ರಾಮಸ್ವಾಮಿರೆಡ್ಡಿ ಸಬ್‌ರಿಜಿಸ್ಟ್ರಾರ್ ಕಚೇರಿಯ ಎತ್ತುವಳಿಯನ್ ಸಂಭಾಳಿಸುತ್ತಾನೆ.

ಮಹಿಳಾ ಬ್ಯಾಂಕ್ ಲೂಟಿ!

ಇಡೀ ಮಾಲೂರಿನ ಸರ್ಕಾರಿ ಕಚೇರಿಗಳಲ್ಲಿ ಯಾವ ಪರಿಯ ಲಂಚಾವತಾರವೆಂದರೆ ಎಮ್ಮೆಲ್ಲೆಗೆ ಲಂಚ ವಸೂಲಿ ಮಾಡಿಕೊಡಲಾಗದೆ ಎರಡೆರಡು ತಿಂಗಳಿಗೆ ತಹಶೀಲ್ದಾರ್‌ಗಳ



ಮಕ್ಕಳಿಗೆ ಬಿಟ್ಟೀ ಪುಸ್ತಕ ವಿತರಣೆ

ಆಶ್ರಯ ಸೈಟ್ ಹೆಸರಲ್ಲೂ ಶೆಟ್ಟಿಯ ಸುಲಿಗೆ

ರೈತನಾಯಕ ಜಿ.ಇ. ರಾಮೇಗೌಡ



ಶಾಸಕನೊಬ್ಬ ಲೂಟಿಗೆ ನಿಂತರೆ ಯಾವ ಮಟ್ಟಕ್ಕಿಳಿಯಬಲ್ಲ ಎಂಬುದು ಕೃಷ್ಣಯ್ಯಶೆಟ್ಟಿಯ ಆಶ್ರಯ ಸೈಟು ಲೂಟಿಯೊಂದೇ ಸಾಕು.

ಹಿಂದೆ ಕಾಂಗ್ರೆಸ್ ನಾಯಕರಾಗಿದ್ದ ಎ. ನಾಗರಾಜು ಮಾಲೂರಿಗೆ ಶಾಸಕರಾಗಿದ್ದಾಗ ತಾಲ್ಲೂಕಿನ ಬಡಬಗ್ಗರಿಗೆ ಆಶ್ರಯ ಸೈಟು ವಿತರಿಸಲೆಂದು ಹದಿನಾರೂವರೆ ಎಕರೆ ಭೂಮಿ ಖರೀದಿಸಿಟ್ಟಿದ್ದರು. 1250 ಮಂದಿ ಫಲಾನುಭವಿಗಳನ್ನೂ ಗುರುತಿಸಲಾಗಿತ್ತು. ಶೆಟ್ಟಿ ಶಾಸಕನಾಗಿದ್ದೇ ಆಶ್ರಯ ಸೈಟುಗಳ ಕತೆಯೇ ಬೇರೆಯಾಯಿತು. ಪ್ರತಿಯೊಬ್ಬರೂ ತಲಾ ಸೈಟಿಗೆ 35 ಸಾವಿರ ರೂಪಾಯಿ ಕಟ್ಟಿದರಷ್ಟೇ ಸೈಟು ಕೊಡಲು ಸಾಧ್ಯ ಎಂದು ಹೊಸ ವರಸೆಗಿಳಿದ ಎಮ್ಮೆಲ್ಲೇ ಮಾತನ್ನು ನಂಬಿದ 650 ಮಂದಿ ಎಲ್ಲೆಲ್ಲಿಂದಲೋ ಸಾಲ ತಂದು ದುಡ್ಡು ಕಟ್ಟಿದರು. ಆದರೆ ಸೈಟು ಮಾತ್ರ ಸಿಗಲೇ ಇಲ್ಲ.

ಈಗ ನೋಡಿದರೆ ಆಶ್ರಯ ಸೈಟು ವಿತರಿಸುವುದಿರಲಿ, ಆಶ್ರಯ ಯೋಜನೆಗೆಂದು ಮೀಸಲಿಟ್ಟಿದ್ದ ಜಮೀನಿನ 16.5 ಎಕರೆಗಳ ಪೈಕಿ 2.30 ಎಕರೆಯನ್ನು ಸರ್ಕಾರಿ ಕಾಲೇಜು ಕಟ್ಟಡಕ್ಕೆಂದು ಶೆಟ್ಟಿ ಕೈಬಿಟ್ಟಿದ್ದಾನೆ. ಕಾಲೇಜು ಕಟ್ಟಲೆಬೇಕೆಂದಿದ್ದರೆ ಬೇರೆ ಜಮೀನಿತ್ತು, ಅದಕ್ಕೆಂದೇ ಭೂಮಿ ಖರೀದಿಸಬಹುದಿತ್ತು. ಸರ್ಕಾರವೇ ದುಡ್ಡು ಕೊಡುತ್ತಿತ್ತು. ಹಾಗಿದ್ದು ಆಶ್ರಯ ಸೈಟುಗಳನ್ನು ವಿಂಗಡಿಸಿ ಭೂಮಿಯನ್ನೇ ಆಯ್ದು ಏಕೆ ಕಾಲೇಜು ಕಟ್ಟಡಕ್ಕೆ ದಾನಗೈದನೆಂದರೆ ಅದೇ ಕಾಲೇಜು ಬಂದಾಕ್ಷಣ ಅದಕ್ಕೆ ಹೊಂದಿಕೊಂಡಂತಿದ್ದ ತನ್ನ ಜಮೀನಿಗೆ ರಿಯಲ್ ಎಸ್ಟೇಟ್ ಮೌಲ್ಯ ಹೆಚ್ಚುತ್ತದೆ ಎಂಬುದು ಶೆಟ್ಟಿಯ ಷಡ್ಯಂತ್ರವಾಗಿತ್ತು.

35 ಸಾವಿರದಂತೆ ಕಟ್ಟಿಸಿಕೊಂಡ ಮೇಲೂ ಸೈಟು ಗ್ಯಾರಂಟಿಯಿಲ್ಲ. ಸೈಟಿಗೆಂದು ಮೀಸಲಿಟ್ಟ ಭೂಮಿಯೂ ಉಳಿಯುವ ಲಕ್ಷಣಗಳಿಲ್ಲ. ವಿಪರ್‍ಯಾಸವೆಂದರೆ ಸೈಟು ಕೊಟ್ಟು ಮನೆ ಕಟ್ಟಲು ತಾನೇ ಸಾಲ ಕೊಡಿಸುತ್ತೇನೆಂದು ಶೆಟ್ಟಿ ಬಂಡಲ್ ಬಿಟ್ಟಿದ್ದ. 650 ಮಂದಿ ತಲಾ 35 ಸಾವಿರದಂತೆ ಕಟ್ಟಿದ್ದ ದುಡ್ಡನ್ನೇ ಕೃಷ್ಣಯ್ಯಶೆಟ್ಟಿ ಲಪಟಾಯಿಸಲು ಯತ್ನಿಸಿದಾಗ ಅದನ್ನು ಪ್ರತಿಭಟಿಸಿದ್ದು ಮುನ್ಸಿಪಾಲ್ಟಿಯ ಚೀಫ್ ಆಫೀಸರ್ ರುದ್ರಮುನಿ. 35 ಸಾವಿರದಂತೆ 650 ಮಂದಿಗೆ ಸಂಗ್ರಹಗೊಂಡ ದುಡ್ಡೇ ಎರಡು ಕೋಟಿ 27 ಲಕ್ಷ ರೂ. ಗಳು. ಎಲ್ಲಿ ಶೆಟ್ಟಿ ದುಡ್ಡು ನುಂಗಿ ಹಾಕಿ ತನ್ನ ತಲೆಗೆ ತಂದಿಡುತ್ತಾನೋ ಎಂದು ಭೀತಿಗೆ ಬಿದ್ದ ಚೀಫ್ ಆಫೀಸರ್ ರುದ್ರಮುನಿ ಕೆಲಸವೇ ಬೇಡವೆಂದು ಎತ್ತಂಗಡಿ ಮಾಡಿಸಿಕೊಂಡು ಪರಾರಿಯಾದ.

ಈಗ ರೈತನಾಯಕ ಜಿ.ಇ. ರಾಮೇಗೌಡ ಆಶ್ರಯ ನಿವೇಶನದಾರರ ಪರವಾಗಿ ಬೀದಿಗಿಳಿದಿದ್ದಾರೆ. ಕಳೆದ ಆಗಸ್ಟ್ 5 ರಂದು ನಿವೇಶನವನ್ನು ವಿತರಿಸುವಂತೆ ಬೀದಿಗಿಳಿದು ಪ್ರತಿಭಟಿಸಿದ ರಾಮೇಗೌಡ ಈಗ ಹೆಚ್ಚುವರಿಯಾಗಿ ಶೆಟ್ಟಿ ವಸೂಲಿ ಮಾಡಿದ್ದ 35 ಸಾವಿರ ರೂ.ಗಳನ್ನು ವಾಪಸ್ಸು ಮಾಡುವಂತೆ ಒತ್ತಾಯಿಸಿ ಧರಣಿ ಸತ್ಯಾಗ್ರಹದ ಬೆದರಿಕೆಯನ್ನೂ ಹಾಕಿದ್ದಾರೆ.

ಾಗುವುದು, ಮುನ್ಸಿಪಾಲ್ಟಿಯ ಚೀಫ್ ಆಫೀಸರ್‌ಗಳೆಲ್ಲ ಷ್ಟೇ ವೇಗವಾಗಿ ಎತ್ತಂಗಡಿಯಾಗುವುದು ಇಲ್ಲಿ ೂಲು. ಅಂಬರೀಶ್ ಎಂಬ ತಹಶೀಲ್ದಾರ್ 'ಸಹವಾಸ ಪ್ಪ' ಎಂದು ಮೂರೇ ತಿಂಗಳಿಗೆ ಓಡಿಹೋದ. ಸುಲಿಯಲಾಗದೆ ನಾಗರಾಜರೆಡ್ಡಿ ಎಂಬ ೀಲ್ದಾರ್ ಕೆಲಸಕ್ಕೇ ಚಕ್ಕರ್ ಹಾಕುತ್ತಿದ್ದ. ಆ ನಂತರ ಮಂತರಾಯ ಎಂಬ ಪ್ರಾಮಾಣಿಕ ತಹಶೀಲ್ದಾರ್ ರು. ಶಾಸಕ ಶೆಟ್ಟಿ ಆತನನ್ನು ಒಂದೇ ತಿಂಗಳಿಗೆ ಗಡಿ ಮಾಡಿಸಿಬಿಟ್ಟ. ಈಗ ನಂಜಯ್ಯ ಎಂಬ ಪಕ್ಕಾ ಕೋರನನ್ನು ಶೆಟ್ಟಿಯೇ ಆಯ್ದು ಹಾಕಿಸಿಕೊಂಡಿದ್ದಾನೆ. ಥಾ ಫೈಲಿಗೆ ಇಂತಿಷ್ಟೇ ಲಂಚ ಹುಟ್ಟಿತೆಂದು ೆಲ್ಲೆಗೆ ತಪ್ಪದೇ ಲೆಕ್ಕ ಕೊಟ್ಟು ಪಾದ ಕಾಣಿಕೆ ಸಲ್ಲಿಸುವ ೀಲ್ದಾರ್ ನಂಜಯ್ಯನ ಕತೆ ಹೀಗಾದರೆ ಮಾಲೂರು ಪಾಲ್ಟಿಯದ್ದೂ ಇದೇ ಗತಿ.

ರಡು ತಿಂಗಳಿಗೋ ಆರು ತಿಂಗಳಿಗೋ ಒಬ್ಬೊಬ್ಬ ಆಫೀಸರ್ ಮುನ್ಸಿಪಾಲ್ಟಿಯಲ್ಲಿ. ಏಗಲಾಗದೆ ಮವಾಗಿ ರೆವಿನ್ಯೂ ಇನ್ಸ್‌ಪೆಕ್ಟರ್ ಸುಬ್ರಮಣಿಯನ್ನೇ ಚೀಫ್ ಆಫೀಸರ್ ಗಾದಿಗೆ ತಂದು ಸುಲಿಗೆಗಿಳಿಸಿದ್ದಾನೆ. ರಿ ಕಚೇರಿಗಳ ಮೂಲಕ ಎಮ್ಮೆಲ್ಲೇ ನಡೆಸುವ ೇಕ್ಷ ಡಕಾಯಿತಿ ಈ ತೆರನಾದರೆ ಇನ್ನು ರಿಯಲ್ ಟ್. ಹೆಸರಲ್ಲಿ ಕೃಷ್ಣಯ್ಯಶೆಟ್ಟಿಯೇ ಮಾಲೂರಿನ ಾರು ಜನಕ್ಕೆ ಟೋಪಿ ಹಾಕಿದ್ದಾನೆ.

ಳೆದ ಚುನಾವಣೆಗೂ ಮುನ್ನ ಪತ್ನಿ ಸುನೀತಾಶೆಟ್ಟಿ ಬಿಟ್ಟು ಜನ ವಿಕಾಸ್ ಮಹಿಳಾ ಕೋ ಆಪರೇಟಿವ್ ್ ಆರಂಭಿಸಿದ ಶೆಟ್ಟಿ ತಾಲ್ಲೂಕಿನ ಸಾವಿರಾರು ಳೆಯರಿಂದ ತಲಾ ಐನೂರಿಂದ ಸಾವಿರ ರೂಪಾಯಿ ಷೇರು ಮೊತ್ತ ಸಂಗ್ರಹಿಸಿದ್ದ. ಕೂಲಿ ನಾಲಿ ಮಾಡಿ ಗೆ ಸದಸ್ಯರಾದ ಮಹಿಳೆಯರಿಂದ 60 ಲಕ್ಷ ಾಯಿಗಳಷ್ಟು ನಿಧಿ ಸಂಗ್ರಹವಾಗಿತ್ತು. ಆದರೆ ಗೆದ್ದು ್ಯಯಾದ ಒಂದೇ ವರ್ಷಕ್ಕೆ ಕಾರಂಜಿ ಲೇಔಟಿನ ್ಡಿ ಬ್ಯಾಂಕ್ ಕಟ್ಟಡದಲ್ಲಿದ್ದ ಮಹಿಳಾ ಕೋ-ಟಿವ್ ಬ್ಯಾಂಕನ್ನೇ ಶೆಟ್ಟಿ ಸೂಪರ್‌ಸೀಡ್ ಮಾಡಿಬಿಟ್ಟ! ರಕೀಕತ್ತೇನೆಂದರೆ ಬಡ ಮಹಿಳೆಯರಿಂದ ಗೆಂದು ಸಂಗ್ರಹಿಸಿದ್ದ 50 ಲಕ್ಷದಷ್ಟಿದ್ದ ಷೇರು ಾಳವನ್ನೇ ಶೆಟ್ಟಿ ತನ್ನ ಎಲೆಕ್ಷನ್ ಖರ್ಚಿಗೆಂದು ಕೊಂಡಿದ್ದ!

ಕ್ಷಗಟ್ಟಲೇ ಸಾಲ ಸಿಗುತ್ತದೆಯೆಂದು ಹೊಟ್ಟೆ ಬಟ್ಟೆ ಬ್ಯಾಂಕಿಗೆ ಷೇರುದಾರರಾದ ಮಾಲೂರಿನ ಮಹಿಳೆ ಗೆ ಕೊನೆಗೆ ಹಾಕಿದ ಷೇರಿನ ರವಷ್ಟೂ ಗಿಟ್ಟಲಿಲ್ಲ.

ಸೈಟು ವಂಚನೆ

ಳೆದ ಮುನ್ಸೀಪಾಲ್ಟಿ ಚುನಾವಣೆಯಲ್ಲಿ ಮಾಲೂರು ರ 23 ವಾರ್ಡುಗಳ ಪೈಕಿ ಇಪ್ಪತ್ಮೂರರಲ್ಲೂ ಯೇ ಗೆದ್ದಿತು. ಕಾರಣವೇನೆಂದರೆ ಪ್ರತಿ ಮನೆಗೂ , ಮಂಚ, ಸೀರೆ, ಹಸುಗಳನ್ನು ವಿತರಿಸುತ್ತೇನೆಂದು ಟೋಕನ್‌ಗಳನ್ನು ಹಂಚಿದ್ದ. ಹೇಗೂ ಟೋಕನ್ ಮಾದ್ದರಿಂದ ಬರಬೇಕಾಗಿ ಬಂದೇ ಬರುತ್ತದೆಯೆಂದು ಬಿಜೆಪಿಗೆ ಸಾರಾಸಗಟಾಗಿ ಓಟು ಕೊಟ್ಟರು. ಆದರೆ ವಣೆ ನಡೆದು ಮಾಲೂರು ಮುನ್ಸಿಪಾಲಿಟಿಯನ್ನು ಮಾರನೇ ದಿನವೇ ಹಂಚಿದ್ದ ಟೋಕನ್ನುಗಳನ್ನು ಮರೆತುಬಿಟ್ಟ!

ಜನ ಇವತ್ತಿಗೂ ಶೆಟ್ಟಿ ಕೊಟ್ಟಿದ್ದ ಟೋಕನ್ನುಗಳನ್ನು ು ಕ್ಯಾಕರಿಸಿ ಉಗಿಯುತ್ತಾರೆ!


ಮಾಲೂರು ತಾಲ್ಲೂಕಿನ 20 ಸಾವಿರ ಜನಕ್ಕೆ ಕೊಡುತ್ತೇನೆಂದು ಶೆಟ್ಟಿ ತನ್ನ ಖಾಸಾ ತಮ್ಮ ರಮೇಶನ ಲ್ಲಿ ಹುಟ್ಟಿ ಹಾಕಿತ್ತು, ವಿಶ್ವೇಶ್ವರಯ್ಯ ಹೌಸಿಂಗ್ ಆಪರೇಟಿವ್ ಸೊಸೈಟಿಯನ್ನು ಐವತ್ತರಿಂದ ಲಕ್ಷ ಾಯಿಯ ಒಳಗೆ ಅರ್ಧರೇಟಿಗೂ ಕಮ್ಮಿ ದರಕ್ಕೆ ಕೊಡುತ್ತೇನೆಂದು ಪ್ರತಿಯೊಬ್ಬರಿಂದ 1200 ಾಯಿ ಕಿತ್ತ, ಕಲೆ ಹಾಕಿ ದುಡ್ಡಲ್ಲೇ ರೈತರಿಗೆ ಐದೋ ೇ ಲಕ್ಷದಂತೆ ಕೊಟ್ಟು ಹೆಂಡ್ತಿ ಹೆಸರಲ್ಲಿ 38 ಎಕರೆ ೇನು ತೆಗೆದ. ಜನ ಅರ್ಧರೇಟಿಗೆ ಸೈಟು ದೆಯೆಂದು ಓಟು ಹಾಕಿದ್ದೇ ಕೊನೆ. ಈಗ ಆ ಕರೆ ಭೂಮಿಯನ್ನು ತಲಾ 42 ಲಕ್ಷದಂತೆ ಹೌಸಿಂಗ್ ರ್ಡಿಗೆ ಮಾರಿ ಲಾಭ ಮಾಡಿಕೊಂಡಿದ್ದಾನೆ. ಜನಕ್ಕೆ ಇಲ್ಲ ಕಟ್ಟಿದ ದುಡ್ಡೂ ಗೋತಾ!

ೇರೆ ಶಾಸಕರು, ಮಂತ್ರಿಗಳೆಲ್ಲ ಎಲ್ಲೆಲ್ಲೋ ಗಣಿ , ನೆಲ ದೋಚಿ, ಹಗರಣ ಮಾಡಿ ಕ್ಷೇತ್ರದ ಜನಕ್ಕೆ ರೆ ಲೋಭಿ ಕೃಷ್ಣಯ್ಯಶೆಟ್ಟಿ ತನ್ನ ಸ್ವಂತ ಮತದಾರರನ್ನೇ ಚಿದ್ದಾನೆ, ವಂಚಿಸಿದ್ದಾನೆ, ಭಿಕ್ಷುಕರನ್ನಾಗಿ ಮಾಡಿದ್ದಾನೆ. ಇನ್ನೇನು ಚುನಾವಣೆ ಸಮೀಪಿಸುತ್ತಿದೆ ಎನ್ನುವಂತೆ ಳೆಗೂ ನುಗ್ಗಿ ಸೀರೆ ಹಂಚುವುದೇನು, ಮಕ್ಕಳಿಗೆ ಹಂಚುವುದೇನು?

ಂದು ಮೂಲದ ಪ್ರಕಾರ ಶೆಟ್ಟಿ ಈಗಾಗಲೇ ್ರೆಸ್‌ನ ಇಬ್ಬರು ಮತ್ತು ಜೆಡಿಎಸ್‌ನ ಮೂವರು ು ಮಟ್ಟದ ನಾಯಕರಿಗೆ ತಲಾ 25 ಲಕ್ಷದಂತೆ ಖರೀದಿಸಿದ್ದಾನಂತೆ. ಜನ ರೊಚ್ಚಿಗೇಳದೆ ಇನ್ನೇನು?

● ರಾ. ಸೋಮನಾಥ್

ದೇವನೂರು: ಪ್ರಶ್ನೆ ಮಂತ್ರಿ ರಾಮದಾಸ್ ಆಸ್ತಿ ಎಷ್ಟು?



ಮಂತ್ರಿ ರಾಮದಾಸ್‌ಗೆ ಭಾರೀ ದುಃಸ್ವಪ್ನವೊಂದು ಕಾಡುತ್ತಿದೆಯಂತೆ. ಈ ದುಃಸ್ವಪ್ನದ ಬಾಧೆಯಿಂದ ನರಳುತ್ತಿರುವ ಮಂತ್ರಿ ಸತತ ಮೂರು ದಿನ ನಿದ್ದೆಗೆಟ್ಟು ಹಾಸಿಗೆಯಲ್ಲೇ ಬೆವರುತ್ತಿದ್ದಾರೆಂಬ ಸುದ್ದಿ ಮೈಸೂರು ನಗರದ ರಾಜಕೀಯ ವಲಯಗಳಲ್ಲಿ ಹಸಿಬಿಸಿಯಾಗಿ ಚರ್ಚೆಯಾಗುತ್ತಿದೆ.

ಅಂಥಾ ದುಸ್ವಪ್ನಕ್ಕೆ ಏನಪ್ಪಾ ಕಾರಣ ಅಂದರೆ, ತಾನು ಅಕ್ರಮವಾಗಿ ಗಳಿಸಿರುವ ಸಾವಿರಾರು ಎಕರೆ ಭೂಮಿಗಳಲ್ಲಿ ದಲಿತ ಸಂಘಟನೆಯ ಬಾವುಟ ನೆಟ್ಟು, ಅಲ್ಲೆಲ್ಲಾ ದೀನ-ದಲಿತರಿಗಾಗಿ ವಾಸದ ಶೆಡ್‌ಗಳನ್ನು ನಿರ್ಮಾಣ ಮಾಡಲು ಕೆಲವು ಆಕ್ಟಿವಿಸ್ಟ್‌ಗಳು ಯೋಜನೆ ರೂಪಿಸುತ್ತಿದ್ದಾರೆ ಎಂಬ ಸುದ್ದಿ ಕಿವಿಗೆ ಬಿದ್ದಿದ್ದೇ ತಡ, ಈ ನಾಲಾಯಕ್ ಮಂತ್ರಿಯ ರಕ್ತದೊತ್ತಡ ಏರುಪೇರಾಗಿ ಬಿಟ್ಟಿದೆಯಂತೆ.

ಇದೆಲ್ಲಾ ನಡೆದದ್ದು ಹೀಗೆ. ಚುನಾವಣೆ ಸಮೀಪಿಸುತ್ತಿದ್ದಂತೆ ಮತದಾರರ ಮೂಗಿಗೆ ತುಪ್ಪ ಸವರಿ ಯಾಮಾರಿಸಲಿಕ್ಕೆಂದು ರಾಮದಾಸ್ ಪಟಾಲಂ ನಾನಾ ಅಗ್ಗದ ಸ್ಕೀಮುಗಳನ್ನು ಸೃಷ್ಟಿಸುತ್ತಿರುವುದು ಈಗ ಜಗಜ್ಜಾಹೀರಾಗಿರುವ ವಿಷಯ. ಅಂಥಾ ಒಂದು ಸುಳ್ಳು ಯೋಜನೆಯೇ "ಸ್ವಂತ ಸೂರಿನ ಊರು ಮೈಸೂರು" ಎಂಬ ಯೋಜನೆ. ಈ ಯೋಜನೆಯಡಿ ಸ್ವಂತ ಮನೆಯಿಲ್ಲದ ದೀನ - ದಲಿತರಿಗೆ ಮನೆ ಕಟ್ಟಿಸಿಕೊಡುತ್ತೇವೆಂದು ಮತದಾರರನ್ನು ಸೆಳೆಯುವ ಕೀಳು ತಂತ್ರವೊಂದನ್ನು ಹೆಣೆದಿದ್ದು ನಮಗೆ ತಿಳಿದಿರುವ ಸಂಗತಿ.

ಹೀಗಿದ್ದಾಗ ಕಳೆದ ವಾರ ಇದೇ ರಾಮದಾಸ್ ಮತ್ತೊಂದು ಯೋಜನೆಯನ್ನು ಘೋಷಿಸಿದ್ದ. ಮೈಸೂರು ನಗರದ ದೇವರಾಜ್ ಅರಸ್ ರಸ್ತೆ ಮತ್ತು ಶೇಷಾದ್ರಿ ಅಯ್ಯರ್ ರಸ್ತೆಗಳಿಗೆ ಹೊಂದಿಕೊಂಡಿರುವ ಸರ್ಕಾರಿ ಶಾಲೆಯ ಜಾಗವನ್ನು ಏಕಾಏಕಿ ರಾಮಕೃಷ್ಣ ಆಶ್ರಮಕ್ಕೆ ಮಂಜೂರು ಮಾಡಿಬಿಟ್ಟಿದ್ದ. ಸದರಿ ಸ್ಥಳದಲ್ಲಿದ್ದ ಬಡ ಮಕ್ಕಳ ಶಾಲೆಯನ್ನು ಕೆಡವಿ ಅದೇ ಸ್ಥಳದಲ್ಲಿ ಸ್ವಾಮಿ ವಿವೇಕಾನಂದರ ಸ್ಮಾರಕವೊಂದನ್ನು ನಿರ್ಮಿಸುವುದಾಗಿ ಘೋಷಿಸಿಬಿಟ್ಟರು. ಈ ಶಾಲೆಗೆ ಒಂದು ಶತಮಾನದಷ್ಟು ಹಿಂದಿನ ಕನ್ನಡ ಶಾಲೆ ಎಂಬ ಹೆಗ್ಗಳಿಕೆ ಬೇರೆ ಇದೆ. ಆದರೆ ರಾಮದಾಸ್ ಪಟಾಲಂಗೆ ಇದಾವುದೂ ಲೆಕ್ಕಕ್ಕಿಲ್ಲ; ಅವರ ಲೆಕ್ಕದಲ್ಲಿರುವುದು ಒಂದೇ ಒಂದು ಲೆಕ್ಕ, ಒಂದು ಅಡಿಗೆ ಇಷ್ಟು ರೂಪಾಯಿ ಆದರೆ 36,590 ಅಡಿಗಳಿಗೆ ಎಷ್ಟು? ಹಾಗೂ ಅಷ್ಟು ಮೊತ್ತವನ್ನು ಯಾರ್ಯಾರು ಎಷ್ಟೆಷ್ಟು ನುಂಗಬಹುದು? ಎಂಬುದಷ್ಟೆ.


ವಾಸ್ತವದಲ್ಲಿ ಈ ಯೋಜನೆ ವಿವೇಕಾನಂದರ ಹೆಸರಿನಲ್ಲಿ ಸರ್ಕಾರಿ ಜಾಗದ ಕಬಳಿಕೆಯಷ್ಟೇ ಆಗಿತ್ತು. ನಗರದ ಹಾಟ್‌ಸ್ಪಾಟ್‌ನಲ್ಲಿರುವ 36 ಸಾವಿರ ಅಡಿಗಳಷ್ಟು ವಿಸ್ತಾರದ ಈ ಸರ್ಕಾರಿ ಭೂಮಿಯ ಇಂದಿನ ಮಾರುಕಟ್ಟೆ ಮೌಲ್ಯ ಸುಮಾರು 40 ಕೋಟಿಗೂ ಹೆಚ್ಚು.

ಹೀಗೆ ಭಾರೀ ಮೌಲ್ಯವುಳ್ಳ ಫೈಲು ತನ್ನ ಘನತೆಗೆ ತಕ್ಕ ಸ್ಪೀಡಿನಲ್ಲೇ ಕ್ಲಿಯರೆನ್ಸ್ ಪಡೆದುಕೊಂಡಿದೆ. ರಾಮಕೃಷ್ಣ ಆಶ್ರಮದ ಫೈಲು ಇದೇ ಜನವರಿ 5ನೇ ತಾರೀಕು ಸರ್ಕಾರಕ್ಕೆ ಸಲ್ಲಿಕೆಯಾಗುತ್ತದೆ. ಅಲ್ಲಿಂದ ಕೇವಲ ಮೂರೇ ದಿನದಲ್ಲಿ ಅಂದರೆ 8ನೇ ತಾರೀಕು ಈ ಮನೆಹಾಳು ಮಂಜೂರಾತಿ ಸಿಕ್ಕಿಬಿಡುತ್ತೆ ಅಂದರೆ ನೀವೇ ಯೋಚಿಸಿ.

ಸ್ವತಃ ವಿವೇಕಾನಂದರ ಆಶಯಗಳಿಗೆ, ವಿಚಾರಗಳಿಗೆ ತದ್ವಿರುದ್ಧವಾಗಿರುವ ಇಂಥಾ ಯೋಜನೆಯ ಬಗ್ಗೆ ಮೈಸೂರಿನಾದ್ಯಂತ ತೀವ್ರ ಪ್ರತಿರೋಧ ಬಂತು. ಸಾಹಿತಿಗಳು, ಚಿಂತಕರು, ಸಂಘಸಂಸ್ಥೆಗಳು ಸರ್ಕಾರಿ ಶಾಲೆ ಕಬಳಿಸುವ ಈ ಕ್ರಮವನ್ನು ತೀವ್ರವಾಗಿ ಖಂಡಿಸಿದರು. ಈ ಪ್ರತಿಭಟನೆಯಲ್ಲಿ ಹಿರಿಯ ಸಮಾಜವಾದಿ ಹೋರಾಟಗಾರರಾದ ಪ.ಮಲ್ಲೇಶ್, ಸಾಹಿತಿ ದೇವನೂರು ಮಹಾದೇವ, ಸಂಸದ ಎಚ್.ವಿಶ್ವನಾಥ್ ಮುಂತಾದವರು ಭಾಗವಹಿಸಿದ್ದರು.

ಈ ಪ್ರತಿಭಟನಾ ಸಭೆಯಲ್ಲಿ ದೇವನೂರು ಆಡಿದ ಮಾತು ದಲಿತ ಕಾರ್ಯಕರ್ತರಲ್ಲಿ ಸಂಚಲನ ಮೂಡಿಸಿದೆ. ಅವರು ಹೇಳಿದ್ದಿಷ್ಟು, "ಮಂತ್ರಿ ರಾಮದಾಸ್‌ಗೆ ಈ ಮುಂಚೆ ಇದ್ದ ಆಸ್ತಿಯೆಷ್ಟು? ಈಗ ಎಷ್ಟಿದೆ ಎಂಬುದನ್ನು ಘೋಷಿಸಲಿ. ಅದರಲ್ಲಿ ಶೇಕಡಾ 1ರಷ್ಟು ಆಸ್ತಿಯನ್ನು ಕೊಟ್ಟರೆ ಸಾಕು. ವಿವೇಕಾನಂದರ ಸ್ಮಾರಕವನ್ನೂ ನಿರ್ಮಿಸಬಹುದು; ದೀನದಲಿತರ ಅಭಿವೃದ್ಧಿಗಾಗಿ ಉತ್ತಮ ಸಂಸ್ಥೆಗಳನ್ನೂ ನಿರ್ಮಿಸಬಹುದು."

ಮಾಹಿತಿ ಹಕ್ಕು ಕಾಯ್ದೆಯಡಿ ಮಂತ್ರಿ ರಾಮದಾಸ್ ಕುಟುಂಬದ ಆಸ್ತಿ-ಪಾಸ್ತಿಗಳನ್ನು ಪತ್ತೆ ಹಚ್ಚಿದರೆ ಅಂಥಾ ಭೂಮಿಯಲ್ಲಿ ಸ್ಮಾರಕ ನಿರ್ಮಿಸಲು ತಾನೇ ಗುದ್ದಲಿ ಪೂಜೆ ಮಾಡುವುದಾಗಿ ಘೋಷಿಸಿದರು.



ವಿಷಯ ಅಷ್ಟಕ್ಕೇ ನಿಂತಿದ್ದರೆ ರಾಮದಾಸ್ ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಪರಿಸ್ಥಿತಿ ಹೇಗಾಗಿದೆಯೆಂದರೆ, ಇದುವರೆಗೆ ರಾಮದಾಸ್ ಬಿಟ್ಟ ಗಿಲೀಟು ಬಾಣಗಳೇ ಆತನಿಗೆ ತಿರುಗುಬಾಣಗಳಾಗಿ ಮರ್ಮಕ್ಕೆ ಪೆಟ್ಟುಬೀಳುವ ಸ್ಥಿತಿ ನಿರ್ಮಾಣವಾಗಿದೆ.

ರಾಮದಾಸನ "ಸ್ವಂತ ಸೂರು" ಯೋಜನೆಯಂಥಾ ಚೀಪ್‌ರೇಟ್ ಪ್ರಚಾರಗಳಿಂದ ರೋಸಿಹೋಗಿರುವ ಮೈಸೂರಿನ ಕೆಲವು ಆಕ್ಟಿವಿಸ್ಟ್‌ಗಳು ರಾಮದಾಸ್‌ನ ಬೇನಾಮಿ ಆಸ್ತಿಗಳನ್ನು ಒಳಗೊಂಡಂತೆ ಎಲ್ಲಾ ಆಸ್ತಿ ಪಾಸ್ತಿಗಳ ಬಗ್ಗೆ ತೀವ್ರ ತನಿಖೆ ಶುರುವಿಟ್ಟುಕೊಂಡಿದ್ದಾರೆ. ಮಾಹಿತಿ ಹಕ್ಕಿನಡಿ ಹತ್ತಾರು ಅರ್ಜಿಗಳು ಈಗಾಗಲೇ ದಾಖಲಾಗಿವೆಯಂತೆ. ಹೀಗೆ ಕ್ರಿಯಾಶೀಲರಾಗಿರುವ ಮಂದಿಯ ಏಕೈಕ ಡಿಮ್ಯಾಂಡ್ ಇಷ್ಟೇ. ರಾಮದಾಸ್ ಹಾಗು ಆತನ ಪಟಾಲಂ ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮವಾಗಿ ಗಳಿಸಿರುವ ಜಮೀನುಗಳನ್ನು ಪತ್ತೆ ಹಚ್ಚಿ ಅಂಥಾ ಜಮೀನುಗಳನ್ನು ಬಳಕೆ ಮಾಡಿಕೊಂಡು, ಒಂದು ಸ್ವಂತ ಮನೆ ಅಥವಾ ನಿವೇಶನವಿಲ್ಲದ ದೀನದಲಿತರಿಗೆ ನಿವೇಶನ ಹಂಚಿ, ಎಲ್ಲರೂ ಸಾಮೂಹಿಕವಾಗಿ ಆ ಅಕ್ರಮ ಆಸ್ತಿಗಳಲ್ಲಿ ವಾಸದ ಮನೆ ಅಥವ ಶೆಡ್ ನಿರ್ಮಿಸಿಕೊಳ್ಳುವುದು.

ಎಲ್ಲರಿಗೂ ಸ್ವಂತ ಸೂರು ನಿರ್ಮಿಸಿ ಕೊಡುವುದಾಗಿ ರಾಮದಾಸ್ ಹೇಳುತ್ತಿರುವುದು ಕೇವಲ ಬಡಾಯಿ ಎಂದು ಅರಿತಿರುವ ಈ ಕಾರ್ಯಕರ್ತರು ಇಂಥಾ ನೇರ ಕಾರ್ಯಾಚರಣೆಗೆ ಇಳಿದಿದ್ದಾರೆ ಎಂಬ ಬಿಸಿಬಿಸಿ ಸುದ್ದಿ ಮೈಸೂರಿನಿಂದ ಹೊರಬಿದ್ದಿದೆ.

ಈ ಸುದ್ದಿ ಕೇಳಿದಾಗಿನಿಂದ ಮಂತ್ರಿಗೆ ಸರ್ವಾಂಗಗಳಲ್ಲೂ ನಡುಕ ಶುರುವಾಗಿ ರಾತ್ರಿ ಕಣ್ಣಿಗೆ ನಿದ್ದೆ ಹತ್ತುತ್ತಿಲ್ಲವಂತೆ. ಈ ಗಿಲೀಟು ರಾಮದಾಸನಿಗೆ ಇಂಥಾ ದುರ್ಗತಿ ಬರಬಾರದಿತ್ತು.

ಏನೇ ಆಗಲಿ; ಮಂತ್ರಿಯ ಬೇನಾಮಿ ಆಸ್ತಿಯಲ್ಲಿ ಶೆಡ್ ಹಾಕುವ ಯೋಜನೆ ಕಾರ್ಯರೂಪಕ್ಕೆ ಬಂದಿದ್ದೇ ಆದಲ್ಲಿ, ಈ ಹಿಂದೆ ರೈತಸಂಘದ ವತಿಯಿಂದ ಪ್ರೊ. ನಂಜುಂಡಸ್ವಾಮಿಯವರು ರೂಪಿಸಿದ್ದ 'ಮರು ಜಪ್ತಿ' ಕಾರ್ಯಾಚರಣೆಯ ರೀತಿಯಲ್ಲಿ ಚಾರಿತ್ರಿಕ ಹೋರಾಟ ಎನಿಸಿಕೊಳ್ಳುವುದರಲ್ಲಿ ಯಾವ ಅನುಮಾನವೂ ಇಲ್ಲ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಸರ್ಕಾರಿ ಶಾಲೆ v/s ಬ್ರಾಹ್ಮಣರ ಶಾಲೆ

ಈಗ ಸಂಚಕಾರ ಬಂದಿರುವ ಸರ್ಕಾರಿ ಶಾಲೆಗೂ ವಿವೇಕಾನಂದರಿಗೂ ವಾಸ್ತವದಲ್ಲಿ ಯಾವ ಸಂಬಂಧವೂ ಇಲ್ಲ. ಅವರು 1892ರಲ್ಲಿ ಮೈಸೂರಿಗೆ ಬಂದಿದ್ದಾಗ ಈ ಶಾಲೆಯ ಪಕ್ಕದಲ್ಲಿದ್ದ ಕಟ್ಟಡವೊಂದರಲ್ಲಿ ತಂಗಿದ್ದರಂತೆ. ಅದನ್ನೇ ನೆಪ ಮಾಡಿಕೊಂಡು ಅಕ್ರಮವಾಗಿ ಭೂಮಿ ಕಬಳಿಸಲು ರಾಮದಾಸ್ ಮತ್ತು ಅವರ ಸರ್ಕಾರ ಒಳ ಸಂಚು ರೂಪಿಸಿದೆ. ಇದು ಹೇಗೂ ಮಾಮೂಲಿ ಸಂಗತಿ.

ಆದರೆ ಇದೇ ಮೈಸೂರಿಗೆ ಸ್ವಾಮಿ ವಿವೇಕಾನಂದರು ಬಂದಾಗ ಒಂದು ಶಾಲೆಯ ಆವರಣದಲ್ಲಿ ಧ್ಯಾನ ತಪ ಆಚರಣೆ ಮಾಡಿದ್ದರಂತೆ. ಆ ಶಾಲೆಯ ಹೆಸರು ಸದ್ವಿದ್ಯಾ ಶಾಲೆ. ವಿವೇಕಾನಂದರ ಸ್ಮಾರಕ ಸ್ಥಾಪನೆ ಮಾಡಲೇಬೇಕು ಎಂದಾದಲ್ಲಿ ಈ ಸದ್ವಿದ್ಯಾಶಾಲೆಯ ಸ್ಥಳವನ್ನು ಆರಿಸಿಕೊಳ್ಳುವುದು ಸರ್ವವಿಧದಿಂದಲೂ ಸೂಕ್ತವಾಗುತ್ತಿತ್ತು.

ಆದರೆ ಇಲ್ಲಿ ಒಂದು ಬಹು ದೊಡ್ಡ ತೊಡಕು ಇದೆ. ಇದು ನಗರದ ಅತಿ ಪ್ರತಿಷ್ಠಿತ ಶಾಲೆ. ಇಲ್ಲಿ ಲಕ್ಷಗಟ್ಟಳೆ ಫೀಜು ಕಟ್ಟಿ ಮೈಸೂರಿನ ಬಹುತೇಕ ಶ್ರೀಮಂತರ ಮಕ್ಕಳು ಕಲಿಯುತ್ತಿದ್ದಾರೆ. ಅದಕ್ಕಿಂತಲೂ ಮುಖ್ಯವಾಗಿ ಈ ಶಾಲೆ ಬ್ರಾಹ್ಮಣರ ಹಿಡಿತದಲ್ಲಿದೆ. ಹೀಗಿರುವಾಗ ಈ ಶಾಲೆಯನ್ನು ಸ್ಮಾರಕ ಮಾಡಬೇಕೆಂದರೆ ಹೇಗೆ ಸಾಧ್ಯ ಹೇಳಿ?

ಕುತೂಹಲಕಾರಿಯಾದ ಮತ್ತೊಂದು ಸಂಗತಿಯೂ ಇದೆ. ಈ ಶಾಲೆ ಇರುವುದು ಬೇರೆಲ್ಲೋ ಅಲ್ಲ; ಈಗ ವಿವೇಕಾನಂದರ ಹೆಸರಿನಲ್ಲಿ ಸಂಚಕಾರ ಒದಗಿಬಂದಿರುವ ಬಡಮಕ್ಕಳ ಶಾಲೆಯಿಂದ ಕೇವಲ ಕೂಗಳತೆ ದೂರದಲ್ಲೇ, ಕೇವಲ 100 ಮೀಟರ್ ಅಂತರದಲ್ಲೇ.

ಆದರೆ ಅಸಲಿಯತ್ತು ಸ್ಮಾರಕದ್ದಲ್ಲ; ರಿಯಲ್ ಎಸ್ಟೇಟ್ ಮೌಲ್ಯದ್ದು. "ಈ ಸರ್ಕಾರ ಹೇಳುತ್ತಿರುವ ಉದ್ದೇಶ ನಿಜವಾಗಿದ್ದ ಪಕ್ಷದಲ್ಲಿ ವಿವೇಕಾನಂದರು ಧ್ಯಾನ ತಪ ಮಾಡಿದ್ದ ಸದ್ವಿದ್ಯಾ ಶಾಲೆಯನ್ನು ಸ್ಮಾರಕ ಮಾಡಲಿ" ಎಂದು ಸವಾಲೆಸೆದ ಸಂಸದ ಎಚ್.ವಿಶ್ವನಾಥ್‌ರ ಮಾತುಗಳಿಗೆ ಪ್ರತಿಕ್ರಿಯಿಸುವ ಧೈರ್ಯವೂ ಈ ಸರ್ಕಾರಕ್ಕಿಲ್ಲವೆಂದರೆ ಏನು ಹೇಳಬೇಕು?


ಪ್ರಜಾಪ್ರಭುತ್ವಕ್ಕೆ ಒಂದು ತೃಪ್ತಿದಾಯಕ ದಿನ

ಹೌದಲ್ವೇ? ನಿನ್ನೆ ಪ್ರಜಾಪ್ರಭುತ್ವಕ್ಕೆ ಒಂದು ತೃಪ್ತಿದಾಯಕ ದಿನವಾಗಿತ್ತಲ್ಲವೇ? ಕಳೆದ ಶನಿವಾರ ದಿಲ್ಲಿಗೆ ವಸಂತ ಋತು ಕಾಲಿಟ್ಟಿತು. ಸೂರ್ಯೋದಯ ಆಗುತ್ತಿದ್ದಂತೆ ಕಾನೂನು ತನ್ನ ದಾರಿಯಲ್ಲಿ ಸಾಗಿತ್ತು, ನಾವು ಬೆಳಗ್ಗಿನ ಉಪಾಹಾರ ಸೇವಿಸುವ ಸ್ವಲ್ಪ ಮುನ್ನ, 2001ರ ಸಂಸತ್‌ಭವನ ದಾಳಿ ಪ್ರಕರಣದ ಆರೋಪಿ ಅಫ್ಜಲ್ ಗುರುವನ್ನು ರಹಸ್ಯವಾಗಿ ಗಲ್ಲಿಗೇರಿಸಲಾಯಿತು ಹಾಗೂ ಆತನ ಮೃತದೇಹವನ್ನು ತಿಹಾರ್ ಜೈಲಿನಲ್ಲಿ ದಫನ್ ಮಾಡಲಾಯಿತು. ಆತನನ್ನು ಮಕ್ಬೂಲ್ ಭಟ್‌ನ ಪಕ್ಕದಲ್ಲೇ ಹೂಳಲಾಯಿತೇ? (1984ರಲ್ಲಿ ತಿಹಾರ್ ಜೈಲಿನಲ್ಲಿ ನೇಣಿಗೇರಿಸಲ್ಪಟ್ಟ ಇನ್ನೋರ್ವ ಕಾಶ್ಮೀರಿ. ಅದರ ವರ್ಷಾಚರಣೆಯನ್ನು ಕಾಶ್ಮೀರಿಗಳು ನಾಳೆ ಸ್ಮರಿಸಲಿದ್ದಾರೆ.) ಅಫ್ಜಲ್‌ನನ್ನು ಗಲ್ಲುಗಂಬಕ್ಕೇರಿಸಿದ ವಿಷಯವನ್ನು ಆತನ ಪತ್ನಿ ಹಾಗೂ ಪುತ್ರನಿಗೆ ತಿಳಿಸಲಿಲ್ಲ, ಆದರೆ ಕೇಂದ್ರ ಗೃಹಕಾರ್ಯದರ್ಶಿ ಮಾತ್ರ "ಅಫ್ಜಲ್ ಕುಟುಂಬಕ್ಕೆ ಸ್ಪೀಡ್‌ಪೋಸ್ಟ್ ಹಾಗೂ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಮಾಹಿತಿ ನೀಡಲಾಗಿದೆ. ಅದು ಕುಟುಂಬಿಕರಿಗೆ ತಲುಪಿದೆಯೇ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸುವಂತೆ ಜಮ್ಮುಕಾಶ್ಮೀರದ ಪೊಲೀಸ್ ಮಹಾನಿರ್ದೇಶಕರನ್ನು ಕೇಳಿಕೊಳ್ಳಲಾಗಿದೆ" ಎಂದು ಸುದ್ದಿಗಾರರಿಗೆ ಹೇಳಿ ಕೈತೊಳೆದುಕೊಂಡರು. ಅದೇನೂ ದೊಡ್ಡ ವಿಷಯವಲ್ಲ, ಯಾಕೆಂದರೆ ಆ ಪತ್ನಿ ಹಾಗೂ ಮಗ ಓರ್ವ ಕಾಶ್ಮೀರಿ ಭಯೋತ್ಪಾದಕನ ಉಳಿದಿರುವ ಕುಟುಂಬದ ಸದಸ್ಯರಷ್ಟೇ.

ಅಪರೂಪವೆಂಬಂತೆ ದೇಶದ ಪ್ರಮುಖ ರಾಜಕೀಯ ಪಕ್ಷಗಳು ಏಕತೆಯನ್ನು ಪ್ರದರ್ಶಿಸಿದವು. ಅಫ್ಜಲ್‌ನನ್ನು ಗಲ್ಲಿಗೇರಿಸಿದ್ದು ತೀರಾ ವಿಳಂಬವಾಯಿತೆಂದು ಹಲವರು ಆಕ್ಷೇಪವ್ಯಕ್ತಪಡಿಸಿದರೂ ಕಾಂಗ್ರೆಸ್, ಬಿಜೆಪಿ ಹಾಗೂ ಸಿಪಿಎಂ ಪಕ್ಷಗಳು ಪರಸ್ಪರ ಕೈಜೋಡಿಸಿ ಕಾನೂನಿನ ಆಳ್ವಿಕೆಗೆ ಸಂದ ಜಯವೆಂದು ಬಣ್ಣಿಸಿದವು. ಈಗಿನ ದಿನಗಳಲ್ಲಿ 'ದೇಶದ ಆತ್ಮಸಾಕ್ಷಿ'ಯು ಟಿವಿ ಚಾನೆಲ್‌ಗಳಿಂದ ನೇರ ಪ್ರಸಾರವಾಗುವುದರಿಂದ ಎಂದಿನಂತೆ ತನ್ನ ಧಾರ್ಮಿಕ ಪ್ರಭುತ್ವ ಮತ್ತು ಅರೆಬರೆ ಸತ್ಯಗಳನ್ನೇ ಮಿಶ್ರಣ ಮಾಡಿ ನಮ್ಮ ಮೇಲೆ ತನ್ನ ಬೌದ್ಧಿಕತೆಯನ್ನು ಹೇರತೊಡಗಿದವು. ಆ ವ್ಯಕ್ತಿಯು ಮೃತಪಟ್ಟ ಬಳಿಕವೂ ಹೇಡಿಗಳು ಗುಂಪುಗುಂಪಾಗಿ ಬೇಟೆಯಾಡುವಂತೆ ಮಾಧ್ಯಮಗಳೆಲ್ಲವೂ ವರ್ತಿಸಲಾರಂಭಿಸಿದವು. ಪ್ರಾಯಶಃ ತಾವು ಯಾವುದೋ ಒಂದು ಘೋರ ತಪ್ಪಿನಲ್ಲಿ ಭಾಗಿ ಆಗಿದ್ದೇವೆ ಎಂಬ ಪ್ರಜ್ಞೆ ಅವರನ್ನೆಲ್ಲ ಆಳದಲ್ಲಿ ಕಾಡಿರಬಹುದು.

ಹಾಗಾದರೆ ಸತ್ಯಾಂಶಗಳೇನು?

2001ರ ಡಿಸೆಂಬರ್ 13ರಂದು ಐವರು ಶಸ್ತ್ರಧಾರಿಗಳು ಬಿಳಿ ಅಂಬಾಸಿಡರ್ ವಾಹನವೊಂದರಲ್ಲಿ ಸಂಸತ್ ಭವನದ ಗೇಟುಗಳನ್ನು ದಾಟಿ ಮುನ್ನುಗ್ಗಿದರು. ಆ ಕಾರಿನಲ್ಲಿ ಸ್ಫೋಟಕ ಸಾಧನವನ್ನು ಅಳವಡಿಸಲಾಗಿತ್ತು, ಅವರನ್ನು ಭದ್ರತಾ ಸಿಬ್ಬಂದಿಗಳು ತಡೆಯಲೆತ್ನಿಸಿದಾಗ ಅವರು ಕಾರಿನಿಂದ ಜಿಗಿದು, ಗುಂಡೆಸೆಯತೊಡಗಿದರು. ಅವರು ಎಂಟು ಭದ್ರತಾ ಸಿಬ್ಬಂದಿಯನ್ನು ಹಾಗೂ ಓರ್ವ ಉದ್ಯಾನವನದ ಮಾಲಿಯನ್ನು ಹತ್ಯೆಗೈದರು. ಆನಂತರ ನಡೆದ ಗುಂಡಿನ ಕಾಳಗದಲ್ಲಿ ಎಲ್ಲಾ ಐವರು ದಾಳಿಕೋರರನ್ನು ಕೊಲ್ಲಲಾಯಿತು. ಪೊಲೀಸ್ ಕಸ್ಟಡಿಯಲ್ಲಿ ಅಫ್ಜಲ್ ನೀಡಿದ ಹಲವಾರು ತಪ್ಪೊಪ್ಪಿಗೆ ಹೇಳಿಕೆಗಳ ಪೈಕಿ ಒಂದರಲ್ಲಿ ಆತ, ಸಂಸತ್ ಭವನದ ದಾಳಿಯಲ್ಲಿ ಪಾಲ್ಗೊಂಡವರನ್ನು



ಮುಹಮ್ಮದ್, ರಾಣಾ, ರಾಜಾ, ಹಂಝಾ ಹಾಗೂ ಹೈದರ್ ಎಂದು ಗುರುತಿಸಿದ್ದ. ಇಂದಿನವರೆಗೂ ಅವರ ಬಗ್ಗೆ ನಮಗೆ ಗೊತ್ತಿರುವುದು ಇಷ್ಟು ಮಾತ್ರ. ಆಗ ಗೃಹಸಚಿವರಾಗಿದ್ದ ಎಲ್.ಕೆ. ಅಡ್ವಾಣಿ 'ದಾಳಿಕೋರರು ಪಾಕಿಸ್ತಾನಿಗಳ ಹಾಗೆ ಕಾಣುತ್ತಿದ್ದರು' ಎಂದು ಹೇಳಿದ್ದರು. (ಸ್ವತಃ ಸಿಂಧಿಯಾಗಿರುವ ಅವರಿಗೆ ಪಾಕಿಸ್ತಾನಿಗಳು ಹೇಗೆ ಕಾಣುತ್ತಾರೆಂದು ಗೊತ್ತಿರಬೇಕಲ್ಲವೇ).

ಕೇವಲ ಅಫ್ಜಲ್‌ನ ತಪ್ಪೊಪ್ಪಿಗೆ ಹೇಳಿಕೆ (ಸುಪ್ರೀಂಕೋರ್ಟ್ ಆತನ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ನ್ಯೂನತೆಗಳಿವೆ ಹಾಗೂ ವಿಚಾರಣಾ ಪ್ರಕ್ರಿಯೆಯ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಅದನ್ನು ವಜಾ ಮಾಡಿತು)ಯನ್ನು ಆಧರಿಸಿ ಭಾರತ ಸರಕಾರವು ಪಾಕಿಸ್ತಾನದಲ್ಲಿನ ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿತ್ತು ಹಾಗೂ ಪಾಕಿಸ್ತಾನದ ಗಡಿಯಲ್ಲಿ ಐದು ಲಕ್ಷಕ್ಕೂ ಅಧಿಕ ಸೈನಿಕರನ್ನು ನಿಯೋಜಿಸಿತ್ತು, ಅಣ್ವಸ್ತ್ರ ಸಮರವನ್ನು ಸಾರುವ ಬಗ್ಗೆಯೂ ಮಾತುಗಳು ಕೇಳಿಬಂದಿದ್ದವು. ವಿದೇಶಿ ರಾಯಭಾರಿ ಕಚೇರಿಗಳು ತಮ್ಮ ದೇಶದ ಪ್ರಜೆಗಳಿಗೆ ಭಾರತಕ್ಕೆ ಪ್ರಯಾಣಿಸುವ ಬಗ್ಗೆ ಎಚ್ಚರವಹಿಸುವಂತೆ ಸಲಹೆ ನೀಡಿದವು ಹಾಗೂ ದಿಲ್ಲಿಯಲ್ಲಿರುವ ತಮ್ಮ ಸಿಬ್ಬಂದಿಯನ್ನು ವಾಪಸ್ ಕರೆಸಿಕೊಂಡಿದ್ದವು. ಎರಡೂ ದೇಶಗಳ ನಡುವೆ ಬಿಗುವಿನ ವಾತಾವರಣ ಹಲವು ತಿಂಗಳುಗಳವರೆಗೆ ಮುಂದುವರಿಯಿತು ಹಾಗೂ ಭಾರತದ ಬೊಕ್ಕಸಕ್ಕೆ ಸಹಸ್ರಾರು ಕೋಟಿ ರೂ.ಗಳ ವೆಚ್ಚ ತಗುಲಿತು.

2001ರ ಡಿಸೆಂಬರ್ 14ರಂದು ದಿಲ್ಲಿ ಪೊಲೀಸರು ತಾವು ಸಂಸತ್ ದಾಳಿ ಪ್ರಕರಣವನ್ನು ಭೇದಿಸಿರುವುದಾಗಿ ಘೋಷಿಸಿದರು. ಡಿಸೆಂಬರ್ 15ರಂದು ಅವರು ಪ್ರಕರಣದ 'ಸೂತ್ರಧಾರಿ' ಪ್ರೊಫೆಸರ್ ಎಸ್.ಎ.ಆರ್. ಗಿಲಾನಿಯವರನ್ನು ದಿಲ್ಲಿಯಲ್ಲಿ ಹಾಗೂ ಶೌಕತ್ ಗುರು ಮತ್ತು ಅಫ್ಜಲ್ ಗುರುವನ್ನು ಶ್ರೀನಗರದ ಹಣ್ಣುಹಂಪಲಿನ ಮಾರುಕಟ್ಟೆಯೊಂದರಲ್ಲಿ ಬಂಧಿಸಿದರು. ಆನಂತರ ಶೌಕತ್‌ನ ಪತ್ನಿ ಅಫ್ಸನಾ ಗುರುಳನ್ನೂ ಬಂಧಿಸಲಾಯಿತು. ಮಾಧ್ಯಮಗಳೂ ಪ್ರಕರಣ ಕುರಿತು ವಿಶೇಷ ತನಿಖಾದಳಗಳು ನೀಡಿದ ಮಾಹಿತಿಯನ್ನೇ ಉತ್ಸಾಹದಿಂದ ಪ್ರಕಟಿಸಿದವು. ಆಗ ದೇಶದ ಕೆಲವು ಪ್ರಮುಖ ಪತ್ರಿಕೆಗಳು ಪ್ರಕಟಿಸಿದ ಕೆಲವು ತಲೆಬರಹಗಳು ಹೀಗಿದ್ದವು: 'ಭಯೋತ್ಪಾದನೆ ಸಂಚಿನ ಕೇಂದ್ರದಲ್ಲಿ ದಿಲ್ಲಿ ವಿವಿಯ ಉಪನ್ಯಾಸಕ', 'ವಿಶ್ವವಿದ್ಯಾನಿಲಯದ ಡಾನ್‌ನಿಂದ ಫಿದಾಯೆನ್‌ಗಳಿಗೆ ಮಾರ್ಗದರ್ಶನ', 'ಬಿಡುವಿನ ಸಮಯದಲ್ಲಿ ಡಾನ್‌ನಿಂದ ಭಯೋತ್ಪಾದನೆಯ ಬಗ್ಗೆ ಉಪನ್ಯಾಸ' ಇತ್ಯಾದಿ.

ಝಿ ಸುದ್ದಿವಾಹಿನಿ ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಸಂಸತ್ ಮೇಲಿನ ದಾಳಿ ಪ್ರಕರಣದ ಬಗ್ಗೆ 'ಡಿಸೆಂಬರ್ 13' ಎಂಬ ಡಾಕ್ಯುಮೆಂಟರಿ ನಾಟಕವೊಂದನ್ನು ಪ್ರಸಾರ ಮಾಡಿತು. 'ಪೊಲೀಸರ ದೋಷಾರೋಪಪಟ್ಟಿಯನ್ನು ಆಧರಿಸಿದ ಸತ್ಯಘಟನೆಗಳ ಮರು ಅವತರಣಿಕೆ' ಈ ಡಾಕ್ಯುಮೆಂಟರಿ ಎಂದು ಹೇಳಿತು. (ಅಲ್ಲಾ, ಪೊಲೀಸರು ಹೇಳುವುದೇ ಸತ್ಯವಾಗಿದ್ದರೆ ನ್ಯಾಯಾಲಯಗಳು ಯಾಕಿರಬೇಕು?) ಈ ಡಾಕ್ಯುಮೆಂಟರಿಯನ್ನು ಆಗಿನ ಪ್ರಧಾನಿ ಎ.ಬಿ.ವಾಜಪೇಯಿ ಹಾಗೂ ಗೃಹ ಸಚಿವ ಎಲ್.ಕೆ.ಆಡ್ವಾಣಿ ಮುಕ್ತಕಂಠದಿಂದ ಪ್ರಶಂಸಿಸಿದರು. ಸುಪ್ರೀಂಕೋರ್ಟ್ ಕೂಡ ಇಂತಹ ಕಾರ್ಯಕ್ರಮಗಳು ನ್ಯಾಯಾಧೀಶರ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ಹೇಳುವ ಮೂಲಕ ಈ ಡಾಕ್ಯುಮೆಂಟರಿಯನ್ನು ತಡೆಹಿಡಿಯಲು ನಿರಾಕರಿಸಿತು.

ತ್ವರಿತ ವಿಚಾರಣಾ ನ್ಯಾಯಾಲಯವು ಅಫ್ಜಲ್ ಗುರು, ಶೌಕತ್ ಹಾಗೂ ಗಿಲಾನಿಗೆ ಗಲ್ಲು ಶಿಕ್ಷೆಯನ್ನು ವಿಧಿಸುವ ತೀರ್ಪನ್ನು ಘೋಷಿಸಿದ ಕೆಲವೇ ದಿನಗಳ ಮೊದಲು ಆ ಡಾಕ್ಯುಮೆಂಟರಿ ಪ್ರಸಾರವಾಗಿತ್ತು. ತರುವಾಯ ಹೈಕೋರ್ಟ್ ಪ್ರಕರಣದ ಸೂತ್ರಧಾರಿಯೆಂಬ ಆರೋಪ ಹೊತ್ತಿದ್ದ ಪ್ರೊ.ಎಸ್.ಎ.ಆರ್.ಗಿಲಾನಿ ಹಾಗೂ ಅಫ್ಸಾನ ಗುರುಳನ್ನು ದೋಷಮುಕ್ತಗೊಳಿಸಿತು. ಇವರಿಬ್ಬರನ್ನು ದೋಷಮುಕ್ತಗೊಳಿಸಿದ ಹೈಕೋರ್ಟ್ ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿಹಿಡಿಯಿತು. ಆದರೆ 2005ರಂದು ಸುಪ್ರೀಂಕೋರ್ಟ್ ನೀಡಿದ ತೀರ್ಪೊಂದರಲ್ಲಿ ಮುಹಮ್ಮದ್ ಅಫ್ಜಲ್ ಗುರುಗೆ ಮೂರು ಬಾರಿ ಜೀವಾವಧಿ ಶಿಕ್ಷೆ ಹಾಗೂ ಅವಳಿ ಮರಣದಂಡನೆಯನ್ನು ಘೋಷಿಸಿತು.

ಕೆಲವು ಹಿರಿಯ ಪತ್ರಕರ್ತರು ಕಟ್ಟಿದ ಸುಳ್ಳಿನ ಕಂತೆಗಳಿಗೆ ವ್ಯತಿರಿಕ್ತವಾಗಿ ಅಫ್ಜಲ್ ಗುರು 2001ರ ಡಿಸೆಂಬರ್ 13ರಂದು ಸಂಸತ್ ಭವನದ ಮೇಲೆ ದಾಳಿ ನಡೆಸಿದ ಉಗ್ರರಲ್ಲೊಬ್ಬನಾಗಿರಲಿಲ್ಲ, ಭದ್ರತಾ ಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿ, ಅವರನ್ನು ಕೊಂದವನೂ ಆತನಲ್ಲ (ಬಿಜೆಪಿಯ ರಾಜ್ಯಸಭಾ ಎಂ.ಪಿ.ಚಂದನ್ ಮಿತ್ರಾ ಕೂಡಾ 2006ರ ಅಕ್ಟೋಬರ್ 7ರಂದು ತಾವು ಸಂಪಾದಕರಾಗಿದ್ದ 'ಪಯೋನಿರ್' ಪತ್ರಿಕೆಯಲ್ಲಿ ಈ ಅನಿಸಿಕೆ ವ್ಯಕ್ತಪಡಿಸಿದ್ದರು). ಪೊಲೀಸ್ ಚಾರ್ಜ್‌ಶೀಟ್‌ನಲ್ಲೂ ಆ ರೀತಿ ಆರೋಪಿಸಲಾಗಿರಲಿಲ್ಲ, ಸುಪ್ರೀಂಕೋರ್ಟ್ ಕೂಡ ತನ್ನ ತೀರ್ಪಿನಲ್ಲಿ ಪುರಾವೆಯು ಸಾಂದರ್ಭಿಕವಾದುದೆಂದು ಹೇಳಿತು. ಆದರೆ ಮುಂದುವರಿದು: "ಹೆಚ್ಚಿನ ಪಿತೂರಿಗಳಂತೆ ಈ ಪ್ರಕರಣದಲ್ಲೂ ನೇರ ಸಾಕ್ಷಿ ಪುರಾವೆಗಳಿಲ್ಲ, ಆದರೆ ಈ ಘಟನೆಯಲ್ಲಿ ಜನ ಸಾವಿಗೀಡಾಗಿದ್ದಾರಲ್ಲದೆ ಇದು ಇಡೀ ದೇಶವನ್ನು ನಡುಗಿಸಿದೆ. ಆದ್ದರಿಂದ ಅಪರಾಧಿಗೆ ಮರಣದಂಡನೆಯನ್ನು ವಿಧಿಸಿದಲ್ಲಿ ದೇಶದ ಆತ್ಮಸಾಕ್ಷಿಗೆ ತೃಪ್ತಿಯಾಗುತ್ತದೆ" ಎಂದು ಹೇಳಿತು.

ಸಂಸತ್‌ಭವನ ದಾಳಿ ಪ್ರಕರಣದ ಕುರಿತಾದ ಸಮಗ್ರ ಆತ್ಮಸಾಕ್ಷಿಯನ್ನು ಯಾರು ರೂಪಿಸಿದರು? ಆ ಘಟನೆಯ ಸತ್ಯಾಂಶಗಳನ್ನು ಪತ್ರಿಕೆಗಳಿಂದ ಅಥವಾ ಟಿವಿಯಲ್ಲಿ ನಾವು ಕಂಡ ಸಿನೆಮಾಗಳಿಂದ ಅರಿತುಕೊಂಡೆವಾ?

ಎಸ್.ಎ.ಆರ್.ಗಿಲಾನಿಯನ್ನು ದೋಷಮುಕ್ತಗೊಳಿಸಿದ ನ್ಯಾಯಾಲಯಗಳು, ಅಫ್ಜಲ್ ಗುರುವನ್ನು ಅಪರಾಧಿಯೆಂದು ಘೋಷಿಸಿರುವುದರಿಂದ ಪ್ರಕರಣ ಕುರಿತ ಈ ವಿಚಾರಣೆ ಮುಕ್ತ ಹಾಗೂ ನ್ಯಾಯಸಮ್ಮತವಾಗಿತ್ತೆಂದು ವಾದಿಸುವವರಿದ್ದಾರೆ. ಆದರೆ ನಿಜವಾಗಲೂ ನಡೆದದ್ದೇನು?

ಸಂಸತ್ ಭವನದ ಮೇಲೆ ದಾಳಿ ಪ್ರಕರಣದ ವಿಚಾರಣೆಯು ತ್ವರಿತ ನ್ಯಾಯಾಲಯದಲ್ಲಿ 2002ರ ಮೇನಲ್ಲಿ ಆರಂಭಗೊಂಡಿತು. ಆಗಿನ್ನೂ ಜನ ಅಮೆರಿಕದ ಮೇಲೆ ನಡೆದ 9/11 ಭಯೋತ್ಪಾದಕ ದಾಳಿಯಿಂದ ಚೇತರಿಸಿಕೊಂಡಿರಲಿಲ್ಲ, ಅಮೆರಿಕವು ಅಫ್ಘಾನಿಸ್ತಾನದಲ್ಲಿ ತನಗೆ ಮಿಲಿಟರಿ ವಿಜಯ ಸಿಕ್ಕಿದೆ ಎಂದು ಅಕಾಲಿಕವಾಗಿ ಬೀಗುತ್ತಿತ್ತು, ಆಗ ಗುಜರಾತ್‌ನಲ್ಲಿ ಭೀಕರ ನರಮೇಧ ನಡೆಯುತ್ತಿತ್ತು, ಇದೆಲ್ಲದರೊಂದಿಗೆ ಸಂಸತ್ ಭವನದ ಮೇಲಿನ ದಾಳಿ ಪ್ರಕರಣದಲ್ಲಿ ವಿಚಾರಣೆಯು ತನ್ನದೇ ದಾರಿಯಲ್ಲಿ ಸಾಗುತ್ತಿತ್ತು.

ಯಾವುದೇ ಕ್ರಿಮಿನಲ್ ಪ್ರಕರಣದ ವಿಚಾರಣೆಯಲ್ಲಿ ಸಾಕ್ಷಿಗಳನ್ನು ನೀಡುವುದು, ಪಾಟಿಸವಾಲುಗಳು ಹಾಕುವುದು, ವಾದಪ್ರತಿವಾದಗಳನ್ನು ಮಂಡಿಸುವುದು ಮುಖ್ಯವಾಗುತ್ತದೆ. ಅಂತಹ ಪ್ರಕ್ರಿಯೆಗಳು ನಡೆಯುತ್ತಿದ್ದಾಗ ಅಫ್ಜಲ್ ಗುರುವನ್ನು ಬಿಗಿಭದ್ರತೆಯ ಕಾರಾಗೃಹದಲ್ಲಿ ಏಕಾಂತವಾಗಿ ಬಂಧಿಸಿಡಲಾಗಿತ್ತಲ್ಲದೆ ನ್ಯಾಯಾಲಯದಲ್ಲಿ ಆತನ ಪರ ವಹಿಸಿ ಮಾತನಾಡಲು ಒಬ್ಬ ವಕೀಲನೂ ಇರಲಿಲ್ಲ. ಆನಂತರ ನ್ಯಾಯಾಲಯ ನೇಮಿಸಿದ ಕಿರಿಯ ನ್ಯಾಯವಾದಿಯು ಒಮ್ಮೆಯೂ ಆತನನ್ನು ಜೈಲಿನಲ್ಲಿ ಭೇಟಿಯಾಗಲಿಲ್ಲ, ಅಫ್ಜಲ್ ಪರವಾಗಿ ವಾದಿಸಲು ಯಾವುದೇ ಸಾಕ್ಷಿಯನ್ನು ಆತ ಕರೆಸಿಕೊಳ್ಳಲಿಲ್ಲ, ಪ್ರಾಸಿಕ್ಯೂಶನ್ ಸಾಕ್ಷಿಯನ್ನು ಪಾಟಿಸವಾಲಿಗೊಳಪಡಿಸಲಿಲ್ಲ, ನ್ಯಾಯಾಧೀಶರು ಕೂಡಾ ಆ ಪರಿಸ್ಥಿತಿಯಲ್ಲಿ ತಾನೇನೂ ಮಾಡಲು ಸಾಧ್ಯವಿಲ್ಲವೆಂದು ಅಸಹಾಯಕತೆಯನ್ನು ತೋದಿಕೊಂಡಿದ್ದರು.

ಆರಂಭದಿಂದಲೇ ಈ ಕೇಸು ಮುರಿದು ಬೀಳಲಾರಂಭಿಸಿತು. ಹಾಗೆಯೇ ಉತ್ತರಿಸಲಾಗದ ಕೆಲವು ಪ್ರಶ್ನೆಗಳು ಈ ಪ್ರಕರಣವನ್ನು ಕಾಡುತ್ತಿವೆ. ಅಂತಹ ಕೆಲವು ಉದಾಹರಣೆಗಳು ಇಲ್ಲಿವೆ.

1. ಅಫ್ಜಲ್‌ನನ್ನು ಪೊಲೀಸರು ಹೇಗೆ ಬಂಧಿಸಿದರು?. ಎಸ್.ಎ.ಆರ್.ಗಿಲಾನಿಯ ಮೂಲಕ ಸಂಸತ್ ಭವನ ದಾಳಿ ಪ್ರಕರಣದಲ್ಲಿ ಅಫ್ಜಲ್‌ನ ಪಾತ್ರವನ್ನು ತಿಳಿದುಕೊಂಡೆವೆಂದು ಪೊಲೀಸರು ಹೇಳುತ್ತಾರೆ. ಆದರೆ ಪೊಲೀಸ್ ದಾಖಲೆಗಳ ಪ್ರಕಾರ, ಗಿಲಾನಿಯನ್ನು ಬಂಧಿಸುವ ಮೊದಲೇ ಪೊಲೀಸರು ಅಫ್ಜಲ್‌ನ ಬಂಧನಕ್ಕಾಗಿ ಜಾಲ ಬೀಸಿದ್ದರು. ಹೈಕೋರ್ಟ್ ಇದನ್ನು 'ವಿಷಯದ ವ್ಯತಿರಿಕ್ತತೆ' ಎಂದು ಕರೆದಿದೆ.

2. ಸಂಸತ್ ಭವನ ದಾಳಿ ಪ್ರಕರಣದಲ್ಲಿ ಅಫ್ಜಲ್

ದುಃಖದಲ್ಲಿರುವ ತಿಹಾರ್ ಜೈಲ್ ಅಧಿಕಾರಿಗಳು

"ಅಲ್ ವಿದಾ" ಎಂದ ಅಫ್ಜಲ್ ಗುರು ತನ್ನನ್ನು ಗಲ್ಲಿಗೇರಿಸುತ್ತಿದ್ದವನಿಗೆ ಆ ವಧಕಾರನೂ ಕೆಲ ಕ್ಷಣಗಳ ಹಿಂದೆ ಅಫ್ಜಲ್ ಗುರುವಿಗೆ "ಅಲ್ವಿ ವಿದಾ" ಎಂದಿದ್ದ, ಮರುಕ್ಷಣದಲ್ಲೇ ವಧಕಾರ ಸನ್ನೆಕೋಲನ್ನು ಎಳೆದ. ಅಫ್ಜಲ್‌ನ ದೇಹ ನೇಣುಗಂಬದಿಂದ ನೇತಾಡಿತು.


"ಆತ ಒಂದೇ ನಿಮಿಷದಲ್ಲಿ ಸತ್ತು ಹೋದ. ಆದರೂ ಜೈಲಿನ ನಿಯಮದಂತೆ ಆತನ ಶವವನ್ನು ಬರ್ತಿ ಅರ್ಧ ಗಂಟೆ ಕಾಲ ಅಲ್ಲೇ ನೇತುಬಿಡಲಾಗಿತ್ತು" ಎಂದು ಗಲ್ಲುಶಿಕ್ಷೆಗೆ ಪ್ರತ್ಯಕ್ಷದರ್ಶಿಯಾಗಿದ್ದ ಜೈಲಿನ ಓರ್ವ ಅಧಿಕಾರಿ ಹೇಳಿದರು. ಆನಂತರ ಅಫ್ಜಲ್‌ನ ಮೃತದೇಹವನ್ನು ನೇಣುಗಂಬದಿಂದ ಇಳಿಸಿ, ಇಸ್ಲಾಂ ಧಾರ್ಮಿಕ ವಿಧಿಗಳೊಂದಿಗೆ ಜೈಲ್ ನಂಬರ್ 3 ಹತ್ತಿರವೇ ದಫನ್ ಮಾಡಲಾಯಿತು. ಈ ಹಿಂದೆ ಅದೇ ತಿಹಾರ್ ಜೈಲಿನಲ್ಲಿ ಗಲ್ಲಿಗೇರಿಸಲ್ಪಟ್ಟಿದ್ದ ಕಾಶ್ಮೀರದ ಪ್ರತ್ಯೇಕವಾದಿ ಹೋರಾಟಗಾರ ಮಕ್ಬೂಲ್ ಭಟ್‌ನ ಸಮಾಧಿಯ ಪಕ್ಕದಲ್ಲೇ ಅಫ್ಜಲ್‌ನನ್ನು ಹೂಣಲಾಯಿತು.

"ಆದರೆ ಅವರಿಬ್ಬರ ನಡುವೆ ಒಂದು ವ್ಯತ್ಯಾಸವಿದೆ. ಮಕ್ಬೂಲ್ ಭಟ್ ಪ್ರತ್ಯೇಕ ಕಾಶ್ಮೀರಕ್ಕಾಗಿ ಹೋರಾಡಿದ್ದರೆ, ಅಫ್ಜಲ್ ಎಂದೂ ಭಾರತದಿಂದ ಕಾಶ್ಮೀರವನ್ನು ಪ್ರತ್ಯೇಕಗೊಳಿಸುವ ಮಾತನ್ನು ಆಡಿರಲಿಲ್ಲ, ಅಷ್ಟೇ ಅಲ್ಲ, ಆತ ಈ ವಿಷಯದಲ್ಲಿ ತನ್ನನ್ನು ಅನಗತ್ಯವಾಗಿ ಎಳೆಯಲಾಗಿದೆಯೆಂದು ನಮಗೆ ಹೇಳುತ್ತಿದ್ದ" ಎಂದರು ಆ ಅಧಿಕಾರಿ.

ಅಫ್ಜಲ್‌ನನ್ನು ಗಲ್ಲಿಗೇರಿಸಿದ್ದನ್ನು ದೇಶಾದ್ಯಂತ ಬಲಪಂಥೀಯ ಕಾರ್ಯಕರ್ತರು ಸಂಭ್ರಮದಿಂದ ಸ್ವಾಗತಿಸಿದರೂ ಆ ಜೈಲಿನಲ್ಲಿ ಯಾವುದೇ ಸಂಭ್ರಮವೂ ಇರಲಿಲ್ಲ, ಬದಲಿಗೆ ಅಲ್ಲಿನ ಸಿಬ್ಬಂದಿಯ ಮುಖಗಳಲ್ಲಿ ವಿಷಾದದ ಕಳೆಯಿತ್ತು, "ಆತ ಧರ್ಮಶ್ರದ್ಧೆಯುಳ್ಳವನಾಗಿದ್ದ ಹಾಗೂ ಉತ್ತಮ ನಡವಳಿಕೆಯನ್ನು ಹೊಂದಿದ್ದ. ಆತನನ್ನು ಗಲ್ಲುಗಂಬದೆಡೆಗೆ ಕೊಂಡೊಯ್ಯುವಾಗಲೂ ಆತ ತನಗೆ ಪರಿಚಯವಿದ್ದ ಜೈಲು ಸಿಬ್ಬಂದಿಯ ಹೆಸರು ಹಿಡಿದು ಅವರೆಲ್ಲರಿಗೆ ವಿದಾಯ ಹೇಳಿದ. ಗಲ್ಲಿಗೇರುವ ಮುನ್ನ ಆತ ಮಾಡಿಕೊಂಡ ಒಂದೇ ಒಂದು ಕೋರಿಕೆ ಏನೆಂದರೆ "ಮುಜೆ ಉಮಿದ್ ಹೈ ಆಪ್ ಮುಜೆ ದರ್ದ್ ನಹಿ ಕರೇಂಗೆ (ನನಗೆ ತಾವು ನೋವುಂಟು ಮಾಡುವುದಿಲ್ಲವೆಂದು ಆಶಿಸುವೆ)" ಎಂಬುದಾಗಿತ್ತು, ಆತನ ಮಾತನ್ನು ಕೇಳಿ ವಧಕಾರನೂ ಕ್ಷಣಕಾಲ ಭಾವುಕನಾದ. ಅಫ್ಜಲ್ ಗುರುವಿನ ಮುಖಕ್ಕೆ ಕಪ್ಪು ಬಟ್ಟೆಯನ್ನು ಹೊದಿಸುವಾಗ ವಧಕಾರನು ಅಫ್ಜಲ್ ಗುರುವಿನ ಕಣ್ಣುಗಳನ್ನೇ ದಿಟ್ಟಿಸಿ ನೋಡುವ ಮೂಲಕ ಸಾವಿನೆಡೆಗಿನ ಆತನ ಪಯಣ ಸುಗಮವಾಗಿರುತ್ತೆ ಎಂಬ ಭರವಸೆಯನ್ನು ನೀಡಿದ."

ಹಲವು ಪತ್ರಿಕೆಗಳಲ್ಲಿ ಪ್ರಕಟವಾದಂತೆ ಅಫ್ಜಲ್‌ನನ್ನು ಗಲ್ಲಿಗೇರಿಸುವ ಸುದ್ದಿಯನ್ನು ಆತನಿಗೆ ತಿಳಿಸಿದ್ದು ಹಿಂದಿನ ದಿನದ ಸಂಜೆಯಲ್ಲ, ಬದಲಾಗಿ ನೇಣಿಗೇರಿಸಿದ ಬೆಳಗ್ಗೆಯೇ.

"ಅಂದು ಬೆಳಗ್ಗೆ ಆತ ಒಂದು ಕಪ್ ಚಹ ಮಾತ್ರ ಸೇವಿಸಿದ್ದ, ಯಾಕೆಂದರೆ ಅಂದು ಆತನಿಗೆ ಅದರೊಂದಿಗೆ ಬೇರೆ ಯಾವ ಆಹಾರವನ್ನೂ ಕೊಡಲಾಗಿರಲಿಲ್ಲ, ಅವತ್ತು ಆತ ಎಷ್ಟು ಸಹಜವಾಗಿದ್ದನೆಂದರೆ ಆಕಸ್ಮಾತ್ ಆತನಿಗೆ ಆಹಾರವನ್ನು ಕೊಟ್ಟಿದ್ದರೆ ಆತ ಅದನ್ನು ಎಂದಿನಂತೆ ಸೇವಿಸುತ್ತಿದ್ದ.



ಅಫ್ಜಲ್‌ನ ಮಗ ಗಾಲಿಬ್, ಹೆಂಡತಿ ತಬಸ್ಸುಂ ಹಾಗೂ ತಾಯಿ ಅಯೇಷಾ

...ರುದ್ಧ ಲಭಿಸಿರುವ ಪ್ರಮುಖ ಸಾಕ್ಷಿಗಳೆಂದರೆ ಆತನಿಂದ ...ಶಪಡಿಸಿಕೊಳ್ಳಲಾದ ಮೊಬೈಲ್ ಫೋನ್ ಹಾಗೂ ...ಲ್ಯಾಪ್‌ಟಾಪ್‌ಗಳೆಂದು ಪೊಲೀಸರು ಹೇಳಿಕೊಂಡಿದ್ದಾರೆ. ...ಬಂಧನಾದೇಶದ ನೋಟಿಸ್‌ಗಳಿಗೆ ಗಿಲಾನಿಯ ಸಹೋದರ ...ಬಿಸ್ಮಿಲ್ಲಾ ಸಹಿಹಾಕಿದ್ದನು. ಈ ನೋಟಿಸ್‌ಗಳಲ್ಲಿ ಜಮ್ಮು ...ಮತ್ತು ಕಾಶ್ಮೀರ ಪೊಲೀಸ್ ಪಡೆಯ ಇಬ್ಬರು ವ್ಯಕ್ತಿಗಳ ...ಸಹಿ ಇತ್ತು. ಅವರಲ್ಲಿ ಒಬ್ಬಾತ ಶರಣಾಗತಿಗೊಂಡ ...ಉಗ್ರನಾಗಿದ್ದು, ಈ ಹಿಂದೆ ಆತ ಅಫ್ಜಲ್‌ಗೆ ಕಿರುಕುಳ ...ನೀಡಿದವನಾಗಿದ್ದ. ಅಫ್ಜಲ್‌ನಿಂದ ವಶಪಡಿಸಿಕೊಳ್ಳಲಾದ ...ಕಂಪ್ಯೂಟರ್ ಹಾಗೂ ಮೊಬೈಲ್ ಫೋನ್‌ಗಳಿಗೆ ಮೊಹರು ...ಮಾಡಲಾಗಿರಲಿಲ್ಲ. ಯಾವುದೇ ಅಪರಾಧದ ಪುರಾವೆಯಾಗಿ ...ವಶಪಡಿಸಿಕೊಳ್ಳಲಾದ ವಸ್ತುಗಳನ್ನು ಪೊಲೀಸರು ಸೀಲ್ ...ಮಾಡುವುದು ಅತ್ಯಗತ್ಯವಾಗಿದೆ. ಆದರೆ ಈ ಪ್ರಕರಣದಲ್ಲಿ ...ಪೊಲೀಸರು ಈ ನಿಯಮವನ್ನು ಸಂಪೂರ್ಣವಾಗಿ ಗಾಳಿಗೆ ...ತೂರಿದ್ದಾರೆ. ಲ್ಯಾಪ್‌ಟಾಪ್‌ನ ಹಾರ್ಡ್ ಡಿಸ್ಕ್‌ನಲ್ಲಿ ಕೇವಲ ...ಗೃಹ ಸಚಿವಾಲಯದ ನಕಲಿ ಪಾಸ್‌ಗಳು ಹಾಗೂ ಸಂಸತ್ ...ಭವನದ ಆವರಣವನ್ನು ಪ್ರವೇಶಿಸಲು ಉಗ್ರರು ಬಳಸಿದ ...ನಕಲಿ ಗುರುತುಚೀಟಿಗಳ ವಿವರಗಳು ಹಾಗೂ ...ಸಂಸತ್‌ಭವನಕ್ಕೆ ಸಂಬಂಧಿಸಿದ ಝೀಟಿವಿ ವಿಡಿಯೋ ...ಕ್ಲಿಪ್ಪಿಂಗ್‌ನ್ನು ಮಾತ್ರ ಒಳಗೊಂಡಿದ್ದವು. ಆದರೆ ಪೊಲೀಸರು ...ಹೇಳುವ ಪ್ರಕಾರ ಅಫ್ಜಲ್ ಕೆಲವು ಅತ್ಯಂತ ಮುಖ್ಯಾಂಶಗಳನ್ನು ...ಹೊರತುಪಡಿಸಿ ಲ್ಯಾಪ್‌ಟಾಪ್‌ನಲ್ಲಿನ ಉಳಿದೆಲ್ಲ ...ಮಾಹಿತಿಗಳನ್ನು ಅಳಿಸಿಹಾಕಿದ್ದ ಹಾಗೂ ಆತ ಅದನ್ನು ...ಭಯೋತ್ಪಾದನಾ ಕಾರ್ಯಾಚರಣೆಯ ಮುಖ್ಯಸ್ಥನೆನ್ನಲಾದ ...ತಾರಿಖ್ ಬಾಬಾನಿಗೆ ಹಸ್ತಾಂತರಿಸಲು ಧಾವಿಸುತ್ತಿದ್ದ.

3. ಪ್ರಾಸಿಕ್ಯೂಶನ್ ಪರ ಸಾಕ್ಷಿದಾರ ಕಮಲ್ ಕಿಶೋರ್ ...ಕಂಬಾತ, ಪ್ರಕರಣದ ಎಲ್ಲ ಆರೋಪಿಗಳಿಗೆ ತಾನು ...ಸಿಮ್‌ಕಾರ್ಡ್‌ಗಳನ್ನು 2001ರ ಡಿಸೆಂಬರ್ 4ರಂದು ...ಮಾರಾಟ ಮಾಡಿರುವುದಾಗಿ ಹೇಳಿಕೊಂಡಿದ್ದ. ಆದರೆ ...ಪ್ರಾಸಿಕ್ಯೂಶನ್‌ನ ಸ್ವಂತ ದಾಖಲೆಗಳೇ ಹೇಳುವಂತೆ ಆ ...ಸಿಮ್ 2001ರ ನವೆಂಬರ್ 6ರಿಂದ ಸಕ್ರಿಯವಾಗಿತ್ತು.


ಹೀಗೆ ಪ್ರಕರಣದ ವಿಚಾರಣೆಯನ್ನು ಕೆದಕುತ್ತಾ ಹೋದರೆ ...ಸುಳ್ಳುಗಳು ಹಾಗೂ ಕಪೋಲಕಲ್ಪಿತ ಸಾಕ್ಷಿಗಳ ಕಂತೆಗಳು ...ಒಂದೊಂದಾಗಿ ಅನಾವರಣಗೊಳ್ಳತೊಡಗುತ್ತವೆ. ...ನ್ಯಾಯಾಲಯಗಳ ಗಮನಕ್ಕೆ ಈ ವಿಷಯಗಳು ಬಂದರೂ ...ಸಹ, ಅವು ಪೊಲೀಸರಿಗೆ ಮೃದುವಾಗಿ ಬುದ್ಧಿ ಹೇಳಿ ...ಸುಮ್ಮನಾಗುತ್ತವೆಯೇ ಹೊರತು ಹೆಚ್ಚಿನದೇನೂ ಆಗುವುದಿಲ್ಲ.


ಇದರ ಹಿನ್ನೆಲೆಯಲ್ಲಿ ಒಂದು ಕತೆ ಇದೆ. ಶರಣಾಗತರಾದ ...ಹೆಚ್ಚಿನ ಕಾಶ್ಮೀರಿ ಉಗ್ರಗಾಮಿಗಳಂತೆ ಅಫ್ಜಲ್ ಗುರು ...ಕೂಡ ಪೊಲೀಸರ ಚಿತ್ರಹಿಂಸೆ, ಬ್ಲ್ಯಾಕ್‌ಮೇಲ್, ಸುಲಿಗೆಗಳಿಗೆ ...ಒಳಗಾಗುತ್ತಿದ್ದ. ಆದರೆ ದೊಡ್ಡ ಚಿತ್ರದಲ್ಲಿ ಆತನ ಯಾವ ...ಲೆಕ್ಕಕ್ಕೂ ಸಿಗದ ವ್ಯಕ್ತಿಯಾಗಿದ್ದ. ನಿಜವಾಗಿಯೂ ಸಂಸತ್ ...ಭವನ ದಾಳಿ ಪ್ರಕರಣದ ರಹಸ್ಯವನ್ನು ಭೇದಿಸಲು ...ಯಾರಿಗಾದರೂ ಆಸಕ್ತಿಯಿದ್ದಲ್ಲಿ, ಅವರು ರಾಶಿರಾಶಿಯಾಗಿ ...ರುವ ಪುರಾವೆಗಳ ಕುರಿತಾಗಿ ನಡೆದಿರುವ ತನಿಖೆಗಳನ್ನು ...ಜಾಲಾಡಬೇಕು. ಆದರೆ ಯಾರೂ ಅದನ್ನು ಮಾಡುವ ...ಗೋಜಿಗೆ ಹೋಗಲಿಲ್ಲ. ಆ ಮೂಲಕ ಈ ಸಂಚಿನ ...ನಿಜವಾದ ಸೂತ್ರಧಾರರು ಇನ್ನೂ ಗುರುತಿಸಲ್ಪಡದೆ ಹಾಗೂ ...ತನಿಖೆಗೊಳಪಡದೆ ತೆರೆಯಮರೆಯಲ್ಲೇ ಉಳಿದಿದ್ದಾರೆ.


ಆದರೆ ಈಗ ಅಫ್ಜಲ್ ಗುರುನನ್ನು ಗಲ್ಲಿಗೇರಿಸಲಾಗಿದೆ. ...ನಮ್ಮ ಸಾಮೂಹಿಕ ಆತ್ಮಸಾಕ್ಷಿಗೆ ತೃಪ್ತಿಯಾಗಿದೆಯೆಂದು ...ಭಾವಿಸುತ್ತೇನೆ ಅಥವಾ ರಕ್ತದಿಂದ ಕೂಡಿದ ನಮ್ಮ ಕಪ್ ...ಇನ್ನೂ ಅರ್ಧ ಮಾತ್ರ ತುಂಬಿದೆಯೇ?

ಲೇಖಕಿ: **ಅರುಂಧತಿ ರಾಯ್**

ಕೃಪೆ- ದಿ ಹಿಂದೂ







ರಾಹುಲ್‌ಗಾಗಿ ಅಫ್ಜಲ್ ಬಲಿ!

ಮುಂದಿನ ವರ್ಷ ನಡೆಯಬೇಕಿರುವ ಪಾರ್ಲಿಮೆಂಟ್ ಚುನಾವಣೆಗೆ ಕಾಂಗ್ರೆಸ್ ಪಕ್ಷ ಈಗಿನಿಂದಲೇ ತಯಾರಿ ಆರಂಭಿಸಿದಂತೆ ಕಾಣುತ್ತಿದೆ.

ಅಫ್ಜಲ್ ಗುರುಗೆ ದಿಢೀರೆಂದು ನೇಣು ಶಿಕ್ಷೆ ಜಾರಿ ಮಾಡಿದ ತೀರ್ಮಾನದ ಹಿಂದಿನ ರಾಜಕೀಯ ಲೆಕ್ಕಾಚಾರಗಳೇನೆಂಬುದನ್ನು ಗಮನಿಸಿದರೆ ಈ ನೇಣು ಶಿಕ್ಷೆ ಚುನಾವಣಾ ರಾಜಕೀಯದ ಒಂದು ಭಾಗವಾಗಿದೆ ಎಂಬ ಅನುಮಾನ ಬಾರದಿರದು.

ಭಾರತದ ಪಾರ್ಲಿಮೆಂಟ್ ಭವನದ ಮೇಲಿನ ಉಗ್ರರ ದಾಳಿ ಪ್ರಕರಣದಲ್ಲಿ ಅಫ್ಜಲ್ ಗುರುವೂ ಓರ್ವ ಆರೋಪಿಯಾಗಿದ್ದ ನಿಜ. ಈ ದಾಳಿಯಲ್ಲಿ ನೇರವಾಗಿ ಪಾಲ್ಗೊಂಡಿದ್ದ ಐವರು, ದಾಳಿ ಮಾಡಿದ ಮರುಗಳಿಗೆಯಲ್ಲೇ ಮರಣ ದಂಡನೆಯ ಶಿಕ್ಷೆ ಪಡೆದರು. ಭದ್ರತಾಪಡೆಗಳ ಗುಂಡಿಗೆ ಅವರೆಲ್ಲ ಬಲಿಯಾಗಿದ್ದರು. ಆದರೆ ಅಫ್ಜಲ್ ದಾಳಿ ನಡೆಸಿದ ತಂಡದಲ್ಲಿ ಇರಲಿಲ್ಲ. ಅವನು ದಾಳಿಕೋರರಿಗೆ ಹಲವು ರೀತಿಯಲ್ಲಿ ನೆರವಾಗಿದ್ದನೆಂದು ಪೊಲೀಸರು ಆರೋಪಿಸಿದ್ದರು. ಈ ಆರೋಪಗಳು ಕೋರ್ಟ್‌ನಲ್ಲಿ ನಿಸ್ಸಂಶಯವಾಗಿ ಸಾಬೀತಾಗಿರಲಿಲ್ಲ. ಆದರೂ ಕೋರ್ಟ್ ತನ್ನ ತೀರ್ಪಿನಲ್ಲಿ ಪಾರ್ಲಿಮೆಂಟ್ ಮೇಲೆ ನಡೆದ ದಾಳಿ ಗಂಭೀರ ಸ್ವರೂಪದ ಅನಾಹುತಗಳಿಗೆಡೆಮಾಡಿತೆಂದೂ, ಸಮಸ್ತ ದೇಶವೇ ಇದನ್ನು ಕೇಳಿ ತಲ್ಲಣಿಸಿತೆಂದೂ ಹಾಗೂ ದಾಳಿಕೋರರಿಗೆ ಮರಣ ಶಿಕ್ಷೆಯಾಗದೇ ರಾಷ್ಟ್ರದ ಮನಸ್ಸಾಕ್ಷಿಗೆ ಸಮಾಧಾನ ಸಿಗದೆಂದೂ ಅಭಿಪ್ರಾಯಪಟ್ಟು ಅಫ್ಜಲ್‌ಗೆ ಗಲ್ಲು ಶಿಕ್ಷೆ ವಿಧಿಸಿತ್ತು.

ಕೋರ್ಟ್ ಅವತ್ತು ಪ್ರತಿಪಾದಿಸಿದ್ದ ರಾಷ್ಟ್ರದ ಮನಸ್ಸಾಕ್ಷಿಯ ವಿಚಾರವು ಬೇಗನೆ ಒಂದು ರಾಜಕೀಯ ಅಸ್ತ್ರವಾಗಿ ರೂಪಾಂತರಗೊಂಡಿತು.

ಅಫ್ಜಲ್ ಗುರುವನ್ನು ನೇಣು ಹಾಕಲು ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರ್ಕಾರ ಹಿಂಜರಿಯುತ್ತಿದೆಯೆಂತಲೂ, ಇದು ಮುಸ್ಲಿಂ ಓಟ್ ಬ್ಯಾಂಕ್‌ಗಾಗಿ ಕಾಂಗ್ರೆಸ್ ದೇಶದ ಭದ್ರತೆಯೊಂದಿಗೂ ರಾಜಿ ಮಾಡಿಕೊಳ್ಳುತ್ತಿರುವ ಧೋರಣೆಗೆ ಸಾಕ್ಷಿಯೆಂತಲೂ ಬಿಜೆಪಿ ಗಲಾಟೆ ಆರಂಭಿಸಿತ್ತು.

ಬಿಜೆಪಿಯ ಮುಂದಿನ ಪ್ರಧಾನಿ ಅಭ್ಯರ್ಥಿಯಾಗಿ ಈಗ ಬಿಂಬಿಸಲ್ಪಡುತ್ತಿರುವ ನರೇಂದ್ರ ಮೋದಿ ಬಿಟ್ಟೂಬಿಡದೆ ಎರಡು ವಿಚಾರ ಪ್ರಸ್ತಾಪಿಸಲು ಶುರು ಮಾಡಿದ್ದರು.

ಅವರಲ್ಲಿ ಒಬ್ಬ ಮುಂಬೈ ದಾಳಿಕೋರ ಅಜ್ಮಲ್ ಕಸಬ್, ಇನ್ನೊಬ್ಬ ಅಫ್ಜಲ್ ಗುರು.

ಕಳೆದ ಆರೂವರೆ ದಶಕಗಳಿಂದಲೂ ಸಂಸದೀಯ ಚುನಾವಣಾ ತಂತ್ರಗಳಲ್ಲಿ ಪರಿಣಿತಿ ಗಳಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಕಸಬ್ ಹಾಗೂ ಅಫ್ಜಲ್ ಗುರು ನೇಣು ಶಿಕ್ಷೆ ವಿಚಾರವು ಮುಂದಿನ ಚುನಾವಣೆಯಲ್ಲಿ ಪ್ರಮುಖ ಇಷ್ಯೂ ಆಗಿ ಬೆಳೆಯುವುದು ಬೇಕಿರಲಿಲ್ಲ. ಒಂದು ನಾಗರಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರವೇ ತನ್ನ ಪ್ರಜೆಗಳಿಗೆ ಮರಣದಂಡನೆಯ ಶಿಕ್ಷೆ ನೀಡುವ ಧೋರಣೆಯು ಬೆಂಬಲಾರ್ಹವಲ್ಲ. ಅದಿಲ್ಲಿ ಈಗ ಚರ್ಚೆಯ ವಿಚಾರವಾಗಬೇಕಿಲ್ಲ.

ಅಜ್ಮಲ್ ಕಸಬ್ ಮುಂಬೈ ದಾಳಿಯಲ್ಲಿ ಭಾಗಿಯಾಗಿ ಅಸಂಖ್ಯ ಜನರ ಸಾವಿಗೆ ಕಾರಣನಾಗಿದ್ದು ನಿಸ್ಸಂಶಯವಾಗಿ ಸಾಬೀತಾಗಿದೆ. ಆ ಕಾರಣಕ್ಕಾಗಿ ಅವನನ್ನು ನೇಣಿಗೇರಿಸಲಾಯಿತು ಸರಿ. ಹಾಗೆ ಮಾಡುವ ಮೂಲಕ ಕಾಂಗ್ರೆಸ್ ತಾನೂ ಕೂಡ ಭಯೋತ್ಪಾದನೆಯನ್ನು ಸಹಿಸಲಾರನೆಂಬ ಕಠಿಣ ಸಂದೇಶವನ್ನು ನೀಡಿ ಬಿಜೆಪಿಯ ಬಾಯಿ ಮುಚ್ಚಿಸಿತ್ತು. ಅದರ ಮುಂದುವರೆದ ಭಾಗವಾಗಿ ಈಗ ಆರೋಪ ಸಾಬೀತಾಗಿರದಿದ್ದ ಅಫ್ಜಲ್‌ನನ್ನು ನೇಣಿಗೇರಿಸಿ ಬಿಜೆಪಿಗೆ ಚುನಾವಣೆಯಲ್ಲಿ ಬಳಕೆಯಾಗಬಹುದಾಗಿದ್ದ ಇನ್ನೊಂದು ಅಸ್ತ್ರವನ್ನು ಕಾಂಗ್ರೆಸ್ ಇಲ್ಲವಾಗಿಸಿದೆ.

ಜೀವಂತ ಅಫ್ಜಲ್ ಗುರು ಕಾಂಗ್ರೆಸ್ ಸರ್ಕಾರದ ನಿಷ್ಕ್ರಿಯತೆಗೆ ಸಂಕೇತದಂತೆ ಕಾಣುವುದು ಕಾಂಗ್ರೆಸ್ ನಾಯಕರಿಗೆ ಬೇಕಿರಲಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ.

ಮೋದಿಗೆ ಹೆದರಿದ ಕಾಂಗ್ರೆಸ್

2014 ರ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಪಕ್ಷದ ನಾಯಕನಾಗಿ ಹಾಗೂ ಸಂಭವನೀಯ ಪ್ರಧಾನಿ ಅಭ್ಯರ್ಥಿಯಾಗಿ ರಾಹುಲ್ ಗಾಂಧಿ ಮುಂಚೂಣಿಗೆ ಬರುವುದು ಬಹುತೇಕ ಪಕ್ಕಾ ಆಗಿದೆ. ಕಳೆದ ತಿಂಗಳು ಜೈಪುರ್‌ನಲ್ಲಿ ನಡೆದ ಕಾಂಗ್ರೆಸ್ ಚಿಂತನಾಶಿಬಿರದಲ್ಲಿ ರಾಹುಲ್ ಗಾಂಧಿಯನ್ನು ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷರನ್ನಾಗಿ ಆರಿಸಿ ಪ್ರಮೋಷನ್ ನೀಡಲಾಗಿದೆ. ಅಧಿಕಾರದ ಮುಂದಿನ ಮೆಟ್ಟಿಲುಗಳನ್ನೇರಲು ರಾಹುಲ್‌ಗೆ ಇದು ಸ್ಪ್ರಿಂಗ್‌ಬೋರ್ಡ್‌ನಂತೆ ನೆರವಾಗಬಹುದು.

ಇದರ ಇನ್ನೊಂದು ದಿಕ್ಕಿನಲ್ಲಿ ಬಿಜೆಪಿಯೊಳಗೆ ಮುಂದಿನ ಚುನಾವಣಾ ಹೋರಾಟದ ನಾಯಕ ಯಾರು ಹಾಗೂ ಪ್ರಧಾನಿ ಅಭ್ಯರ್ಥಿ ಯಾರೆಂಬ ಬಗ್ಗೆ ಈ ಮೊದಲಿದ್ದ ಗೊಂದಲಗಳೆಲ್ಲಾ ಬಗೆಹರಿಯುವ ವಿದ್ಯಮಾನಗಳು ಘಟಿಸುತ್ತಿವೆ. ಇದುವರೆವಿಗೂ ಎಲ್.ಕೆ. ಅಡ್ವಾಣಿಯೇ ಪುನಃ ನಾಯಕತ್ವ ವಹಿಸುವ ಸಾಧ್ಯತೆಗಳು ಕೇಳಿಬರುತ್ತಿದ್ದವು. ಆ ಬಗ್ಗೆ ಎನ್‌ಡಿಎ ಮಿತ್ರ ಪಕ್ಷಗಳಿಗೂ ವಿಶೇಷ ಆಕ್ಷೇಪಣೆಗಳೇನೂ ಇದ್ದಂತಿರಲಿಲ್ಲ. ಆದರೆ ಅಡ್ವಾಣಿ ಬಗ್ಗೆ ಆರೆಸೆಸ್ಸಿಗೇ ನಿರಾಸಕ್ತಿ ಇದ್ದಂತಿದೆ. ಹಾಗಾಗಿ ಈಗ ನರೇಂದ್ರ ಮೋದಿ ಸೀನ್‌ಗೆ ಬರುತ್ತಿದ್ದಾರೆ. ಎನ್‌ಡಿಎ ಮಿತ್ರಪಕ್ಷಗಳ ಪೈಕಿ ಜೆಡಿಯುನ ನಿತೀಶ್, ಒರಿಸ್ಸಾದ ನವೀನ್ ಪಟ್ನಾಯಕ್, ಆಂಧ್ರದ ಚಂದ್ರಬಾಬು ನಾಯ್ಡುರ ವಿರೋಧದ ನಡುವೆಯೂ ಆರ್‌ಸ್ಸೆಸ್ ನರೇಂದ್ರ ಮೋದಿಯನ್ನು ಚುನಾವಣೆ ರಂಗಸ್ಥಳದ ಕೇಂದ್ರ ಭೂಮಿಕೆಗೆ ತರುವ ತಯಾರಿಯಲ್ಲಿದೆ.

ಮಿತ್ರಪಕ್ಷಗಳ ನೆರವಿಲ್ಲದೆಯೆ ಕೇವಲ ನರೇಂದ್ರ ಮೋದಿಯ ಆಕ್ರಮಣಕಾರಿ ಭಾಷಣ, ಧೋರಣೆ ಹಾಗೂ ಶೈಲಿಗಳೇ ಚುನಾವಣೆಯಲ್ಲಿ ಬಿಜೆಪಿ ಪರ ಹೊಸ ಅಲೆ ಎಬ್ಬಿಸಬಲ್ಲವೆಂಬ ನಂಬಿಕೆ ಸಂಘಪರಿವಾರಕ್ಕೆ ಇದ್ದಂತಿದೆ.

ಕಾಂಗ್ರೆಸ್‌ಗೆ ಸಹಜವಾಗಿಯೇ ಇದರಿಂದ ಆತಂಕವಾದಂತಿದೆ.

ಮನಮೋಹನ್ ಸಿಂಗ್‌ರ ಪೆದ್ದು, ನಿಷ್ಕ್ರಿಯ ಹಾಗೂ ಜನವಿರೋಧಿ ಆಡಳಿತ ಶೈಲಿಯು ಮತದಾರರನ್ನು ಮೆಚ್ಚಿಸಿಲ್ಲವೆಂಬುದು ಸ್ವತಃ ಕಾಂಗ್ರೆಸ್ಸಿಗರಿಗೇ ತಿಳಿದಿದೆ. ಒಂದು ವೇಳೆ ಅಡ್ವಾಣಿಯೇ ರಾಹುಲ್‌ಗೆ ಮುಖಾಮುಖಿಯಾಗುವಂತಿದ್ದರೆ ಕಾಂಗ್ರೆಸ್ ಈಗಿನಷ್ಟು ಆತಂಕಪಡುತ್ತಿರಲಿಲ್ಲವೇನೋ. ಏಕೆಂದರೆ ಅಡ್ವಾಣಿ ಒಂದು ರೀತಿ **spent element** ನಂತಿದ್ದಾರೆ. ಇನ್ನೂ ಮೇಲಾಗಿ ಆ ವಯೋವೃದ್ಧ ನಾಯಕ **young and charming** ಆಗಿರುವ ರಾಹುಲ್‌ಗೆ ಪೈಪೋಟಿ ನೀಡುವ ಸಾಧ್ಯತೆ ಇಲ್ಲ ಎಂಬುದೇ ಕಾಂಗ್ರೆಸ್ ನಂಬಿಕೆಯಾಗಿತ್ತು. ಆದರೀಗ ಪರಿಸ್ಥಿತಿ ಬದಲಾಗಿದೆ.

ಅಡ್ವಾಣಿಯನ್ನೇ ಹಿಂದಿಕ್ಕಿ ಮೋದಿ ಮುಂಚೂಣಿಗೆ ಬರುತ್ತಿದ್ದಾರೆ. ಇಂಡಿಯಾದ ಕಾರ್ಪೊರೇಟ್ ಕುಳಗಳು ನರೇಂದ್ರ ಮೋದಿಯನ್ನು ಬೆಂಬಲಿಸುವ ಉತ್ಸಾಹದಲ್ಲಿದ್ದಾರೆ. ಈ ಶ್ರೀಮಂತ ಉದ್ದಿಮೆದಾರರ ಹಿಡಿತದಲ್ಲಿರುವ ದೊಡ್ಡ ಮೀಡಿಯಾ ಗ್ರೂಪ್‌ಗಳೂ ಮೋದಿಯ ಆಗಮನವನ್ನು ಅತಿರಂಜಕವಾಗಿ ಬಿಂಬಿಸುತ್ತಿವೆ.

ಗುಜರಾತ್ ನರಮೇಧವನ್ನು ಅದೊಂದು ಮುಗಿದ ಕತೆಯೆಂಬಂತೆ, ಮರೆತು ಬಿಡಬೇಕಾದ ಅಧ್ಯಾಯವೆಂಬಂತೆ ವರ್ತಿಸುತ್ತಾ ನರೇಂದ್ರ ಮೋದಿ ಒಬ್ಬ ಅಭಿವೃದ್ಧಿಯ ಹರಿಕಾರನೆಂಬಂತೆ ಈಗ ವ್ಯವಸ್ಥಿತವಾಗಿ ಬಿಂಬಿಸಲಾಗುತ್ತಿದೆ.

ಈ ಸವಾಲನ್ನು ಕಾಂಗ್ರೆಸ್ ಮುಖಾಮುಖಿಯಾಗದೇ ಈಗ ಅನ್ಯಮಾರ್ಗವಿಲ್ಲ. ಆ ತಯಾರಿಯ ಭಾಗವಾಗಿ ಅಫ್ಜಲ್ ಗುರುವಿನ ನೇಣಿನ ವಿಚಾರವು ಮೋದಿಯ ಪ್ರಚಾರದ ವಿಷಯವಾಗದಂತೆ ನೋಡಿಕೊಳ್ಳಲು ಕೇಂದ್ರ ಸರ್ಕಾರ ಆತನ ಕತೆ ಮುಗಿಸಿಬಿಟ್ಟಿದೆ.

ಆ ಅರ್ಥದಲ್ಲಿ ರಾಹುಲ್ ಗಾಂಧಿಯ ಅಧಿಕಾರದ ಹಾದಿಯನ್ನು ಸುಗಮಗೊಳಿಸಲು ಅಫ್ಜಲ್ ಗುರುವನ್ನು ತರಾತುರಿಯಲ್ಲಿ ಬಲಿಕೊಟ್ಟಂತಾಗಿದೆ.

ಇಂಡಿಯಾದ ರಾಜಕೀಯ ರಂಗದಲ್ಲಿ ರಾಹುಲ್ ಗಾಂಧಿ ಹೆಸರಿಗೆ ಕಳಂಕ ಬರುವಂತಹ ಪ್ರಕರಣಗಳು ಇಲ್ಲವಾದರೂ ಮಾತುಗಾರಿಕೆಯಲ್ಲಿ ರಾಹುಲ್ ಮೋದಿಗೆ ಸಮನಾಗಲಾರ. ಜೊತೆಗೆ ಕಾಂಗ್ರೆಸ್‌ನ ವಂಶಪಾರಂಪರಿಕ ಆಳ್ವಿಕೆ, ಬೆಲೆಯೇರಿಕೆ, ಸರ್ಕಾರದ ಭ್ರಷ್ಟಾಚಾರದ ಹಗರಣಗಳೆಲ್ಲಾ ರಾಹುಲ್ ಮುನ್ನಡೆಗೆ ಅಡ್ಡಿಯಾಗಲಿವೆ.

ಮೋದಿ ಇದನ್ನೆಲ್ಲ ಚುನಾವಣಾ ಸಮಯದಲ್ಲಿ ಬಳಸದೆ ಇರಲಾರ.

ಹಾಗೆಂದು ಭಾವಿಸಿ ಕಾಂಗ್ರೆಸ್ ಈಗ ಅಫ್ಜಲ್ ಗುರುವನ್ನು ನಿವಾರಿಸಿದಂತೆ ಬೆಲೆಯೇರಿಕೆ, ಭ್ರಷ್ಟಾಚಾರದ ಸಮಸ್ಯೆಗಳನ್ನು ನಿವಾರಿಸಿ ಮೋದಿಗೆ ಎಲೆಕ್ಷನ್ ಇಷ್ಯೂ ಇರದಂತೆ ಮಾಡುತ್ತದೆಂದು ನಾವ್ಯಾರು ನಿರೀಕ್ಷಿಸಲಾಗದು.

ಕಾಂಗ್ರೆಸ್ ತನ್ನ ಮುಂದಿನ ಚುನಾವಣಾ ತಯಾರಿಗೆ ಸುಲಭ ಸಾಧ್ಯವಾದ ಹೀನ ಕೆಲಸವನ್ನಷ್ಟೇ ಮಾಡಿ ಮುಗಿಸಿದೆ. ಅವರಿಗೆ ಎಲೆಕ್ಷನ್ ಗೆಲ್ಲಲು ಇಂತಹ ಇನ್ನಷ್ಟು ಶವಗಳು ಬೇಕಾಗಬಹುದು. ಆದರೆ ಭಾರತದಲ್ಲಿ ಸ್ಮಶಾನಗಳಿಗೇನೂ ಕೊರತೆ ಇಲ್ಲವಲ್ಲ.

● ಪಾರ್ವತೀಶ

...ಮತ್ತು ಬೆಳಗ್ಗೆ ಅಫ್ಜಲ್ ಕಾಶ್ಮೀರಿಗಳು ತೊಡುವ ...ಫಿರಾನ್ ಧರಿಸಿದ್ದ. ಆದರೆ ಸ್ನಾನ ಮಾಡಿದ ನಂತರ ...ಆತ ಬಿಳಿ ಕುರ್ತಾ ಮತ್ತು ಪಜಾಮ ಧರಿಸಿ ನಮಾಜ್ ...ಮಾಡಿದ.

"ತಿಹಾರ್ ಜೈಲಿನಲ್ಲಿ ಇಲ್ಲಿಯತನಕ 25 ಜನರನ್ನು ...ಗಲ್ಲಿಗೇರಿಸಲಾಗಿದೆ. ಅವುಗಳಲ್ಲಿ ಕಳೆದ ಹತ್ತು ...ಗಲ್ಲುಶಿಕ್ಷೆಗೆ ಪ್ರತ್ಯಕ್ಷದರ್ಶಿಯಾಗಿರುವ ಹಿರಿಯ ...ಅಧಿಕಾರಿಗಳು ಇಲ್ಲಿದ್ದಾರೆ. ಆದರೆ ತನ್ನನ್ನು ...ಗಲ್ಲಿಗೇರಿಸುವ ಸುದ್ದಿ ತಿಳಿದ ನಂತರವೂ ಅಫ್ಜಲ್‌ನಂತೆ ...ಶಾಂತಚಿತ್ತನಾಗಿದ್ದ ಒಬ್ಬನೇ ಒಬ್ಬ ಕೈದಿಯನ್ನು ...ಇಲ್ಲಿಯತನಕ ಯಾರೂ ನೋಡಿರಲಿಲ್ಲ."

ತಾನು ಬದುಕಿದ್ದ ಕೊನೆಯ ಎರಡು ತಾಸುಗಳನ್ನು ...ಅಫ್ಜಲ್ ಜೈಲಿನ ಕೆಲವು ಅಧಿಕಾರಿಗಳೊಂದಿಗೆ ಕಳೆದ. ...ಆಗ ಆತ ಬದುಕು ಮತ್ತು ಸಾವಿನ ಬಗ್ಗೆ ತನ್ನ ...ಹಲವು ಚಿಂತನೆಗಳನ್ನು ಅಫ್ಜಲ್ ಅವರೊಂದಿಗೆ ...ಹಂಚಿಕೊಂಡ. "ಆತ ವಿಶ್ವಭ್ರಾತೃತ್ವ ಹಾಗು ...ಮಾನವಕುಲದ ಏಕತೆಯ ಬಗ್ಗೆ ಮಾತನಾಡಿದ. ...ಹಿಂದೊಬ್ಬರೂ ಒಂದೊಂದು ರೀತಿಯಲ್ಲಿ ...ಶ್ರೇಯಸ್ಕರೇ ಆಗಿರುತ್ತಾರೆ ಹಾಗೂ ...ಹಿಂದೊಬ್ಬರಲ್ಲಿರುವ ಆತ್ಮವೂ ಒಂದೇ ದೇವರ ...ಸೃಷ್ಟಿಯಾಗಿದೆಯೆಂಬ ತನ್ನ ಅನಿಸಿಕೆಗಳನ್ನು ಅಫ್ಜಲ್ ವ್ಯಕ್ತಪಡಿಸಿದ. ವ್ಯಕ್ತಿಯೊಬ್ಬ ಸತ್ಯದ ದಾರಿಯಲ್ಲಿ ನಡೆದರೆ, ಅದುವೇ ಆತನ ಜೀವನದ ಅತಿ ದೊಡ್ಡ ಸಾಧನೆಯಾಗುತ್ತದೆ ಎಂದು ಹೇಳಿದ.

ಅಂದು ಬೆಳಗ್ಗೆ ಆತ ಎಷ್ಟು ಶಾಂತಚಿತ್ತನಾಗಿದ್ದನೆಂದರೆ ಆತ ತನ್ನ ಇಂತಹ ಕೆಲವು ಚಿಂತನೆಗಳನ್ನು ಹಾಳೆಯೊಂದರಲ್ಲಿ ಬರೆದು, ಅಂದಿನ ದಿನಾಂಕವನ್ನು ನಮೂದಿಸಿದ ನಂತರ ಅದಕ್ಕೆ ತನ್ನ ಸಹಿಯನ್ನೂ ಹಾಕಿದ.


ಆತನ ಕುಟುಂಬವನ್ನು ಇನ್ನು ಮುಂದೆ ಯಾರು ಸಲಹುತ್ತಾರೆಂದು ಜೈಲಿನ ಸಿಬ್ಬಂದಿ ಪ್ರಶ್ನಿಸಿದಾಗ ಅಫ್ಜಲ್ "ಪ್ರತಿಯೊಬ್ಬರನ್ನು ದೇವರು ಸಲಹುತ್ತಾನಾದ್ದರಿಂದ ಅವರನ್ನು ದೇವರೇ ನೋಡಿಕೊಳ್ಳುತ್ತಾನೆ" ಎಂದು ಉತ್ತರಿಸಿದ.

"ಆತನ ಆಧ್ಯಾತ್ಮಿಕತೆಯೇ ಆತನಿಗೆ ಸಾವನ್ನು ಎದುರಿಸುವ ಬಲವನ್ನು ನೀಡಿತು. ಆತ ಸುಶಿಕ್ಷಿತನಾಗಿದ್ದ, ಆತ ಇಸ್ಲಾಂ ಹಾಗೂ ಹಿಂದೂ ಧರ್ಮದ ತತ್ವಗಳನ್ನು ಆಳವಾಗಿ ಅರಿತಿದ್ದ. ಈ ಎರಡು ಧರ್ಮಗಳ ನಡುವೆ ಇರುವ ಸಾಮ್ಯತೆಯ ಬಗ್ಗೆಯೂ ಆತ ಆಗಾಗ್ಗೆ ಹೇಳುತ್ತಿದ್ದ. ಹಲವು ದಿನಗಳ ಹಿಂದೆ ಆತ ನಾಲ್ಕು ವೇದಗಳನ್ನೂ ಓದಿ ಮುಗಿಸಿದ್ದ. ಎಷ್ಟು ಜನ ಹಿಂದೂಗಳು ನಾಲ್ಕು ವೇದಗಳನ್ನು ಓದಿದ್ದಾರೆ? ಸಾಮಾನ್ಯವಾಗಿ ದುಷ್ಟಶಕ್ತಿಯ ಅಂತ್ಯವನ್ನು ಜನ ಸಂಭ್ರಮಿಸುತ್ತಾರೆ. ಆದರೆ ಧರ್ಮಶ್ರದ್ಧೆಯಿಂದ ಕೂಡಿದ ಆತ್ಮವೊಂದು ನಿರ್ಗಮಿಸಿದಾಗ ವಿಷಾದದ ನೋವುಂಟಾಗುತ್ತದೆ" ಎಂದು ಅಧಿಕಾರಿ ಹೇಳಿದರು.

"ಗಲ್ಲಿಗೇರುವಾಗಲೂ ಅಫ್ಜಲ್ ಹರ್ಷಚಿತ್ತನಾಗಿದ್ದ ಮತ್ತು ಶಾಂತಚಿತ್ತನಾಗಿದ್ದ. ಈ ಹಿಂದೆ ಗಲ್ಲುಗಂಬದೆಡೆಗೆ ತೆರಳುವ ಕೈದಿಗಳು ಭಯದಿಂದ ನಡುಗುತ್ತಿರುವುದನ್ನು ಕಂಡಿದ್ದೇವೆ. ಆದರೆ ಗಲ್ಲುಗಂಬದೆಡೆಗೆ ನಸುನಗುತ್ತಾ ತೆರಳುವ ವ್ಯಕ್ತಿಗಳ ಬಗ್ಗೆ ನಾವು ಕತೆಗಳಲ್ಲಿ ಮಾತ್ರ ಓದಿದ್ದೆವು. ಆ ಕತೆಗಳಲ್ಲಿ ನಾವು ಓದಿದ್ದಂತೆ ಅಫ್ಜಲ್ ನಡೆದುಕೊಂಡ."

"ನೇಣಿಗೇರಿಸಲಾದ ಇತರೆ ಭಯೋತ್ಪಾದಕರು ಹಾಗೂ ಅಫ್ಜಲ್ ನಡುವೆ ಇರುವ ಇನ್ನೊಂದು ವ್ಯತ್ಯಾಸವೆಂದರೆ, ಬಹುತೇಕ ಮಂದಿ ಗಲ್ಲಿಗೇರುವಾಗ ಧಾರ್ಮಿಕ ಅಥವಾ ರಾಜಕೀಯ ಘೋಷಣೆಗಳನ್ನು ಕೂಗುತ್ತಾರೆ. ಆದರೆ ಅಫ್ಜಲ್ ತನ್ನ ಸೆಲ್‌ನಿಂದ ಗಲ್ಲುಗಂಬದವರೆಗೆ ಇರುವ 100 ಹೆಜ್ಜೆಗಳಷ್ಟು ಅಂತರವನ್ನು ಸಹಜವಾಗಿಯೇ ಕ್ರಮಿಸಿ ಅಲ್ಲಿದ್ದ ಎಲ್ಲರಿಗೂ ಶುಭ ಹಾರೈಸಿ ಹೋದ" ಎಂದು ಆ ಅಧಿಕಾರಿ ಹೇಳಿದರು. ಕೃಪೆ- ದಿ ಹಿಂದೂ

ರೆಡ್ಡಿಯ ಫ್ರಂಟ್‌ಮ್ಯಾನ್ ಆಲಿಖಾನ್!



ಬಳ್ಳಾರಿಯ ಗಣಿ ಸಾಮ್ರಾಜ್ಯದ ಕಬಂಧಬಾಹುಗಳ ಉದ್ದ ಮತ್ತು ಕರಾಳತೆಯ ಒಂದೊಂದೇ ಮುಖವಾಡವನ್ನು ಸಿಬಿಐ ಕಳಚತೊಡಗಿದೆ. ಹೇಗೆ ಬಳ್ಳಾರಿಯ ಬಹುತೇಕ ಗಣಿ ಮಾಲಿಕರನ್ನು ಗಾಲಿ ಜನಾರ್ದನ ರೆಡ್ಡಿ ಗ್ಯಾಂಗ್ ಬಿಜೆಪಿ ಸರ್ಕಾರದ ಅಧಿಕಾರ ಬಳಸಿ ದೋಚುತ್ತಿತ್ತು ಮತ್ತು ಕರ್ನಾಟಕ ಭೂಸಂಪತ್ತನ್ನು ಎಷ್ಟೊಂದು ನಿರಂಕುಶವಾಗಿ ಕೊಳ್ಳೆ ಹೊಡೆಯಿತೆಂಬ ಬಗ್ಗೆ ಪತ್ರಿಕೆ ಮಾಡಿದ ತನಿಖಾ ವರದಿಗೆ ರೆಡ್ಡಿ ಬಂಟ ಆಲಿಖಾನ್‌ಗೆ ವಿವರಗಳು ಮತ್ತಷ್ಟು ಸಮರ್ಥನೆಯಷ್ಟೆ.

2007 ರ ಹೊತ್ತಿಗೆ ಯಃಕಶ್ಚಿತ್ ನಿರುದ್ಯೋಗಿಯಾಗಿದ್ದ ಆಲಿಖಾನ್ 2009ರ ಹೊತ್ತಿಗೆ ಹೇಗೆ ಸಾವಿರ ಕೋಟಿಯಷ್ಟು ಸಂಪತ್ತಿನ ಒಡೆಯನಾದ ಎಂಬ ವಿವರವೊಂದೇ ಸಾಕು.

ಆತ ರೆಡ್ಡಿಯ ರೈಟ್‌ಹ್ಯಾಂಡ್ ಮೆಹಪೂಜ್ ಆಲಿಖಾನ್. ಗುಂತಕಲ್ ರೈಲ್ವೇ ಜಂಕ್ಷನ್ನಿನ ಸರ್ವೇ ಸಾಧಾರಣ ರೈಲ್ವೇ ನೌಕರನೊಬ್ಬನ ಮಗ. ಆಲಿಖಾನ್ 2007ರ ಹೊತ್ತಿಗೆ ಓರ್ವ ನಿರ್ಗತಿಕ-ನಿರುದ್ಯೋಗಿ. ಈಗ ಕಂಪ್ಲಿ ಶಾಸಕನಾಗಿರುವ ಸುರೇಶ್‌ಬಾಬು ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದಾಗ ಆಲಿಖಾನ್ ಆತನಿಗೆ ಸಹಪಾಠಿಯಾಗಿದ್ದ. ಅದೇ ಪರಿಚಯದ ಆಧಾರದ ಮೇಲೆ ಸುರೇಶ್‌ಬಾಬು ಆತನನ್ನು ಜನಾರ್ದನ ರೆಡ್ಡಿಯ ಬ್ರಾಹ್ಮಿಣಿ ಸ್ಟೀಲ್ ಫ್ಯಾಕ್ಟರಿಗೆ ಸೇರಿಸಿದ್ದ. ಆಂಧ್ರದ ಕಡಪ ಜಿಲ್ಲೆಯ ಜಮ್ಮಲ ಮಡಗು ಎಂಬಲ್ಲಿ ಆಗಷ್ಟೇ ಜಗನ್‌ನ ಪಾಲುದಾರಿಕೆಯೊಂದಿಗೆ ರೆಡ್ಡಿ ಪ್ರಾರಂಭಿಸಿದ್ದ ಬ್ರಾಹ್ಮಿಣಿ ಸ್ಟೀಲ್ಸ್‌ಗೆ-ಆಲಿಖಾನ್ ನೌಕರನಾಗಿ ಜಮೆಯಾಗಿದ್ದು 2007ರಲ್ಲಿ.

2008ರ ಹೊತ್ತಿಗೆ ಅಂದರೆ ಕೇವಲ ಒಂದೇ ವರ್ಷದಲ್ಲಿ ಆಲಿಖಾನ್ ಮಾಲಿಕ ಗಾಲಿ ರೆಡ್ಡಿಗೆ ಪರಮಾಪ್ತನಾಗಿದ್ದ. ಅದು ಆತನ ತಾಕತ್ತು, ಆತನಿಗೆ ಆಂಧ್ರದ ಭೂಗತ ಲೋಕ ಗೊತ್ತು, ಎಂಥಾ ಖತರ್‌ನಾಕ್ ಕ್ರಿಮಿನಲ್‌ನನ್ನೂ ಹೇಗೆ ಪಳಗಿಸಬೇಕೆಂಬುದು ಗೊತ್ತು, ಜೊತೆಗೆ ಇಂಜಿನಿಯರಿಂಗ್ ಬೇರೆ ಗೊತ್ತಲ್ಲ, ಯಾವ ಗಣಿ, ಯಾವ ರಾಜಕಾರಣಿ, ಯಾವ ದೇಶ, ಎಲ್ಲಿಗೆ ರಫ್ತು, ಯಾವ ಅಧಿಕಾರಿ, ಏನು ದೌರ್ಬಲ್ಯ ಇತ್ಯಾದಿ ಪ್ರತಿಯೊಂದನ್ನೂ ಚಿಟಿಕೆ ಹೊಡೆಯುವುದರೊಳಗಾಗಿ ಆಲಿಖಾನ್ ಕಲಿ ಹಾಕುತ್ತಿದ್ದ.

ಆಲಿಖಾನ್ ಗಾಲಿ ರೆಡ್ಡಿಯ ಬಂಟನಾಗುವ ತನಕ ಆತನ ಡೀಲು, ಅಂಡರ್‌ವರ್ಲ್ಡ್, ಅದಿರು ಸುಲಿಗೆಯನ್ನು ಸಂಭಾಳಿಸುತ್ತಿದ್ದದ್ದು ರೌಡಿ ಶ್ರೀರಾಮುಲು. ಆಲಿಖಾನ್‌ನ ವೇಗ ಮತ್ತು ಚಾಣಾಕ್ಷತೆಯೆದುರು ಶ್ರೀರಾಮುಲು ಕಂಪ್ಲಿ ನಾಗೇಂದ್ರ, ಖಾರದ ಪುಡಿ ಮಹೇಶ ಥರದವರೇ ಮೂಲೆಗುಂಪಾದರು. ಗಣಿ ರೆಡ್ಡಿ ಮಂತ್ರಿಯಾಗಿ, ಶ್ರೀರಾಮುಲು, ಸೋಮಶೇಖರ್ ರೆಡ್ಡಿ, ಕರುಣಾಕರ್ ರೆಡ್ಡಿ ಥರದವರೆಲ್ಲ ಶಾಸಕರಾಗಿ ಗೆದ್ದು ಬಿಜೆಪಿ ಅಧಿಕಾರಕ್ಕೆ ಬರುವ ತನಕದ ಗಣಿ ಸಾಮ್ರಾಜ್ಯವೇ ಒಂದು ರೀತಿಯದಾದರೆ ಆ ನಂತರ ಬಿಜೆಪಿಯ ಅಧಿಕಾರದ ಮೂಲಕ ನಡೆದ ಮಾಫಿಯಾಗಿರಿಗೆ ಆಲಿಖಾನನೇ ಆಧಾರಸ್ತಂಭದಂತಿದ್ದ.

2009ರ ಹೊತ್ತಿಗೆ ರೆಡ್ಡಿಯ ಬ್ರಾಹ್ಮಿಣಿ ಸ್ಟೀಲ್ಸ್ ಕಂಪೆನಿಯ ಕೆಲಸಕ್ಕೇ ವಿದಾಯ ಹೇಳಿದ ಆಲಿಖಾನ್ ಬಳ್ಳಾರಿಗೆ ಬಂದವನೇ ತನ್ನದೇ ಒಡೆತನದ ದೇವಿ ಎಂಟರ್‌ಪ್ರೈಸಸ್ ಎಂಬ ಅದಿರು ಕಂಪೆನಿಯನ್ನು ಆರಂಭಿಸಿದ. ಆ ಹೊತ್ತಿಗೆ ರೆಡ್ಡಿ ಗ್ಯಾಂಗ್ ಓಬಳಾಪುರಂ ಮೈನಿಂಗ್ ಕಂಪೆನಿ ಮತ್ತು ಅನಂತಪುರಂ ಮೈನಿಂಗ್ ಕಂಪೆನಿ (ಎಎಂಸಿ)ಗಳ ಜೊತೆಜೊತೆಗೇ ಬ್ರಾಹ್ಮಿಣಿ ಸ್ಟೀಲ್ಸ್ ಉಕ್ಕು ಘಟಕವನ್ನೂ ನಡೆಸುತ್ತಿತ್ತು.

ಆಲಿಖಾನ್‌ನ ದೇವಿ ಎಂಟರ್‌ಪ್ರೈಸಸ್‌ಗೆ ಆತನ ಸ್ನೇಹಿತರಾದ ವಿ.ಚಂದ್ರಶೇಖರ್, ಮಧುಕುಮಾರ್, ಚಿಟ್ಟು ಶ್ರೀಕಾಂತ್ ಮುಂತಾದವರು ನಾಮಕಾವಸ್ತೆಗಷ್ಟೇ ಪಾಲುದಾರರು. ಅಸಲಿಗೆ ಗಾಲಿರೆಡ್ಡಿಯೇ ಅದರ ಧಣಿ. ಐಎನ್‌ಜಿ ವೈಶ್ಯಾ ಬ್ಯಾಂಕ್‌ನ ಬಳ್ಳಾರಿ ಶಾಖೆಯಲ್ಲಿ ದೇವಿ ಎಂಟರ್‌ಪ್ರೈಸಸ್ ತೆರೆದಿದ್ದ ಅಕೌಂಟಿನಲ್ಲಿ ಕೇವಲ 8 ತಿಂಗಳಲ್ಲಿ ಅದರ 2009ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ 103 ಕೋಟಿ ರೂಪಾಯಿಗಳ ವಹಿವಾಟು ನಡೆದಿತ್ತೆಂದರೆ ಆಲಿಖಾನ್‌ನ ದೈತ್ಯಶಕ್ತಿ ಎಂಥಾದ್ದೆಂಬ ಅಂದಾಜು ಸಿಗಲೇಬೇಕು.

ಗಾಲಿ ರೆಡ್ಡಿ ಪ್ರವಾಸೋದ್ಯಮ ಮಂತ್ರಿ. ಕರುಣಾಕರ ರೆಡ್ಡಿ ಕಂದಾಯ ಮಂತ್ರಿ. ಶ್ರೀರಾಮುಲು ಆರೋಗ್ಯ ಮಂತ್ರಿ. ಜೊತೆಗೆ ಗಣಿಧೂಳಿನಿಂದ ಹುಟ್ಟಿ ಬಂದ ಒಂದು ಡಜನ್ ಬಿಜೆಪಿ ಶಾಸಕರ ಕುಮ್ಮಕ್ಕು ಬೇರೆ. ಯಡಿಯೂರಪ್ಪ ಹೆಸರಿಗಷ್ಟೇ ಮುಖ್ಯಮಂತ್ರಿ. ಬಳ್ಳಾರಿಯ ವಿಷಯದಲ್ಲಿ ಅಲ್ಲಿ ಗಣಿ ಸಾಮ್ರಾಜ್ಯದ ಮಟ್ಟಿಗೆ ಗಾಲಿ ರೆಡ್ಡಿಯೇ ಮುಖ್ಯಮಂತ್ರಿ, ರಾಷ್ಟ್ರಪತಿ ಎಲ್ಲವೂ ಆಗಿದ್ದ ಕಾಲವದು. ಅದೇ ಹೊತ್ತಿಗೆ ಬಳ್ಳಾರಿ ಆಂಧ್ರಗಣಿಯ ಮಮಟ ಸಮೀಪದಲ್ಲಿ ವೀಯೆಮ್ ಎಂಟರ್‌ಪ್ರೈಸಸ್ ಹೆಸರಲ್ಲಿ ಅಬ್ದುಲ್ ವಾಹಿದ್ ಎಂಬಾತನ ಗಣಿಯಿತ್ತು,


20.23 ಹೆಕ್ಟೇರ್ ಪ್ರದೇಶದಲ್ಲಿದ್ದ ಸದರಿ ಗಣಿಯ ಮೈನಿಂಗ್ ಲೈಸನ್ಸ್ ಅನ್ನು ನವೀಕರಿಸಲು ಏನೆಲ್ಲಾ ಹರಸಾಹಸ ಮಾಡಿದ್ದರೂ ಆತನಿಂದ ಅದು ಸಾಧ್ಯವಾಗಲೇ ಇಲ್ಲ, ಅಂತಿಮವಾಗಿ ವಾಹಿದ್ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಕಂಡು ತನ್ನ ಗಣಿ ಲೈಸನ್ಸ್ ಅನ್ನು ನವೀಕರಿಸಿಕೊಡುವಂತೆ ವಾಹಿದ್ ಪ್ರಾರ್ಥಿಸಿದರೆ, ತಲೆತಗ್ಗಿಸಿದ ಯಡಿಯೂರಪ್ಪ. 'ನೋಡಪ್ಪಾ, ನಾನು ಹೆಸರಿಗಷ್ಟೇ ಚೀಫ್ ಮಿನಿಸ್ಟ್ರು. ಬಳ್ಳಾರಿ ವಿಷಯದಲ್ಲಿ ಅದರಲ್ಲೂ ಮೈನಿಂಗ್ಸ್‌ಗೆ ಸಂಬಂಧಪಟ್ಟಂತೆ ಯಾವುದೇ ಲೈಸೆನ್ಸ್ ರಿನೀವಲ್ ಆಗಬೇಕೆಂದರೂ ಅದಕ್ಕೆ ನಾನು ಕೂಡ ಜನಾರ್ದನ ರೆಡ್ಡಿಯ ಪರ್ಮಿಷನ್‌ಗೇ ಕಾಯಬೇಕು...!'

ಇದು ಅಬ್ದುಲ್ ವಾಹಿದ್ ಸಿಬಿಐ ಕೋರ್ಟಿನ ಕಟಕಟೆಯಲ್ಲಿ ನಿಂತು ತನ್ನ ಅಸಹಾಯಕತೆ ತೋಡಿಕೊಂಡ ರೀತಿ.

ಇದಾದನಂತರ ವಾಹಿದ್ ವಿಧಿಯಿಲ್ಲದೆ ಗಾಲಿ ರೆಡ್ಡಿಯನ್ನು ಕಂಡು ತನ್ನ ಗಣಿ ಲೈಸನ್ಸ್. ನವೀಕರಿಸಿಕೊಡುವಂತೆ ಕಣ್ಣೀರಿಟ್ಟರೆ ರೆಡ್ಡಿ ಬೇರೆಯದೇ ಷರತ್ತೊಂದನ್ನು ಹಾಕಿದ್ದ. ರೆಡ್ಡಿ ಜೊತೆ ಆಲಿಖಾನ್ ಕೂಡ ಆವತ್ತು ವಾಹಿದ್‌ನನ್ನು ಕೂರಿಸಿಕೊಂಡು ತಾಕೀತು ಮಾಡಿದ್ದ. ಆ ಪ್ರಕಾರ ವಾಹಿದ್ ತನ್ನ ಗಣಿಯ ಅಷ್ಟೂ ಅದಿರನ್ನು ಆಲಿಖಾನ್‌ನ ದೇವಿ ಎಂಟರ್‌ಪ್ರೈಸಸ್‌ಗೇ ಮಾರಬೇಕು. ಇಲ್ಲಿ ವಾಹಿದ್ ಮೈನ್ ಓನರ್ ಮಾತ್ರವಾದರೆ ಆಲಿಖಾನ್‌ನ ದೇವಿ ಎಂಟರ್‌ಪ್ರೈಸಸ್‌ದೇ ರೈಸಿಂಗ್ ಕಾಂಟ್ರಾಕ್ಟರ್!

ಇದರರ್ಥ ಅದಿರಿನ ಮಾರುಕಟ್ಟೆ ಮೌಲ್ಯದ ಶೇ.70 ರಷ್ಟು ಆಲಿಖಾನ್ ಕಂಪೆನಿಯ ಪಾಲಾದರೆ ಮಾಲಿಕ ವಾಹಿದ್ ಕೇವಲ ಶೇ. 30ರಷ್ಟನ್ನೇ ಪಡಕೊಂಡು ತೆಪ್ಪಗಿರತಕ್ಕದ್ದು!

ವಾಹಿದ್ ತನ್ನ ಶೇ.70 ರಷ್ಟು ಅದಿರನ್ನು ಬಿಟ್ಟು ಕೊಡಲು ಒಪ್ಪಿದ ನಂತರವೇ ಮುಖ್ಯಮಂತ್ರಿ ಯಡಿಯೂರಪ್ಪ ವಾಹಿದ್‌ನ ವೀಯೆಮ್ ಪ್ರೈ.ಲಿ. ಕಂಪೆನಿಯ 20.23 ಹೆಕ್ಟೇರ್ ಗಣಿಯ ಲೈಸೆನ್ಸನ್ನು ನವೀಕರಿಸಿದ್ದು!



ಅಲ್ಲಿಗೆ ಬಿಜೆಪಿ ಅಧಿಕಾರದಲ್ಲಿ, ಅದೂ ಯಡ್ಡಿಯ ಮುಖ್ಯಮಂತ್ರಿಗಿರಿಯಲ್ಲಿ ಬಳ್ಳಾರಿಯ ಬಹುತೇಕ ಗಣಿ ಮಾಲಿಕರ ದುರ್ಗತಿ ಏನಾಗಿತ್ತೆಂಬುದಕ್ಕೆ ಇದೊಂದು ಉದಾಹರಣೆಯಷ್ಟೆ. ಕೇವಲ ಓಬಳಾಪುರಂ ಅಥವಾ ಅನಂತ್‌ಪುರಂ ಮೈನಿಂಗ್ ಕಂಪೆನಿಗಳ ಗಣಿಗಳಷ್ಟೇ ಅಲ್ಲದೆ ಮಲ್ಲಿಕಾರ್ಜುನರ ಹಿಂದ್ ಟ್ರೇಡರ್ಸ್‌ನ ಗಣಿಗೇ ಆಲಿಖಾನ್ ಗ್ಯಾಂಗ್ ಸಮೇತ ನುಗ್ಗಿದ ರೆಡ್ಡಿ ಪೊಲೀಸರ ಸಮ್ಮುಖದಲ್ಲೇ ಆತನಿಗೆ ಧಮಕಿ ಹಾಕುತ್ತಾನೆ. ಎಂಬಿಟಿ ಅಂದರೆ ಮೆಹಬೂಬ್ ಟ್ರಾನ್ಸ್‌ಪೋರ್ಟ್‌ನ ಮೊಹಮ್ಮದ್ ಇಕ್ಬಾಲ್ (ಈತ ವಹಾದ್‌ನ ತಮ್ಮ) ಎಂಬಾತನ ಗಣಿಗೇ ರೌಡಿಗಳ ಜೊತೆ ನುಗ್ಗಿದ ಆಲಿಖಾನ್ ಆತನ ಇಡೀ ಗಣಿಯನ್ನು ವಶಪಡಿಸಿಕೊಳ್ಳುತ್ತಾನೆ.

ಇಲ್ಲಿ ವಶಪಡಿಸಿಕೊಳ್ಳುವುದು ಎಂದರೆ ಗಣಿ ಮಾಲಿಕರೆಲ್ಲ ಕೊಟ್ಟಷ್ಟು ಪರ್ಸೆಂಟ್‌ಗೆ ಒಪ್ಪಿ ತಮ್ಮ ಅದಿರನ್ನು ಆಲಿಖಾನ್‌ನ ರೈಸಿಂಗ್ ಕಾಂಟ್ರಾಕ್ಟಿಗೆ ಒಪ್ಪಿಸುವುದು. 2009ರ ಹೊತ್ತಿಗೆ ಹಿಂದ್ ಟ್ರೇಡರ್, ಎಂಬಿಟಿ ಮೈನ್ಸ್, ದುಷ್ಯಂತ್ ರೆಡ್ಡಿಯ ವಿಜಯ ಲೀಸಿಂಗ್ ಇತ್ಯಾದಿಯಾಗಿ ಬಳ್ಳಾರಿ ಸುತ್ತಮುತ್ತಲ ಬಹುತೇಕ ಅದಿರು ಗಣಿಗಳನ್ನೆಲ್ಲ ಆಲಿಖಾನ್ ಮೂಲಕ ಗಾಲಿರೆಡ್ಡಿ ಗ್ಯಾಂಗ್ ಆಕ್ರಮಿಸಿಕೊಂಡಿತ್ತು, ಬೇಕಾಬಿಟ್ಟಿ ಅದಿರು ಬಗೆಯುವುದು, ತಮ್ಮದೇ ಬೇನಾಮಿ ಕಂಪೆನಿಗಳ ಮೂಲಕ ರಫ್ತು ಮಾಡಿ ಮನಸ್ಸಿಗೆ ತೋಚಿದಷ್ಟು ಪುಡಿಗಾಸು ಬಿಸಾಕುವುದು ಆಲಿಖಾನ್ ಮತ್ತು ಗಾಲಿ ರೆಡ್ಡಿಯ ಅಟ್ಟಹಾಸದ ಪ್ರತೀಕವಾಗಿತ್ತು.

ಹೆಸರಿಗಷ್ಟೆ ತರಹೇವಾರಿ ಅದಿರು ಕಂಪೆನಿಗಳು ಲೈಸನ್ಸ್ ಪಡೆದು ಅದಿರು ರಫ್ತು ಮಾಡಿದ ದಾಖಲೆಯಿತ್ತಾದರೂ ಹೀಗೆ ಯಾರ್ಯಾರದೋ ಹೆಸರಲ್ಲಿ ಅದಿರು ದೋಚಿ ಲಾಭ ನೆಕ್ಕಿದ್ದು ಮಾತ್ರ ಗಾಲಿ ರೆಡ್ಡಿ, ಆಲಿಖಾನ್, ಮಧುಕುಮಾರ್, ಚಿಟ್ಟು ಶ್ರೀಕಾಂತ್ ಮತ್ತು ಶ್ರೀನಿವಾಸ್ ರೆಡ್ಡಿಯಂಥ ಖದೀಮರೇ. ಇವರೆಲ್ಲ ಸೇರಿ ವಿವಿಧ ಬ್ಯಾಂಕುಗಳಲ್ಲಿ ತೆರೆದ ಖಾತೆಗಳೇ ಹತ್ತರಷ್ಟಿದ್ದವು. ಪ್ರತಿಯೊಬ್ಬರ ಖಾತೆಗಳಲ್ಲೂ ಕೋಟಿಗಟ್ಟಲೇ ಅದಿರಿನ ದುಡ್ಡು ವಹಿವಾಟಾಗಿತ್ತು. ಕೇವಲ ಎಂಟೇ ತಿಂಗಳಲ್ಲಿ ಬಳ್ಳಾರಿಯ ಐಎನ್‌ಜಿ ವೈಶ್ಯ ಬ್ಯಾಂಕೊಂದರಲ್ಲಿ 103 ಕೋಟಿ ರೂಪಾಯಿಗಳ ವಹಿವಾಟು ಮಾಡಿದ್ದ ಆಲಿಖಾನ್ ಬೆಂಗಳೂರಿನ ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತ 250 ಎಕರೆಗಳಷ್ಟು ಭೂಮಿ ಖರೀದಿಸಿದ್ದ.


ಸಾಲದ್ದಕ್ಕೆ ತಾನು ಮಂತ್ರಿ ಜನಾರ್ದನ ರೆಡ್ಡಿಯ ಪಿಎ ಎಂದು ರಿವಾಲ್ವರ್ ಲೈಸೆನ್ಸೊಂದನ್ನು ಪಡಕೊಂಡ. ಹೀಗೆ ಮಂತ್ರಿ ರೆಡ್ಡಿಯ ಪಿಎ ತಾನೆಂದು ಪಡೆದ ಲೈಸೆನ್ಸ್ ಅನ್ನು ಕೇವಲ ಬಳ್ಳಾರಿಯ ವ್ಯಾಪ್ತಿಯಲ್ಲಷ್ಟೇ ಬಳಸಬೇಕೆಂದು ಇದ್ದ ನಿರ್ಬಂಧವನ್ನು ಇಡೀ ದೇಶದ ವ್ಯಾಪ್ತಿಗೆ ಕರ್ನಾಟಕ ಸರ್ಕಾರವೇ ವಿಸ್ತರಿಸಿಕೊಡುತ್ತದೆ. ಯಾವತ್ತು ಗಣಿರೆಡ್ಡಿಗಳ ಸಾಮ್ರಾಜ್ಯದ ಮೇಲೆ ಇನ್‌ಕಮ್ ಟ್ಯಾಕ್ಸ್ ದಾಳಿಯಾಯಿತೋ ಸಹಜವಾಗೇ ಆಲಿಖಾನ್‌ನ ಮನೆಗೂ ನುಗ್ಗಿದ ಆದಾಯ ತೆರಿಗೆ ಅಧಿಕಾರಿಗಳಿಗೆ ಆತನ ಕಂಪ್ಯೂಟರ್‌ನ ಹಾರ್ಡ್‌ಡಿಸ್ಕ್, ಇಡೀ ಗಣಿ ಸಾಮ್ರಾಜ್ಯದ ಭಯಾನಕತೆಯನ್ನು ಸಾರಿ ಹೇಳುತ್ತದೆ.


ಈಗ ತನಗೂ ಗಾಲಿ ರೆಡ್ಡಿಗೂ ಸಂಬಂಧವೇ ಇಲ್ಲ ಎನ್ನುವ ಆಲಿಖಾನ್‌ನ ಮಾತುಗಳನ್ನು ನಂಬುವವರ್‍ಯಾರು? ಅದೇನಿದ್ದರೂ ಜೈಲಿಂದ ಬಚಾವಾಗುವ ತಂತ್ರವಷ್ಟೆ. ಏಕೆಂದರೆ ರಿವಾಲ್ವರ್ ಲೈಸೆನ್ಸ್ ಪಡೆಯುವಾಗ ತಾನು ಮಂತ್ರಿ ಗಾಲಿ ರೆಡ್ಡಿಯ ಪಿಎ ಎಂದೇ ಆಲಿಖಾನ್ ಲಿಖಿತ ಪ್ರಮಾಣಪತ್ರ ಸಲ್ಲಿಸಿದ್ದ.


ಈಗ ಗುರುವಿನ ಜೊತೆಗೆ ಚಂಚಲಗುಡಾ ಜೈಲಿನಲ್ಲಿ ಕಂಬಿ ಎಣಿಸುತ್ತಿರುವ ಆಲಿಖಾನ್‌ನ ರಕ್ತ ಸಾಮ್ರಾಜ್ಯದ ವಿವರಗಳು ಇನ್ನೂ ಭಯಾನಕ ಮತ್ತು ಕರಾಳ

● ರಾ. ಸೋಮನಾಥ್

ಬೈಂದೂರು: ಟಿಕೆಟ್‌ಗಾಗಿ ಬಿಜೆಪಿಯಲ್ಲಿ ಭರ್ಜರಿ ಬಡಿದಾಟ!


ಸುಕುಮಾರ ಶೆಟ್ಟಿ


ಕೆ. ಲಕ್ಷ್ಮಿನಾರಾಯಣ


ಗೋಪಾಲ ಪೂಜಾರಿ

ಕರ್ನಾಟಕದ ಕರಾವಳಿ ಗುಂಟವಿರುವ ಅಸೆಂಬ್ಲಿ ಕ್ಷೇತ್ರಗಳಲ್ಲಿ ತೀರ ಹಿಂದುಳಿದ ಪ್ರದೇಶವೆಂದರೆ, ಅದು ಬೈಂದೂರು. ಹಾಗಂತ ಇಲ್ಲಿ ಖಾಲಿ ಬರಡು ರಾಜಕಾರಣವೇನೂ ಕಮ್ಮಿಯಿಲ್ಲ. ಕಾಂಗ್ರೆಸ್-ಬಿಜೆಪಿಯಿಂದ ಹಿಡಿದು ಮೊನ್ನೆ-ಮೊನ್ನೆ ಜನ್ಮವೆತ್ತಿದ ಬಿಎಸ್‌ಆರ್‌ಪಿ, ಕೆಜೆಪಿ ತನಕದ ಎಷ್ಟು ಪಕ್ಷದಲ್ಲಿ ಎಮ್ಮೆಲ್ಲೆ ಕ್ಯಾಂಡಿಡೇಟಾಗುವ ಅವಸರಕ್ಕೆ ಬಿದ್ದಿರುವವರ ದೊಡ್ಡ ದಂಡೇ ಇದೆ. ಶೆಟ್ಟರ್ ಮಂಡಿಸಿರುವ ಬೋಗಸ್ ಬಜೆಟ್‌ನಲ್ಲಿ ತಾಲ್ಲೂಕಾಗುವ ಭಾಗ್ಯ ಕಂಡಿರುವ ಬದ್ರಿ ಬೈಂದೂರು ಒಂಥರಾ ಶಾಪಗ್ರಸ್ತ ಗುಡ್ಡಗಾಡು ಕೊಂಪೆ. ಚುನಾವಣೆ ಬಂತೆಂದರೆ ಸಾಕು, ಬೈಂದೂರಿನ ಅಸಹಾಯಕರ ನಡುವೆ ಹಣದ ಹಣಾಹಣಿಗೆ ಕಳ್ಳ ಕಾಸಿನ ಕುಬೇರರು ದಣಿಯಾಗಿ ಬಿಡುತ್ತಾರೆ!

ಈಗ ಬಡ ಬೈಂದೂರನ್ನು ಆಳುತ್ತಿರುವಾತ ಬೆಂಗಳೂರಲ್ಲಿ ಭರ್ಜರಿ ಬಿಲ್ಡರ್ ಆಗಿರುವ ಲಕ್ಷ್ಮೀನಾರಾಯಣನೆಂಬ ಬಿಜೆಪಿ ಶಾಸಕ ಮಣಿ! ಈ "ಸಿಡಿಮಿಡಿ ಮುದುಕ"ನಿಗೆ ಐದು ವರ್ಷ ಕಳೆಯುತ್ತ ಬಂದರೂ ಶಾಸಕತ್ವದ ಹೊಣೆಗಾರಿಕೆಯೇ ಗೊತ್ತಾಗಿಲ್ಲ. ಕ್ಷೇತ್ರದ ಭೌಗೋಳಿಕ ಉದ್ದಗಲದ ಪರಿಚಯವೇ ಇಲ್ಲದ ಲಕ್ಷ್ಮೀನಾರಾಯಣನಲ್ಲಿ ತನ್ನನ್ನು ಆರಿಸಿ ಕಳಿಸಿದವರ ನೋವಿಗೆ ಧ್ವನಿಯಾಗಬೇಕೆಂಬ ಕನಿಷ್ಟ ನಿಷ್ಠೆ-ನಿಯತ್ತೂ ಇಲ್ಲ. ಬೈಂದೂರಲ್ಲಿ ಗಣನೀಯವಾಗಿರುವ ಸ್ವ-ಜಾತಿ ಶೇರುಗಾರರು ಮತ್ತು ಗುಡ್ಡಗಾಡು ಭಾಗದ ಮುಗ್ಧರ ಮತದ ಮೇಲೆ ಕಣ್ಣಿಟ್ಟು ದುಡ್ಡಿನ ಚೀಲದೊಂದಿಗೆ ಬಂದಿಳಿದ ಈ ಖೋಟಾ-ಲಕ್ಷ್ಮೀನಾರಾಯಣನಿಗೆ ಮೊದಲ ಪ್ರಯತ್ನದಲ್ಲೇ ಎಮ್ಮೆಲ್ಲೆ ಕುರ್ಚಿ ದಕ್ಕಿಸಿಕೊಳ್ಳಲಾಗಲಿಲ್ಲ. ಎರಡನೇ ಬಾರಿ (2008ರಲ್ಲಿ) ಆತನ ಹಣದ ಹಿಕಮತ್ತಿಗೆ ಬಿಜೆಪಿಯ ಮತಾಂಧ ಮದ ಹದವಾಗಿ ಬೆರೆತುಕೊಂಡಿತು. ಹೀಗಾಗಿ ಈ ಅಜ್ಜಯ್ಯನಿಗೆ ವಿಧಾನಸೌಧದ ಮೆಟ್ಟಿಲೇರುವ ಯೋಗ ಖುಲಾಯಿಸಿಬಿಟ್ಟಿತು.

ಸತತ ಐದು ವರ್ಷ ನಡೆದ ಬಿಜೆಪಿಯ ಭಂಡ ಬಂಡಾಯದ ಬಯಲಾಟದಲ್ಲಿ ಶಾಸಕ ಬೈಂದೂರು ಲಕ್ಷ್ಮೀನಾರಾಯಣ ಸದಾ ಯಡ್ಡಿ ಬದಿಗೇ ಇದ್ದ! ಯಡ್ಡಿ ಬೆಂಬಲಿಗ 13 ಜನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವ ಸಂದಿಗ್ಧ ಕಾಲದಲ್ಲಿ ಯಡ್ಡಿ ಕ್ಯಾಂಪಿನಿಂದ ಸಾವಕಾಶವಾಗಿ ಜಾರಿಕೊಂಡು ಬಿಟ್ಟ ಈ ಸಮಯಸಾಧಕ. ಇಷ್ಟು ದಿನ ಯಡ್ಡಿ ಗ್ಯಾಂಗ್‌ನಲ್ಲಿದ್ದು ತನ್ನನ್ನು ಕಡೆಗಣಿಸಿದ್ದಾನೆಂಬ ಘನ ಘೋರ ಸಿಟ್ಟು ಕರಾವಳಿ ಬಿಜೆಪಿಯ ರಿಂಗ್‌ಮಾಸ್ಟರ್ ಕಲ್ಲಡ್ಕ ಪ್ರಭಾಕರ ಭಟ್ಟನಲ್ಲಿ ಬುಸುಗುಡುತ್ತಲೇ ಇದೆ. ತುಂಬ ಹಿಂದೆಯೇ ಲಕ್ಷ್ಮೀನಾರಾಯಣನನ್ನು ಹಿಟ್‌ಲಿಸ್ಟ್‌ಗೆ ಸೇರಿಸಿಕೊಂಡಿರುವ ಕಲ್ಲಡ್ಕ ಆತನಿಗೆ ಬೈಂದೂರು ಬಿಜೆಪಿ ಟಿಕೆಟ್ ಕಟ್ ಮಾಡುವ ನಿರ್ಧಾರ ಮಾಡಿದರು.

ಸ್ಥಳೀಯ ಬಿಜೆಪಿಯ ಸರ್ವೋಚ್ಚ ಬಾಸ್ ಕಲ್ಲಡ್ಕನ ಕೆಂಗಣ್ಣಿಗೆ ತುತ್ತಾದ ಲಕ್ಷ್ಮೀನಾರಾಯಣ ಒಂಥರಾ ಎಡಬಿಡಂಗಿಯಂತಾಗಿಹೋದರು. ಯಾವಾಗ ಬೆಂಗಳೂರಲ್ಲಿ ಬಿಲ್ಡರ್ ಆಗಿರುವ ಬೈಂದೂರು ಮೂಲದ ಸುಖಾನಂದಶೆಟ್ಟಿಗೆ ಕಲ್ಲಡ್ಕ "ನೀನೇ ಬೈಂದೂರು ಬಿಜೆಪಿ ಹುರಿಯಾಳು" ಎಂದು ಹುರಿದುಂಬಿಸಿ ಕ್ಷೇತ್ರದಲ್ಲಿ ಛೂ ಬಿಟ್ಟರೋ ಆಗಂತೂ ಲಕ್ಷ್ಮೀನಾರಾಯಣ ಕಂಗಾಲಾಗಿಹೋದ! ಯಾವಾಗ ದೇವ ಪಿತೃನಂತಿದ್ದ ಯಡ್ಡಿ ಕೆಜೆಪಿ ಸ್ಥಾಪಿಸಿದರೋ ಆಗಂತೂ ಆತನಿಗೆ ದಿಕ್ಕೇ ತೋಚದಂತಾಗಿಹೋಯ್ತು! ಯಡ್ಡಿ ಹಿಂದೆ ಹೋದರೆ ಬೈಂದೂರಲ್ಲಿ ಗೆಲ್ಲೋದು ಕಷ್ಟ; ಬಿಜೆಪಿಯಲ್ಲೇ ಉಳಿದರೆ ಕಲ್ಲಡ್ಕನ ಕಾಟ. ಅಂತೂ-ಇಂತೂ ಬೆಂಗಳೂರು ಮಟ್ಟದಲ್ಲೇ ತಿಪ್ಪರಲಾಗ ಹಾಕಿ ಶೆಟ್ಟರ್ ಸರ್ಕಾರಕ್ಕೆ ಬೆಂಬಲ ನೀಡುತ್ತೇನೆಂದು ನೈಚ್ಯಾನುಸಂಧಾನ ಮಾಡಿಕೊಂಡ ಲಕ್ಷ್ಮೀನಾರಾಯಣ. ಯಡ್ಡಿ ಬಲಕುಂದಿಸುವ ಕರಾಮತ್ತಿನಲ್ಲಿದ್ದ ಶೆಟ್ಟರ್, ಸದಾನಂದಗೌಡ ಇತ್ಯಾದಿ ನಾಯಕಾಗ್ರೇಸರು "ಬೈಂದೂರು ಟಿಕೆಟ್ ಕೊಡುತ್ತೇವೆ ಬಿಜೆಪಿಯಲ್ಲೇ ಇರು" ಎಂದು ಲಕ್ಷ್ಮೀನಾರಾಯಣನ 'ಮನಃಪರಿವರ್ತನೆ' ಮಾಡಿದರು.

ಆದರೆ ಬೈಂದೂರು ಬಿಜೆಪಿಯಲ್ಲಿ ಮಾತ್ರ ಟಿಕೆಟ್‌ಗಾಗಿ ತರಹೇವಾರಿ ತುರುಸು ಏರ್ಪಟ್ಟಿದೆ. ಅರ್ಧ ಡಜನ್ ಎಮ್ಮೆಲ್ಲೆಗಿರಿ ಉಮೇದುವಾರರು ಫೀಲ್ಡಿಗಿಳಿದು ತಾವೇ ಅಭ್ಯರ್ಥಿಯೆಂದು ಹಣ-ಬೆವರು ಎರಡೂ ಹರಿಸುತ್ತಿದ್ದಾರೆ. ಕಲ್ಲಡ್ಕ ಭಟ್ಟನಿಗೆ ವರ್ಷದ ಹಿಂದೆಯೇ ಪೇಮೆಂಟ್ ಮಾಡಿ ಟಿಕೆಟ್ ಆಶ್ವಾಸನೆ ಪಡೆದ ಬಿಲ್ಡರ್ ಸುಖಾನಂದ ಶೆಟ್ಟಿ 'ಜನಸೇವೆ'ಗೆಂದು ಬೈಂದೂರಲ್ಲಿ ಲಕ್ಷ-ಲಕ್ಷ ಹರಿಸಿಯಾಗಿದೆ.

ಪ್ರಯಣಕುಮಾರ್ ಎಂಬ ಪೆದ್ದು ಪೋರ ತನಗೆ ಆರೆಸ್ಸೆಸ್ ಹಸಿರುನಿಶಾನೆ ತೋರಿಸಿದೆ ಎಂದ್ಹೇಳುತ್ತ ಕ್ಷೇತ್ರದಲ್ಲಿ ಅಂಡಲೆಯುತ್ತಿದ್ದಾನೆ. ಜಿಲ್ಲಾ ಪಂಚಾಯ್ತಿ ಸದಸ್ಯ ಬಾಬುಶೆಟ್ಟಿ ತನಗೇ ಟಿಕೆಟ್ ಕೊಡುವಂತೆ ಹಠ ಹಿಡಿದಿದ್ದಾರೆ. ಲಕ್ಷ್ಮೀನಾರಾಯಣರನ್ನು ಸಂಜೆಯಾಗುತ್ತಲೇ ಮಾತಾಡಿಸುವಂತೆಯೇ ಇಲ್ಲ ಎಂಬ ಜನಾಭಿಪ್ರಾಯ ತನಗೆ ನೆರವಾದೀತೆಂಬ ಲೆಕ್ಕಚಾರ ಬಾಬು ಶೆಟ್ಟಿಯದು.

ಕರಾವಳಿ ಬಿಜೆಪಿಯ ಇನ್ನೊಬ್ಬ ಸರದಾರ ಎ.ಜಿ.ಕೊಡ್ಗಿ ಭಂಟ ಭೂಪ ಬಾಬುಶೆಟ್ಟಿಗೆ ಒಳಗೊಳಗೇ ಗಾಳಿ ಹಾಕುತ್ತಿದ್ದಾರೆ. ಕೊಡ್ಗಿ ತನಗೆ ಟಿಕೆಟ್ ಕೊಡಿಸುತ್ತಾರೆಂಬ ಆಸೆಯಿಂದ ಬಾಬು ಜನರ ನಡುವೆ ತರತರದ ಭೋಂಗು ಬಿಡುತ್ತ ಎಮ್ಮೆಲ್ಲೆ ಗೆಟ್ಟಪ್ಪಿನಲ್ಲಿ ಓಡಾಡುತ್ತಿದ್ದಾನೆ. ಈ ನಾಲ್ಕು ಟಿಕೆಟ್ ಆಕಾಂಕ್ಷಿಗಳ ಲಾಬಿಯದು ಒಂದು ತೂಕವಾದರೆ, ಅರ್ಷೇವಜನ್ ಸುಕುಮಾರ ಶೆಟ್ಟಿ ಎಂಬ ಕೊಲ್ಲೂರು ದೇವಸ್ಥಾನದ ಮಾಜಿ ಆಡಳಿತ ಟ್ರಸ್ಟಿ ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟು ಬಿಜೆಪಿಗೆ ಅಭ್ಯರ್ಥಿಯಾಗಲೆಂದೇ ಸೇರಿಕೊಂಡು ಆಡುತ್ತಿರುವ 'ಆಟ'ಕ್ಕೆ ಏಕ್‌ದಂ 'ದಮ್' ಬಂದುಬಿಟ್ಟಿದೆ!!

ಹೇಳಿಕೇಳಿ ಸುಕುಮಾರಶೆಟ್ಟಿ ಎಡಬಿಡಂಗಿ ಪುಢಾರಿ. ಎಮ್ಮೆಲ್ಸಿ ಪ್ರತಾಪಚಂದ್ರ ಶೆಟ್ಟಿಯ ಕಟ್ಟಾ ಬೆಂಬಲಿಗನಾದ ಈ 'ಸುಕು' ಕುಂದಾಪುರದಲ್ಲಿ ಕಾಂಗ್ರೆಸಿಗನಾದರೆ, ಬೈಂದೂರಲ್ಲಿ ಬಿಜೆಪಿಗ. ಕಳೆದ ಎಲೆಕ್ಷನ್‌ನಲ್ಲಿ ಈತ ಗುರು ಪ್ರತಾಪಚಂದ್ರ ಶೆಟ್ಟಿಯ ಬಿಜೆಪಿ ಪರ ಕೆಲಸ ಮಾಡಿದ್ದರು. ಕಾಂಗ್ರೆಸ್ ಕ್ಯಾಂಡಿಡೇಟಾಗಿದ್ದ ಮಾಜಿ ಶಾಸಕ ಗೋಪಾಲ ಪೂಜಾರಿಯನ್ನು ಸೋಲಿಸಲು ಈ ಗುರು-ಶಿಷ್ಯರು ಸ್ಕೆಚ್ ಹಾಕಿದ್ದರು. ಇದಕ್ಕೆ ಅವರವರದೇ ಕಾರಣಗಳಿತ್ತು, ತಾನು ಕುಂದಾಪುರದಲ್ಲಿ ಸೋಲಲು ಗೋಪಾಲ ಪೂಜಾರಿ ಸ್ವ-ಜಾತಿ ಬಿಲ್ಲವರಲ್ಲಿ ತನ್ನ ಬಗ್ಗೆ ಕಪಿ ಮೂಡಿಸಿದ್ದೇ ಕಾರಣವೆಂದು ಹಳೆಯ ಹಗೆ ಪ್ರತಾಪಚಂದ್ರ ಶೆಟ್ಟಿಯಲ್ಲಿತ್ತು. ಸುಕುಮಾರ ಶೆಟ್ಟಿಗೆ ತಾನು ಕೊಲ್ಲೂರು ದೇವಳದ ಆಡಳಿತ ಟ್ರಸ್ಟಿಯಾಗಿದ್ದಾಗ ತಯಾರಿಸಿದ ಚಿನ್ನದ ರಥದಲ್ಲಿ ಅವ್ಯವಹಾರ ಮಾಡಿದ್ದೇನೆಂದು ಅಂದಿನ ಶಾಸಕ ಗೋಪಾಲ ಪೂಜಾರಿ ಹುಯಿಲೆಬ್ಬಿಸಿದ್ದು ಕೆರಳಿಸಿತ್ತು.

ಇದೇ ವೈಷಮ್ಯ ಇವತ್ತು ಸುಕುಮಾರ ಶೆಟ್ಟಿಯನ್ನು ಬಿಜೆಪಿಗೆ ತಂದು ನಿಲ್ಲಿಸಿದೆ. ಆರೆಸ್ಸೆಸ್ ಡಾನ್ ಕಲ್ಲಡ್ಕ ಭಟ್ಟನಿಗೆ ಅತೃಪ್ತನಾಗಿರುವ ಉಡುಪಿಯ ಚಡ್ಡಿ ಶಂಭು ಶೆಟ್ಟಿ ಸಂಘ ಪರಿವಾರದಲ್ಲಿ ಸುಕುಮಾರಶೆಟ್ಟಿ ಪರ ಪ್ರಯತ್ನ ನಡೆಸಿದ್ದಾರೆ. ಈ ಶಂಭುಶೆಟ್ಟಿಯ ಆಶ್ವಾಸನೆ ನಂಬಿಯೇ ಸುಕುಮಾರ ಶೆಟ್ಟಿ ಬಿಜೆಪಿಗೆ ಸೇರಿರುವುದು. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ 'ಸೇವೆ' ಮತ್ತು ಹಂಚು-ಗೋಡಂಬಿ ಉದ್ಯಮ ನಡೆಸಿ ದುಡ್ಡು ಮಾಡಿರುವ ಸುಕು ಬಿಜೆಪಿಗೆ 'ಯೋಗ್ಯ' ಅಭ್ಯರ್ಥಿ ಎಂದು ಕಲ್ಲಡ್ಕ-ಕೊಡ್ಗಿ-ಶಂಭು ಶೆಟ್ಟಿ ಎಂಬ ಟಿಕೆಟ್‌ದಾತರು ಭಾವಿಸಿದ್ದಾರೆ. ಒಟ್ಟಿನಲ್ಲಿ ನೀರಸವಾಗಿದ್ದ ಬೈಂದೂರೆಂಬ ಗ್ರಾಮೀಣ ಕ್ಷೇತ್ರಕ್ಕೆ ಈಗ ರಂಗೇರಿಬಿಟ್ಟಿದೆ. ಸುಕು V/s ಗೋಪಾಲಪೂಜಾರಿ ಫೈಟಿಂಗ್ ಆದರೆ ಏನಾದೀತೆಂಬ ತರ್ಕ-ವಿತರ್ಕ ಜೋರಾಗಿ ನಡೆಯಲಾರಂಭಿಸಿದೆ.

ಜ್ಯೋತಿಷಿಗಳು ಹೇಳಿದಂತೆ ಜೀವನ ನಡೆಸುವ 'ಸುಕು' ಅಪ್ಪಟ ಮೂಢ ನಂಬಿಕೆಯ ಮನುಷ್ಯ. ಹಾಗೊಮ್ಮೆ ಈತ ಶಾಸಕನಾದರೆ ಇಡೀ ಕ್ಷೇತ್ರಕ್ಕೆ ಲಿಂಬೆಹಣ್ಣು ಮಂತ್ರಿಸಿ ಕಟ್ಟಿದರೂ ಆಶ್ಚರ್ಯವಿಲ್ಲ. ಜ್ಯೋತಿಷಿಯ ಮಾತು ಕೇಳಿ 'ಹೆಂಡತಿ ಅನಿಷ್ಟ' ಎಂದು ದೂರ ಮಾಡಿದ ಈ ಭಂಡನಿಗೆ ಯಾರಿಗೂ ಮರ್ಯಾದೆ ಕೊಟ್ಟೇ ಗೊತ್ತಿಲ್ಲ. ಎಲ್ಲರನ್ನೂ ಏಕವಚನದಲ್ಲೇ ಸಂಬೋಧಿಸುವ ದುರಹಂಕಾರಿ ಸುಕು ಶೆಟ್ಟಿ ಬಿಜೆಪಿ ಕ್ಯಾಂಡಿಡೇಟಾದರೆ ಬೈಂದೂರಲ್ಲಿ ಆ ಪಕ್ಷ ಒಡೆದು ಹೋಳಾಗುವುದು ಗ್ಯಾರಂಟಿ. ಈಗಾಗಲೇ ಬಾಬುಶೆಟ್ಟಿ ಗ್ಯಾಂಗ್ ಟಿಕೆಟ್‌ಗಾಗಿ ಪಾರ್ಟಿ ಸೇರಿರುವ ಎಮ್ಮೆಲ್ಲೆ ಪ್ರತಾಪ್‌ಚಂದ್ರ ಶೆಟ್ಟರ ಏಜೆಂಟ್ ಸುಕು ವಿರುದ್ಧ ತೊಡೆ ತಟ್ಟುತ್ತಿದೆ. ಪಕ್ಷಕ್ಕಾಗಿ ದುಡಿದವರ ಕಡೆಗಣಿಸಿ ನಿನ್ನೆ-ಮೊನ್ನೆ ಬಂದವರಿಗೆ ಟಿಕೆಟ್ ಕೊಡಕೂಡದೆಂದು ಹಳೆ ಬಿಜೆಪಿಗರು ಬೊಬ್ಬೆ ಹೊಡೆಯಲಾರಂಭಿಸಿದ್ದಾರೆ.


ಕಲ್ಲಡ್ಕನ ಮಾತು ನಂಬಿ ತಾನೇ ಬಿಜೆಪಿ ಹುರಿಯಾಳೆಂದು ಲಕ್ಷಾಂತರ ರೂ. ಹರಿಸಿದ ಬಿಲ್ಡರ್ ತೆಗ್ಗರ್ಸೆ ಸುಖಾನಂದಶೆಟ್ಟಿ ಬಣ ಬಿಜೆಪಿಗೆ ದೊಡ್ಡ ಹಾನಿಯಂತೂ ಮಾಡಲಿದೆ. ಸುಕು ಅದೆಷ್ಟೇ ಹಣ ಖರ್ಚು ಮಾಡಿದರೂ, ಕಲ್ಲಡ್ಕನ ಕಮ್ಯುನಲ್ ಸೂತ್ರ ಪ್ರಯೋಗಿಸಿದರೂ ಬಿಜೆಪಿಯೊಳಗಿನ ಗ್ಯಾಂಗ್‌ವಾರ್ ಅದೆಲ್ಲವನ್ನೂ ನಿಷ್ಫಲ ಮಾಡಲಿದೆ. ಬೆಂಗಳೂರು ಬಿಜೆಪಿ ಮುಖಂಡರ ಮೇಲೆ ವಿಶ್ವಾಸವಿಟ್ಟು ಬಿಜೆಪಿಯಲ್ಲೇ ಉಳಿದುಕೊಂಡಿರುವ ಶಾಸಕ ಲಕ್ಷ್ಮೀನಾರಾಯಣ ಟಿಕೆಟ್ ಸಿಗದಿದ್ದರೆ ಕೆಜೆಪಿ ಕ್ಯಾಂಡಿಡೇಟ್ ಆಗುವುದು ನಿಸ್ಸಂಶಯ. ಆಗ ಬಿಜೆಪಿಗೆ ಮತ್ತೊಂದು ಹೊಡೆತ ಬೀಳುತ್ತದೆ. ಲಕ್ಷ್ಮೀನಾರಾಯಣರ ಸ್ವ-ಜಾತಿ ಶೇರೆಗಾರ ಮತ ಬಿಜೆಪಿಗೆ ಖೋತಾ ಆಗುತ್ತದೆ.

ಪರಮ ದೈವಭಕ್ತನೂ, ಜ್ಯೋತಿಷಿಗಳ ವಾಕ್ಯ ಪರಿಪಾಲಕನೂ ಆಗಿರುವ ಸುಕು ಶೆಟ್ಟಿಯ ನಾಲಿಗೆ ಮಾತ್ರ ಸರಿಯಿಲ್ಲ; ಬಿಜೆಪಿಗೆ ಮೊದಲಿನ ಬಲವಿಲ್ಲ. ಇದೆಲ್ಲ ನಾಜೂಕಯ್ಯನಂತಿರುವ ಕಾಂಗ್ರೆಸ್‌ನ ಗೋಪಾಲ ಪೂಜಾರಿಗೆ ನೆರವಾಗಲಿದೆ. ಹಣವಂತ ಹೋಟೇಲಿಯರ್ ಆಗಿರುವ ಪೂಜಾರಿಗೆ ದುಡ್ಡಿನ ಕೊರತೆಯೇನೂ ಇಲ್ಲ. ಸುಕುಮಾರ ಶೆಟ್ಟಿಯೂ ಧನಾಢ್ಯನೇ. ಬಿಜೆಪಿ-ಆರೆಸ್ಸೆಸ್‌ನ ದೊಡ್ಡ ಗುಟುಕೂ ಆತನಿಗೆ ಸಿಗಲಿದೆ. ಕೆಜೆಪಿಯಿಂದ ಬಿಲ್ಡರ್ ಎಮ್ಮೆಲ್ಲೆ ಲಕ್ಷ್ಮೀನಾರಾಯಣ ನಿಂತರಂತೂ ಬೈಂದೂರಲ್ಲಿ ಘನಘೋರ ಹಣದ ಹಣಾಹಣಿಯೇ ನಡೆದುಹೋಗಲಿದೆ!!

● ನಹುಷ

ಸ್ಯಾಡಿಸ್ಟ್ ಪ್ರತಾಪ್ ಕಿತಾಪತಿ!!

ಬೈಂದೂರು ಕುಂದಾಪುರದ ಗ್ರಾಮೀಣ ಮತದಾರ ಕ್ಷೇತ್ರ. ಹೀಗಾಗಿ ಕುಂದಾಪುರದ ಬಂಟ V/s ಬಿಲ್ಲವ ರಾಜಕಾರಣ ಮತ್ತು ಭಜರಂಗಿ ಭಂಡಾಟದ ಅಷ್ಟೂ ಅಡ್ಡ ಪರಿಣಾಮ ಬೈಂದೂರಿನ ಮೇಲಾಗುತ್ತದೆ. ಕುಂದಾಪುರ ಕಾಂಗ್ರೆಸ್ ತನ್ನ ಹುಯ್ಯಾರು ಪಟೇಲರ ಮನೆತನ ಪಿತ್ರಾರ್ಜಿತ ಆಸ್ತಿ ಎಂಬಂತೆ ಮಾಜಿ ಎಮ್ಮೆಲ್ಲೆ- ಹಾಲಿ ಎಮ್ಮೆಲ್ಸಿ ಪ್ರತಾಪ್‌ಚಂದ್ರ ಹಾರಾಡುತ್ತಿದ್ದಾರೆ. ಸತತ ನಾಲ್ಕು ಬಾರಿ ಕುಂದಾಪುರದಿಂದ ಗೆದ್ದಿದ್ದ ಪ್ರತಾಪ್ ಅಧಿಕಾರದ ಪಿತ್ಥ ನೆತ್ತಿಗೇರಿಸಿಕೊಂಡು ಜನರಿಂದ ದೂರಾಗಿ ಹೋದರು. ಕರಾರುವಾಕ್ಕಾದ ಖತರ್‌ನಾಕ್-ರಾಜಕಾರಣ ಮಾಡುವ ಪ್ರತಾಪ್ ಬಿಳಿ ಗಡ್ಡದ ಮೇಲೆ ಕೈಯ್ಯಾಡಿಸಿದರೆಂದರೆ ಒಂದು "ಬಲಿ" ಖಾತ್ರಿ ಎಂದೇ ಸಂಕೇತ!


ಪ್ರತಾಪ್

ಇಂಥ 'ಬಲಿ' ರಾಜಕಾರಣದಿಂದಲೇ ಆತ ಕಳೆದೊಂದು ದಶಕದಿಂದ ಕುಂದಾಪುರದಲ್ಲಿ ತಲೆ ಎತ್ತಲಿಕ್ಕೇ ಆಗಿಲ್ಲ. ಹಾಲಾಡಿ ಶ್ರೀನಿವಾಸ್ ಶೆಟ್ಟರ ಎದುರು ಹೀನಾಯಸೋಲು ಕಂಡನಂತರ ಪ್ರತಾಪ್ ಹಿಂಬಾಗಿಲ (ವಿಧಾನ ಪರಿಷತ್) ನಾಯಕನಾಗಿ ಹೋದರು. ಆದರೂ ಆತನಿಗೆ ಬುದ್ಧಿ ಬಂದಿಲ್ಲ. ಕಾಂಗ್ರೆಸ್‌ನಲ್ಲಿ ತನ್ನ ಇಚ್ಛೆಯಂತೆಯೇ ಎಲ್ಲ ನಡೆಯಬೇಕೆಂಬ ಕೆಟ್ಟ ಹಠ. ಇದಕ್ಕೆ ಎಐಸಿಸಿ ಪುಂಡಲೀಕ ಆಸ್ಕರ್ ಫರ್ನಾಂಡಿಸ್ ಸಖ್ಯದ ಖದರು ಬೇರೆ, ಹೀಗಾಗಿ ಕುಂದಾಪುರ-ಬೈಂದೂರಲ್ಲಿ ಕಾಂಗ್ರೆಸ್ ಹಳ್ಳ ಹಿಡಿದುಹೋಗಿದೆ.

ಬೈಂದೂರಲ್ಲಿ ಕಾಂಗ್ರೆಸ್‌ನ ಗೋಪಾಲ ಪೂಜಾರಿ ಸೋಲಿಸಲು ಪ್ರತಾಪ್ ಶಕ್ತಿ ಮೀರಿ ಶ್ರಮಿಸಿದ್ದಾರೆ. ಕುಂದಾಪುರದಲ್ಲಿ ಕ್ಯಾಂಡಿಡೇಟಾಗಿದ್ದ ಜಯಪ್ರಕಾಶ್ ಹೆಗ್ಡೆಗೂ ಪ್ರತಾಪ್ ಸಹಕರಿಸಲಿಲ್ಲ. ಆ ಬಳಿಕ ಜಯಪ್ರಕಾಶ್ ಲೋಕಸಭಾ ಇಲೆಕ್ಷನ್‌ಗೆ ಸ್ಪರ್ಧಿಸಿದಾಗಲೂ ಪ್ರತಾಪ್ ಕಾಂಗ್ರೆಸ್ ವಿರುದ್ಧವೇ ಮೌನವಾಗಿ ಮಸಲತ್ತು ಮಾಡಿದ್ದರು. ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ನಡೆದಾಗ ಜಯಪ್ರಕಾಶ್‌ಗೆ ಟಿಕೆಟ್ ಕೊಡಕೂಡದೆಂದು ತಕರಾರು ಪ್ರತಾಪ್ ಮಾಡಿದ್ದರು. ಹಾಗಂತ ಈ ಲಾಟ್‌ಪುಟ್ ಲೀಡರ್‌ಗೆ ತಾನೇ ನಿಂತು ಗೆಲ್ಲುವ ದಮ್ಮೂ ಇಲ್ಲ. ಬೈ-ಎಲೆಕ್ಷನ್‌ನಲ್ಲಿ ಆಸ್ಕರ್ ಲಕ್ಷ್ಮಣ [illegible] ಹಾಕಿದ್ದರಿಂದ ಪ್ರತಾಪ್ ಬಾಲ ಬಿಚ್ಚಿರಲಿಲ್ಲ. ಕಾಂಗ್ರೆಸ್ ಪರವೂ ಕೆಲಸ ಮಾಡದೆ ತಟಸ್ಥರಾಗಿದ್ದರು.

ಈ ಔಟ್ ಡೇಟೆಡ್ ಪುಢಾರಿಗೆ ಕಾಂಗ್ರೆಸ್‌ನಲ್ಲಿ ತನ್ನ ಮೀರಿ ಯಾರು ಬೆಳೆದರೂ ಸಹಿಸಲಿಕ್ಕಾಗುವುದಿಲ್ಲ. ಜನ ಆತನನ್ನು ಸ್ವೀಕರಿಸಲು-ನಂಬಲು ತಯಾರಿಲ್ಲ. ಇಂಥ ಪ್ರತಾಪ್ ಅಸೆಂಬ್ಲಿ ಎಲೆಕ್ಷನ್ ಎದುರಾಗಿರುವ ಈ ಕಾಲದಲ್ಲಿ ಮತ್ತೆ ಕಾಂಗ್ರೆಸ್‌ನಲ್ಲಿ ಮನೆಮುರುಕ ಆಟ ಆರಂಭಿಸಿರುವ ವರ್ತಮಾನ ಹರಿದಾಡಲಾರಂಭಿಸಿದೆ. ಬಂಟ ಸಮುದಾಯದಲ್ಲಿ ಚಾಲ್ತಿಯಲ್ಲಿರುವ ಸುಕುಮಾರ ಶೆಟ್ಟಿ ಇದ್ದಕ್ಕಿದ್ದಂತೆ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿರುವುದರ ಹಿಂದೆ ಪ್ರತಾಪ್ ಕಿತಾಪತಿಯೂ ಅಡಗಿವೆ ಎಂದು ಕಾಂಗ್ರೆಸ್ಸಿಗರೇ ಪಿಸುಗುಡುತ್ತಿದ್ದಾರೆ. ಸುಕು ಲಾಗಾಯ್ತಿನಿಂದಲೂ ಪ್ರತಾಪ್ ಶೆಟ್ಟರ ಆಜ್ಞಾನುಧಾರಿ ಬೆಂಬಲಿಗ. ಹತ್ತಿರದ ರಕ್ತ ಸಂಬಂಧಿಯೂ ಹೌದು. ಈ ಸುಕುನನ್ನೇ ಬಳಸಿ ಬೈಂದೂರು-ಕುಂದಾಪುರದಲ್ಲಿ ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಪ್ರತಾಪ್ ಆ್ಯಂಟಿ ಪಾರ್ಟಿ ಆ್ಯಕ್ಟಿವಿಟಿ ನಡೆಸಿದ್ದರು.

ಸುಕುನನ್ನು ಬಿಜೆಪಿಗೆ ಹೋಗದಂತೆ ಪ್ರತಾಪ್ ತಡೆಯಬಹುದಿತ್ತು. ಆದರೆ ಬೈಂದೂರಿನಲ್ಲಿ ಬಲಗುಂದಿರುವ ಬಿಜೆಪಿಗೆ ಗಟ್ಟಿ ಹುರಿಯಾಳೇ ಸಿಗುತ್ತಿಲ್ಲ. ಇದು ಕಾಂಗ್ರೆಸ್‌ನ ಗೋಪಾಲ ಪೂಜಾರಿಯ ಗೆಲುವನ್ನು ನಿರಾತಂಕ ಮಾಡಿತ್ತು. ಆದರೆ ಪ್ರತಾಪ್‌ಗೆ ತನ್ನ ಆಜನ್ಮ ವೈರಿ ಪೂಜಾರಿ ಗೆಲ್ಲುವುದು ಬೇಕಾಗಿಲ್ಲ. ಪೂಜಾರಿ ಎದುರಿಸುವ ಶಕ್ತಿ ತನ್ನ ಜಾತಿಬಂಧು ಸುಕುಗೆ ಮಾತ್ರ ಇದೆ ಎಂದು ಲೆಕ್ಕಾಚಾರ ಹಾಕಿಯೇ ಪ್ರತಾಪ್ ಬಿಜೆಪಿಗೆ ಆತನ ಕಳಿಸಿದ್ದಾರಂತೆ. ಗೋಪಾಲ ಪೂಜಾರಿ ಬೈಂದೂರು ಶಾಸಕನಾಗಿದ್ದಾಗ ಪ್ರತಾಪ್ ಕೊಲ್ಲೂರು ದೇವಳದ ಮ್ಯಾನೇಜಿಂಗ್ ಟ್ರಸ್ಟಿಯಾಗಿ ಸುಕುವನ್ನು ನೇಮಿಸಿದ್ದರು.

ಆಗ ಸೊಕ್ಕಿನ ಸುಕು ಶಾಸಕ ಗೋಪಾಲ ಪೂಜಾರಿಗೆ ಪ್ರೋಟೋಕಾಲ್ ಪ್ರಕಾರವೂ ಗೌರವ ಕೊಡುತ್ತಿರಲಿಲ್ಲ. ಪಾಳೆಗಾರಿ ಸ್ವಭಾವದ ಸುಕುಗೆ ಪ್ರತಾಪ್ ಕುಮ್ಮಕ್ಕೂ ಇತ್ತು. ಆಗ ಗೋಪಾಲ ಪೂಜಾರಿ ಸುಕುನ ಬಾಲ ಕಟ್ ಮಾಡಲು ಆತ ಶೈಕ್ಷಣಿಕ ಸಂಸ್ಥೆಗಳಿಗೆ, ಇನ್ನಿತರ ಸುಕುನ ರಾಜಕಾರಣಕ್ಕೆ, ಕೊಲ್ಲೂರು ದೇವಳದ ಆಡಳಿತಕ್ಕೆ ಅಡೆತಡೆಯೊಡ್ಡಿದ್ದರು. ಕೊಲ್ಲೂರು ದೇವಳದಲ್ಲಿ ಅವ್ಯವಹಾರ ಸುಕುನ ಕಾಲ ಕೀರ್ದಿಯಲ್ಲಿ ಆಗುತ್ತಿದೆ ಎಂದು ಗೌಜಿ ಎಬ್ಬಿಸಿದ್ದರು.

ಇದರಿಂದ ಸುಕು ಸಾಕಷ್ಟು ಸುಸ್ತಾಗಿ ಹೋದರು. ಆ ಸೇಡು ಕಳೆದ ಇಲೆಕ್ಷನ್‌ನಲ್ಲಿ ತೀರಿಸಿಕೊಂಡಿರುವ ಸುಕು-ಪ್ರತಾಪ್‌ಗೆ ಇನ್ನೂ ತೃಪ್ತಿಯೇ ಆದಂತಿಲ್ಲ. ಹಾಗಾಗಿ ಸುಕು ಬಿಜೆಪಿ ಸೇರಿ ಕ್ಯಾಂಡಿಡೇಟಾಗುವ ತರಾತುರಿಯಲ್ಲಿದ್ದರೆ, ಪ್ರತಾಪ್ ತನ್ನೆಲ್ಲ ನೆರವು ನೀಡುತ್ತಿದ್ದಾರೆ. ಪ್ರತಾಪ್‌ನ ಉಪಟಳದಿಂದ ನಿಷ್ಠಾವಂತ ಕಾಂಗ್ರೆಸಿಗರು ರೋಸತ್ತುಹೋಗಿದ್ದಾರೆ. ಎಂಪಿಯಾಗಿ ಜನಾನುರಾಗಿ ಆಗುತ್ತಿರುವ ಜಯಪ್ರಕಾಶ್ ಹೆಗ್ಡೆಗೂ ಈತ ಕಾಲೆಳೆಯುತ್ತಿದ್ದಾರೆ. ಹಾಲಾಡಿ ಶ್ರೀನಿವಾಸ್ ಶೆಟ್ಟಿ ಕಾಂಗ್ರೆಸ್‌ಗೆ ಸೇರದಂತೆ ನೋಡಿಕೊಂಡಿದ್ದಾರೆ. ಪ್ರತಾಪ್‌ಗೆ ಕಡಿವಾಣ ಹಾಕುವ ತಾಕತ್ತು ಆಸ್ಕರ್‌ಗೆ ಇಲ್ಲ. ಅದ್ಯಾವುದೋ ಮುಲಾಜು ಪ್ರತಾಪ್ ಮೇಲೆ ಆಸ್ಕರ್‌ಗಿದೆ.

ಇದೆಲ್ಲದರ ಒಟ್ಟು ಪರಿಣಾಮವೆಂದರೆ, ಈ ಬಾರಿಯ ಅಸೆಂಬ್ಲಿ ಇಲೆಕ್ಷನ್‌ನಲ್ಲೂ ಬೈಂದೂರು ಮತ್ತು ಕುಂದಾಪುರದಲ್ಲಿ ಕಾಂಗ್ರೆಸ್‌ಗೆ "ಕುಲಕ್ಕೆ ಮೃತ್ಯು ಕೊಡಲಿ ಕಾವು" ಎಂಬಂತಾಗುವ ದುರಂತದ ಸಾಧ್ಯತೆಯೇ ಹೆಚ್ಚು! ಪ್ರತಾಪ್‌ನ ಪುಂಗಿ ಬಂದ್ ಮಾಡಿದರೆ ಕಾಂಗ್ರೆಸ್ ಗೆಲುವು ಖಂಡಿತ!!

ಇತ್ತೀಚೆಗೆ 'ಎಸ್ಕ್ವಯರ್' ಎಂಬ ಪತ್ರಿಕೆಗೆ ಒಸಾಮ ಬಿನ್ ಲಾಡೆನ್ ವಿರುದ್ಧ ಕಾರ್ಯಾಚರಣೆ ನಡೆಸಿ ಆತನನ್ನು ಹತ್ಯೆಗೈದ ಪ್ರತಿಷ್ಠಿತ ಸೀಲ್ಸ್ ಟೀಮ್ 6 ಎಂಬ ಸೈನ್ಯದ ತಂಡದ ಸದಸ್ಯ ಸಂದರ್ಶನವನ್ನು ನೀಡಿದ್ದಾನೆ. ಆದರೆ ಇವತ್ತಿಗೂ ಆತನಿಗೆ ಅಲ್‌ಕೈದಾದಿಂದ ಜೀವಬೆದರಿಕೆ ಇರುವುದರಿಂದ ಆತನ ಹೆಸರನ್ನು ಬಹಿರಂಗಪಡಿಸಿಲ್ಲ.

ಆ ಕಾರ್ಯಾಚರಣೆಗೆ ನಡೆಸಿದ ತಯಾರಿ, ಮನುಷ್ಯ ಸಹಜ ಭಯ ಮತ್ತು ಪ್ರೀತಿ ಹಾಗು ಲಾಡೆನ್‌ನ ಅಂತಿಮ ಕ್ಷಣ... ಎಲ್ಲವೂ ಆ ಸಂದರ್ಶನದಲ್ಲಿದೆ. ಅದರ ಭಾವಾನುವಾದ ನಮ್ಮ ಓದುಗರಿಗಾಗಿ ಇಲ್ಲಿದೆ.



ಲಾಡೆನ್ ಹಣೆಗೆ ಗುರಿಯಿಟ್ಟು ಗುಂಡು ಹಾರಿಸಿದೆ

ಅಮೆರಿಕನ್ ಕಮಾಂಡೋ ಬಿಚ್ಚಿಟ್ಟ ರೋಚಕ ವಿವರಗಳು

ನಾವು ಆಗ ತಾನೇ ಅಫಘಾನಿಸ್ತಾನದಲ್ಲಿ ಒಂದು ಕಾರ್ಯಾಚರಣೆಯನ್ನು ಮುಗಿಸಿ ಅಮೆರಿಕಕ್ಕೆ ಹಿಂದಿರುಗಿದ್ದೆವು. ಆದರೆ ಇದ್ದಕ್ಕಿದ್ದಂತೆ ನಮ್ಮಲ್ಲಿ ಹಲವರು ವರ್ಜಿನಿಯಾ ಬೀಚ್‌ನಲ್ಲಿರುವ ನಮ್ಮ ಸೀಲ್ಸ್ ಟೀಮಿನ ಕಮಾಂಡ್ ಸೆಂಟರ್‌ಗೆ ವಾಪಸ್ ಬರಬೇಕೆಂದು ಆದೇಶ ಬಂತು. ಅಕಸ್ಮಾತ್ ಅನಿರೀಕ್ಷಿತ ಕಾರ್ಯಾಚರಣೆ ಎದುರಾದರೆ ಅದಕ್ಕೆಂದೇ ಮತ್ತೊಂದು ಪರ್ಯಾಯ ಸೀಲ್ಸ್ ಟೀಮ್ ಸಿದ್ಧಗೊಂಡಿತ್ತು. ಆದರೂ ಆ ತಂಡವನ್ನು ಕಳುಹಿಸದೆ ನಮಗೆ ಬರ ಹೇಳಿದ್ದು ನಮ್ಮಲ್ಲಿ ಅಚ್ಚರಿ ಉಂಟುಮಾಡಿತ್ತು.

ಆಗ ಲಿಬಿಯಾದಲ್ಲಿ ಯುದ್ಧ ನಡೆಯುತ್ತಿತ್ತು, ಈಜಿಪ್ಟಿನಲ್ಲಿ ಅರಬ್ ಸ್ಪ್ರಿಂಗ್ ನಡೆಯುತ್ತಿತ್ತು, ಅಂತಹ ಯಾವುದೋ ಒಂದು ಪ್ರದೇಶಕ್ಕೆ ನಮ್ಮನ್ನು ಕಳುಹಿಸುತ್ತಾರೆ ಎಂದು ನಾನು ಭಾವಿಸಿದ್ದೆ. ನಾವು ನಡೆಸಬೇಕಿದ್ದ ಕಾರ್ಯಾಚರಣೆ ಕುರಿತು ಸಿಐಎ ಮತ್ತು ಪೆಂಟಗಾನ್‌ನ ಅಧಿಕಾರಿಗಳು ನಮ್ಮೊಂದಿಗೆ ಹಲವಾರು ಬಾರಿ ಚರ್ಚೆಗಳನ್ನು ನಡೆಸಿದರು. ಆದರೂ ಅದು ಎಲ್ಲಿ ನಡೆಯಬೇಕಿದೆ ಎಂಬುದರ ಬಗ್ಗೆ ನಮಗೆ ಕಿಂಚಿತ್ತೂ ಸುಳಿವು ಸಿಗಲಿಲ್ಲ. ಸೀಲ್ಸ್ ವಿಭಾಗದ ಸದಸ್ಯರಲ್ಲಿ 27 ಜನರನ್ನು ಆಯ್ಕೆ ಮಾಡಿ ಈ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಹೆಚ್ಚಿನ ತರಬೇತಿಗೆ ಮತ್ತು ಚರ್ಚೆಗಳಿಗೆ ನಾರ್ಥ್ ಕ್ಯಾರೋಲಿನಾದಲ್ಲಿರುವ ಸಿಐಎ ಕೇಂದ್ರಕ್ಕೆ ನಮ್ಮನ್ನೆಲ್ಲ ಕರೆದುಕೊಂಡು ಹೋದರು.

ಕೊನೆಗೊಂದು ದಿನ ನಮ್ಮ ಸೀಲ್ಸ್ ವಿಭಾಗದ ಕಮಾಂಡರ್ ತುಂಬಾ ತಣ್ಣಗೆ "ಓಕೆ, ನಾವು ಸಾಧ್ಯವಾದಷ್ಟು ಯುಬಿಎಲ್ (ಒಸಾಮಾ ಬಿನ್ ಲಾಡೆನ್) ಹತ್ತಿರ ಬಂದಿದ್ದೇವೆ" ಎಂದು ಘೋಷಿಸಿದರು. ಅದನ್ನು ಕೇಳಿ ನಾವೇನು ಸಂತೋಷಗೊಳ್ಳಲಿಲ್ಲ, ಬದಲಾಗಿ ಸುಮ್ಮನೆ ತಲೆ ಅಲ್ಲಾಡಿಸಿದೆವು. ಅಧಿಕಾರಿಗಳು ಪಾಕಿಸ್ತಾನದ ಅಬ್ಬೊಟಬಾದಿನಲ್ಲಿರುವ ಮನೆಯನ್ನು ಪತ್ತೆ ಮಾಡಿದ ಬಗ್ಗೆ, ಅದರ ಮೇಲೆ ನಿಗಾ ಇಟ್ಟಿರುವ ಬಗ್ಗೆ ಹೇಳಿ "ಅಲ್ಲಿ ಲಾಡೆನ್ ಅಡಗಿದ್ದಾನೆ ಎಂದು ನಾವು ನಂಬಿದ್ದೇವೆ" ಎಂದರು. ಲಾಡೆನ ಅಡಗುದಾಣವನ್ನು ಪತ್ತೆ ಹಚ್ಚಿದ್ದ ಸಿಐಎಯ ಮಹಿಳಾ ಏಜೆಂಟ್ "ಅವನು ಅಲ್ಲಿದ್ದಾನೆ ಎಂಬುದು ನನಗೆ ಗೊತ್ತು, ಇದು ನನ್ನ ಜೀವನದಲ್ಲೇ ನಾನು ಪತ್ತೆ ಮಾಡಿರುವ ಬಹುಮುಖ್ಯ ಮಾಹಿತಿ. ಅವನು ಅಲ್ಲಿದ್ದಾನೆ ಎಂಬುದು ನನಗೆ ಗ್ಯಾರಂಟಿಯಾಗಿದೆ" ಎಂದರು.

ಲಾಡೆನ್‌ನನ್ನು ಜೀವಂತವಾಗಿ ಸೆರೆ ಹಿಡಿಯುವ ಅಥವಾ ಕೊಲ್ಲುವ ಕಾರ್ಯಾಚರಣೆಯ ತಂಡದ ನಾಯಕನಾಗಿ ನನ್ನನ್ನು ಆಯ್ಕೆ ಮಾಡಿದರು.


ಒಂದು ಸೀಲ್ಸ್ ತಂಡ

ಅಲ್ಲಿಯತನಕ ಲಾಡೆನ್ ವಿರುದ್ಧದ ಕಾರ್ಯಾಚರಣೆಗೆ ಸರ್ಕಾರ ವಿವಿಧ ರೀತಿಯ ಪ್ಲಾನ್‌ಗಳ ಬಗ್ಗೆ ಚಿಂತಿಸಿತ್ತು. ಒಂದು ಆತನ ಮನೆ ಮೇಲೆ ಎರಡು ಸಾವಿರ ಪೌಂಡಿನಷ್ಟು ಸ್ಫೋಟಕ ವಸ್ತುಗಳನ್ನು ಹಾಕಿ ಇಡೀ ಕಾಂಪೌಂಡನ್ನೇ ಧೂಳೀಪಟ ಮಾಡುವುದು ಅಥವಾ ಪಾಕಿಸ್ತಾನಿಗಳ ಜೊತೆಗೂಡಿ ಜಂಟಿ ಕಾರ್ಯಾಚರಣೆಯನ್ನು ಕೈಗೊಳ್ಳುವುದು. ಅಥವಾ ಡ್ರೋನ್ ವಿಮಾನಗಳನ್ನು ಕಳುಹಿಸಿ ಆತನ ಮನೆಯ ಮೇಲೆ ಬಾಂಬ್‌ಗಳನ್ನು ಎಸೆಯುವುದು. ಆದರೆ ಅಂತಹ ಕಾರ್ಯಾಚರಣೆಯಲ್ಲಿ ಲಾಡೆನ್ ಸಿಗುತ್ತಾನೋ ಇಲ್ಲವೋ ಎಂಬ ಅನುಮಾನ ಇದ್ದೇ ಇತ್ತು, ಆದ್ದರಿಂದ ಕೊನೆಗೆ ನಮ್ಮ ಸೀಲ್ಸ್ ತಂಡವನ್ನು ಕಳುಹಿಸಲು ನಿರ್ಧರಿಸಲಾಗಿತ್ತು.

ಆರಂಭದಲ್ಲಿ ಲಾಡೆನ್ ಇದ್ದ ಮನೆಯನ್ನು ಹೋಲುವ ಒಂದು ಪುಟ್ಟ ಮಾಡಲ್‌ಅನ್ನು ತಯಾರಿಸಿ ಅದನ್ನು ಅಭ್ಯಸಿಸಿದೆವು. ಆನಂತರ ಅದೇ ತರಹದ ಒಂದು ಇಡೀ ಮನೆಯನ್ನೇ ನಿರ್ಮಿಸಲಾಯಿತು. ಆಗ ಎರಡು ಹೆಲಿಕಾಪ್ಟರ್‌ಗಳನ್ನು ನಮಗೆ ನೀಡಲಾಯಿತು. ನಾವು ಆ ಮನೆಯ ಮೇಲೆ ಹೇಗೆ ದಾಳಿ ಮಾಡುತ್ತೇವೆ ಎಂಬುದರ ಅಣಕು ಕಾರ್ಯಾಚರಣೆಗಳನ್ನು ನಡೆಸಲಾರಂಭಿಸಿದೆವು.

ನಾವು ಎಂತಹ ಮುಖ್ಯ ಮತ್ತು ದೊಡ್ಡ ಕಾರ್ಯಾಚರಣೆಗೆ ಹೋಗುತ್ತಿದ್ದೇವೆ ಎಂದು ನನಗೆ ಅರಿವಾದ ನಂತರ ನಾನು ತಂಡದ ನಾಯಕನ ಸ್ಥಾನವನ್ನು ತೊರೆದು ಮನೆಯ ಮೇಲೆ ದಾಳಿ ಮಾಡುವ ಪಡೆಯನ್ನು ಸೇರಿಕೊಂಡೆ. ಅಷ್ಟೇ ಅಲ್ಲ, ಲಾಡೆನ್ ಮನೆಯ ಮೇಲೆ ಇಳಿದು ಕೆಳಗೆ ಹೋಗಬೇಕಿದ್ದ ತಂಡದ ಭಾಗವಾದೆ. ಅಂದಹಾಗೆ, ಆ ತಂಡಕ್ಕೆ ನಾನು ತಮಾಷೆಗೆ 'ಹುತಾತ್ಮರ ತಂಡ' ಎಂಬ ಹೆಸರಿಟ್ಟಿದ್ದೆ.

ಅದಕ್ಕೆ ಕಾರಣವೂ ಇತ್ತು, ಮೊದಲನೆಯದಾಗಿ ನಾವು ಆ ಮನೆಯ ಮೇಲೆ ಕಾಲಿಡುತ್ತಿದ್ದಂತೆ ಅದು ಸ್ಫೋಟಗೊಳ್ಳುವ ಸಾಧ್ಯತೆ ಇತ್ತು. ನಮ್ಮ ಯೋಜನೆಯ ಪ್ರಕಾರ ನಮ್ಮಲ್ಲೊಬ್ಬ ಮೇಲಿಂದಲೇ ಕೆಳಗೆ ಬಗ್ಗಿ ಮನೆಯೊಳಗೆ ಗುಂಡುಗಳನ್ನು ಹಾರಿಸಲು ಯತ್ನಿಸುತ್ತಿರುವಾಗ ದಾಳಿ ಪಡೆಯಲ್ಲಿದ್ದ ಇತರರು ಹಗ್ಗಗಳ ಮೂಲಕ ಲಾಡೆನ್ ಇದ್ದ ಮೂರನೆ ಮಹಡಿಯ ಕಿಟಕಿಗಳ ಮೂಲಕ ಆ ಮನೆಯನ್ನು ಪ್ರವೇಶಿಸಬೇಕಿತ್ತು. ನಾವು ಮನೆಯನ್ನು ಪ್ರವೇಶಿಸುವ ಮುನ್ನವೇ ಲಾಡೆನ್ ಬಂದೂಕು ಹಿಡಿದು ಅಲ್ಲಿ ನಿಂತಿರುವ ಸಾಧ್ಯತೆಯೂ ಇತ್ತು. ಅಷ್ಟೇ ಅಲ್ಲ, ನಾವು ಆ ಮನೆಯನ್ನು ಹೊಕ್ಕ ನಂತರವೂ ಅಪಾಯ ಇದ್ದೇ ಇತ್ತು. ಈ ಹಿಂದೆ ನಾನು ನಡೆಸಿರುವ ಹಲವು ಕಾರ್ಯಾಚರಣೆಗಳಲ್ಲಿ ಮನೆಯೊಳಗೆ ಬಾಂಬ್‌ಗಳನ್ನು ಇಟ್ಟಿದ್ದನ್ನು ನೋಡಿದ್ದೆ. ಸಾಮಾನ್ಯವಾಗಿ ಅವುಗಳನ್ನು ರೂಮ್ ಮಧ್ಯದಲ್ಲಿ ನೇತು ಹಾಕಿರುತ್ತಾರೆ - ದೊಡ್ಡದಾಗಿ ಸ್ಫೋಟಗೊಳ್ಳಲಿ ಎಂಬ ಕಾರಣಕ್ಕೆ.

ನಾನು ಅಪಾಯ ಎದುರಿಸುವ ಸಂದರ್ಭಗಳಲ್ಲಿ ತಮಾಷೆ ಮಾಡುವುದು ಹೆಚ್ಚು. ಹಾಗಾಗಿ ನಾನು ಇತರರಿಗೆ "ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಕಿದೆ; ಯಾಕೆಂದರೆ ನಾವು ಇದರಿಂದ ಜೀವಂತವಾಗಿ ವಾಪಸ್ ಬರುವ ಸಾಧ್ಯತೆಗಳು ಇಲ್ಲ. ನಾವೆಲ್ಲ ಖಂಡಿತಾ ಸಾಯುವುದರಿಂದ ನಾವು ನಮ್ಮ ಕೆಲಸವನ್ನು ಆದಷ್ಟು ಸಮರ್ಥವಾಗಿ ಮಾಡಬೇಕಿದೆ" ಎಂದು ಹೇಳುತ್ತಿದ್ದೆ.

ವಾರದಲ್ಲಿ ಐದಾರು ರಾತ್ರಿ ಅಣಕು ಕಾರ್ಯಾಚರಣೆಗಳನ್ನು ನಡೆಸುತ್ತಿದ್ದೆವು. ನಮಗೆ ಎಲ್ಲವನ್ನು ಮುಗಿಸಲು 20 ನಿಮಿಷಗಳನ್ನು ನೀಡಲಾಗುತ್ತಿತ್ತು. ಲಾಡೆನ್ ಮನೆಯ ಕಾಂಪೌಂಡನ್ನು ಪ್ರವೇಶಿಸುವುದು ನಮಗೆ ಸುಲಭವಾಗಿ ಕಂಡಿತು. ಆದರೆ ಸಮಸ್ಯೆ ಇದ್ದದ್ದು ಮನೆಯ ಒಳಗಡೆ ಕುರಿತಂತೆ. ಯಾಕೆಂದರೆ ಅದರ ಒಳಗಿನ ವಿನ್ಯಾಸದ ಬಗ್ಗೆ ನಮಗೆ ಒಂದಿಷ್ಟೂ ಮಾಹಿತಿ ಇರಲಿಲ್ಲ. ಆದ್ದರಿಂದ ಒಂದು ತಂಡ ಮೊದಲನೆ ಹೆಲಿಕಾಪ್ಟರ್ ಮೂಲಕ ಮನೆಯ ಹೊರಗಡೆ ಇಳಿಯುವುದೆಂದೂ, ಇನ್ನೊಂದು ತಂಡ ಎರಡನೆಯ ಹೆಲಿಕಾಪ್ಟರ್ ಮೂಲಕ ಮನೆಯ ಮೇಲೆ ಇಳಿಯುವುದೆಂದೂ, ಮೊದಲನೆ ತಂಡ ಕೆಳಗಿನಿಂದ ಮೇಲೆ, ಎರಡನೆ ತಂಡ ಮೇಲಿನಿಂದ ಕೆಳಗೆ ಬರುವುದಾಗಿ ಯೋಜನೆ ರೂಪಿಸಿದೆವು. ದಾಳಿಯ ಅಭ್ಯಾಸದಲ್ಲಿ ಸುಮಾರು ಒಂದು ತಿಂಗಳು ಕಳೆಯಿತು. ಕೊನೆಗೆ ಮತ್ತೊಂದು ಅಣಕು ಕಾರ್ಯಾಚರಣೆಯನ್ನು ನಡೆಸಿದ ನಂತರ ನಾವೆಲ್ಲ ನಮ್ಮ ಸಂಸಾರಗಳನ್ನು ಭೇಟಿಯಾಗಿ ಗುಡ್‌ಬೈ ಹೇಳಲು ನಮ್ಮ ಮನೆಗಳಿಗೆ ಹಿಂದಿರುಗಿದೆವು.

ಸಾಮಾನ್ಯವಾಗಿ ಇಂತಹ ಕಾರ್ಯಾಚರಣೆಗೆ ನಾನು ಹೋಗುವಾಗ ನನ್ನ ಹೆಂಡತಿ "ಯೋಚಿಸಬೇಡ, ಹೋಗಿ ಬಾ" ಎಂದು ಹೇಳುತ್ತಿದ್ದಳು. ಆದರೆ ಈ ಬಾರಿ ನಾವು ಹೊಗುತ್ತಿದ್ದದ್ದು ದೊಡ್ಡ ಬೇಟೆಗಾಗಿ. ಆದ್ದರಿಂದ ನಾವಿಬ್ಬರೂ ಕೊನೆಯ ಬಾರಿಗೆ ಭೇಟಿ ಆಗುತ್ತಿದ್ದೇವೆ ಎಂದು ಇಬ್ಬರಿಗೂ ಅನ್ನಿಸುತ್ತಿತ್ತು. ಪ್ರತಿ ಬಾರಿ ನನ್ನ ಮಕ್ಕಳಿಗೆ ಗುಡ್‌ಬೈ ಹೇಳುವುದು ನನಗೆ ಕಷ್ಟವಾಗುತ್ತಿತ್ತು. ಇದೇ ಕೊನೆಯ ಬಾರಿಗೆ ಅವರನ್ನು ನೋಡುತ್ತಿದ್ದೇನೆ ಎಂಬ ನೋವು ನನ್ನನ್ನು ಸದಾ ಕಾಡುತ್ತಿತ್ತು. ಅವತ್ತು ಮಕ್ಕಳು ನಿದ್ರಿಸುತ್ತಿದ್ದಾಗ ಅವರಿಗೆ ಮುತ್ತು ಕೊಟ್ಟು ಬೈ ಹೇಳಿ ಮನೆಯಿಂದ ಹೊರಟೆ.

ನಾವು ಇನ್ನೂ ಹೆಚ್ಚಿನ ಅಭ್ಯಾಸಕ್ಕಾಗಿ ನೆವಾಡ ಮರುಭೂಮಿಗೆ ಹೋದೆವು. ಅಲ್ಲಿ ನಮ್ಮನ್ನು ಪಾಕಿಸ್ತಾನಕ್ಕೆ ಕರೆದುಕೊಂಡು ಹೋಗಲಿದ್ದ ಹೆಲಿಕಾಪ್ಟರ್‌ಗಳನ್ನು ಕಂಡು ನಾನು ಜೋರಾಗಿ ನಗಲಾರಂಭಿಸಿದೆ. ಅದು ಅತ್ಯಾಧುನಿಕ ದಿಸೆಪ್ಟಿಕಾನ್ ಹೆಲಿಕಾಪ್ಟರ್‌ಗಳಾಗಿದ್ದವು. "ನಾವು ವಾಪಸ್ ಬರುವ ಸಾಧ್ಯತೆಗಳು ಶೇಕಡ 90ಕ್ಕೇ ಹೆಚ್ಚಾದವು" ಎಂದು ನನ್ನ ಮಿತ್ರರ ಮುಂದೆ ಉದ್ಗಾರವೆತ್ತಿದೆ.

ಮತ್ತಷ್ಟು ದಿನಗಳ ಅಭ್ಯಾಸ ನಡೆಯಿತು. ಒಂದು ದಿನ ಸೈನ್ಯಾಧಿಕಾರಿಗಳು "ನೀವು ರೆಡಿ ಆಗಿದ್ದೀರಾ?" ಎಂದು ಕೇಳಿದರು. "ರೆಡಿ ಆಗಿದ್ದೇವೆ. ಇದನ್ನು ಸುಲಭವಾಗಿ ಮಾಡಿ ಮುಗಿಸುತ್ತೇವೆ" ಎಂದು ಉತ್ತರಿಸಿದೆವು.

ಕಾರ್ಯಾಚರಣೆಯ ಸಂದರ್ಭದಲ್ಲಿ ಪಾಕಿಸ್ತಾನದ ಸೈನ್ಯ ನಮ್ಮನ್ನು ಸುತ್ತುವರೆದರೆ ಏನು ಮಾಡುವುದು? ಈ ಪ್ರಶ್ನೆಗೆ ನಾವು ಪಾಕಿಸ್ತಾನದ ಸೈನ್ಯಕ್ಕೆ ಶರಣಾಗಬೇಕೆಂದೂ, ಆನಂತರ ಉಪಾಧ್ಯಕ್ಷ ಜೋ ಬೈಡನ್ ಪಾಕಿಸ್ತಾನದ ಅಧ್ಯಕ್ಷರೊಂದಿಗೆ ಚರ್ಚಿಸಿ ನಮ್ಮನ್ನು ಬಿಡುಗಡೆಗೊಳಿಸುತ್ತಾರೆಂದೂ ಸೈನ್ಯಾಧಿಕಾರಿಗಳು ಹೇಳಿದರು. ಆದರೆ ನನಗೆ ಯಾರೋ ಹೇಳಿದರು, ಬರಾಕ್ ಒಬಾಮಾ ಅವರು ಈ ಸೂತ್ರವನ್ನು ಒಪ್ಪಲಿಲ್ಲವಂತೆ. ಬದಲಾಗಿ "ಯಾವುದೇ ಕಾರಣಕ್ಕೂ ನಮ್ಮ ಹುಡುಗರು ಶರಣಾಗಕೂಡದು. ಪಾಕಿಸ್ತಾನದ ಸೈನ್ಯದ ಮೇಲೆ ಗುಂಡಿನ ಸುರಿಮಳೆಯನ್ನು ಸುರಿಸಲು ನಮಗೆಷ್ಟು ಬಲ ಬೇಕು?" ಎಂದು ಒಬಾಮಾ ಕೇಳಿದರಂತೆ. ಆಗ ಆತನ ಬಗ್ಗೆ ನನ್ನಲ್ಲಿ ಮೆಚ್ಚುಗೆ ಮೂಡಿತು. ಈ ಮನುಷ್ಯ ನಿಜವಾಗಲೂ ನಮ್ಮ ಬಗ್ಗೆ ಕಾಳಜಿ ಹೊಂದಿದ್ದಾನೆ ಎನಿಸಿತು.

ಅದೇ ಹೊತ್ತಿನಲ್ಲಿ ನಮ್ಮನ್ನು ಪಾಕಿಸ್ತಾನದಿಂದ ಹೊರಗೆ ತುರ್ತಾಗಿ ತರಲು ಗಡಿಯಲ್ಲಿ ಜೆಟ್ ವಿಮಾನಗಳನ್ನು ನಿಯೋಜಿಸಲಾಗುತ್ತದೆ ಎಂದು ತಿಳಿದುಬಂತು. ಅಷ್ಟೇ ಅಲ್ಲ, ಅಗತ್ಯ ಬಿದ್ದರೆ ನಮ್ಮನ್ನು ವಾಪಸ್ ಕರೆತರಲು ಇನ್ನೆರಡು ವಿಮಾನಗಳಲ್ಲಿ ಮತ್ತೊಂದು ಸೀಲ್ಸ್ ತಂಡವನ್ನು ಸಜ್ಜುಗೊಳಿಸಲಾಯಿತು.

ಒಂದು ದಿನ ನಾವೆಲ್ಲ ವಿಮಾನವನ್ನೇರಿ ಅಫಘಾನಿಸ್ತಾನವನ್ನು ತಲುಪಿದೆವು.


ಲಾಡೆನ್ ಬಚ್ಚಿಟ್ಟುಕೊಂಡಿದ್ದ ಮನೆ

ಜಲಾಲಾಬಾದಿನಲ್ಲಿ ಆ ಸಿಐಎ ಮಹಿಳೆ ಏಜೆಂಟ್ ಅತ್ತಿಂದಿತ್ತ ಇತ್ತಿಂದತ್ತ ನಡೆಯುತ್ತ ಚಡಪಡಿಸುತ್ತಿದ್ದರು. ಒಂದಿಷ್ಟೂ ಚಿಂತಾಕ್ರಾಂತನಾಗದೆ ಇದ್ದ ನನ್ನನ್ನು ನೋಡಿ "ನೀವು ಅದು ಹೇಗೆ ಇಷ್ಟು ತಾಳ್ಮೆಯಿಂದಿದ್ದೀರಿ" ಎಂದು ಆಕೆ ಕೇಳಿದರು. ಅದಕ್ಕೆ ನಾನು "ನಾವು ಪ್ರತಿದಿನ ಇಂತಹ ಕಾರ್ಯಾಚರಣೆಗಳನ್ನು ನಡೆಸುತ್ತೇವೆ. ನಾವು ಮನೆಗಳಿಗೆ ನುಗ್ಗುತ್ತೇವೆ, ಹಲವರನ್ನು ಕೊಂದುಹಾಕುತ್ತೇವೆ, ಆನಂತರ ಅಲ್ಲಿಂದ ಹೊರಡುತ್ತೇವೆ. ಇಲ್ಲಿನ ಒಂದೇ ಒಂದು ವ್ಯತ್ಯಾಸವೆಂದರೆ ಇಲ್ಲಿಗೆ ಹಾರಿ ಬರಲು ಹೆಚ್ಚು ಸಮಯ ಹಿಡಿಯಿತಷ್ಟೇ" ಎಂದು ಆಕೆಗೆ ಹೇಳಿದೆ. ಆಗ ಆಕೆ "ಆತ ಗ್ಯಾರಂಟಿಯಾಗಿ ಮೂರನೆ ಮಹಡಿಯಲ್ಲಿದ್ದಾನೆ. ಸಾಧ್ಯವಾದರೆ ನೀವು ಅಲ್ಲಿಗೇ ಹೋಗಿ" ಎಂದರು.

ಅಫಘಾನಿಸ್ತಾನದಲ್ಲೇ ಇದ್ದ ಮತ್ತೊಂದು ಸೀಲ್ಸ್ ತಂಡ ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿತು. ಅವರೆಲ್ಲ ನಮ್ಮ ಹಿಂದೆ 45 ನಿಮಿಷಗಳ ನಂತರ ಬರಲಿದ್ದ ತಂಡದ ಸದಸ್ಯರಾಗಿದ್ದರು.

ಜಲಾಲಾಬಾದಿನಲ್ಲಿ ಅಧ್ಯಕ್ಷ ಒಬಾಮ ಅವರಿಂದ ನೇರ ಆದೇಶಕ್ಕೆ ಕಾಯಲಾರಂಭಿಸಿದೆವು. ಹಾಗೆಯೇ ನಮ್ಮವರಿಗೆ ಪತ್ರಗಳನ್ನು ಬರೆದೆವು. ನಾನೂ ನನ್ನ ಮಕ್ಕಳಿಗೆ ಪತ್ರವನ್ನು ಬರೆದೆ. ಅದರಲ್ಲಿ ನಾನು ಏನು ಬರೆದೆ ಎಂದು ಸ್ಪಷ್ಟವಾಗಿ ನೆನಪಿಲ್ಲ. ಆದರೆ ಅದನ್ನು ಬರೆಯುವಾಗ ನನ್ನ ಕಣ್ಣುಗಳಿಂದ ನೀರು ಹರಿಯುತ್ತಿತ್ತು. ಒಂದು ಮಾತು ನೆನಪಿದೆ. ನಾನು ನನ್ನ ದೇಶಸೇವೆಗೆ ಹೋಗಿದ್ದೇನೆಂದು ಅವರಿಬ್ಬರಿಗೆ ಆ ಪತ್ರದಲ್ಲಿ ಹೇಳಿದೆ. ಸಾವು ಅಥವಾ ಪಾಕಿಸ್ತಾನದ ಜೈಲು ನಮಗೆ ಕಟ್ಟಿಟ್ಟ ಬುತ್ತಿ ಎಂಬ ಪರಿಸ್ಥಿತಿಯಲ್ಲಿ ನಾವಿದ್ದೆವು. ತನಿಖಾ ತಂಡದ ಒಬ್ಬನಿಗೆ ಆ ಪತ್ರವನ್ನು ಕೊಟ್ಟು ನಾನು ಜೀವಂತವಾಗಿ ವಾಪಸ್ ಬರದಿದ್ದರೆ ಅದನ್ನು ನನ್ನ ಮಕ್ಕಳಿಗೆ ತಲುಪಿಸಬೇಕೆಂದೂ, ಅಕಸ್ಮಾತ್ ನಾನು ಜೀವಂತವಾಗಿ ಬಂದರೆ ನಾನು ಅದನ್ನು ಹರಿದು ಹಾಕುತ್ತೇನೆಂದೂ ಆತನಿಗೆ ಹೇಳಿದೆ.

ಕೊನೆಗೆ ಮೇ 1 ರಂದು ಕಾರ್ಯಾಚರಣೆಯನ್ನು ನಡೆಸಲಾಗುವುದೆಂದು ನಿರ್ಧರಿಸಲಾಯಿತು. ಅಬ್ಬೊಟಾಬಾದಿಗೆ ಹೋಗುತ್ತಿದ್ದ ಹೆಲಿಕಾಪ್ಟರ್ ಅನ್ನು ಏರುವ ಮುನ್ನ ನಾನು ನನ್ನ ತಂದೆಗೆ ಫೋನ್ ಮಾಡಿದೆ. "ಓಕೆ, ಈಗ ಕೆಲಸಕ್ಕೆ ಹೊರಟೆ" ಎಂದು ಅಪ್ಪನಿಗೆ ಹೇಳುವಾಗ ಇದೇ ಕೊನೆಯ ಬಾರಿಗೆ ಅವರೊಂದಿಗೆ ನಾನು ಮಾತನಾಡುತ್ತಿರುವುದು ಎಂದೆನಿಸಿತು. ಅಪ್ಪನಿಗೂ ಹಾಗೇ ಅನ್ನಿಸಿತು. ಆಮೇಲೆ ಅವರು ಹೇಳಿದರು: ನಾನು ಫೋನ್ ಮಾಡಿದಾಗ

ಮಾಲ್ ಒಂದರ ಮುಂದೆ ತಮ್ಮ ಕಾರ್‌ನಲ್ಲಿದ್ದರಂತೆ. ನಾನು ಕರೆ ನಂತರ ಅವರೆಷ್ಟು ದುಃಖಿತರಾಗಿದ್ದರೆಂದರೆ ಒಂದು ಗಂಟೆ ವರೆಗೆ ಕಾರ್‌ನಿಂದ ಅಲುಗಾಡಲೂ ಆಗಲಿಲ್ಲವಂತೆ.

ಕಾಪ್ಟರ್ ಏರುವ ಮುನ್ನ ತಂಡದ ಎಲ್ಲರೂ ಪರಸ್ಪರ ಅಪ್ಪಿಕೊಂಡೆವು. ಲ್ಲೇ ಇದ್ದ ಪೊದೆಯ ಹತ್ತಿರ ನಾನು ಒಂದಾ ಮಾಡಿದೆ.

ಲಾಲಾಬಾದಿನಿಂದ ಅಬ್ಬೊಟ್ಟಬಾದ್ ತಲುಪಲು 90 ನಿಮಿಷ ತು. ಪಯಣದ ಉದ್ದಕ್ಕೂ ನಮ್ಮ ತಂಡದ ನಾಯಕ ಸೈನ್ಯಾಧಿಕಾರಿ ರಾವೆನ್ ಅವರೊಂದಿಗೆ ಸಂಪರ್ಕದಲ್ಲಿದ್ದರು.

ಗೆ ಮತ್ತೆ ಒಂದಾ ಮಾಡಬೇಕೆನಿಸಿತು. ಅಂತಹ ಸಂದರ್ಭಗಳಿಗೆಂದೇ ಒಂದು ಸಲಕರಣೆಯನ್ನು ರೂಪಿಸಿಕೊಟ್ಟಿದ್ದಾರೆ. ಆದರೆ ಅದನ್ನು ಉಪಯೋಗಿಸದ ನಾನು ಒಂದು ನೀರಿನ ಬಾಟಲಿಯಲ್ಲಿ ಒಂದಾ ಮಾಡಿ ಬಾಟಲಿಯನ್ನು ನನ್ನ ಜೇಬಿನಲ್ಲಿ ಇಟ್ಟುಕೊಂಡೆ. ಅಕಸ್ಮಾತ್ ಆ ಬಾಟಲಿ ಸ್ಫೋಟಗೊಂಡರೆ ತುಂಬಿದ ಮೂತ್ರ ಪಿತ್ತದೊಂದಿಗೆ ಯುದ್ಧಕ್ಕೆ ಹೋಗುವ ನಾನು ನನ್ನ ಪ್ಯಾಂಟ್‌ನಲ್ಲೇ ಒಂದಾ ಮಾಡಿಕೊಳ್ಳುತ್ತಿದ್ದೆ!

ಡೆನ್ ಮನೆಯನ್ನು ಹೆಲಿಕಾಪ್ಟರ್‌ಗಳು ಸುತ್ತಲಾರಂಭಿಸಿದವು. ಇನ್ನೇನು ಹೆಲಿಕಾಪ್ಟರ್ ಭೂಮಿಯನ್ನು ಮುಟ್ಟಬೇಕು ಎನ್ನುವಷ್ಟರಲ್ಲಿ ಎಡವಟ್ಟಾಗಿ ಅಲುಗಾಡಲಿಕಚ್ಚಿತು. ಆದರೆ ಅದರಲ್ಲಿದ್ದ ಸೀಲ್‌ಗಳು ಸುರಕ್ಷಿತವಾಗಿ ಕೆಳಗಿಳಿದು ಮನೆಯತ್ತ ಓಡಲಾರಂಭಿಸಿದರು. ಆದರೆ ಈ ಚಿಕ್ಕ ಅಪಘಾತದ ಬಗ್ಗೆ ನನಗೆ ಗೊತ್ತಾದದ್ದು ಆನಂತರವೇ. ನಮ್ಮಂತೆ ಆ ತಂಡವೂ ಸುರಕ್ಷಿತವಾಗಿ ಇಳಿದಿದೆ ಎಂದು ನಾನು ಭಾವಿಸಿದ್ದೆ.

ಎದ್ದ ಹೆಲಿಕಾಪ್ಟರ್‌ನಿಂದ ಇಳಿದ ನಾನು ಲಾಡೆನ್ ಇದ್ದ ಮನೆಯತ್ತ ಓಡಲಾರಂಭಿಸಿದೆ. ಗೋಡೆಗಳನ್ನು ಒಡೆಯಲು ನನ್ನ ಕೈಯಲ್ಲೊಂದು ಭಾರಿ ಸುತ್ತಿಗೆ ಇತ್ತು. ಈಶಾನ್ಯ ಭಾಗದಲ್ಲಿದ್ದ ಗೇಟ್ ಸಮೀಪಿಸಿದೆವು. ಅದನ್ನು ಒಡೆದೆವು. ಆದರೆ ಅದೊಂದು ನಕಲಿ ಗೇಟ್ ಆಗಿದ್ದು ಅದರ ಹಿಂದೆ ಗೋಡೆ ಇತ್ತು. ಅದನ್ನು ನೋಡಿ ಇಲ್ಲಿ ಲಾಡೆನ್ ಅಲ್ಲದಿದ್ದರೂ ಯಾರೋ ಪ್ರಮುಖರು ಅಡಗಿದ್ದಾರೆ ಎಂಬುದು ನಮಗೆ ದೃಢವಾಯಿತು. ನಾವು ಉದ್ದಕ್ಕಿದ್ದ ಗೋಡೆಯ ಹತ್ತಿರ ಓಡುತ್ತಾ ಕಾಂಪೌಂಡನ್ನು ಸುತ್ತಿದೆವು. ಸಮೀಪಿಸಿದೆವು. ಅಲ್ಲಿದ್ದ ಮತ್ತೊಂದು ಬಾಗಿಲನ್ನು ನಾವು ಸ್ಫೋಟಕ ಹಾಕುವ ಮುನ್ನ ಅತ್ತ ಕಡೆಯಿಂದ ಬಂದಿದ್ದ ನಮ್ಮ ತಂಡದ ಒಬ್ಬ ಆಚೆ ಕಡೆಯಿಂದ ಅದನ್ನು ತೆರೆದ.

ನಾನು ನನ್ನ ಸುತ್ತಲೂ ನೋಡಿದೆ. ನಾವು ಅಭ್ಯಾಸ ಮಾಡಿದ್ದ ನಕಲಿ ಮನೆಯಂತೆಯೇ ಇತ್ತು ಈ ಅಸಲಿ ಮನೆ. ನಾವು ಕಾರ್ ಪಾರ್ಕ್ ಮಾಡುವ ಸ್ಥಳಕ್ಕೆ ಬಂದಾಗ ಎರಡು ಕಡೆಗಳಿಂದ ಗುಂಡುಗಳು ಹಾರಿದ ಶಬ್ಧ ಕೇಳಿಸಿತು. ಲಾಡೆನ್‌ನ ಕೊರಿಯರ್ ಆಗಿ ಕೆಲಸ ಮಾಡುತ್ತಿದ್ದವನ ಸಹೋದರ ಅಲ್-ಕುವೈತಿ ಮತ್ತು ಆತನ ಹೆಂಡತಿ ಬುಶ್ರಾಳನ್ನು ನಮ್ಮವರು ಹೊಡೆದುಹಾಕಿದ್ದರು. ಆಗ ನಮ್ಮ ಒಬ್ಬ ಶೂಟರ್ "ಇಲ್ಲಿರುವ ಹೆಂಗಸರು ಗಂಡಸರ ಮುಂದೆ ಜಿಗಿದು ನಿಲ್ಲುತ್ತಿದ್ದಾರೆ. ತಾವೇ ಹುತಾತ್ಮರಾಗಲು ಬಯಸುತ್ತಿದ್ದಾರೆ. ಇಲ್ಲಿ ಲಾಡೆನ್ ಇಲ್ಲದಿದ್ದರೂ ಯಾರೋ ಮುಖ್ಯ ವ್ಯಕ್ತಿ ಇದ್ದಾನೆಂಬುದರ ಸೂಚನೆ ಇದು" ಎಂದು ನನಗೆ ಪಿಸುಗುಟ್ಟಿದ.

ಮುಖ್ಯ ಕಟ್ಟಡದ ದಕ್ಷಿಣ ಭಾಗವನ್ನು ತಲುಪಿದೆವು. ಅಲ್ಲಿ ಇನ್ನೊಬ್ಬ ನನಗೆ ಎದುರಾಗಿ "ಛೇ, ನಾನು ಒಬ್ಬ ಹೆಂಗಸನ್ನು ಕೊಂದುಬಿಟ್ಟೆ" ಎಂದು ಚಿಂತಾಕ್ರಾಂತನಾಗಿ ಹೇಳಿದ. ನಾನು "ಅದರ ಬಗ್ಗೆ ಯೋಚನೆ ಬೇಡ. ನಾನು ಜೈಲಿಗೆ ಹೋಗುವ ಬಗ್ಗೆ ಚಿಂತಿಸುವ ಬದಲಾಗಿ ಕಾರ್ಯಾಚರಣೆಯ ಬಗ್ಗೆ ಯೋಚಿಸಬೇಕಿದೆ" ಎಂದು ಅವನಿಗೆ ...

ನಾವು ಮುಖ್ಯ ಕಟ್ಟಡವನ್ನು ಪ್ರವೇಶಿಸಿದೆವು. ಅಲ್ಲಿ ಒಂದು ಅಂಗಣ ಇದ್ದು ಅದರಿಂದ ವಿವಿಧ ಕೊಠಡಿಗಳಿಗೆ ಬಾಗಿಲುಗಳಿದ್ದವು. ಎದುರು ಇನ್ನೊಂದು ಬಾಗಿಲಿತ್ತು. ಅದು ಮೇಲಕ್ಕೆ ಹೋಗುವ ಮೆಟ್ಟಿಲುಗಳಿಗೆ ಹಾಕಿದ್ದ ಬಾಗಿಲು. ಕೆಳಗಿನ ಮಹಡಿಗಳಲ್ಲಿದ್ದ ಮಹಿಳೆಯರು ಚೀರಾಡುತ್ತಿದ್ದರು. ಅವರ ಜೊತೆಗಿದ್ದ ಪುರುಷರು ಕೊಲ್ಲಲ್ಪಡುತ್ತಿದ್ದರಿಂದ ಜೋರಾಗಿಯೇ ಅವರು ಗೋಳಾಡುತ್ತಿದ್ದರು. ನಾನು ಬಲಕ್ಕೆ ಇದ್ದ ಕೊಠಡಿಯನ್ನು ಪ್ರವೇಶಿಸಿದಾಗ ಅಲ್ಲಿ ಸುಮಾರು ಐದು ವರ್ಷ ವಯಸ್ಸಿನ ಬಾಲಕಿ ಮೂಲೆಯೊಂದರಲ್ಲಿ ನಿಂತು ಅಳುತ್ತಿದ್ದಳು. ಅವಳಿದ್ದಳಿಗೆ ಹೋದ ನಾನು ಅವಳನ್ನು ಎತ್ತಿಕೊಂಡು ಎಡಗಡೆ ಕೊಠಡಿಯಲ್ಲಿದ್ದ ಮಹಿಳೆಗೆ ಆ ಬಾಲಕಿಯನ್ನು ಒಪ್ಪಿಸಿದೆ. ಆ ಮಹಿಳೆ ಅದೆಷ್ಟು ಹೆದರಿದ್ದಳೆಂದರೆ ಅಲ್ಲಿ ಏನಾಗುತ್ತಿದೆ ಎಂದೇ ಆಕೆಗೆ ಅರ್ಥವಾಗಿರಲಿಲ್ಲ ಅನ್ನಿಸುತ್ತೆ.


ಅಷ್ಟು ಹೊತ್ತಿಗೆ ಲಾಡೆನ್ ಕಡೆಯವರು ನಮ್ಮನ್ನು ಸುತ್ತುವರೆದಿರುತ್ತಾರೆ ಎಂದು ನಾನು ಲೆಕ್ಕ ಹಾಕಿದ್ದೆ. ಆದರೆ ಯಾರೂ ನಮ್ಮನ್ನು ಸುತ್ತುವರೆಯಲಿಲ್ಲ. ಅವರಲ್ಲಿ ಸುರಕ್ಷಾ ಭಾವನೆ ಬೆಳೆದಿತ್ತೋ ಏನೋ ಅವತ್ತು ಅವರು ಸಿದ್ಧರಾಗಿರಲಿಲ್ಲ. ಅವರ ಮೇಲೆ ನಾವು ಬಲವಾಗಿ ದಾಳಿ ಮಾಡಿದ್ದರಿಂದ ಕೆಲವೇ ನಿಮಿಷಗಳಲ್ಲೇ ಅವರಲ್ಲಿ ಗುಂಡು ಹಾರಿಸಬಲ್ಲವರನ್ನೆಲ್ಲ ನಮ್ಮ ತಂಡ ಹೊಡೆದುರುಳಿಸಿ ಪಡೆದಿತ್ತು.

...ನ ನಮ್ಮ ಒಂದು ಹೆಲಿಕಾಪ್ಟರ್ ನೆಲಕ್ಕುರುಳಿದ ಬಗ್ಗೆ ನಮ್ಮ ತಂಡದವರು ಮಾತನಾಡಿಕೊಳ್ಳುತ್ತಿದ್ದದ್ದು ನನ್ನ ಕಿವಿಗೆ ಬಿತ್ತು. "ಏನಂದೆ? ಎಲ್ಲಿ?" ಎಂದು ಕೇಳಿದೆ. "ಹೊರಗಡೆ ಕಾಂಪೌಂಡಿನಲ್ಲಿ" ಎಂಬ ಉತ್ತರ ಬಂತು. "ಶಿಟ್, ಇಲ್ಲಿಂದ ಹೊರಗೆ ಹೋಗುವುದು ಸಾಧ್ಯವೇ ಇಲ್ಲ. ಅವನನ್ನು ಕೊಂದು ...ಬೇಕು" ಎಂದೆ.

ಹಿಂದೆ ನಾನು ಹಲವು ಬಾರಿ ಸಾವಿನ ಬಗ್ಗೆ ಯೋಚಿಸಿದ್ದೇನೆ. ಮುಖಕ್ಕೆ ಗುಂಡು ಬಿದ್ದರೆ ಎಷ್ಟು ನೋವಾಗಬಹುದು, ಸಾವು ಬರುವುದಕ್ಕೆ ಎಷ್ಟು ಸಮಯ ಹಿಡಿಯಬಹುದು ಎಂದೆಲ್ಲಾ ಚಿಂತಿಸಿದ್ದುಂಟು. ಆದರೆ ಆ ಕ್ಷಣ ಅಂತಹ ಯಾವ ಯೋಚನೆಯೂ ನನ್ನ ಮನಸ್ಸಿನಲ್ಲಿ ಸುಳಿಯಲಿಲ್ಲ.

ಮೇಲಕ್ಕೆ ಹೋಗುವ ಮೆಟ್ಟಿಲುಗಳ ಬಾಗಿಲನ್ನು ಎರಡು ಬಾರಿ ಸ್ಫೋಟಿಸಿದ ನಂತರ ಅದು ತೆರೆದುಕೊಂಡಿತು. ನಾವು ಐದಾರು ಜನ ಒಟ್ಟಿಗೆ ಮೇಲಿನ ಮಹಡಿಗೆ ಹೋಗಲಾರಂಭಿಸಿದೆವು. ನಮ್ಮ ನಡುವೆ ಯಾವುದೇ ತರಹದ ಸಂವಹನ ಅಥವಾ ಆದೇಶಕ್ಕೆ ಅಗತ್ಯವಿರಲಿಲ್ಲ. ಇಂತಹ ಯುದ್ಧದಲ್ಲಿ ಅಷ್ಟು ಪಳಗಿದ್ದೇವೆ.

ಮೆಟ್ಟಿಲುಗಳ ಮೇಲೆ ನನ್ನ ಮುಂದೆ ಇನ್ನೂ ನಾಲ್ವರು ಇದ್ದರು. ...ರ್ಗಿಂತ ಮುಂದೆ ಇದ್ದ ನಮ್ಮ ಪಾಯಿಂಟ್‌ಮನ್‌ನ ಕಣ್ಣಿಗೆ ಕೊಠಡಿಯಲ್ಲಿ ಅವಿತುಕೊಂಡಿದ್ದ ಲಾಡೆನ್‌ನ (23 ವರ್ಷ ವಯಸ್ಸಿನ) ...ಖಾಲಿದ್ ಬಿದ್ದ. ಆಗ ನಮ್ಮ ಪಾಯಿಂಟ್‌ಮನ್ ಮೊದಲು



ಅರಬಿಕ್‌ನಲ್ಲಿ ಆನಂತರ ಪಶ್ತೂನ್ ಭಾಷೆಯಲ್ಲಿ "ಖಾಲಿದ್. . . ಬಾ ಇಲ್ಲಿಗೆ" ಎಂದು ಮೆಲುದನಿಯಲ್ಲಿ ಕರೆದ. ಅದನ್ನು ಕೇಳಿ ಖಾಲಿದ್ 'ಯಾರಪ್ಪ ಇಷ್ಟು ಕೆಟ್ಟದಾಗಿ ನನ್ನನ್ನು ಅರೇಬಿಕ್ ಮತ್ತು ಪಶ್ತೂನ್ ಭಾಷೆಯಲ್ಲಿ ಕರೆಯುತ್ತಿದ್ದಾರೆ' ಎಂದು ಅಚ್ಚರಿಗೊಂಡಿರಲಿಕ್ಕೂ ಸಾಕು. ಖಾಲಿದ್ ಎಕೆ ಬಂದೂಕೊಂದನ್ನು ಹಿಡಿದು ಕೊಠಡಿಯಿಂದ ಹೊರಗೆ ಇಣುಕಿದ. ಆಗ ಪಾಯಿಂಟ್ಸ್‌ಮನ್ ಸನಿಹದಿಂದಲೇ ಹಾರಿಸಿದ ಗುಂಡಿನೇಟಿಗೆ ಆತ ನೆಲಕ್ಕೆ ಬಿದ್ದ. ಖಾಲಿದ್ ಬಿಳಿ ಟೀಶರ್ಟ್ ಮತ್ತು ಬಿಳಿ ಪೈಜಾಮ ತೊಟ್ಟಿದ್ದ. ಅವನ ಸಾವಿನೊಂದಿಗೆ ಲಾಡೆನ್‌ನ ಕೊನೆ ರಕ್ಷಣಾ ಕವಚವೂ ಕಳಚಿಬಿದ್ದಿತ್ತು.

ನಮ್ಮ ಸಾಲು ಹೀಗೇ ಮುಂದುವರೆಯಿತು. ಕೆಲವರು ಅಕ್ಕಪಕ್ಕ ಇದ್ದ ಕೊಠಡಿಗಳನ್ನು ಪ್ರವೇಶಿಸಿದರು. ಕೊನೆಯದಾಗಿ ಮುಂದೆ ಇದ್ದ ಪಾಯಿಂಟ್ಸ್‌ಮನ್ ಮತ್ತು ನಾನು ಇಬ್ಬರು ಮಾತ್ರ ಸಾಲಿನಲ್ಲಿ ಉಳಿದಿದ್ದೆವು. ನಾವಿಬ್ಬರೂ ಖಾಲಿದ್‌ನ ಶವವನ್ನು ದಾಟಿ ಮೂರನೆ ಮಹಡಿಯತ್ತ ಸಾಗಿದೆವು. ಅಲ್ಲಿದ್ದ ಒಂದು ಕೊಠಡಿಯಿಂದ ಒಂದು ವ್ಯಕ್ತಿ ತನ್ನ ತಲೆಯನ್ನು ಹೊರಗೆ ಹಾಕಿ ನೋಡಿದ. ಅಷ್ಟು ಹೊತ್ತಿಗೆ ಆ ಕಟ್ಟಡಲ್ಲಿ ಜೀವಂತವಾಗಿ ಉಳಿದಿದ್ದ ಏಕೈಕ ಪುರುಷ ಲಾಡೆನ್ ಮಾತ್ರ ಎಂಬುದು ನಮಗೆ ಗೊತ್ತಾಗಿತ್ತು. ಆತ ಕಾಣುತ್ತಿದ್ದಂತೆ ನಮ್ಮ ಪಾಯಿಂಟ್ಸ್‌ಮನ್ ಅವನತ್ತ ಎರಡು ಗುಂಡುಗಳನ್ನು ಹಾರಿಸಿದ. ಆದರೆ ಆ ವ್ಯಕ್ತಿ ಸರಕ್ಕನೆ ಕೊಠಡಿಯನ್ನು ಹೊಕ್ಕುಬಿಟ್ಟದ್ದರಿಂದ ತಪ್ಪಿಸಿಕೊಂಡ. ನಾನು ಹಿಂದಕ್ಕೆ ತಿರುಗಿ ನಮ್ಮವರು ಎಷ್ಟು ಜನ ನಮ್ಮೊಂದಿಗೆ ಸೇರುತ್ತಾರೆ ಎಂದು ನೋಡುತ್ತಿದ್ದರಿಂದ ಇದ್ಯಾವುದೂ ನನ್ನ ಕಣ್ಣಿಗೆ ಬೀಳಲಿಲ್ಲ.



ಮೂರನೆ ಮಹಡಿಯಲ್ಲಿದ್ದ ಇಬ್ಬರು ಹೆಂಗಸರು ನಮ್ಮತ್ತ ಚೀರಾಡುತ್ತಿದ್ದರು. ನಮ್ಮ ಪಾಯಿಂಟ್ಸ್‌ಮನ್ ಕೂಡ ಅವರತ್ತ ಕಿರುಚಾಡುತ್ತಿದ್ದ. "ಈ ಹೆಂಗಸರು ಕ್ರೂರವಾಗಿ ವರ್ತಿಸುತ್ತಿದ್ದಾರೆ. ಇಲ್ಲಿಂದ ನಾವು ಮುಂದೆ ಸಾಗಬೇಕು" ಎಂದ. ಆತ 'ಕ್ರೂರ' ಪದವನ್ನು ಬಳಸಿದ್ದನ್ನು ಕೇಳಿ ನನಗೆ ನಗೆಬಂತು.

ನಮ್ಮ ತಂಡದ ಯಾರೂ ನಾವಿದ್ದಲ್ಲಿಗೆ ಬರಲಿಲ್ಲ, ಬರುವ ಸೂಚನೆಯೂ ಕಂಡುಬರಲಿಲ. ಆಗ ವಿಧಿಇಲ್ಲದೆ ನಾವಿಬ್ಬರೇ ಮೂರನೆ ಮಹಡಿಯ ಕಾರ್ಯಾಚರಣೆಯನ್ನು ಮುಂದುವರೆಸಬೇಕಿತ್ತು. ಲಾಡೆನ್‌ಗೆ ಹೆಚ್ಚಿನ ಸಮಯ ಸಿಕ್ಕಷ್ಟೂ ಆತ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳುವ ಅಪಾಯ ಇತ್ತು. ನಾನು ಹಿಂದಿನಿಂದ ನನ್ನ ಪಾಯಿಂಟ್ಸ್‌ಮನ್ ಮಿತ್ರನ ಹೆಗಲ ಮೇಲೆ ಕೈಹಾಕಿ ಸಣ್ಣದಾಗಿ ಅಮುಕಿದೆ. ಅದೇ ನಾನು ಅವನಿಗೆ ಕೊಟ್ಟ ಸೂಚನೆ ಆಗಿತ್ತು. ನಾವಿಬ್ಬರೂ ಮುಂದೆ ಸಾಗಿದೆವು. ಅಲ್ಲಿದ್ದ ಇಬ್ಬರು ಮಹಿಳೆಯರನ್ನು ಪಾಯಿಂಟ್ಸ್‌ಮನ್ ಮಿತ್ರ ಕಟ್ಟುಹಾಕಿದ. ಆಮೇಲೆ ಆತ ಕೊಠಡಿಯ ಮುಂದೆ ನಿಂತು ನಾನು ಆತನ ಹಿಂದಿನಿಂದ ನೆಲದ ಮೇಲೆ ಉರುಳಿಕೊಂಡು ಕೊಠಡಿಯನ್ನು ಪ್ರವೇಶಿಸಬೇಕೆಂದು ಸೂಚಿಸಿದ. ಇದರ ಅರ್ಥ ಅಕಸ್ಮಾತ್ ಲಾಡೆನ್ ಅಥವಾ ಅವನೊಂದಿಗಿದ್ದವರು ಸೂಯಿಸೈಡ್ ಬಾಂಬ್ ಬೆಲ್ಟ್‌ಗಳನ್ನು ತೊಟ್ಟಿದ್ದು ಅದನ್ನು ಸ್ಫೋಟಿಸಿದರೆ ನನ್ನ ಮಿತ್ರ ಸಾಯುವುದಕ್ಕೂ ಲಾಡೆನ್‌ನನ್ನು ಕೊಲ್ಲುವ ಅವಕಾಶವನ್ನು ನನಗೆ ಬಿಟ್ಟುಕೊಡುವುದಕ್ಕೂ ಸಿದ್ಧನಾಗಿದ್ದ.

ನಾನು ಆತನ ಹಿಂದಿನಿಂದ ರೂಮಿನೊಳಕ್ಕೆ ಉರುಳಿದೆ.



ಲಾಡೆನ್ ಅಲ್ಲಿ ನಿಂತಿದ್ದ. ಆತ ತನ್ನ ಎರಡೂ ಕೈಗಳನ್ನು ಓರ್ವ ಮಹಿಳೆಯ ಹೆಗಲ ಮೇಲೆ ಇಟ್ಟು ಆಕೆಯನ್ನು ನಿಧಾನಕ್ಕೆ ಮುಂದಕ್ಕೆ ದೂಡುತ್ತಿದ್ದ. ನನ್ನತ್ತ ಅಲ್ಲ, ಬದಲಾಗಿ ಗಲಾಟೆ ಕೇಳಿಬರುತ್ತಿದ್ದ ಹಾಲಿನತ್ತ. ಆಗ ಆತನೊಂದಿಗೇ ಇದ್ದವಳು ಆತನ ಕಿರಿಯ ಪತ್ನಿ ಅಮಲ್.

ಸೀಲ್ ತಂಡದವರಾದ ನಮ್ಮ ಬಳಿ ಕತ್ತಲಲ್ಲೂ ಕಾಣಿಸುವ ಕನ್ನಡಗಳಿದ್ದವು. ಆದ್ದರಿಂದ ಲಾಡೆನ್ ನನಗೆ ಕಾಣಿಸುತ್ತಿದ್ದ. ಆದರೆ ಆ ಕತ್ತಲಿನಲ್ಲಿ ಅವನಿಗೆ ಸದ್ದುಗಳು ಕೇಳಿಸುತ್ತಿದ್ದವೆ ಹೊರತು ನಾವು ಆತನಿಗೆ ಕಾಣಿಸುತ್ತಿರಲಿಲ್ಲ.

ಆತ ಕಂಗಾಲಾಗಿರುವಂತೆ ಕಂಡ. ನಾನು ನಿರೀಕ್ಷಿಸಿದ್ದಕ್ಕಿಂತಲೂ ಆತ ಎತ್ತರವಾಗಿದ್ದ. ನಮ್ಮೆಲ್ಲರಿಗಿಂತಲೂ ಎತ್ತರವಾಗಿದ್ದ. ಆತನಿಗೆ ಯಾವ ಗಾಯಗಳೂ ಆಗಿರಲಿಲ್ಲ. ಆತನ ತಲೆಯ ಮೇಲೊಂದು ಬಿಳಿ ಟೋಪಿ ಇತ್ತು. ಒಂದು ಕ್ಷಣದಲ್ಲಿ ನನ್ನ ಕಣ್ಣುಗಳು ಕ್ರೂಕಟ್‌ನಂತೆ ಸಣ್ಣದಾಗಿ ಕತ್ತರಿಸಲಾಗಿದ್ದ ಆತನ ಕೂದಲು, ಸಣ್ಣಗಿದ್ದ ದೇಹ, ಅಷ್ಟೇನು ಉದ್ದವಿರದಿದ್ದ ಗಡ್ಡ ಎಲ್ಲವನ್ನೂ ಗ್ರಹಿಸಿತು. ನಾವು ಗುಂಡು ಹಾರಿಸುವುದನ್ನು ಅಭ್ಯಾಸ ಮಾಡುವಾಗಲೂ ಆತನ ಚಿತ್ರವನ್ನು ಗುರಿಯ ಮೇಲೆ ಅಂಟಿಸಿರುತ್ತಿದ್ದರಿಂದ ಒಂದು ಕ್ಷಣದಲ್ಲೇ ಆತನ ಗುರುತು ಹಿಡಿದೆ.

ಅವನ ಹತ್ತಿರದಲ್ಲೇ ಇದ್ದ ಒಂದು ಶೆಲ್ಫ್ ಮೇಲೆ ಆತನಿಗೆ ಪ್ರಿಯವಾಗಿದ್ದ ಚಿಕ್ಕದಾದ ಎಕೆ ಬಂದೂಕು ಇತ್ತು. ಅದರತ್ತ ಆತ ಸಾಗುತ್ತಿದ್ದಂತಿತ್ತು. ಆತನೊಂದಿಗಿದ್ದ ಆತನ ಪತ್ನಿ ಸೂಯಿಸೈಡ್ ಬೆಲ್ಟ್ ಹಾಕಿಕೊಂಡಿದ್ದು ಆಕೆ ಇಬ್ಬರನ್ನೂ ಹುತಾತ್ಮರನ್ನಾಗಿಸುವ ಸಾಧ್ಯತೆಗಳಿದ್ದವು. ಆತನ ಕೈಯಳತೆಯ ದೂರದಲ್ಲಿ ಬಂದೂಕಿತ್ತು. ಆತ ಅಪಾಯಕಾರಿ ಆಗುವ ಸಂಭವವಿತ್ತು. ಆತ ಹೆಚ್ಚಿನದ್ದನ್ನು ಮಾಡುವ ಮುನ್ನ ಅವನನ್ನು ಮುಗಿಸಬೇಕಿತ್ತು. ನಾನು ನನ್ನ ಬಂದೂಕನ್ನು ಎತ್ತರಕ್ಕೆ ಏರಿಸಿ ಅವನ ಹಣೆಗೆ ಗುರಿ ಇಟ್ಟು ಎರಡು ಗುಂಡುಗಳನ್ನು 'ಬಪ್, ಬಪ್' ಎಂದು ಹಾರಿಸಿದೆ. ಆತ ನೆಲಕ್ಕೆ ಕುಸಿಯುತ್ತಿದ್ದಾಗ ಎರಡನೆ ಗುಂಡು ಅವರ ಹಣೆಯನ್ನು ಪ್ರವೇಶಿಸಿತು. ಕೊಠಡಿಯಲ್ಲಿದ್ದ ಮಂಚದ ಎದುರು ಆತ ಕುಸಿದು ಬಿದ್ದ ನಂತರ ಆತನತ್ತ ಇನ್ನೊಂದು ಗುಂಡನ್ನು ಹಾರಿಸಿದೆ. 'ಬಪ್'. ಆತ ಹೆಣವಾದ. ಅವನ ದೇಹ ಸ್ತಬ್ಧಗೊಂಡಿತು. ನಾಲಿಗೆ ಹೊರಗೆ ಚಾಚಿತು. ಕೊನೆ ಉಸಿರು ಆತನ ದೇಹದಿಂದ ಹೊರಬಿತ್ತು.

ಅವನ ದೇಹದಿಂದ ಕೊನೆ ಉಸಿರು ಹೊರಬಿದ್ದಾಗ ನಾನು ಮಾಡಿರುವುದು ಅತಿಮುಖ್ಯ ಸಾಧನೆಯೋ ಅಥವಾ ದೊಡ್ಡ ತಪ್ಪೋ ಎಂಬ ಗೊಂದಲ ನನ್ನ ಮನಸ್ಸನ್ನು ಒಂದುಕ್ಷಣ ಕಾಡಿದ್ದು ನನಗಿನ್ನೂ ಚೆನ್ನಾಗಿ ನೆನಪಿದೆ. 'ಇದು ನಿಜ. ಇದು ಅವನೇ. ಹೋಲಿ ಶಿಟ್' ಎಂದುಕೊಂಡೆ.

ಅವನ ಹಣೆ ಭೀಕರವಾಗಿತ್ತು. 'ವಿ' ಆಕಾರದಲ್ಲಿ ಗುಂಡುಗಳು ಅವನ ಹಣೆಯನ್ನು ಸೀಳಿದ್ದರಿಂದ ಅವನ ಮಿದುಳು ಅವನ ಮುಖದ ಮೇಲೆ ಬಿದ್ದಿತ್ತು.

ಹಿಂದಿರುಗಿ ಅವನನ್ನು ನೋಡಿದ ಅಮಲ್ ಕಿರುಚಲಾರಂಭಿಸಿದಳು. ಆಕೆ ನನ್ನ ಮೇಲೆ ಎಗರಿಬಂದಳು, ತನ್ನ ಗಂಡನ ಬದಲಾಗಿ ತಾನೇ ಹುತಾತ್ಮಳಾಗುವವಳಂತೆ. ಅವಳನ್ನು ಹಿಡಿದು ಕಟ್ಟಿಹಾಕಿ ಮಂಚದ ಮೇಲೆ ಕೂರಿಸಿದೆ. ಮರುಕ್ಷಣವೇ ಲಾಡೆನ್‌ನ ಅತಿ ಕಿರಿಯ ಪುತ್ರ - ಅವನಿಗೆ ಎರಡು ಅಥವಾ ಮೂರು ವರ್ಷ ವಯಸ್ಸಿರಬಹುದು - ಮಂಚದ ಆಚೆ ಕಡೆ ನಿಂತಿರುವುದು ನನ್ನ ಅರಿವಿಗೆ ಬಂತು. ನಾನು ಕ್ರೂರ ಮನುಷ್ಯನಲ್ಲವಾದ್ದರಿಂದ ಆ ಹುಡುಗನಿಗೆ ಗಾಯ ಮಾಡುವ ಉದ್ದೇಶ ನನಗಿರಲಿಲ್ಲ. ಆ ಬಾಲಕ ಚೀರಾಡುತ್ತಿದ್ದ. ಅವನಿಗೆ ಭಯವಾಗಿತ್ತು. ಅವನಿಗೂ ಅವತ್ತು ಅಲ್ಲಾಗುತ್ತಿದ್ದುದ್ದಕ್ಕೂ ಯಾವುದೇ ಸಂಬಂಧವಿರಲಿಲ್ಲ. ನಾನು ಅವನನ್ನು ಎತ್ತಿಕೊಂಡು ಅವನ ತಾಯಿಯ ಪಕ್ಕ ಕೂರಿಸಿದೆ. ಅವನು ಮುಖಕ್ಕೆ ಒಂದಿಷ್ಟು ನೀರನ್ನು ಚಿಮುಕಿಸಿದೆ.

ಅದೇ ಹೊತ್ತಿಗೆ ತಾನು ಸೆರೆಹಿಡಿದಿದ್ದ ಇಬ್ಬರು ಮಹಿಳೆಯರನ್ನು ಕರೆದುಕೊಂಡು ನಮ್ಮ ಪಾಯಿಂಟ್ಸ್‌ಮನ್ ಕೊಠಡಿಯೊಳಕ್ಕೆ ಬಂದ. ನಾವಿಬ್ಬರೂ ಮೂರನೆ ಮಹಡಿಯಲ್ಲಿ ನಡೆಸಿದ ಕಾರ್ಯಾಚರಣೆಗೆ ಹೆಚ್ಚೆಂದರೆ ಹದಿನೈದು ನಿಮಿಷ ಹಿಡಿದಿತ್ತು.

ಕೆಲವೇ ಕ್ಷಣಗಳಲ್ಲಿ ನಮ್ಮ ಸೀಲ್ಸ್ ತಂಡದ ಇತರರು ನಾವಿದ್ದ ಕೊಠಡಿಗೆ ಬರಲಾರಂಭಿಸಿದರು. ಅವರಲ್ಲಿ ಯಾರ್‍ಯಾರು ಅಷ್ಟು ಹೊತ್ತಿಗಾಗಲೇ ಶವವಾಗಿದ್ದ ಲಾಡೆನ್ ದೇಹದ ಮೇಲೆ ಗುಂಡುಗಳನ್ನು ಹಾರಿಸಿದರು ಎಂದು ನಾನು ಹೇಳುವುದಿಲ್ಲ. ಯಾಕೆಂದರೆ ಅವರಂತೆಯೇ ನಾನು ಆಗ ಆ ಕೊಠಡಿಯನ್ನು ಪ್ರವೇಶಿಸಿದ್ದರೆ ನಾನೂ ಆತನ ಶವದತ್ತ ಗುಂಡು ಹಾರಿಸುತ್ತಿದ್ದೆ ಎಂದಷ್ಟೇ ಹೇಳಬಲ್ಲೆ.

ನನಗೆ ನನ್ನ ಕ್ಯಾಮೆರಾದಲ್ಲಿ ಅವನ ಶವದ ಫೋಟೊ ತೆಗೆದು ಅವನನ್ನು ಸ್ಪಷ್ಟವಾಗಿ ಗುರುತಿಸುವ ಕೆಲಸ ನೆನಪಾಯಿತು. ಯಾಕೆಂದರೆ ನಮ್ಮಲ್ಲಿ ಒಂದು ಮಾತಿದೆ. ಅದೇನೆಂದರೆ 'ನೀನು ಒಬ್ಬನನ್ನು ಮುಗಿಸಿದ್ದರೆ ಆತನನ್ನು ಕುರಿತ ಉಳಿದ ಕೆಲಸವನ್ನೂ ನೀನೇ ಮುಗಿಸಬೇಕು'. ಲಾಡೆನ್‌ನನ್ನು ನಿರ್ದಿಷ್ಟವಾಗಿ ಪತ್ತೆಹಚ್ಚಲು ನಮ್ಮೆಲ್ಲರ ಬಳಿ ಡಿಎನ್‌ಎ ಕಿಟ್‌ಗಳಿದ್ದವು. ಆದರೆ ಅದ್ಯಾಕೋ ಆ ಕ್ಷಣ ನನ್ನ ಮನಸ್ಸು ವಿಚಲಿತಗೊಂಡಿತ್ತು. ಎಷ್ಟರಮಟ್ಟಿಗೆಂದರೆ ನನ್ನ ಮಿತ್ರರೊಬ್ಬರನ್ನು "ಮುಂದೇನು ಮಾಡುವುದು?" ಎಂದು ಕೇಳಿದೆ. ಆಗ ಆತ "ಕಂಪ್ಯೂಟರ್‌ಗಳನ್ನು ವಶಪಡಿಸಿಕೊಳ್ಳುವುದು" ಎಂದ. ನನಗೆ ನೆನಪಿರುವಂತೆ "ಹೌದಲ್ಲವಾ? ನಾನು ರೆಡಿ" ಎಂದೆ.


ನಾವು ಎರಡನೆ ಮಹಡಿಯಲ್ಲಿದ್ದ ಮಾಧ್ಯಮ ಕೇಂದ್ರವನ್ನು ಹೊಕ್ಕೆವು. ಅಲ್ಲಿದ್ದ ಕಂಪ್ಯೂಟರ್‌ಗಳ ಹಾರ್ಡ್ ಡ್ರೈವ್‌ಗಳನ್ನು ಕಿತ್ತುಹಾಕಲಾರಂಭಿಸಿದೆವು. ಅಲ್ಲಿದ್ದ ಥಂಬ್ ಡ್ರೈವ್ ಮತ್ತು ಡಿಸ್ಕ್‌ಗಳನ್ನು ನಮ್ಮ ಚೀಲಗಳಿಗೆ ತುಂಬಲಾರಂಭಿಸಿದೆವು.

ಕಂಪ್ಯೂಟರ್ ಇದ್ದ ಪ್ರತಿ ರೂಮಿನಲ್ಲೂ ಮಂಚಗಳಿದ್ದವು. ಆ ಮಂಚಗಳ ಅಡಿ ಇದ್ದ ಚೀಲಗಳನ್ನು ಹೊರಗೆ ಎಳೆಯಲಾರಂಭಿಸಿದೆ. ಮೊದಮೊದಲು ಆ ಚೀಲಗಳಲ್ಲಿ ಇರುವುದು ಆಹಾರ ಪದಾರ್ಥಗಳೆಂದು ಭಾವಿಸಿದ ನಾನು 'ಪರವಾಗಿಲ್ಲ, ಹೊರಗಿನ ಸಂಪರ್ಕ ಇಲ್ಲದೆ ಬಹಳಷ್ಟು ದಿನ ಬದುಕುವಷ್ಟು ಆಹಾರವನ್ನು ಸಂಗ್ರಹಿಸಿಟ್ಟಿದ್ದಾರೆ' ಎಂದುಕೊಂಡೆ. ಆದರೆ ಆ ಚೀಲಗಳಲ್ಲಿದ್ದ ವಸ್ತುಗಳನ್ನು ಗಮನಿಸಿದಾಗ ಅವೆಲ್ಲವೂ ಅಫೀಮಿನ ಪ್ಯಾಕೆಟ್‌ಗಳು ಎಂದು ಗೊತ್ತಾಯಿತು. ಅವು ಎಲ್ಲ ಕೊಠಡಿಗಳಲ್ಲೂ ಇದ್ದವು. ಅವುಗಳನ್ನು ನೋಡಿ ನನಗೆ ನಗುಬಂತು.

ನಾನು, ನಮ್ಮ ಪಾಯಿಂಟ್ಸ್‌ಮನ್ ಮತ್ತು ಇನ್ನಿಬ್ಬರು ಲಾಡೆನ್‌ನ ಶವವನ್ನು ಚೀಲದಲ್ಲಿ ಹಾಕಿ ಹೊರಗೆ ತೆಗೆದುಕೊಂಡು ಹೋದೆವು. ಇತರರು ಆತನ ಶವವನ್ನು ಉಳಿದಿದ್ದ ಹೆಲಿಕಾಪ್ಟರ್‌ಗೆ ಏರಿಸಿದರು.

→12

ಬಿ.ಎಂ.ಟಿ.ಸಿ.ಯಲ್ಲಿ 'ಜೀತ ಪದ್ಧತಿ'!



ಸರ್ಕಾರದ ದಾಖಲೆಗಳಲ್ಲಿ ಜೀತ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆದರೆ ಮತ್ತೊಂದೆಡೆ ಖುದ್ದು ಸರ್ಕಾರವೇ ಜೀತ ಪದ್ಧತಿಯ ಸಾರಥ್ಯ ವಹಿಸಿದೆ. ಇದು ವ್ಯಂಗ್ಯವೂ ಅಲ್ಲ ವಿಡಂಬನೆಯೂ ಅಲ್ಲ ಬಿ.ಎಂ.ಟಿ.ಸಿ ಸಿಬ್ಬಂದಿಗಳ ನಿತ್ಯ ಗೋಳು!

ಪ್ರತಿ ವರ್ಷ ಕೇಂದ್ರ ಸರ್ಕಾರ, ಸಾರಿಗೆ ವಿಭಾಗದ ಪ್ರಶಸ್ತಿಗಳನ್ನು ಪ್ರಕಟಿಸಿದಾಗ ಅಲ್ಲಿ ಕೆ.ಎಸ್.ಆರ್.ಟಿ.ಸಿ ಇಲ್ಲವೇ ಬಿ.ಎಂ.ಟಿ.ಸಿ.ಗೆ ಒಂದು ಮೀಸಲಿದ್ದೇ ಇರುತ್ತದೆ. ಸಾರಿಗೆ ಮಂತ್ರಿ ಅಶೋಕರ ಪ್ರಚಾರದ ಬ್ಯಾನರುಗಳಲ್ಲಿ ಈ ಪ್ರಶಸ್ತಿಗಳ ಪಟ್ಟಿಯೂ ಇರುತ್ತದೆ. ಆದರೆ ಇದು ಬಿ.ಎಂ.ಟಿ.ಸಿ.ಯ ಒಂದು ಮುಖ ಮಾತ್ರ. ಮತ್ತೊಂದು ಮಗ್ಗುಲಲ್ಲಿ ಅದರ ಕಾರ್ಮಿಕ ಪೀಡಕ, ಜನದ್ರೋಹಿ, ಹಗಲು ದರೋಡೆಯ ಮುಖ ಅಸಹ್ಯವಾಗಿ ಹಲ್ಲು ಕಿಸಿಯುತ್ತಿರುತ್ತದೆ.

ದೇಶದ ಬೇರಾವ ರಾಜ್ಯದಲ್ಲೂ ಇರದಷ್ಟು ದುಬಾರಿ ದರಗಳು, ಹಣವಿದ್ದವರಿಗೆ ಅನುಕೂಲವಾಗುವ ವೋಲ್ವೋ ಬಸ್‌ಗಳ ಹೆಚ್ಚಳ, ಜನರ ಪ್ರಯಾಣಕ್ಕಿಂತ ಹೆಚ್ಚಾಗಿ ಕಾರ್ಪೋರೇಟ್ ಕಂಪನಿಗಳಿಗೆ ಬಸ್‌ಗಳನ್ನು ಬಾಡಿಗೆ ಬಿಡುವ ಲಾಭದಾಯಕ ದಂಧೆ- ಹೀಗೆ ಹಿಗ್ಗಾಮುಗ್ಗಾ ಜನರ ಸುಲಿಗೆ ಮಾಡುತ್ತಿರುವ ಬಿ.ಎಂ.ಟಿ.ಸಿ.ಯಲ್ಲಿ ಹಗಲು ರಾತ್ರಿಯೆನ್ನದೆ ದುಡಿಯುವ ಕಂಡಕ್ಟರ್ ಡ್ರೈವರ್‌ಗಳಿಗೆ ಎ.ಸಿ ರೂಮಿನ ಅಧಿಕಾರಿಗಳು ನೀಡುವ ಕಿರುಕುಳಗಳ ಪಟ್ಟಿಯೂ ಸಣ್ಣದಿಲ್ಲ. ಸಚಿವ ಸಾಹೇಬರು ಪ್ರಶಸ್ತಿಗಳ ಜೊತೆಗೆ ಈ ಪಟ್ಟಿಯನ್ನೂ ತಮ್ಮ ಬ್ಯಾನರ್‌ನಲ್ಲಿ ಸೇರಿಸಿಕೊಂಡರೆ ಚೆನ್ನಾಗಿರಬಹುದು.

ಈ ಸರ್ಕಾರಿ ಸಂಸ್ಥೆಯಲ್ಲಿ ಸುಮ್ಮನೆ ಒಮ್ಮೆ ಇಣುಕಿದರೂ ಪಾಳೆಗಾರಿಕೆಯ ಕಡುಕೆಟ್ಟ ಸಂಸ್ಕೃತಿ ಕಣ್ಣಿಗೆ ರಾಚುತ್ತದೆ. ಉನ್ನತ ಅಧಿಕಾರಿಗಳ ದರ್ಪಕ್ಕೆ ಸಣ್ಣಪುಟ್ಟ ಸಿಬ್ಬಂದಿಗಳೆಲ್ಲ ಜೀತ ಕಾರ್ಮಿಕರಂತೆ ಅಭದ್ರತೆ ಮತ್ತು ಅನಿಶ್ಚಿತತೆಯಲ್ಲೆ ಬಾಳುತ್ತಿರುವುದು ಇಲ್ಲಿನ ಸಾಮಾನ್ಯ ಚಿತ್ರಣ. ಕಳೆದ ಐದು ವರ್ಷಗಳಲ್ಲಿ ಹಿರಿಯ ಅಧಿಕಾರಿಗಳ ಕಿರುಕುಳಕ್ಕೆ ಬೇಸತ್ತು ಬಿ.ಎಂ.ಟಿ.ಸಿ.ಯ 19 ನೌಕರರು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದು ಅದರಲ್ಲಿ 4 ಜನ ಪ್ರಾಣ ಕಳೆದುಕೊಂಡಿದ್ದಾರೆಂಬ ಅಂಕಿಅಂಶಗಳೇ ಸಾಕು ಅಲ್ಲಿನ ಕರಾಳತೆಯನ್ನು ಬಿಂಬಿಸಲು.

ಹಾಗೆ ನೋಡಿದರೆ ಇಲಾಖೆಯ ಯಶಸ್ಸಿನಲ್ಲಾಗಲಿ ಅಥವಾ ಲಾಭಾಂಶದ ರಿಪೋರ್ಟ್ ಕಾರ್ಡಿನಲ್ಲಾಗಲಿ ಎ.ಸಿ ರೂಮಿನ ಅಧಿಕಾರಿಗಳಿಗಿಂತ ಈ ಕಂಡಕ್ಟರ್ ಡ್ರೈವರ್‌ಗಳ ಪಾತ್ರವೇ ದೊಡ್ಡದು. ಆದರೂ ಅವರೆಲ್ಲ ಅಧಿಕಾರಿಗಳಿಗೆ ಕಾಲ ಕಸಕ್ಕೆ ಸಮಾನ. ಪ್ರತಿದಿನದ ರೂಟ್ ನೀಡುವುದರಿಂದ ಆರಂಭಿಸಿ, ಚೆಕ್ಕಿಂಗ್‌ನಂತಹ ಅಸ್ತ್ರಗಳನ್ನೆಲ್ಲ ಇದಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಎಂಟ್ರಿ ಹಾಕುವ ಟಿ.ಸಿ.ಯಿಂದ ಸಾರಿಗೆ ಭವನದ ಉನ್ನತ ಅಧಿಕಾರಿಗಳವರೆಗೆ ಎಲ್ಲರೂ ಇವರ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಸವಾರಿ ಮಾಡುತ್ತಲೇ ಇರುತ್ತಾರೆ. ಅದರಲ್ಲೂ ಡಿಪೋದಂತಹ ಸೀಮಿತ ಪ್ರಪಂಚದಲ್ಲಿ ನಡೆಯುವ ದಬ್ಬಾಳಿಕೆಗಳು ಒಂದೆರಡಲ್ಲ.

ಕಾಯಿಲೆ ಬಿದ್ದ ಸರ್ಕಾರಿ ನೌಕರನೊಬ್ಬ ರಜೆ ಮಂಜೂರು ಮಾಡಿಸಿಕೊಳ್ಳಬೇಕೆಂದರೂ ತನ್ನ ಮೇಲಧಿಕಾರಿಗಳಿಗೆ ಕಡ್ಡಾಯವಾಗಿ ಲಂಚ ಕೊಡಬೇಕಾದ ಪದ್ಧತಿ ಇಲ್ಲಿದೆ. ಅಲ್ಲದೆ ಒಂದು ಟರ್ಮಿನಲ್‌ನಿಂದ ಎಂಟ್ರಿ ಹಾಕಿಸಿಕೊಂಡು ಬಸ್ ಹೊರತೆಗೆಯಬೇಕೆಂದರೆ ಪ್ರತಿ ಬಾರಿ ಐದೈದು ರೂಪಾಯಿ ಅಲ್ಲಿರುವ ಟಿ.ಸಿ. ಕೈಗಿಡಬೇಕೆನ್ನುವ ಅಲಿಖಿತ ಕಾನೂನು ಸಹ ಚಾಲ್ತಿಯಲ್ಲಿರುವುದು ಸುಳ್ಳೇನೂ ಅಲ್ಲ. ಇವೆಲ್ಲ ಮುಚ್ಚುಮರೆಯಿಲ್ಲದೆ ಖುಲ್ಲಂಖುಲ್ಲಾ ನಡೆಯುವ ವ್ಯವಹಾರಗಳು. ಒಂದು ದಿನಕ್ಕೆ ಎಂಟು ಗಂಟೆಗಳ ಕೆಲಸದ ಅವಧಿಯೆಂಬ ಕಾನೂನು ಪ್ರಪಂಚದಾದ್ಯಂತ ಚಾಲ್ತಿಯಲ್ಲಿದ್ದರೂ ಓ.ಟಿ ಆಸೆ ತೋರಿಸಿ ಇವರಿಂದ 10 ರಿಂದ 12 ಗಂಟೆ ವರೆಗೂ ದುಡಿಸಿಕೊಳ್ಳಲಾಗುತ್ತಿದೆ. ಆದರೆ ಓ.ಟಿ.ಯ ಹಣ ಇವರ ಕೈಸೇರುವುದು ಅಷ್ಟಕ್ಕಷ್ಟೇ ಇದೆ.

ಸಂಸ್ಥೆಯು ಪ್ರಾರಂಭವಾಗಿ 5 ದಶಕಗಳು ಕಳೆದಿದೆ. ಆರಂಭದಲ್ಲಿ ಬೆಂಗಳೂರಿನ ಜನಸಂದಣಿ, ಟ್ರಾಫಿಕ್ ಕಿರಿಕಿರಿಯೂ ಅಷ್ಟೊಂದಾಗಿರಲಿಲ್ಲ. ಈಗ ಎಲ್ಲವೂ ಬದಲಾಗಿದೆ. ಒಂದು ಬಸ್ ತನ್ನ ಮಿತಿಯನ್ನೂ ಮೀರಿ ಫುಟ್‌ಬೋರ್ಡ್‌ಗಳಲ್ಲಿ ಪ್ರಯಾಣಿಕರನ್ನು ನೇತಾಡಿಸುತ್ತಾ ಸಾಗಬೇಕಿದೆ. ಆದರೆ ಹಳೆಯ, ಅಂದರೆ 1971ರಲ್ಲಿ ಜಾರಿಗೆ ತರಲಾಗಿರುವ ನೌಕರರ (ಶಿಸ್ತು ಮತ್ತು ನಡತೆ) ನಿಯಮಾವಳಿಗಳೆ ಈಗಲೂ ಚಾಲ್ತಿಯಲ್ಲಿದೆ. ಇವ್ಯಾವುವು ಪ್ರಸ್ತುತ ಪರಿಸ್ಥಿತಿಗೆ ಅನುಗುಣವಾಗಿಲ್ಲ. ಐವತ್ತು ವರ್ಷಗಳಷ್ಟು ಹಳೆಯ ಸಂದರ್ಭದಲ್ಲಿ ನಡೆದುಕೊಳ್ಳಬೇಕಿದ್ದ ರೀತಿಗಳನ್ನೆ ಈಗಲೂ ಸಿಬ್ಬಂದಿಗಳ ಮೇಲೆ ಹೇರಲು ಪ್ರಯತ್ನಿಸುತ್ತಿರುವುದೇ ಒಪ್ಪತಕ್ಕ ಸಂಗತಿಯಲ್ಲ.

ಇಲ್ಲಿನ ಅಧಿಕಾರಿಗಳ ಭ್ರಷ್ಟತೆ ಅದೆಷ್ಟು ಎಲ್ಲೆ ಮೀರಿದೆಯೆಂದರೆ, ಶಿಕ್ಷೆ ವಿಧಿಸುವಲ್ಲೂ ತಮ್ಮದೇ ಸಿಬ್ಬಂದಿಗಳಿಂದ ಲಂಚ ವಸೂಲಿ ಮಾಡಲಾಗುತ್ತದೆ. ಅಧಿಕಾರಿಗಳ ಕೃಪಾಪೋಷಣೆಯಿದ್ದೋ ಅಥವಾ ಅಧಿಕಾರಿಗಳನ್ನು ತೃಪ್ತಿ ಪಡಿಸುವಷ್ಟೋ ಕಾಸು ಬಿಚ್ಚುವವರಾಗಿದ್ದರೆ ಅವರೆಂತಹ ದೊಡ್ಡ ತಪ್ಪು ಮಾಡಿದ್ದರೂ ಸಣ್ಣ ಪುಟ್ಟ ಶಿಕ್ಷೆ ವಿಧಿಸಿ ಸುಮ್ಮನಾಗುತ್ತಾರೆ. ಒಂದೊಮ್ಮೆ ಈ ಯಾವ ಅದೃಷ್ಟಗಳೂ ಇಲ್ಲದ ಸಿಬ್ಬಂದಿಯಾಗಿದ್ದರೆ ಆತನ ಸಣ್ಣ ಪ್ರಮಾದಕ್ಕೂ ಬಲು ದೊಡ್ಡ ಶಿಕ್ಷೆ ಕಾದಿರುತ್ತದೆ. ಸಾಮಾನ್ಯವಾಗಿ ಚೆಕ್ಕಿಂಗ್‌ನವರು ತಪಾಸಣೆ ಮಾಡಿದ ನಂತರ ತಮ್ಮ ವರದಿಯನ್ನು ಕಂಡಕ್ಟರ್‌ನ ವೇ-ಬಿಲ್‌ನಲ್ಲಿ ನಮೂದಿಸುತ್ತಾರೆ. ಅದನ್ನು ಆಧರಿಸಿ ಶಿಕ್ಷೆ ನೀಡುವ ಕರ್ತವ್ಯ ಶಿಸ್ತುಪಾಲನಾಧಿಕಾರಿಯದ್ದು. ಹೀಗೆ ಶಿಕ್ಷೆ ನೀಡುವ ಮುನ್ನ ಆತನ ತಪ್ಪು ಕೆಂಪು ಗುರುತಿನ ಪ್ರಕರಣವೋ, ತೀವ್ರ ಸ್ವರೂಪ ಕೆಂಪುಗುರುತಿನ ಪ್ರಕರಣವೋ ಎಂದು ವರ್ಗೀಕರಿಸಲಾಗುತ್ತದೆ. ಅಂದರೆ ತಪ್ಪು ಸಣ್ಣದಿದ್ದರೆ (ಇಂತಿಷ್ಟು ರೂಪಾಯಿ ಮಿತಿ ಒಳಗಿನ ಟಿಕೆಟ್ ವ್ಯತ್ಯಾಸ) ಅದಕ್ಕೆ ಕೇವಲ ಎಚ್ಚರಿಕೆ ನೀಡಲಾಗುವ ಸಾಧಾರಣ ಪ್ರಮಾದವೆಂತಲೂ, ಗಂಭೀರ ಸ್ವರೂಪದ ಪ್ರಮಾದವಾಗಿದ್ದರೆ ಪರಿಣಾಮಕಾರಿ ಶಿಕ್ಷೆ ನೀಡುವ ಕೆಂಪು ಗುರುತಿನ ಪ್ರಕರಣ, ಕೆಲಸದಿಂದಲೇ ವಜಾ ಮಾಡುವಷ್ಟು ವಿಪರೀತ ಮಟ್ಟದ ಪ್ರಮಾದವಾಗಿದ್ದರೆ ತೀವ್ರ ಸ್ವರೂಪದ ಕೆಂಪು ಗುರುತಿನ ಪ್ರಕರಣ ಎಂದು ವಿಂಗಡಿಸಲಾಗುತ್ತದೆ. ಅದನ್ನು ಆಧರಿಸಿಯೇ ಶಿಕ್ಷೆ ನೀಡಬೇಕು. ಆದರೆ ನಿಯಮಗಳನ್ನೆಲ್ಲ ಗಾಳಿಗೆ ತೂರುವ ಅಧಿಕಾರಿಗಳು ತೀವ್ರ ಸ್ವರೂಪದ ರೆಡ್ ಗುರುತು ಇದ್ದವರಿಗೆ ಎಚ್ಚರಿಕೆ ಅಥವಾ ಆಫೀಸ್ ಕೆಲಸದಂತಹ ಸಣ್ಣ ಶಿಕ್ಷೆ ನೀಡಿರುವ, ಅದಕ್ಕಿಂತಲೂ ಕಡಿಮೆ ಮಟ್ಟದ ಅಂದರೆ ಸಾಧಾರಣ ಇಲ್ಲವೆ ರೆಡ್ ಮಾರ್ಕ್ ಇರುವವರಿಗೆ ಕೆಲಸದಿಂದಲೇ ಕಿತ್ತೊಗೆಯುವಂತಹ ಶಿಕ್ಷೆ ನೀಡಿದ ಸಾಕಷ್ಟು ಉದಾಹರಣೆಗಳೂ ಇವೆ. ಇತ್ತೀಚೆನಷ್ಟೆ ಲೋಕಾಯುಕ್ತ ಬಲೆಗೆ ಬಿದ್ದ ಕೆ.ಎಸ್.ಆರ್.ಟಿ.ಸಿ ತಾಂತ್ರಿಕ ನಿರ್ದೇಶಕ ಎಸ್.ಕೆ.ಪರಮೇಶ್ 1992ರಿಂದಲೂ ಶಿಸ್ತುಪಾಲನಾ ಅಧಿಕಾರಿಯಾಗಿದ್ದಾಗ ಹಣದ ಆಮಿಷಕ್ಕೆ ಸಿಬ್ಬಂದಿಗೆ ಮನಸೋ ಇಚ್ಛೆ ಶಿಕ್ಷೆ ನೀಡಿದ್ದು ಇದೀಗ ಬೆಳಕಿಗೆ ಬಂದಿದೆ. ಒಂದೆರಡು ಪ್ರಕರಣಗಳಲ್ಲಿ ಸ್ವತಃ ಕೋರ್ಟ್ ಸಿಬ್ಬಂದಿಯ ಪರವಾಗಿ ತೀರ್ಪು ನೀಡಿ, ಕೆಲಸಕ್ಕೆ ತೆಗೆದುಕೊಳ್ಳುವಂತೆ ಆದೇಶಿಸಿದ್ದರು ಇಲಾಖೆ ಇದುವರೆಗೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೇ ಇರುವುದು ಇಡೀ ಇಲಾಖೆಯಲ್ಲೆ ಕೆಳಮಟ್ಟದ ಸಿಬ್ಬಂದಿಗಳ ಮೇಲಿರುವ 'ಪ್ರೀತಿ'(?)ಯನ್ನು ಎತ್ತಿ ತೋರಿಸುತ್ತದೆ.

ಇಲಾಖೆಯಲ್ಲಿನ ಕೆಳಮಟ್ಟದ ಸಿಬ್ಬಂದಿಗಳ ಮೇ[illegible] ತಾತ್ಸಾರ ಇಷ್ಟಕ್ಕೇ ಮುಗಿಯುವುದಿಲ್ಲ. 'ಟ್ರೈನಿ' ಹೆ[illegible] ಮತ್ತೊಂದು ಬಗೆಯ ಜೀತ ಪದ್ಧತಿಯೂ ಚಾಲ್ತಿಯಲ್[illegible] ಒಟ್ಟಾರೆ ಇಲಾಖೆಯಲ್ಲಿ ಇಂತಹ 33,000 ನೌಕರ[illegible] ತಿಂಗಳಿಗೆ ಕೇವಲ ಮೂರರಿಂದ ನಾಲ್ಕು ಸಾವಿರ ಸ್ಟೈಫ[illegible] ಹಣವಷ್ಟನ್ನೇ ನೀಡಲಾಗುತ್ತಿದೆ. ತರಬೇತಿಯ ಹೆಸರಿನಲ್ಲಿ[illegible] ಅವರಿಗೆ ಯಾವ ತರಬೇತಿಯನ್ನೂ ನೀಡುವುದಿಲ್ಲ; ಬದ[illegible] ಕಾಯಂ ನೌಕರರು ಮಾಡುವ ಎಲ್ಲಾ ಕೆಲಸಗಳನ್[illegible] ಅವರಿಂದ ಮಾಡಿಸಿಕೊಳ್ಳುತ್ತಾರೆ. ಅಷ್ಟಕ್ಕೂ ಬ್ಯಾಂ[illegible] ಆಫೀಸರ್ ಹುದ್ದೆಗೇ 6 ತಿಂಗಳ ಪ್ರೊಬೆಷನರಿ ಅವ[illegible] ಇರುವಾಗ ಡ್ರೈವರ್-ಕಂಡಕ್ಟರ್‌ನಂತಹ ಕೆಲಸ[illegible] ಮೂರು-ನಾಲ್ಕು ವರ್ಷದಷ್ಟು ಸುದೀರ್ಘ ತರಬೇತಿ[illegible] ಅವಶ್ಯಕತೆಯೇ ಇಲ್ಲ. ಹೀಗೆ ಕೆಲವರು ಹತ್ತಾರ[illegible] ವರ್ಷಗಳಿಂದ ಟ್ರೈನಿಗಳಾಗೇ ದುಡಿಯುತ್ತಿದ್ದಾರೆ. ಇನ್ನ[illegible] ಕಾಯಂ ಮಾಡಿಕೊಳ್ಳಬೇಕೆನ್ನುವಾಗ ಅಧಿಕಾರಿಗಳು ಅವ[illegible] ವಿರುದ್ಧ ಅಸಂತೃಪ್ತಿಯ ಷರಾ ಬರೆದು ಬಿಡುತ್ತಾರೆ. ಅ[illegible] ಅವರ ಪ್ರೊಬೆಷನರಿ ಅವಧಿ ಮತ್ತೊಂದೆರಡು ವರ್ಷ[illegible] ಮುಂದಕ್ಕೋಗುತ್ತದೆ. ಇದು ನಿರಂತರವಾಗಿ ನಡೆಯುತ್ತ[illegible] ಬರುತ್ತಿದೆ.

ಅಷ್ಟಕ್ಕೂ, ಸಂಸ್ಥೆಯ ಹೆಗ್ಗಳಿಕೆಯಲ್ಲಿ ಸಚಿವ[illegible] ಅಧಿಕಾರಿಗಳು ಮುಖ ತೋರಿಸಿಕೊಳ್ಳುತ್ತಾರಾದ[illegible] ಇಲಾಖೆಯ ಕುರಿತು ಜನರ ಆಕ್ರೋಶಗಳಿಗೆ ತುತ್ತಾಗುವುದ[illegible] ಇದೇ ಬಡಪಾಯಿ ಕಂಡಕ್ಟರ್ ಮತ್ತು ಡ್ರೈವರ್‌ಗ[illegible] ದರ ಹೆಚ್ಚಾದಾಗಾಗಲಿ, ಪಾಸ್‌ನ ಜೊತೆಗೆ ಹೆಚ್ಚು[illegible] ಟಿಕೆಟ್ ನೀಡುವಂತಹ ಎಡವಟ್ಟು ನಿರ್ಧಾರಗಳಿಗಾಗ[illegible] ಸಾಕಷ್ಟು ಬಸ್‌ಗಳ ಸಂಚಾರ ಇಲ್ಲದಕ್ಕಾಗಲಿ ಜನ ನೇರವಾ[illegible] ನಿಂದಿಸುವುದು, ಕೆಲವೊಮ್ಮೆ ಥಳಿಸುವುದು [illegible] ಸಿಬ್ಬಂದಿಗಳನ್ನೇ ಹೊರತು ಎ.ಸಿ. ರೂಮಿನ ದರ್ಪ[illegible] ಅಧಿಕಾರಿಗಳನ್ನಲ್ಲ. ಜನಸಾಮಾನ್ಯರ ಕಲ್ಪನೆಯಲ್ಲಿ ಬಿ.ಎಂ.ಟಿ[illegible] ಎಂದಾಕ್ಷಣ ನೆನಪಾಗುವುದು ಬಿಳಿ-ನೀಲಿ ಬಣ್ಣದ ಬಸ್[illegible] ಖಾಕಿ ತೊಟ್ಟ ಡ್ರೈವರ್ ಕಂಡಕ್ಟರ್‌ಗಳೇ ವಿನಾಃ ತಾವ[illegible] ಎನ್ನುವ ಸತ್ಯವನ್ನು ಅಧಿಕಾರಿಗಳು ಅರ್ಥಮಾಡಿಕೊಳ್ಳುವುದ[illegible] ಒಳಿತು. ಕೈಕೆಳಗಿನ ಸಿಬ್ಬಂದಿಗಳ ಮೇಲೆ ಪ್ರೀ[illegible] ತೋರಿಸುವುದು ಸಾಧ್ಯವಾಗದಿದ್ದರೂ ಚಿಂತೆಯಿ[illegible] ವಿಷಕಾರುವುದನ್ನು ಬಿ.ಎಂ.ಟಿ.ಸಿ ನಿಲ್ಲಿಸಿದರೆ ಸಂಸ್ಥೆ[illegible] ಮತ್ತೊಂದು ಪ್ರಶಸ್ತಿ ಬಂದರೂ ಬರಬಹುದು.

● ಗಿರೀಶ್ ತಾಳಿಕಟ್ಟೆ

ಅಧಿಕಾರಿಗಳ ದರ್ಪದ ತಾಜಾ ಸಾಕ್ಷಿ

ತೀರಾ ಇತ್ತೀಚೆಗೆ ಡಿಪೋ ನಂಬರ್ [illegible] ಅಧಿಕಾರಿಗಳ ದರ್ಪದ ತಾಜಾ ಸಾಕ್ಷಿ.

ಬಿಜಾಪುರ ಮೂಲದ [illegible]

ಲಾಡೆನ್...

→11

ಅದೇ ಹೊತ್ತಿಗೆ ನಮ್ಮ ನೆರವಿಗೆ ಬರಬೇಕಿದ್ದ ಮತ್ತೊಂದು ತಂಡವನ್ನು ಇನ್ನೊಂದು ಹೆಲಿಕಾಪ್ಟರ್ ತಂದಿತು. ಈ ಕಾರ್ಯಾಚರಣೆಯ ಆರಂಭದಲ್ಲಿ ನಾವು ಬಂದಿಳಿದಿದ್ದ ಒಂದು ಹೆಲಿಕಾಪ್ಟರ್ ನಿಷ್ಕ್ರಿಯಗೊಂಡಿದ್ದರಿಂದ ನಮ್ಮನ್ನೆಲ್ಲ ಅಲ್ಲಿಂದ ಸುರಕ್ಷಿತವಾಗಿ ವಾಪಸ್ ಕರೆದುಕೊಂಡು ಹೋಗಲಾಗುತ್ತದೆ ಎಂಬ ನೆಮ್ಮದಿಯೂ ನನ್ನದಾಗಿತ್ತು.

ನಾವು ಆ ಹೆಲಿಕಾಪ್ಟರ್ ಏರಿದ ನಂತರ ಅದರಲ್ಲಿದ್ದವನೊಬ್ಬ "ಯುಬಿಎಲ್‌ನನ್ನು ಕೊಂದದ್ದು ಯಾರು?" ಎಂದು ಕೇಳಿದ. "ನಾನು" ಎಂದು ಉತ್ತರಿಸಿದೆ. "ಹೌದಾ? ನನ್ನ ಸಂಸಾರದ ಪರವಾಗಿ ತಮಗೆ ಧನ್ಯವಾದಗಳು" ಎಂದು ಆತ ಹೇಳಿದ. ಅದೇ ಹೊತ್ತಿಗೆ ಇಂಟರ್‌ಕಾಮ್ ಮೂಲಕ ಯಾರೋ ಒಬ್ಬರು "ನೀವೆಲ್ಲರು? ನಾನು ಹೇಳುವುದನ್ನು ಸಂತೋಷದಿಂದ ಸ್ವಾಗತಿಸುವುದಿಲ್ಲ, ಆದರೂ ತಮ್ಮೆಲ್ಲರಿಗೂ ಅಫಘಾನಿಸ್ತಾನಕ್ಕೆ ಸ್ವಾಗತ" ಎಂದರು.


ಜಲಾಲಾಬಾದ್‌ನಲ್ಲಿರುವ ನಮ್ಮ ಕೇಂದ್ರವನ್ನು ತಲುಪಿದ ನಂತರ ಲಾಡೆನ್ ಶವವನ್ನು ಚೀಲದಿಂದ ಹೊರತೆಗೆದು ಸಿಐಎ ಅಧಿಕಾರಿಗಳಿಗೆ ಮತ್ತು ಈ ಕಾರ್ಯಾಚರಣೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದ ಮಾಕ್ ರಾವೆನ್ ಅವರಿಗೆ ತೋರಿಸಿದೆವು. ಅದು ಲಾಡೆನ್‌ನ ದೇಹವೆಂದು ಸ್ಪಷ್ಟಪಡಿಸಿಕೊಳ್ಳಲು ರಾವೆನ್ ಅವರು ನಮ್ಮ ಸೀಲ್ಸ್ ತಂಡದ ಅತಿ ಎತ್ತರದ ವ್ಯಕ್ತಿ ಲಾಡೆನ್ ಶವದ ಪಕ್ಕ ಮಲಗಲು ಹೇಳಿದರಲ್ಲದೆ ಮತ್ತಷ್ಟು ವೈಜ್ಞಾನಿಕ ಪರೀಕ್ಷೆಗಳನ್ನು ನಡೆಸಿದರು.

ಅಂತಹ ಪರೀಕ್ಷೆಗಳಿಗೆ ಲಾಡೆನ್‌ನ ಶವವನ್ನು ಇಟ್ಟದ್ದಾಗ ಆತನ ಹೃದಯ ಮತ್ತು ಕಾಲುಗಳ ಮೇಲೆ ಬಿದ್ದಿದ್ದ ಗುಂಡುಗಳ ಗುರುತುಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದವು.

ಅವರೆಲ್ಲ ಶವವನ್ನು ಪರೀಕ್ಷಿಸುತ್ತಿದ್ದಾಗ ನಾನು ಸಿಐಎ ಏಜೆಂಟ್ ಆಗಿದ್ದ ಮಹಿಳೆಯನ್ನು ಕರೆತಂದು "ಇವನೇ ಅಲ್ಲವೇ ನಿಮಗೆ ಬೇಕಾಗಿದ್ದವನು?" ಎಂದು ಕೇಳಿದೆ. ಆಗ ಆಕೆ ಅಳತೊಡಗಿದಳು. ನಾನು ನನ್ನ ಬಂದೂಕಿನಲ್ಲಿದ್ದ ತೋಪುಖಾನೆಯನ್ನು ತೆಗೆದು ಆಕೆಗೆ ಸ್ಮಾರಕ ವಸ್ತುವಾಗಿ ಕೊಟ್ಟೆ. ಆ ತೋಪುಖಾನೆಯಲ್ಲಿದ್ದ ಐವತ್ತು ಗುಂಡುಗಳಲ್ಲಿ ನಾನು ಲಾಡೆನ್‌ನತ್ತ ಹಾರಿಸಿದ್ದ ಮೂರು ಗುಂಡುಗಳ ಹೊರತಾಗಿ ಇನ್ನೂ 47 ಗುಂಡುಗಳಿದ್ದವು. ಆಕೆಯನ್ನು ನಾನು ನೋಡಿದ್ದ ಅದೇ ಕೊನೆಯ ಬಾರಿಗೆ.

ಅಲ್ಲಿಂದ ನಾವು ಲಾಡೆನ್ ಶವದೊಂದಿಗೆ ಬಾಗ್ರಮ್ ವಿಮಾನ ನಿಲ್ದಾಣಕ್ಕೆ ಹೋದೆವು. ನಾನು ಲಾಡೆನ್‌ನ ಶವದ ಪಕ್ಕ ನಿಂತು ತಿಂಡಿ ತಿನ್ನುತ್ತಾ ಟಿವಿ ಪರದೆಯ ಮೇಲೆ ಅಧ್ಯಕ್ಷ ಒಬಾಮ ನಮ್ಮ ಕಾರ್ಯಾಚರಣೆ ಬಗ್ಗೆ ವಿಶ್ವಕ್ಕೆ ಘೋಷಿಸುತ್ತಿರುವ ದೃಶ್ಯಗಳನ್ನು ನೋಡುತ್ತಿರುವಾಗಲೇ ನಾವು ಯಶಸ್ವಿಯಾಗಿದ್ದು ನನಗೆ ಮನದಟ್ಟಾಯಿತು. ನಾನು ಅವನ ಶವನ್ನು ನೋಡುತ್ತಾ ತಿಂಡಿಯನ್ನು ತಿನ್ನುತ್ತಾ ಅಧ್ಯಕ್ಷರ ಭಾಷಣವನ್ನು ವೀಕ್ಷಿಸುತ್ತಾ "ನಾನು ಇಲ್ಲಿಯತನಕ ಬಂದದ್ದು ಹೇಗೆ?" ಎಂದು ನನ್ನನ್ನೇ ಪ್ರಶ್ನಿಸಿಕೊಳ್ಳಲಾರಂಭಿಸಿದೆ.

ಇವತ್ತಿಗೂ ನಾನು ಅಂದು ಮಾಡಿದ್ದು ಸರಿಯೋ ತಪ್ಪೋ ಎಂಬ ಗೊಂದಲ ನನ್ನನ್ನು ಕಾಡುತ್ತದೆ. ಒಂದು ನಿಟ್ಟಿನಲ್ಲಿ ನಾನು ನನ್ನ ದೇಶಕ್ಕೆ ಸೇವೆ ಸಲ್ಲಿಸಿದ್ದೇನೆ. ಇನ್ನೊಂದು ನಿಟ್ಟಿನಲ್ಲಿ ಅವರ ಪ್ರವಾದಿಯಂತಿದ್ದ ಮನುಷ್ಯನನ್ನು ಕೊಂದು ಹಾಕಿದ್ದೇನೆ. ಇತ್ತೀಚಿನ ದಿನಗಳಲ್ಲಿ ಅಲ್ ಕೈದಾ ಶೇಕಡ 99 ಭಾಗ ಬಡಾಯಿ ಕೊಚ್ಚಿಕೊಳ್ಳುತ್ತಿದೆ ಎಂಬುದು ನಿಜವಾದರೂ ಅದು ಕೇವಲ ಒಂದು ಪರ್‌ಸೆಂಟ್‌ನಷ್ಟು



ಎಸಗುವ ಅನಾಹುತಕಾರಿ ದಾಳಿಗಳನ್ನು ನಿರ್ಲಕ್ಷಿಸಲಾಗುವುದಿಲ್ಲ.

ತಮಾಷೆಯ ಸಂಗತಿ ಯಾವುದೆಂದರೆ ನಮ್ಮ ಕಾರ್ಯಾಚರಣೆ ಕುರಿತಂತೆ ಅಲ್ ಕೈದಾ ಕಾರ್ಯಕರ್ತರು ನಡೆಸಿದ ಸಂಭಾಷಣೆಯನ್ನು ಕೇಳಿಸಿಕೊಂಡೆವು. ಅವರಲ್ಲಿ ಒಬ್ಬ "ಲಾಡೆನ್ ಬಗ್ಗೆ ಮಾಹಿತಿ ಕೊಟ್ಟವರು ಯಾರೆಂದು ಪತ್ತೆ ಹಚ್ಚಬೇಕಿದೆ" ಎಂದಾಗ ಇನ್ನೊಬ್ಬ "ಮೂವರು ಹೆಂಡತಿಯರೊಂದಿಗೆ ಅಲ್ಲಿ ಬಂಧಿತನಾಗಿದ್ದ ಲಾಡೆನ್ ಸ್ವತಃ ಮಾಹಿತಿ ನೀಡಿರಲಿಕ್ಕೂ ಸಾಕು" ಎಂದ. ಭಯೋತ್ಪಾದಕರಿಗೂ ಹಾಸ್ಯಪ್ರಜ್ಞೆ ಇದೆ ಎಂದು ನನಗೆ ಗೊತ್ತಾಗಿದ್ದು ಆಗಲೇ.

ನಾವಿದ್ದ ಹೆಲಿಕಾಪ್ಟರ್ ಜಲಾಲಾಬಾದಿನಲ್ಲಿ ಇಳಿದಾಗ ಅಲ್ಲಿದ್ದ ಎಲ್ಲರೂ ನನ್ನನ್ನು ಅಪ್ಪಿಕೊಂಡರು. ಮಾಕ್ ರಾವೆನ್ ಅವರು ಹೆಮ್ಮೆಯ ತಂದೆಯಂತೆ ನನ್ನನ್ನು ಆಲಂಗಿಸಿದರು. ಆನಂತರ ಅಧ್ಯಕ್ಷ ಒಬಾಮಾ ಅವರ ಸರ್ಕಾರದ ಅಧಿಕಾರಿಯೊಬ್ಬ ಬಂದು "ನಿಮ್ಮಲ್ಲಿ ಲಾಡೆನ್‌ನನ್ನು ಬಲಿ ತೆಗೆದುಕೊಂಡವರು ಯಾರು?" ಎಂದು ಕೇಳಿದಾದ ನಾನು "ನಾವೆಲ್ಲರೂ" ಎಂದು ಉತ್ತರಿಸಿದೆ.

ಈಗ ನಾನು ನಿವೃತ್ತಿ ಹೊಂದಿದ್ದೇನೆ. ಆದರೆ ನನಗೆ ಸರಿಯಾದ ಕೆಲಸ ಸಿಗುತ್ತಿಲ್ಲ, ಆದಾಯ ಇಲ್ಲ. ಸೈನ್ಯಕ್ಕಾಗಿ ನಾನು ಭಾಗವಹಿಸಿದ ಕಾರ್ಯಾಚರಣೆಗಳಲ್ಲಿ ನನ್ನ ದೇಹಕ್ಕಾಗಿರುವ ಗಾಯ, ಪೆಟ್ಟುಗಳಿಗೆ ಚಿಕಿತ್ಸೆ ಪಡೆಯಲೂ ನನ್ನಲ್ಲಿ ಹಣವಿಲ್ಲ. ನಾನು ಲಾಡೆನ್‌ನನ್ನು ಕೊಂದು ಹಾಕಿದ್ದರಿಂದ ನನ್ನ ಹೆಸರನ್ನೂ ಬಹಿರಂಗಪಡಿಸುವಂತಿಲ್ಲ. ಯಾವ ಕ್ಷಣದಲ್ಲಾದರೂ ನನ್ನ ಮತ್ತು ನಮ್ಮ ಸಂಸಾರದ ಮೇಲೆ ಮಾರಣಾಂತಿಕ ದಾಳಿ ಆಗಬಹುದು ಎಂಬ ಭೀತಿ ನನ್ನನ್ನು ಪ್ರತಿ ನಿಮಿಷ ಕಾಡುತ್ತದೆ.

ಹದಿನಾರು ವರ್ಷಗಳ ಕಾಲ ನಾನು ನಮ್ಮ ಸೈನ್ಯಕ್ಕಾಗಿ ಪ್ರಾಣದ ಹಂಗನ್ನೂ ತೊರೆದು ಕೆಲಸಮಾಡಿದೆ. ಜಗತ್ತಿಗೆ ಬೇಕಾಗಿದ್ದ ಭಯೋತ್ಪಾದಕ ಲಾಡೆನ್‌ನನ್ನೇ ಮುಗಿಸಿದೆ. ಆದರೆ ಇವತ್ತು ಅತ್ತ ಕೆಲಸವೂ ಇಲ್ಲ, ಇತ್ತ ಭದ್ರತೆಯೂ ಇಲ್ಲದಂತಹ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದೇನೆ. ನನ್ನ ಸರ್ಕಾರ ನನಗೆ ಯಾವ ಸಹಾಯವನ್ನೂ ಮಾಡುತ್ತಿಲ್ಲವಾದ್ದರಿಂದ ಬೇಸರಗೊಂಡಿದ್ದೇನೆ...

● ಭಾವಾನುವಾದ: ಸಾವಂತಿ


...ಬ್ಬ ಜಿಲ್ಲಾಧಿಕಾರಿಯ ಆತ್ಮನಿವೇದನೆ!

...ಜಿಲ್ಲಾಧಿಕಾರಿ ಇತರರಂತಿರಲಿಲ್ಲ. ಜಿಲ್ಲಾಧಿಕಾರಿಯ ...ಹಮ್ಮು ಬಿಮ್ಮು ಇರಲಿಲ್ಲ. ಜನಸಾಮಾನ್ಯರನ್ನೂ ...ರೇ' ಎಂದೇ ಸಂಬೋಧಿಸುತ್ತಿದ್ದರು. ಕೆಳಗಿನ ...ಗಳನ್ನು ಸ್ನೇಹಿತರಂತೆ ನೋಡುತ್ತಿದ್ದರು. ಕಡತಗಳು ...ಗ ಯಾವುದೇ ಕಿರಿಕಿರಿ ಮಾಡದೇ ಕೂಡಲೇ ...ಕಳುಹಿಸುತ್ತಿದ್ದರು. ಅವರ ಕಚೇರಿಯ ಮುಂದೆ ...ಂಗಳೂರಿನ ಮಾರ್ನಿಂಗ್ ಮಿಸ್ಟ್ ಹೋಮ್ ...ಣದ ವಿಷಯ ಇಟ್ಟುಕೊಂಡು ಕೋಮುವಾದಿಗಳ ...ಪ್ರತಿಭಟನೆ ಮಾಡುತ್ತಿದ್ದ ಸಮಯದಲ್ಲಿ ನಮ್ಮಿಂದ ...ಸ್ವೀಕರಿಸಲು ಬಂದ ಈ ಜಿಲ್ಲಾಧಿಕಾರಿ "ಆ ...ಕ್ಕಳ ಮೇಲೆ ದಾಳಿ ಮಾಡಿದ್ರಲ್ಲ ಅವರು ...ರೇನ್ರೀ. ನೀವು ಪ್ರತಿಭಟನೆ ಮಾಡುವುದು ...?" ಎಂದು ಸಹಮತ ವ್ಯಕ್ತಪಡಿಸಿದ್ದರು.

...ಚಿನ ಒಂದು ಸರ್ಕಾರಿ ಕಾರ್ಯಕ್ರಮದಲ್ಲಿ ಭ್ರಷ್ಟ ...ರಿಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡು ... ಭರ್ಜರಿ ಚಪ್ಪಾಳೆ ಗಿಟ್ಟಿಸಿದ್ದರು.

...ಮೊಗ್ಗಕ್ಕೆ ಬಂದ ವರ್ಷದೊಳಗೆ ಯಡಿಯೂರಪ್ಪ ...ಈಶ್ವರಪ್ಪ ನಡುವಿನ ರಾಜಕೀಯ ಕಾದಾಟಕ್ಕೆ ...ವಾಗಿ ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ...ವಾಗಿ ಬೆಂಗಳೂರಿಗೆ ವರ್ಗವಾಗಿ ಹೋದ ...ವೇದಮೂರ್ತಿ ಅವರೇ ಈ ಜಿಲ್ಲಾಧಿಕಾರಿ. ...ಯೂರಪ್ಪನವರ ಶಿಫಾರಸ್ಸಿನ ಮೇಲೆ ಇಲ್ಲಿಗೆ ಬಂದ ...ಮೂರ್ತಿಗಳನ್ನು ಯಡಿಯೂರಪ್ಪ ಬಿಜೆಪಿಯಿಂದ ...ದ್ದ ಕೂಡಲೇ ಎತ್ತಂಗಡಿ ಮಾಡುವ ಪ್ರಯತ್ನ ...ಯಿತು. ಪ್ರಮುಖ ಮಠಾಧೀಶರು ಜಗದೀಶ ...ಮೇಲೆ ಪ್ರಭಾವ ಬೀರಿ ಈ ಜಿಲ್ಲಾಧಿಕಾರಿಗಳನ್ನು ...ಉಳಿಸಿಕೊಳ್ಳಲು ಪ್ರಯತ್ನಿಸಿದರೂ ಈಶ್ವರಪ್ಪನವರ ...ಮುಂದೆ ಅದು ಸಾಧ್ಯವಾಗಲಿಲ್ಲ.

...ರೀಕರಣ ಯೋಜನೆ ಸಮರ್ಪಕವಾಗಿ ...ಗೊಳ್ಳದಿರುವುದರಿಂದ 60 ಲಕ್ಷ ರೂಪಾಯಿಗಳ ...ದ ಬಿಡುಗಡೆಗೆ ಹಾಗೂ ಟೆಂಡರ್ ಕರೆಯದೆ ...ರೆ ಕೋಟಿ ರೂಪಾಯಿಗಳ ಎಲ್‌ಇಡಿ ಲೈಟ್ ... ಜಿಲ್ಲಾಧಿಕಾರಿ ತಡೆ ಹಾಕಿದ್ದೇ ಅವರನ್ನು ಈಶ್ವರಪ್ಪ



ವರ್ಗ ಮಾಡಿಸಲು ಕಾರಣವೆಂದು ಹೇಳಲಾಗುತ್ತಿದೆ.

ತಮ್ಮ ಅಧಿಕಾರದ ಕೊನೆಯ ದಿನದಂದು ಕರೆದ ಪತ್ರಿಕಾಗೋಷ್ಠಿಯಲ್ಲಿ ವೇದಮೂರ್ತಿಗಳು ತಾವು ತಮ್ಮ ಅಧಿಕಾರಾವಧಿಯಲ್ಲಿ 35-40 ಉತ್ತಮ ಕೆಲಸಗಳನ್ನು ಮಾಡಿದ್ದು ಜಿಲ್ಲೆಯ 1.60 ಲಕ್ಷ ಎಕರೆ ಅರಣ್ಯ ಭೂಮಿಯನ್ನು ಸಂರಕ್ಷಿಸಲಾಗಿದೆ- ಮತದಾರರ ಚೀಟಿ ವಿತರಣೆಯಲ್ಲಿ 99% ಪ್ರಗತಿ ಸಾಧಿಸಲಾಗಿದೆ, ಅಗಸವಳ್ಳಿಯಲ್ಲಿ 8 ಎಕರೆ ಕಂದಾಯ ಭೂಮಿ ಒತ್ತುವರಿ ಆಗಿದ್ದನ್ನು ತೆರವುಗೊಳಿಸಲಾಗಿದೆ .. ಹೀಗೆ ಜಿಲ್ಲೆಯಲ್ಲಿ ತಾವು ಮಾಡಿದ ಸಾಧನೆಗಳ ಪಟ್ಟಿ ಮಾಡಿದ್ದಾರೆ. ಯಡಿಯೂರಪ್ಪನವರ ಅವಧಿಯಲ್ಲಿ ಜಿಲ್ಲೆಗೆ ಯಥೇಚ್ಛ ಅನುದಾನ ಬರುತ್ತಿದ್ದು ಅವರು ಬಿಜೆಪಿಯನ್ನು ತೊರೆದ ನಂತರ ಯಾವ ಅನುದಾನವೂ ಬರುತ್ತಿಲ್ಲ ಎಂದು ಅಲವತ್ತುಕೊಂಡಿದ್ದಾರೆ. ಕೊನೆಗೆ ತಮ್ಮ ವರ್ಗಾವಣೆ ಕುರಿತು ಪತ್ರಕರ್ತರೊಬ್ಬರು ಪ್ರಶ್ನಿಸಿದಾಗ ಭಾವುಕರಾಗಿ ಅತ್ತಿದ್ದಾರೆ.

ವೇದಮೂರ್ತಿಗಳ ಕುರಿತು ಜನರಲ್ಲಿ ಒಂದಷ್ಟು ಅನುಕಂಪ ವ್ಯಕ್ತವಾಗಿದೆ. ಕೆಜೆಪಿ ಪಕ್ಷ ಡಿ.ಸಿ ವರ್ಗಾವಣೆಯನ್ನು ಸಹಜವಾಗಿಯೇ ಪ್ರತಿಭಟಿಸಿದೆ. ದಲಿತ ಸಂಘರ್ಷ ಸಮಿತಿಯ ಒಂದು ಬಣ ದೊಡ್ಡ ಸಂಖ್ಯೆಯ ಜನರನ್ನು ಸೇರಿಸಿ ತಮಟೆ ಚಳವಳಿಯನ್ನೇ ಮಾಡಿದೆ. ಇನ್ನೊಂದಿಷ್ಟು ಹೋರಾಟಗಾರರು ಪ್ರತಿಭಟನೆ ನಡೆಸಿದ ಮಾರನೇ ಬೆಳಗ್ಗೆಯೇ ಜಿಲ್ಲಾಧಿಕಾರಿಯವರ ಮನೆಮುಂದೆ ತಮ್ಮ ಫೈಲುಗಳನ್ನು ಹಿಡಿದು ನಿಂತಿದ್ದು ನೋಡಿದವರಿದ್ದಾರೆ.

ಇಂತಹ 'ಜನಪರ' ಜಿಲ್ಲಾಧಿಕಾರಿಯವರ ಅಧಿಕಾರಾವಧಿಯ ಒಂದೆರಡು ಘಟನೆಗಳು ಬೇಡವೆಂದರೂ ನೆನಪಾಗುತ್ತಿವೆ.

ಯಡಿಯೂರಪ್ಪ-ಹಾಲಪ್ಪ ಜೋಡಿಯ ರಾಜಕೀಯ ಹಿತಾಸಕ್ತಿಗಾಗಿ ಮತ್ತೆ ಜೀವ ಕೊಡಲಾದ ದಂಡಾವತಿ ನೀರಾವರಿ ಯೋಜನೆಯ ವಿರೋಧಿ ಹೋರಾಟಗಾರರು ಸಾಗರದ ಉಪವಿಭಾಗಾಧಿಕಾರಿಗಳ ಕಚೇರಿಯ ಮುಂದೆ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದರು. ಜನಶಕ್ತಿ ನೋಡಿ ಆದುರಿದ ಜಿಲ್ಲಾಧಿಕಾರಿಗಳು ಮುಖ್ಯಮಂತ್ರಿಗಳ ಸಮ್ಮುಖ ಮುಖಾಮುಖಿ ಚರ್ಚೆಗೆ ಅವಕಾಶ ಕಲ್ಪಿಸಿದ ನಂತರವೇ ಯೋಜನೆಗೆ ಸಂಬಂಧಪಟ್ಟಂತೆ ಮುಂದುವರೆಯುವುದಾಗಿ ಭರವಸೆ ನೀಡಿದರು. ಹೋರಾಟಗಾರರು ಲಿಖಿತವಾಗಿ ಅದನ್ನು ಬರೆದುಕೊಡುವಂತೆ ಕೇಳಿದಾಗ "ನನ್ನ ಮೇಲೆ ನಿಮಗೆ ನಂಬಿಕೆಯಿಲ್ಲವೇ?" ಎಂದು ಭಾವನಾತ್ಮಕವಾಗಿ ಮಾತನಾಡಿದ್ದರು. ಹೀಗೆ ಭರವಸೆ ನೀಡಿದ ಕೆಲವು ಸಮಯದಲ್ಲಿಯೇ ಏಕಾಏಕಿ ಪೊಲೀಸ್ ದಂಡಿನೊಂದಿಗೆ ಉಪವಿಭಾಗಾಧಿಕಾರಿಗಳ ನೇತೃತ್ವದಲ್ಲಿ ಸರ್ವೆಯರ್‌ಗಳನ್ನು ಯೋಜನಾ ಪ್ರದೇಶಕ್ಕೆ ಕಳಿಸಿದರು. ಅಂದು ಉಪವಿಭಾಗಾಧಿಕಾರಿಗಳಿಗೆ ಹೋರಾಟನಿರತ ಮಹಿಳೆಯರಿಂದ ಪೊರಕೆಸೇವೆ ನಡೆಯಿತು. ಜಿಲ್ಲಾಧಿಕಾರಿಗಳು ತಮ್ಮ ದಂಡನ್ನು ವಾಪಾಸು ಕರೆಸಿಕೊಳ್ಳುವುದು ಅನಿವಾರ್ಯವಾಯಿತು.

ವೇದಮೂರ್ತಿಯವರ ಆದೇಶದ ಪ್ರಕಾರವೇ ಯಡಿಯೂರಪ್ಪನವರ ಪೆಸಿಟ್ ಕಾಲೇಜಿನ ಮುಂದಿನ ಮಣಿ ಎಂಬ ಬಡವನ ಗುಡಿಸಲನ್ನು ಕಾಲೇಜಿನ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ಒಂದು ಭಾನುವಾರದ ನಸುಕಿನಲ್ಲಿ ಇನ್ನೂ ಕತ್ತಲಿರುವಾಗಲೇ ನೆಲಸಮ ಮಾಡಲಾಯಿತು.

ಯಡಿಯೂರಪ್ಪನವರ ರಾಯಲ್ ಆರ್ಕಿಡ್ ಹೋಟೆಲ್ ನಗರಸಭೆಗೆ ಲಕ್ಷಾಂತರ ರೂಪಾಯಿ ತೆರಿಗೆ ವಂಚಿಸಿದಾಗ, ಇದೇ ಹೋಟೆಲಿನಲ್ಲಿ ಇಬ್ಬರು ಕಾರ್ಮಿಕರು ಮಲದ ಗುಂಡಿಯಲ್ಲಿ ಬಿದ್ದು ಸತ್ತಾಗ, ಯಡಿಯೂರಪ್ಪ ಮತ್ತು ಈಶ್ವರಪ್ಪ ಜೋಡಿ ಸಾರ್ವಜನಿಕ ನೆಲವನ್ನು ಹಗಲುದರೋಡೆ ಮಾಡುತ್ತಿದ್ದಾಗ ವೇದಮೂರ್ತಿಗಳು ಅಖಂಡ ಧ್ಯಾನದ ಮೊರೆ ಹೋಗಿದ್ದರು.

ಮೇಲಿನ ವಿಚಾರಗಳ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಅಳು ಮತ್ತು ಭಾವುಕ ಮಾತುಗಳು ವಿಶ್ವಾಸಾರ್ಹ ಅನಿಸುತ್ತಿಲ್ಲ. ಒಬ್ಬ ರಾಜಕಾರಣಿಯ 'ಸಾಧನೆ'ಗೂ ಹಾಗೂ ಒಬ್ಬ ಸರ್ಕಾರಿ ಅಧಿಕಾರಿಯ 'ಕರ್ತವ್ಯ'ಕ್ಕೂ ನಡುವಿನ ವ್ಯತ್ಯಾಸ ಪತ್ರಿಕಾಗೋಷ್ಠಿಯಲ್ಲಿ ತಾವು ಮಾಡಿದ ಕೆಲಸಗಳನ್ನು ಪಟ್ಟಿ ಮಾಡಿದ ವೇದಮೂರ್ತಿಗಳಿಗೆ ತಿಳಿಯದಿರುವುದು ಸೋಜಿಗ ತರಿಸುತ್ತಿದೆ.

ಆದರೂ ಬೇರೆ ಜಿಲ್ಲಾಧಿಕಾರಿಗಳಿಗೆ ಹೋಲಿಸಿದರೆ ಮನುಷ್ಯರಂತೆ ವರ್ತಿಸುತ್ತಿದ್ದ ವೇದಮೂರ್ತಿಗಳ ವರ್ಗಾವಣೆ ಜನರ ಬೇಸರಕ್ಕೆ ಕಾರಣವಾಗಿರುವುದಂತೂ ಸತ್ಯ.

● ಸರ್ಜಾಶಂಕರ ಹರಳಿಮಠ

...ರಾವಳಿ ಅಲೆ ಪತ್ರಿಕೆಯ ಕೊಲೆಗೆ ಸ್ಕೆಚ್ ಹಾಕಿರುವ ಚೆಡ್ಡಿ ಪರಿವಾರ...!

...ಂಗಳೂರಿನಲ್ಲಿ ಪತ್ರಿಕಾ ಸ್ವಾತಂತ್ರ್ಯವು ಚೆಡ್ಡಿಗಳ ...ಯೊಳಗೆ ಸಿಲುಕಿ ನಜ್ಜುಗುಜ್ಜಾಗಿರುವುದು ಹೊಸ ...ಗೆಯೇನಲ್ಲ. ಆ ನಿಟ್ಟಿನಲ್ಲಿ ಕಳೆದ ಐದಾರು ...ಂದ ನಿರಂತರ ಹೊಡೆತ ತಿನ್ನುತ್ತಾ ಬಂದ ದಾಖಲೆ ... ಅಲೆ ಪತ್ರಿಕೆಯ ಬೆನ್ನಿಗಿದೆ. ಹೋಂ ಸ್ಟೇ ...ನ್ನು ಜಗಜ್ಜಾಹೀರುಗೊಳಿಸಿ ಹಿಂದೂತ್ವವಾದಿಗಳ ...ರಾಜು ಹಾಕಿದ ನವೀನ್ ಸೂರಿಂಜೆ ಪ್ರಕರಣದ ...ವರಿದ ಭಾಗವಾಗಿ ಇದೀಗ ಕರಾವಳಿ ಅಲೆ ... ಇಬ್ಬರು ಸಿಬ್ಬಂದಿ ಗಳಿಗೆ ಪ್ರಭುತ್ವ ಪೋಷಿತ ...ಗಳು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಇದರ ...ಡ್ಡಿ ಪರಿವಾರದ ಯೋಜನಾಬದ್ಧ ಕಾರ್ಯಾಚರಣೆ ...ದು ಈಗಾಗಲೇ ಸ್ಪಷ್ಟವಾಗಿದೆ. ಕರಾವಳಿ ಪ್ರದೇಶದಲ್ಲಿ ...ಮೇಜನ್ನು ಸರಿಪಡಿಸಲಾಗದಷ್ಟು ಡ್ಯಾಮೇಜ್ ...ಂಡಿರುವ ಬಿ.ಜೆ.ಪಿ. ಮತ್ತದರ ಪರಿವಾರಕ್ಕೆ ...ಣೆ ಹತ್ತಿರ ಬರುತ್ತಲೇ ಸೋಲಿನ ವಾಸನೆ ...ತ್ತಿದೆ. ಈ ನಿಟ್ಟಿನಲ್ಲಿ ಕರಾವಳಿ ಅಲೆಯ ...ಸ್ಥೈರ್ಯವನ್ನು ಕುಗ್ಗಿಸುವ ನಿಟ್ಟಿನಲ್ಲಿ ಕರಾವಳಿ ಅಲೆ ... ಇಬ್ಬರು ನಿಷ್ಠಾವಂತ ಮತ್ತು ಪ್ರಾಮಾಣಿಕ ...ರ ಮೇಲೆ ಚೆಡ್ಡಿ ಪರಿವಾರ ಮುಗಿಬಿದ್ದಿದೆ.

...ನ್ನೂ ನಡೆದದ್ದೇನು...?

...ಚೆಗೆ ಮಂಗಳೂರಿನ ಪ್ರತಿಷ್ಠಿತ ಕಾಲೇಜೊಂದರ ...ನಿ ಸ್ನೇಹಾ ಎಂಬಾಕೆ ... ವ್ಯಸನಕ್ಕೆ ಬಲಿಬಿದ್ದು ತನ್ನ ...ನ್ನು ಅಂತ್ಯಗೊಳಿಸಿದ್ದಾಳೆ. ...ವಾರದೊಳಗಾಗಿ ಹಿಂದೂ ... ವೇದಿಕೆಯ ಕುಖ್ಯಾತ ...ರ್ ಸತ್ಯಜಿತ್ ಸುರತ್ಕಲ್ ...ಮಾಜಿ ಮೇಯರ್ ರಜನಿ ... ಪುತ್ರರತ್ನ ರೌಡಿ ಸತೀಶ್ ಮುಂಚೂರು ಎಂಬಾತನ ... ಕೇಶವ ಸುಲ್ ಗಾಂಜಾ ಮಾರಾಟ ಮಾಡುತ್ತಿದ್ದಾಗ ...ರ ಕೈಗೆ ಸಿಕ್ಕಿಬಿದ್ದಿದ್ದಾನೆ. (ಆತ ತಪ್ಪಿಸಿಕೊಂಡರೂ ...ಮಾಲು ಮತ್ತು ಒಮ್ನಿಯನ್ನು ಪೊಲೀಸರು ಸೀಜ್ ...ದ್ದಾರೆ) ಈ ಕುರಿತಂತೆ ಎಲ್ಲಾ ಪತ್ರಿಕೆಗಳು ವರದಿ ...ರೂ ಕರಾವಳಿ ಅಲೆ ಸ್ವಲ್ಪ ಮುಂದೆ ಹೋಗಿ ತನ್ನ ... ಡೇರ್ ಡೆವಿಲ್ ಶೈಲಿಯಲ್ಲಿ ಕೇಶವ ಸುಲ್‌ನ ...ನ್ನು ಕೆದಕುತ್ತಾ ಹೋಯಿತು. ಆತ ಸತ್ಯಜಿತ್ ... ಮತ್ತು ಸತೀಶ್ ಮುಂಚೂರರ ಪರಮಾಪ್ತ

ಬಂಟನೆಂದೂ, ಹಿಂಜಾವೇಯ ಸಕ್ರಿಯ ಕಾರ್ಯಕರ್ತನೆಂದೂ ಕರಾವಳಿ ಅಲೆ ಯಾವ ಮುಲಾಜೂ ಇಲ್ಲದೇ ತನಿಖಾ ವರದಿ ಪ್ರಕಟಿಸಿತು.


ಕುಖ್ಯಾತ ಹೋಂ ಸ್ಟೇ ಪ್ರಕರಣದಿಂದಾಗಿ ಸಾಫ್ಟ್ ಹಿಂದೂತ್ವವಾದಿಗಳಿಂದಲೂ ಬೈಸಿಕೊಂಡಿದ್ದ ಹಿಂಜಾವೇಯ ಸಂಸ್ಕೃತಿ ರಕ್ಷಕರಿಗೆ ತಮ್ಮ ಡ್ರಗ್ ಮಾಫಿಯಾದಂತಹ ಪರಮ ನೈತಿಕ ದಂಧೆಯ ಒಳಹೂರಣ ಬಯಲಾದುದು ಅತೀವ ಸಿಟ್ಟು ತರಿಸಿತು. ಕರಾವಳಿ ಅಲೆ ಅಷ್ಟಕ್ಕೇ ಸುಮ್ಮನಾಗಲಿಲ್ಲ, ಇಷ್ಟರವರೆಗೆ ಎಲ್ಲಾ ಹರಾಮಿ ದಂಧೆಗೂ ಮುಸ್ಲಿಮರನ್ನೇ ರೂಪಕವಾಗಿ ಬಳಸುವ ಹಿಂದೂತ್ವವಾದಿಗಳ ಪರಿಗೆ ಕರಾವಳಿ ಅಲೆಯ ಸರಣಿ ವರದಿಗಳು ಸೆಡ್ಡು ಹೊಡೆಯಿತು. ಇದರ ಪರಿಣಾಮ ಬೆನ್ನುಬೆನ್ನಿಗೆ ಇಬ್ಬರು ಕರಾವಳಿ ಅಲೆ ಸಿಬ್ಬಂದಿಗಳ ಮೇಲೆ ಮಾರಣಾಂತಿಕ ಹಲ್ಲೆಯಾಯಿತು. ಈ ಹಲ್ಲೆಗಳ ಹಿಂದೆ ನಮಗೆ ಗೋಚರಿಸುವ ತಕ್ಷಣದ ಕಾರಣ ಡ್ರಗ್ ಮಾಫಿಯಾದ ವರದಿಯ ಮೇಲಿನ ದ್ವೇಷವಾದರೂ ದೂರಗಾಮಿ ಕಾರಣ ಸನ್ನಿಹಿತವಾಗುತ್ತಿರುವ ಚುನಾವಣೆ.

ಈ ಹಿಂದೆ ಬಂಟ್ವಾಳದ ರಮಾನಾಥ ರೈಯ ಸೋಲಿಗೆ ಪ್ರಮುಖ ಕಾರಣವಾಗಿದ್ದ ಕರಾವಳಿ ಅಲೆ ಆ ಬಳಿಕದ

ಕರಾವಳಿ ಅಲೆ

ಚುನಾವಣೆಯಲ್ಲಿ ಕರಾವಳಿಯ ಮೋದಿ ಎಂದೇ ಕುಖ್ಯಾತನಾಗಿದ್ದ ನಾಗರಾಜ್ ಶೆಟ್ಟಿಯ ಸೋಲಿನಲ್ಲೂ ಪ್ರಮುಖ ಪಾತ್ರ ವಹಿಸಿತ್ತು, ಈ ಬಾರಿ ಕರಾವಳಿಯಲ್ಲಿ ಬಿ.ಜೆ.ಪಿ.ಯನ್ನು ಇಲ್ಲವಾಗಿಸುವ ನಿಟ್ಟಿನಲ್ಲಿ ಸಂಘ ಪರಿವಾರ ಮತ್ತು ಅದರ ಕೃಪಾಪೋಷಿತ ಹಿಂದೂ ಗೂಂಡಾಗಳ ನೈತಿಕ ಅರ್ಹತೆಯನ್ನು ನಿರಂತರ ಎಕ್ಸ್‌ಪೋಸ್ ಮಾಡುತ್ತಿರುವ ಕರಾವಳಿ ಅಲೆ ಬಿ.ಜೆ.ಪಿ. ಮತ್ತದರ ಪರಿವಾರಕ್ಕೆ ಕಾಂಗ್ರೆಸ್‌ಗಿಂತಲೂ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಇಂತಹ ಕರಾವಳಿ ಅಲೆಯನ್ನು ನಿವಾರಿಸಲು

ಚೆಡ್ಡಿ ಬಳಗ ಈ ಹಿಂದೆಯೂ ನೂರೆಂಟು ಯೋಜನೆಗಳನ್ನು ಹಾಕಿ ಕಾರ್ಯಗತಗೊಳಿಸಿದ್ದೂ ಆಗಿದೆ. ಪರಮ ಹಠವಾದಿಯಾದ ಕರಾವಳಿ ಅಲೆಯ ಬಿ.ವಿ. ಸೀತಾರಾಂ ಚೆಡ್ಡಿ ಪಡೆಯ ಯಾವ ಹೊಡೆತಕ್ಕೂ, ಬಡಿತಕ್ಕೂ ಬಗ್ಗದೇ, ಜಗ್ಗದೇ ಮತ್ತೆ ಮತ್ತೆ ಅವರ ಹುತ್ತಕ್ಕೆ ಕೈ ಹಾಕಿ ಸಮಾಜ



ಹಲ್ಲೆಗೊಳಗಾದ ಹರೀಶ್...

ಘಾತುಕ ವಿಷಜಂತುಗಳನ್ನು ಎಕ್ಸ್‌ಪೋಸ್ ಮಾಡುತ್ತಲೇ ಬಂದಿದ್ದಾರೆ. ಬಿ.ವಿ. ಸೀತಾರಾಂರ ಈ ರೀತಿಯ ಬರಹಗಳು ಚುನಾವಣೆ ಸನ್ನಿಹಿತವಾಗಿರುವ ಕಾಲದಲ್ಲಿ ಚೆಡ್ಡಿ ಪರಿವಾರಕ್ಕೆ ದೊಡ್ಡ ಡ್ಯಾಮೇಜ್ ಮಾಡುತ್ತದೆ ಎಂಬುವುದು ಖಚಿತ.

ಈ ಹಿಂದೆಯೂ ಅನೇಕ ಬಾರಿ ಮಾಡಿರುವಂತೆ ಈ ಬಾರಿಯೂ ಪತ್ರಿಕೆ ಜನರ ಕೈಗೆ ಸಿಗದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಮಂಗಳೂರು ನಗರದಲ್ಲಿ ಯಾವ ಏಜೆಂಟನೂ ಕರಾವಳಿ ಅಲೆ ಮಾರದಂತೆ ಸಂಘ ಪರಿವಾರ ಅನಧಿಕೃತ ಫತ್ವಾ ಹೊರಡಿಸಿದೆ. ಒಂದು ವೇಳೆ ಫತ್ವಾವನ್ನು ಮೀರಿ ಯಾರಾದರೂ ಕರಾವಳಿ ಅಲೆ ಮಾರುವ ಧೈರ್ಯ ಮಾಡಿದರೆ ಆತ ತನ್ನ ಕೈಕಾಲು ಮುಖ ಮೂತಿ ಮುರಿಸಿಕೊಳ್ಳಲು ಸಿದ್ಧನಿರಬೇಕು. ಇನ್ನು ನಗರದ ಹೊರವಲಯದ ಪ್ರದೇಶಗಳಿಗೆ ಪತ್ರಿಕೆಗಳನ್ನು ಸಾಗಿಸದಂತೆ ಸಿಟಿ ಸರ್ವೀಸ್ ಬಸ್ ಸಿಬ್ಬಂದಿಗಳಿಗೆ ಸಂಘ ಪರಿವಾರ ಬೆದರಿಕೆ ಹಾಕಿದೆ.

ಇಂತಹ ಪರಿಸ್ಥಿತಿಯಲ್ಲಿ ರಿಸ್ಕ್ ತೆಗೆದುಕೊಂಡು ಪತ್ರಿಕೆಯನ್ನು ಒಯ್ಯುವ ಧೈರ್ಯವನ್ನು ಯಾರೂ ಮಾಡುವುದಿಲ್ಲ, ಸರಿ, ಯಾರ ಸಹಾಯವೂ ಇಲ್ಲದೇ ಪತ್ರಿಕೆಗಳನ್ನು ಸ್ಟಾಲ್‌ಗಳಿಗೆ ತಲುಪಿಸೋಣ ಎಂದರೆ ವಿತರಣೆ ಮಾಡುವ ವಾಹನಗಳನ್ನೇ ತಡೆದು ಸಾಗಾಟಗಾರರಿಗೆ, ವಿತರಕರಿಗೆ ಹೊಡೆದು ಬಡಿದು ಪತ್ರಿಕೆಯ ಬಂಡಲ್‌ಗಳನ್ನೇ ಸಂಘ ಪರಿವಾರದ ಗುಂಡಾಗಳು ಹೊತ್ತೊಯ್ಯುತ್ತಾರೆ. ಇದು ಮಂಗಳೂರಿನ ಚೆಡ್ಡಿ ರಿಪಬ್ಲಿಕ್ ಜನರ ಧ್ವನಿಯನ್ನು ಹತ್ತಿಕ್ಕುತ್ತಿರುವ ವಿಧಾನ.


ಇಂತಹ ಪರಿಸ್ಥಿತಿಯಲ್ಲಿ ಮೇಲೆ ಮೇಲೆ ಪತ್ರಿಕೆಯ ಸಿಬ್ಬಂದಿಗಳು ಹಿಂದೂತ್ವವಾದಿ ಗೂಂಡಾಗಳಿಂದ ಮೂಳೆ ಮುರಿಸಿಕೊಳ್ಳುತ್ತಲೂ ಇದ್ದಾರೆ. ಕರಾವಳಿ ಅಲೆ ಪತ್ರಿಕೆಯಲ್ಲಿ ಕೆಲಸ ಮಾಡಬೇಕಾದರೆ ಕೈಕಾಲು ಮುರಿಸಿಕೊಳ್ಳಲು ಸಿದ್ಧರಿರಬೇಕು ಎಂಬ ಮಾತು ಮಂಗಳೂರಿನಲ್ಲಿ ಕಳೆದ ಐದಾರು ವರ್ಷಗಳಿಂದ ಚಾಲ್ತಿಯಲ್ಲಿದೆ. ಇಷ್ಟಾಗಿಯೂ ಮಂಗಳೂರಿನ ಪೊಲೀಸರು ಇದನ್ನೊಂದು ಸೀರಿಯಸ್ ಇಶ್ಯೂ ಎಂದು ಪರಿಗಣಿಸುವುದಿಲ್ಲ.

ಮೊನ್ನೆ ಕರಾವಳಿ ಅಲೆ ಸಿಬ್ಬಂದಿಗಳ ಮೇಲೆ ಚೆಡ್ಡಿಗಳು ಹಲ್ಲೆ ನಡೆಸಿದಾಗ ಪತ್ರಿಕೆಯ ಪರ ನಿಂತು ಧ್ವನಿಯೆತ್ತಿದ್ದು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮತ್ತು ಪಿ.ಯು.ಸಿ.ಎಲ್. ಮಾತ್ರ. ಇಂತಹ ಸಂದರ್ಭದಲ್ಲಿಯೂ ಮಾಧ್ಯಮ ಸಹೋದ್ಯೋಗಿಗಳ ಬೆಂಬಲ ಏನೇನೂ ಸಿಕ್ಕಿರಲಿಲ್ಲ. ಹಿಂದೂ ಪತ್ರಿಕೆಯ ಹೊರತಾಗಿ ಉಳಿದವರ್‍ಯಾರೂ ಸೀತಾರಾಂರಿಗೆ ನೈತಿಕ ಸ್ಥೈರ್ಯ ತುಂಬುವ ಕೆಲಸ ಮಾಡುತ್ತಿಲ್ಲ. ಈ ಸಂದರ್ಭ ಎರಡನೇ ಜಾಗತಿಕ ಯುದ್ಧ ಕಾಲದ ಜರ್ಮನ್ ಪಾದ್ರಿ ಮಾರ್ಟಿನ್ ನೆಮ್ಯುಲರ್‌ನ ಕವನ (ಮೊದಲು ಅವರು ಯಹೂದಿಗಳನ್ನು ಹುಡುಕಿ ಕೊಂಡು ಬಂದರು...) ಮತ್ತೆ ನೆನಪಾಗುತ್ತಿದೆ.


ಜನಪರ ಪತ್ರಿಕೆಯೊಂದರ ಕತ್ತು ಹಿಸುಕುವ ಕೃತ್ಯ ಮಂಗಳೂರಿನಲ್ಲಿ ಲಾ ಅಂಡ್ ಆರ್ಡರ್ ತಲುಪಿರುವ ಪಾತಾಳ ಸ್ಥಿತಿಯನ್ನು ತೋರಿಸುತ್ತದೆ. ಪ್ರಜಾಪ್ರಭುತ್ವದ ನಾಲ್ಕನೇ ಅಂಗಕ್ಕೆ ಇಂತಹ ದುಸ್ಥಿತಿ ಬಂದಿರುವಾಗ ಜನಸಾಮಾನ್ಯರ ದೂರುದುಮ್ಮಾನಗಳಿಗೆ ಧ್ವನಿಯಾಗುವವರು ಯಾರು? ಮಂಗಳೂರಿನಲ್ಲಿ ಕನಿಷ್ಠ ಕರಾವಳಿ ಅಲೆಯ ಪಾಲಿಗಂತೂ ಕಳೆದ ಕೆಲವು ವರ್ಷಗಳಿಂದ "ಅಘೋಷಿತ ತುರ್ತು ಪರಿಸ್ಥಿತಿ"ಯಿದೆ. ಪ್ರಜಾಪ್ರಭುತ್ವ ಇಲ್ಲಿ ಬಣ್ಣ ತೊಡೆಸಿಕೊಂಡು ಬಿದ್ದಿದೆ...!

● ಇಸ್ಮತ್ ಪಜೀರ್

ಮಕ್ಬೂಲ್ ಬಟ್‌ರಿಂದ ಅಫ್ಜಲ್ ಗುರುವರೆಗೆ ನಮ್ಮ ಕೈಗೂ ಮೆತ್ತಿರುವ ರಕ್ತ



ಅಫ್ಜಲ್ ಗುರುವನ್ನು ನೇಣಿಗೆ ಹಾಕಲಾಯಿತು. ಸಂವೇದನಾಶೀಲ ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಉತ್ತಮವಾದ ಲೇಖನವೊಂದನ್ನು ಬರೆದರು. ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಸಂಪಾದಕೀಯಗಳಲ್ಲಿ ಈ ಹತ್ಯೆಯ ಹಿಂದಿನ ರಾಜಕೀಯವನ್ನು ಟೀಕಿಸಲಾಯಿತು. ವಾರ್ತಾಭಾರತಿ ಪತ್ರಿಕೆ ಇಡೀ ವಿದ್ಯಮಾನದ ಸುತ್ತಲಿನ ಮಹತ್ವದ ಹಲವು ಸಂಗತಿಗಳನ್ನು ನಿರಂತರವಾಗಿ ಬಯಲುಗೊಳಿಸುತ್ತಿದೆ. ಅಷ್ಟರಮಟ್ಟಿಗೆ ಕರ್ನಾಟಕದ ಸಾರ್ವಜನಿಕ ವಲಯವು ಅಫ್ಜಲ್ ಗುರುವಿನ ಹತ್ಯೆಯನ್ನು ಸಂಭ್ರಮದಿಂದ ಸ್ವಾಗತಿಸುವಷ್ಟಕ್ಕೇ ಸೀಮಿತವಾಗಲಿಲ್ಲ.



ಆದರೆ ಕಾಶ್ಮೀರದ ಕುರಿತು, ಅಫ್ಜಲ್ ಗುರು ಮತ್ತು ಆತನಂತಹ ಸಾವಿರಾರು ಕಾಶ್ಮೀರಿ ಯುವಕರು ವಿವಿಧ ಹಿತಾಸಕ್ತಿಗಳ ಕುರಿತು ಈ ದೇಶದ ಎಲ್ಲಾ ಪಕ್ಷಗಳ ಸರ್ಕಾರಗಳು ಬಿತ್ತಿರುವ ಮೂಲಭೂತ ಸುಳ್ಳುಗಳನ್ನು ಜನರ ಮನಸ್ಸಿನಿಂದ ಅಳಿಸುವುದು ಅಷ್ಟು ಸುಲಭವಲ್ಲ. ಈ ಲೇಖನವೂ ಸೇರಿದಂತೆ, ನಮ್ಮ ಪತ್ರಿಕೆಗಳಲ್ಲಿ ಬಂದ ಹಾಗೂ ಬರುತ್ತಿರುವ ಲೇಖನಗಳು ಮಾಡಬಹುದಾದ ಪರಿಣಾಮಕ್ಕಿಂತ, ಎಷ್ಟೋ ಪಟ್ಟು ಆಳವಾಗಿ ಮತ್ತು ವ್ಯಾಪಕವಾಗಿ ಕಾಶ್ಮೀರದ ಕುರಿತ 'ಕಾಮನ್‌ಸೆನ್ಸ್' ಮನೆ ಮಾಡಿದೆ.

ಹಾಗಾಗಿ ಇತಿಹಾಸದಲ್ಲಿ ದಾಖಲಾಗಿರುವ, ಭಾರತದ ಜನಮಾನಸದಲ್ಲಿ ಸ್ಥಾನ ಪಡೆದುಕೊಳ್ಳದ ಕೆಲವು ಸಂಗತಿಗಳನ್ನು 'ಪತ್ರಿಕೆ'ಯ ಓದುಗರ ಮುಂದೆ ಇಡಬೇಕಾಗಿದೆ.

• ಭಾರತ ಹಾಗೂ ಪಾಕಿಸ್ತಾನ ವಿಭಜನೆಯಾದಾಗ ಕಾಶ್ಮೀರದ ಕುರಿತು ತೀರ್ಮಾನ ಆಗಿರಲಿಲ್ಲ; ಅದೊಂದು ಬ್ರಿಟಿಷ್ ಆಶ್ರಿತ ರಾಜಸಂಸ್ಥಾನವೇ ಆಗಿತ್ತು, ಎರಡೂ ಭಾಗಗಳಲ್ಲಿದ್ದ ಇಂತಹ ರಾಜಸಂಸ್ಥಾನಗಳಿಗೆ ಯಾವ ಕಡೆಗೆ ಹೋಗಬೇಕೆಂಬ ಆಯ್ಕೆಯನ್ನು ಬಿಟ್ಟುಬಿಡಲಾಗಿತ್ತು.

• ಸ್ವಾತಂತ್ರ್ಯ ಹೋರಾಟದ ಜೊತೆಗೇ ಕಾಶ್ಮೀರದ ಜನರು ನ್ಯಾಷನಲ್ ಕಾನ್ಫರೆನ್ಸ್‌ನ ನಾಯಕ ಶೇಕ್ ಅಬ್ದುಲ್ಲಾರ ನೇತೃತ್ವದಲ್ಲಿ, ಅಲ್ಲಿನ ಜನವಿರೋಧಿ ರಾಜ ಹರಿಸಿಂಗನ ವಿರುದ್ಧ ಹೋರಾಟ ಮಾಡುತ್ತಿದ್ದರು.

• ಹರಿಸಿಂಗ್‌ನ ಕುಟುಂಬಕ್ಕೆ ಇಡೀ ಕಾಶ್ಮೀರದ ಆಡಳಿತವನ್ನು ಒಪ್ಪಿಸಿದ್ದದ್ದು ಬ್ರಿಟಿಷರು. ಆ ರಾಜಪ್ರಭುತ್ವ ಜನಪೀಡಕವಾಗಿತ್ತು. ಹಾಗಾಗಿ ಅದರ ವಿರುದ್ಧದ ಜನಾಂದೋಲನವನ್ನು ನಡೆಸುತ್ತಿದ್ದ ಶೇಕ್ ಅಬ್ದುಲ್ಲಾ, ಆ ಸಂದರ್ಭದ ಕಾಶ್ಮೀರದ ಅತ್ಯಂತ ಜನಪ್ರಿಯ ನಾಯಕರಾಗಿದ್ದರು.

• ನ್ಯಾಷನಲ್ ಮುಸ್ಲಿಂ ಕಾನ್ಫರೆನ್ಸ್ ಆಗಿದ್ದ ಸಂಘಟನೆಯು ನ್ಯಾಷನಲ್ ಕಾನ್ಫರೆನ್ಸ್ ಆಯಿತು. ಮುಸ್ಲಿಂ ರೈತಾಪಿ ಹಾಗೂ ಹಿಂದೂ ಮಧ್ಯಮವರ್ಗ ಎಲ್ಲಕ್ಕೂ ಇದು ವೇದಿಕೆಯಾಗಿತ್ತು, ಭಾರತ ಅಥವಾ ಪಾಕಿಸ್ತಾನಕ್ಕೆ ಸೇರದೆ ಜಾತ್ಯತೀತವಾದ ಸ್ವತಂತ್ರ ಕಾಶ್ಮೀರ ಇವರ ಬಯಕೆಯಾಗಿತ್ತು.

• ಈ ಹೋರಾಟ ನಡೆಯುತ್ತಿರುವ ಸಂದರ್ಭದಲ್ಲೇ ದೇಶ ವಿಭಜನೆಯಾಯಿತು. ಪಾಕಿಸ್ತಾನದ ಚಿತಾವಣೆಯಿಂದ ಆದಿವಾಸಿ ಮಿಲಿಟೆಂಟ್ ಗುಂಪುಗಳು ಕಾಶ್ಮೀರದ ಮೇಲೆ ದಾಳಿ (1947-48) ಮಾಡಿದವು. ಅದನ್ನು ಎದುರಿಸುವ ಸಾಮರ್ಥ್ಯವಿಲ್ಲದ ಕಾಶ್ಮೀರಿ ನಾಯಕತ್ವಕ್ಕೆ ದೆಹಲಿಯ ಬೆಂಬಲ ಒದಗಿಬಂದಿತು. ಆಗ ಮಾಡಿಕೊಂಡ ಒಪ್ಪಂದದ ಪ್ರಕಾರ, ತಾತ್ಕಾಲಿಕವಾಗಿ ಕಾಶ್ಮೀರ ಭಾರತ ಒಕ್ಕೂಟದೊಳಗೆ ಸೇರಿತು. ಆದರೆ ಸ್ವತಂತ್ರ ಪಾರ್ಲಿಮೆಂಟು, ಸಂವಿಧಾನ, ಪ್ರಧಾನಮಂತ್ರಿ, ಸುಪ್ರೀಂಕೋರ್ಟು ಎಲ್ಲವೂ ಇರುವ 'ಸ್ವತಂತ್ರ ಕಾಶ್ಮೀರ' ಇರುತ್ತದೆಂದು ಒಪ್ಪಂದವಾಗಿತ್ತು.


• ಪಾಕಿಸ್ತಾನಿ ಬೆಂಬಲದ ಆದಿವಾಸಿ ಸೈನ್ಯವನ್ನು ಹೊರದೂಡುವ ಪ್ರಯತ್ನದಲ್ಲಿ ಎರಡು ಕಾಶ್ಮೀರಗಳು ಸೃಷ್ಟಿಯಾದವು. ಭಾರತವು ಇನ್ನೊಂದು ಭಾಗವನ್ನು 'ಪಾಕ್ ಆಕ್ರಮಿತ ಕಾಶ್ಮೀರ' ಎಂದು ಕರೆಯುತ್ತಿದ್ದರೆ, ಪಾಕಿಸ್ತಾನಿಗಳು ಅದನ್ನು 'ಆಜಾದ್ ಕಾಶ್ಮೀರ' ಎನ್ನುತ್ತಾರೆ. ಆದರೆ ಎರಡೂ ಕಡೆ ಪ್ರಭಾವ ಹೊಂದಿದ್ದ ಶೇಕ್ ಅಬ್ದುಲ್ಲಾ ಅಥವಾ ಜೆಕೆಎಲ್‌ಎಫ್‌ನ ನಾಯಕರಂತಹವರ ವ್ಯಾಖ್ಯಾನ ಬೇರೆಯಾಗಿತ್ತು. ಅವರದ್ದು ಒಂದೇ ಕಾಶ್ಮೀರ 'ಐಕ್ಯ ಕಾಶ್ಮೀರ'ದ ಪರಿಕಲ್ಪನೆ. ಆ ಕಾಶ್ಮೀರವು ಇತಿಹಾಸದ ನಡೆಯಲ್ಲಿ ವಿಕಸಿತವಾದ, ಹಿಂದೂ, ಮುಸ್ಲಿಂ, ಸಿಖ್ ಮತ್ತು ಬೌದ್ಧ ಧರ್ಮೀಯರು ಸಹಬಾಳ್ವೆ ಮಾಡುವ ಸುಂದರ ಕಾಶ್ಮೀರ. ಅದರಲ್ಲೇ ಜಮ್ಮು ಮತ್ತು ಲಡಖ್ ಸಹ ಸೇರಿವೆ. ಅವರ ಪ್ರಕಾರ ಅದು ಸ್ವತಂತ್ರವೂ, ನೆರೆಯ ಎರಡೂ ದೇಶಗಳೊಂದಿಗೆ ಅತ್ಯುತ್ತಮ ಸ್ನೇಹ ಸಂಬಂಧವೂ ಹೊಂದಿರುವ ದೇಶವೂ ಆಗಿರುತ್ತದೆ. ಶೇಕ್ ಅಬ್ದುಲ್ಲಾರ ಮನಸ್ಥಿತಿ ಹಾಗೂ ಅಂದಿನ ಸಂದರ್ಭವನ್ನೇ ಅವಲೋಕಿಸುವುದಾದರೆ, ಅಂತಹ ಕಾಶ್ಮೀರವು ಭಾರತದ ಜೊತೆಗೇ ಹೆಚ್ಚು ಸ್ನೇಹ ಹೊಂದಿರುವ ಸಾಧ್ಯತೆ ನಿಚ್ಚಳವಾಗಿತ್ತು ಅಥವಾ ಭಾರತದ ನಾಯಕರುಗಳು ಅತ್ಯುತ್ತಮ ಪ್ರಜಾತಾಂತ್ರಿಕ ನಡವಳಿಕೆ ಹಾಗೂ ಸಹಕಾರವನ್ನು ನೀಡುವುದೇ ಆಗಿದ್ದರೆ, ಕೆಲವು ವಿಶೇಷ ಸ್ವಾಯತ್ತ ಹಕ್ಕುಗಳೊಂದಿಗೆ ಕಾಶ್ಮೀರವು ಸ್ವಯಂಪ್ರೇರಿತವಾಗಿ ಭಾರತ ಒಕ್ಕೂಟದ ಭಾಗವೇ ಆಗಿರುತ್ತಿತ್ತು.

• ಆದಾಗಲಿಲ್ಲ. ಬದಲಿಗೆ 1990ರ ಹೊತ್ತಿಗೆ ನಿಧಾನವಾಗಿ ಕಾಶ್ಮೀರದ ಜನತೆಯು ಎರಡು ಕಾಶ್ಮೀರಗಳಿವೆಯೆಂದು ಹೇಳುವ ಸ್ಥಿತಿ ನಿರ್ಮಾಣವಾಯಿತು. ಒಂದು ಪಾಕ್ ಆಕ್ರಮಿತ ಕಾಶ್ಮೀರ, ಇನ್ನೊಂದು ಭಾರತ ಆಕ್ರಮಿತ ಕಾಶ್ಮೀರ.

ಫೆಬ್ರವರಿ 9, 2013. ಅಫ್ಜಲ್ ಗುರು ಎಂಬ ಕಾಶ್ಮೀರಿ ವ್ಯಕ್ತಿಯನ್ನು ನೇಣಿಗೆ ಹಾಕಲಾಗಿದೆ. ಫೆಬ್ರವರಿ 11, 1984ರಂದು ಅದೇ ನೇಣಿನ ಗುಣಿಕೆಗೆ ಮಕ್ಬೂಲ್ ಬಟ್ ಎಂಬ ಇನ್ನೊಬ್ಬ ಕಾಶ್ಮೀರಿ ವ್ಯಕ್ತಿಯನ್ನು ಏರಿಸಿ ಕೊಲ್ಲಲಾಗಿತ್ತು. ಪತ್ರಿಕಾ ವರದಿಗಳ ಪ್ರಕಾರ ಮಕ್ಬೂಲ್ ಬಟ್‌ನನ್ನು ಮಣ್ಣು ಮಾಡಿರುವ ಜಾಗದ ಪಕ್ಕದಲ್ಲೇ ಗುರುವನ್ನೂ ಹೂತುಬಿಡಲಾಗಿದೆ.

ಸಂಸತ್ತಿನ ಮೇಲೆ 2001ರ ಡಿಸೆಂಬರ್ 13ರಂದು ನಡೆದ ದಾಳಿಯ ಸಂಚಿನಲ್ಲಿ ಭಾಗಿಯಾಗಿದ್ದನೆನ್ನಲಾಗಿದ್ದ ಅಫ್ಜಲ್ ಗುರು ಮತ್ತು ಭಾರತ ಸರ್ಕಾರದ ಪೊಲೀಸ್ ಅಧಿಕಾರಿಯೊಬ್ಬರ ಸಾವಿಗೆ ಕಾರಣವಾದ ಘಟನೆಯಲ್ಲಿ ನೇರವಾಗಿ ಭಾಗಿಯಾಗಿದ್ದನೆನ್ನಲಾಗಿದ್ದ ಮಕ್ಬೂಲ್ ಬಟ್‌ನ ನೇಣು ಸಮರ್ಥನೀಯ ಎಂದು ಈ ದೇಶದ ದೊಡ್ಡ ಸಂಖ್ಯೆಯ ಜನ ಭಾವಿಸುತ್ತಿದ್ದಾರೆ. ಇಂಡಿಯಾ ಟುಡೇ ಸೇರಿದಂತೆ ಹಲವು ಪತ್ರಿಕೆಗಳು ನಡೆಸಿದ ಸಮೀಕ್ಷೆಯಲ್ಲಿ ಈ ರೀತಿಯ 'ಮೆಜಾರಿಟಿ' ಬಂದಿದೆಯಂತೆ.

ಈ 'ಮೆಜಾರಿಟಿ'ಯಲ್ಲಿ ನಾವೂ, ನೀವೂ ಇದ್ದೇವೆಯೇ ಎಂದು ನಮ್ಮನ್ನು ನಾವು ಕೇಳಿಕೊಳ್ಳಬೇಕಿದೆ. ಅಫ್ಜಲ್ ಗುರುವನ್ನು ನೇಣಿಗೆ ಹಾಕಿದ್ದಕ್ಕೂ, ಕಾಶ್ಮೀರ ಹಾಗೂ ಭಾರತದ ಹಾಗೂ ಪಾಕಿಸ್ತಾನದ ನಡುವಿನ ವಿವಾದಕ್ಕೂ ಸಂಬಂಧವಿರುವುದರಿಂದ ಮೇಲಿನ ಹಿನ್ನೆಲೆ ಅಗತ್ಯವಿದೆ.



1948ರ ಒಪ್ಪಂದಕ್ಕೂ, 1984ರ ಮಕ್ಬೂಲ್ ಬಟ್‌ರ ನೇಣಿಗೂ, 2013ರ ನೇಣಿಗೂ ನಡುವೆ ಏನೇನು ನಡೆಯಿತು ಎನ್ನುವುದು ಮುಖ್ಯ. ಅದರ ಜೊತೆಗೆ 2011ರ ಡಿ.13ರಂದು ನಡೆದ ಸಂಸತ್ತಿನ ಮೇಲಾದ ದಾಳಿಯ ಮೊಕದ್ದಮೆಯ ತೀರ್ಪು ಏನು ಹೇಳಿತೆನ್ನುವುದನ್ನೂ ಗಮನಿಸಬೇಕು. ಅದಾದನಂತರ ನಮ್ಮನ್ನು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೊಂದಿದೆ.

1948ರ ಒಪ್ಪಂದದ ನಂತರ ಕಾಶ್ಮೀರ ತನ್ನ ಪ್ರಧಾನಿಯನ್ನು ಚುನಾಯಿಸಿಕೊಂಡಿತು. ಹೌದು, ಪ್ರಧಾನಿಯನ್ನು. ಶೇಕ್ ಅಬ್ದುಲ್ಲಾ ಅದರ ಪ್ರಧಾನಿಯಾದರು. ಕಾಶ್ಮೀರಕ್ಕೊಂದು ಸಂವಿಧಾನವೂ ಇತ್ತು, ಸುಪ್ರೀಂಕೋರ್ಟ್ ಸಹ ಇತ್ತು. ಸಂವಿಧಾನದ 370ನೇ ವಿಧಿಯನ್ವಯ ಅದಕ್ಕೆ ಭಾರತ ದೇಶದ ಮಾನ್ಯತೆಯೂ ಇತ್ತು, ರಕ್ಷಣೆ, ಕರೆನ್ಸಿ, ಸಂಪರ್ಕವನ್ನು ಹೊರತುಪಡಿಸಿದರೆ ಅದೊಂದು ಸಂಪೂರ್ಣ ಸ್ವತಂತ್ರ ಪ್ರದೇಶವಾಗಿತ್ತು. ಆದರೆ ಭಾರತ ಸರ್ಕಾರವು ವಿಶ್ವಾಸದಿಂದ ಕಾಶ್ಮೀರವನ್ನು ಗೆದ್ದುಕೊಳ್ಳಲು ಬೇಕಾದ ಕ್ರಮಗಳನ್ನು ಕೈಗೊಳ್ಳಲಿಲ್ಲ, ಕಾಶ್ಮೀರದಲ್ಲಿ ಜನಮತಗಣನೆಯನ್ನು ಮಾಡಿ, ಕಾಶ್ಮೀರದ ಜನತೆಯ ಇಚ್ಛೆಗನುಗುಣವಾಗಿಯೇ ಅದರ ಸ್ಥಾನ ಏನು ಎಂಬುದನ್ನು ತೀರ್ಮಾನಿಸಲಾಗುವುದು ಎಂ... ಪ್ರಧಾನಿ ನೆಹರು ಆಶ್ವಾಸನೆಯನ್ನೂ ಕೊಟ್ಟಿದ್ದರು.

ಈ ಮಾತನ್ನು ನೆಹರು ಆಗಸ್ಟ್ 7, 1952ರ... ಭಾರತದ ಸಂಸತ್ತಿನಲ್ಲೇ ಸ್ಪಷ್ಟವಾಗಿ ಹೇಳಿದ್ದರು. ನ... ವಿಶ್ವಸಂಸ್ಥೆಯಲ್ಲೂ ಘೋಷಿಸಿದ್ದರು.

ಆದರೆ ಇದ್ದಕ್ಕಿದ್ದ ಹಾಗೆ 1953ರಲ್ಲಿ ಶೇ... ಅಬ್ದುಲ್ಲಾರನ್ನು ಬಂಧಿಸಿ, ಕಾಶ್ಮೀರದ ಆಡಳಿತವನ್ನು ಕೇ... ಸರ್ಕಾರ ತನ್ನ ತೆಕ್ಕೆಗೆ ತೆಗೆದುಕೊಂಡಿತು. ಅವರನ್ನು ದೂ... ಊಟಿಯಲ್ಲಿ ಬಂಧನದಲ್ಲಿಡಲಾಯಿತು. ಕಾಶ್ಮೀರದ ... (ಶೇರ್ - ಎ ಕಾಶ್ಮೀರ್) ಎಂದು ಕರೆಯಲ್ಪಡುತ್ತಿದ್ದ ಶೇ... ಅಬ್ದುಲ್ಲಾರು ಭಾರತದ ಎಲ್ಲಾ ಷರತ್ತುಗಳಿಗೆ ಒಪ್ಪುವವ... ಮತ್ತೆ ಮತ್ತೆ ಬಂಧನಕ್ಕೊಳಗಾಗಲೇಬೇಕಾಯ್ತು.

ಕಾಶ್ಮೀರದಲ್ಲಿ ನ್ಯಾಯಬದ್ಧ ಚುನಾವಣೆಗಳು ನಡೆಯಲಿ... ನಿಧಾನಕ್ಕೆ, ತನ್ನ ಸ್ನೇಹಿತ ದೇಶ ಭಾರತದೊಂದಿ... ಸಂಪೂರ್ಣವಾಗಿ ಐಕ್ಯಗೊಳ್ಳುವ ಮನಸ್ಥಿತಿಯಿಂದ ಕಾಶ್ಮೀರ... ಜನತೆ ದೂರ ಸರಿಯಲಾರಂಭಿಸಿತು. ಈ ಕಾಶ್ಮೀರವ... ಒಳಗೊಳ್ಳುವ ಮೂಲಕ ಪಾಕ್ ಆಕ್ರಮಿತ ಕಾಶ್ಮೀರವನ್ನು ಜೊತೆ ಸೇರಿಸಿಕೊಳ್ಳುವ ಪ್ರಶ್ನೆ ದೂರವೇ ಉಳಿಯಿತು.

ಇವೆಲ್ಲದರ ಲಾಭವನ್ನು ಪಾಕಿಸ್ತಾನ ಪಡೆದುಕೊಂಡಿ... ತನ್ನ ದೇಶದೊಳಗೆ ಪ್ರಜಾತಂತ್ರವನ್ನಾಗಲೀ, ಜನ... ಅಭಿವೃದ್ಧಿಯನ್ನಾಗಲೀ ಸಾಧಿಸದ ಪಾಕಿಸ್ತಾನದ ಆಡಳಿತಗಾರ... ಕಾಶ್ಮೀರದ ವಿಚಾರವನ್ನು ಆ ದೇಶವನ್ನು ನಿಭಾಯಿಸ... ಬೇಕಾದ ಅಫೀಮನ್ನಾಗಿ ಬಳಸಿಕೊಂಡರು. ಆದರೆ ಅಷ್... ಸುಲಭವಾಗಿ ಅವರ ಕೈಗೊಂಬೆಗಳಾಗಿ ಕಾಶ್ಮೀರದಲ್ಲಿ ಮ... ಭಾರತದಲ್ಲಿ ಭಯೋತ್ಪಾದಕ ಕೃತ್ಯಗಳ... ಕಾಶ್ಮೀರದ ಜನತೆ ಮಾಡಿಬಿಡಲಿ... ಆಗಾಗ್ಗೆ ನಡೆಯುತ್ತಿದ್ದ ಬಿಡಿ ಬಿ... ಘಟನೆಗಳನ್ನು ಹೊರತುಪಡಿಸಿದ... ಕಾಶ್ಮೀರದಲ್ಲಿ ಸಂಘಟಿತ ಹಿಂಸಾತ್... ಕೃತ್ಯಗಳು 1987ರವರೆಗ... ನಡೆದಿರಲಿಲ್ಲ.

ಅದಕ್ಕೆ ಕಾರಣವಾದ ಘಟನೆಗ... ಸರಣಿ ಹೀಗಿದೆ. ಬಂಧನ, ಗಡೀಪಾರು... ಒಪ್ಪಂದಗಳ ಮಧ್ಯೆ ಶೇಕ್ ಅಬ್ದು... ಕಾಶ್ಮೀರದ ಮುಖ್ಯಮಂತ್ರಿಯಾಗಿ ಮ... ಪ್ರತಿಷ್ಠಾಪನೆಗೊಂಡಿದ್ದರು. ದೆಹಲಿ... ಸರ್ಕಾರದ ಮತ್ತು ಕಾಂಗ್ರೆಸ್ ಪಕ್ಷ... ಏಕಪಕ್ಷೀಯ ತೀರ್ಮಾನಗಳು ಮ... ಮಧ್ಯೆ ಕಾಶ್ಮೀರದ ಜನರನ... ಕೆರಳಿಸುತ್ತಲೇ ಇದ್ದವು. 1982ರಲ್ಲಿ ಶೇಕ್ ಅಬ್ದುಲ್... ನಿಧನರಾದರು. 1968ರ ಮೊಕದ್ದಮೆಯಲ್ಲಿ ಬಂಧಿತರಾ... ಮಕ್ಬೂಲ್ ಬಟ್ ಜಮ್ಮು ಕಾಶ್ಮೀರ ವಿಮೋಚನಾರಂಗ... ನಾಯಕರಾಗಿದ್ದರು. ಜೆಕೆಎಲ್‌ಎಫ್ ಸಹ ಪಾಕಿಸ್ತಾನದೊಂದಿ... ಕಾಶ್ಮೀರವನ್ನು ವಿಲೀನಗೊಳಿಸುವುದಕ್ಕೆ ವಿರುದ್ಧವಾಗಿದ್ದ... ಕಾಶ್ಮೀರವನ್ನು 'ಸೆಕ್ಯುಲರ್' ಕಾಶ್ಮೀರವನ್ನಾಗಿ ಉಳಿಸಿಕೊಳ್ಳುವ ಆಶಯದ ಪರವಾಗಿದ್ದ ಸಂಘಟನೆಯಾಗಿತ್ತು. ಶೇಕ್ ಅಬ್ದುಲ್ಲಾರ ಪ್ರಭಾವ ಕಡಿಮೆಯಾಗುತ್ತಿದ್ದಂತೆ, ಪ್ರಬಲರಾಗುತ್ತಿ...

ಸಹಮತ ಹಾಗೂ ಭಿನ್ನಮತ


ಪ್ರಿಯ ಕ್ಯಾಪ್ಟನ್,

ವಾಸು ಅವರು ತಮ್ಮ ಅಂಕಣದಲ್ಲಿ ಆಶಿಶ್ ನಂದಿಯವರ ಜೈಪುರ ಉವಾಚದ ಕುರಿತು ಬರೆದಿದ್ದಾರೆ. ಆ ಉವಾಚಕ್ಕೆ ಕೇಳಬೇಕಾದ ಸಾಕ್ಷ್ಯಪುರಾವೆಗಳನ್ನು ಕೇಳಿದ್ದಾರೆ. ಮತ್ತೂ ಹಿಂದುಳಿದ ವರ್ಗಗಳು ಮತ್ತು ದಲಿತರ ಸಾಮಾಜಿಕ-ರಾಜಕೀಯ ಆಕಾಂಕ್ಷೆಗಳನ್ನು ತೇಜ್ಪಾಲ್ ಹಾಗು ನಂದಿಯವರು ಗಳಿಗಿಂತ ಭಿನ್ನವಾಗಿ ನೋಡಬಹುದು ಎಂದು ವಿಶ್ಲೇಷಿಸಿದ್ದಾರೆ. ನಾನಾದರೂ ವಾಸು ಅವರ ವಾದವನ್ನು ಒಪ್ಪುತ್ತೇನೆ. ಆದರೆ, ವಾಸು ಅವರು ತಮ್ಮ ಬರಹದ ಉದ್ದಕ್ಕೂ ಬಳಸಿಕೊಂಡಿರುವ ಒಂದು ಗ್ರಹಿತ ನನಗೆ ಸಮ್ಮತವಲ್ಲ.

ವಾಸು ಪ್ರಕಾರ ಸದರಿ ಪ್ರಕರಣದಲ್ಲೂ ಮತ್ತು ಅದರ ಪೂರ್ವದಲ್ಲೂ ಆಶಿಶ್ ನಂದಿ 'ಪರ' ಮತ್ತು 'ವಿರೋಧಿ' ಎಂಬ ಒಡೆದು ಕಾಣುವ ಎರಡು ಬಣಗಳಿವೆ: ನೀವು ಒಂದೋ ಆ ಬಣದ ಇಲ್ಲವೇ ವಿರುದ್ಧ ಬಣದ ಚೌಕಟ್ಟಿನಲ್ಲಿ ಒತ್ತಿ ಕೂತುಕೊಳ್ಳುತ್ತೀರಿ-ನಡುವೆ ಇನ್ನಾವ ಅನುಮಾನ ಜಿಜ್ಞಾಸೆಗಳಿಗೂ ಅವಕಾಶವಿಲ್ಲ; ಈ ಪ್ರಕಾರ ನೀವು ಒಂದೋ ಅಪ್ಪಟ ಮಾರ್ಕ್ಸ್‌ವಾದಿಗಳಾಗಿರಬೇಕು ಇಲ್ಲವೆ ಮಾರ್ಕ್ಸ್‌ವಾದ ವಿರೋಧಿ ಬಲಪಂಥೀಯರಾಗಿರಬೇಕು. ಹೀಗಾಗಿ, ಪ್ರಸ್ತುತ ವಿವಾದದಲ್ಲಿ ನಂದಿಯವರ ವಾದದ ಹುರುಳನ್ನು ನಿರಾಕರಿಸಿ, ಅವರ ವಿರುದ್ಧ ಬಂದ ಪ್ರತಿಕ್ರಿಯೆಯ ಬಗ್ಗೆ ಆತಂಕಿತರಾದವರ ಮಾತುಗಳು ವಾಸು ಅವರಿಗೆ ವಿಶ್ಲೇಷಣಾ ಯೋಗ್ಯವಾಗಿ ಕಾಣುವುದಿಲ್ಲ; ಅಂತಹವರು ನಂದಿ ಪರ ಬಣದವರು ಎಂದೇ ವಾಸು ನಿರ್ಧರಿಸಿದ ಹಾಗೆ ಕಾಣುತ್ತದೆ.

ವಾಸು ಅಂತರ್ಜಾಲದ ಆಳ ಅಗಲ ಅಗೆದು, ಅಕಟಕಟ! ಎನ್ನಿಸುವಷ್ಟು ವಿವರಗಳನ್ನು ಸಂಗ್ರಹಿಸಿ ಬರೆದಿದ್ದಾಗಿ ಹೇಳಿಕೊಂಡಿದ್ದಾರೆ-ಅದು ಸರಿ. ಹಾಗೆ ಮಾಡಿದ್ದಲ್ಲಿ ಅವರಿಗೆ ನಟರಾಜ್ ಹುಳಿಯಾರ್, ದೇವನೂರ್ ಮಹಾದೇವ, ಬಹುರತ್ ಓರ್, ಕಂಚ ಈಳಯ್ಯ ಇವರುಗಳು ಆಡಿದ ಮಾತುಗಳೂ ಕಂಡಿರಬೇಕು ಎಂದು ಭಾವಿಸುವೆ. ಅಂಕಣ ಬರಹದ ಒತ್ತಡ ಮತ್ತು ಪದ ಮಿತಿಗಳ ಕಷ್ಟ ನನಗೆ ಗೊತ್ತಿದೆ. ಸಕಲವನ್ನೂ ಈ ಅಂಕಣದಲ್ಲೇ ಹೇಳಿಬಿಡಬೇಕು ಎನ್ನುವುದು ನನ್ನ ನಿರೀಕ್ಷೆಯಲ್ಲ, ಆದರೆ ಅವರ ವಾದಮಂಡನೆಯ ಹಿಂದಿರುವ ಗ್ರಹಿತವು ಅವರಿಗೆ ಬೇರೆ ಬಗೆಯ ಮಾತುಗಳನ್ನು ಕೇಳಿಸಿಕೊಳ್ಳದಂತೆ ತಡೆದಿದೆ ಎಂದು ಕಾಣುತ್ತದೆ.


ಪ್ರಸ್ತುತ ಪ್ರಕರಣದಲ್ಲಿ ಆಶಿಶರ ಮಾತುಗಳಷ್ಟೇ ಅದಕ್ಕೆ ಬಂದ ಪ್ರತಿಕ್ರಿಯೆಯ ವರಸೆಗಳೂ ಗಂಭೀರವಾಗಿವೆ. ಮತ್ತೂ ಇವೆರಡೂ ಇವತ್ತು ನಮ್ಮ ಸಮಾಜದಲ್ಲಿರುವ ಅಧಿಕಾರದ ಸ್ವರೂಪ ಮತ್ತು ಪ್ರತಿರೋಧದ ಸ್ವರೂಪಗಳ ನಿರೂಪಣೆಗೆ ಮುಖ್ಯವಾದುವು ಎಂದು ಭಾವಿಸಿದ್ದೇನೆ. ಹೀಗಾಗಿ, ಆಶಿಶರ ವೈಚಾರಿಕತೆಯನ್ನು ಮುಖಾಮುಖಿಯಾಗಬೇಕು ಎನ್ನುವ ವಾಸು ಅವರ ನಿಲುವನ್ನು ಒಪ್ಪಿಯೂ ಅಂಥ ಕಾರ್ಯಕ್ಕೆ ಪೂರ್ವ ತಯಾರಿಯಾಗಿ ಅಚ್ಚುಕಟ್ಟು ಬಣ ಕಟ್ಟುವುದು ಅವಶ್ಯಕವೇ? ಎಂದು ನನಗೆ ಕೇಳಬೇಕೆನಿಸಿದೆ; ವಾಸು ಸಂಶೋಧಿಸಿರುವ 'ಡಿಫೆನ್ಸಿವ್ ಮಾರ್ಕ್ಸ್‌ವಾದಿಗಳು' ಎಂಬ ವಿಭಾಗೀಕರಣ ಕಂಡ ಮೇಲಂತೂ ಈ ಪ್ರಶ್ನೆಯನ್ನು ಒತ್ತಿ ಕೇಳಬೇಕೆನಿಸಿದೆ.




'ಅಕೆಡೆಮಿಕ್ ಬುದ್ಧಿಜೀವಿ ವಲಯ'ವನ್ನು ಸಂತುಷ್ಟವಾಗಿಡಲು ಆಶಿಶ್ ನಂದಿಯವರ ವಿಚಾರಗಳನ್ನು ಎತ್ತಿಹಿಡಿಯುವ ಈ 'ಡಿಫೆನ್ಸಿವ್ ಮಾರ್ಕ್ಸ್‌ವಾದಿ'ಗಳ ಹೆಸರು-ವಿಳಾಸವೇನು ಎನ್ನುವುದು ನನಗೆ ತಿಳಿದಿಲ್ಲ, ಯಾಕಾಗಿ ಈ ಬಗೆಯ ಓಲೈಕೆ ಅವರಿಗೆ ಜರೂರಾಗಿದೆ ಎಂಬುದೂ ನನಗೆ ಹೊಳೆಯುತ್ತಿಲ್ಲ. ವಾಸು ಇವುಗಳನ್ನ ಸ್ಪಷ್ಟಪಡಿಸದೆ ಬರಿ ಹಣೆಪಟ್ಟಿ ಹಚ್ಚಿರುವುದರಿಂದ ಯಾವಾಗ ಮತ್ತು ಯಾಕೆ ಇವರುಗಳು ಆಶಿಶರನ್ನು ಎತ್ತಿ ಮೆರೆಸಿದ್ದಾರೆ ಎನ್ನುವುದೂ ತಿಳಿಯುವುದು ಅಸಾಧ್ಯ.

ಆಶಿಶ್ ಇರಲಿ ಮತ್ತಾವ ದಾರ್ಶನಿಕರಾದರೂ ಇರಲಿ, ಅವರ ವೈಚಾರಿಕತೆಯನ್ನು ಚರ್ಚಿಸುವ ಮುನ್ನ ಪರ-ವಿರೋಧ ಚೌಕಟ್ಟು ಅವಶ್ಯಕ ಎಂದಾದರೆ, ಖಂಡನೆ- ಪ್ರತಿಪಾದನೆಗಳ ನಡುವಿನ ಅಪಾರ ನೆಸಲುಗಳ ವೈಚಾರಿಕ ವಾಗ್ವಾದಗಳನ್ನು ಹೀಗೆ ಒರೆಸಿ ಹಾಕಬೇಕಾಗುತ್ತದೆ. ನಾನು ವಾಸು ಅವರು ಬಯಸುವಷ್ಟು ಅಪ್ಪಟ ಮಾರ್ಕ್ಸ್‌ವಾದಿಯೂ ಅಲ್ಲ, ಅಪ್ಪಟ 'ಆಶಿಸ್' (ಇದು ನಿಜಕ್ಕೂ ಅವರ ಹೆಸರಿನ ಉಚ್ಚಾರಣೆ, ಅವರೊಬ್ಬ ಬಂಗಾಲದ ಕ್ರೈಸ್ತರು) ವಿರೋಧಿಯೂ ಅಲ್ಲ- ಇಷ್ಟರಿಂದ ಮಾತ್ರಕ್ಕೆ 'ಅಲ್ಲಿ ಆಚೆ ಬಲಪಂಥೀಯರ ಪಂಕ್ತಿಯಲ್ಲಿ ಹೋಗಿ ಕೂಡ' ಎಂದರೆ ನಾನು 'ಆಗೋಲ್ಲ' ಎನ್ನುತ್ತೇನೆ. ವಾಸು ಅವರ ಬರಹಕ್ಕೆ ಸಹಮತ ಸೂಚಿಸಿಯೂ, ಇಷ್ಟು ಭಿನ್ನಮತ ತೋರಬೇಕೆನಿಸಿತು.

- ಕೆ. ಫಣಿರಾಜ್



...ಸಂಘಟನೆಗಳನ್ನು ನಿಭಾಯಿಸುವುದರಲ್ಲೂ ಕೇಂದ್ರ ಎಡವಿತು. ...ಎಫ್‌ನಂತಹ ಸಂಘಟನೆಗಳ ಬದಲಿಗೆ ಇನ್ನಷ್ಟು ಉಗ್ರಗಾಮಿ ...ನೆಗಳೇ ಪ್ರಬಲವಾದರೆ ಒಳಿತು, ಅವನ್ನು ನಿಭಾಯಿಸುವುದು ... ಎಂಬಂತೆ ಕಾಂಗ್ರೆಸ್ ನಡೆದುಕೊಂಡಿತು. ಇಲ್ಲಿಯವರೆಗೆ ಭಾರತದಲ್ಲಿ ...ರದ ಕುರಿತಂತೆ ದುರಭಿಮಾನ ಹಾಗೂ ...ನದ ಕುರಿತ ದ್ವೇಷದ ರಾಜಕಾರಣವನ್ನು ...ಹಾಕಿ, ಬೆಳೆಸಿದ್ದರಲ್ಲಿ ಕಾಂಗ್ರೆಸ್ ಪಕ್ಷದ್ದೇ ಪಾಲು ... ಇಲ್ಲಿಂದಾಚೆಗೆ ಭಾರತದ ರಾಜಕಾರಣದಲ್ಲಿ ...ತ್ವ ಶಕ್ತಿಗಳ ಪ್ರಾಬಲ್ಯ ಹೆಚ್ಚಾದಂತೆ, ...ತ್ಸಾಹ ಬೇರೊಂದು ಆಯಾಮವನ್ನು ...ಕೊಂಡಿತು.



...ಕ್ಬೂಲ್ ಬಟ್‌ರ ವಿಚಾರಣೆಯಲ್ಲಿ ಹಲವು ...ಗಳಿದ್ದರೂ, ನಾಟಕೀಯ ಬೆಳವಣಿಗೆಗಳ ನಂತರ ...ನ್ನು 1984ರಲ್ಲಿ ಗಲ್ಲಿಗೇರಿಸಲಾಯಿತು. ...ದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ... ಕಣಿವೆಯಲ್ಲಿ ಶೇ.3ರಷ್ಟು ಮಾತ್ರ ಮತದಾನ ...ತು. ಆದರೂ ಹುಸಿ ಚುನಾವಣಾ ...ಯಲ್ಲಿ ಬಲವಂತವಾಗಿ ಕಾಂಗ್ರೆಸ್ ಪಕ್ಷವನ್ನು ...ರಕ್ಕೆ ತಂದು ದಮನಕಾಂಡ ...ಮುವರೆಸಲಾಯಿತು. ಅಲ್ಲಿಂದಾಚೆಗೆ ಕಾಶ್ಮೀರದಲ್ಲಿ ಪ್ರತಿನಿತ್ಯ ಯುದ್ಧ ...ತು. ತೀವ್ರ ಮಿಲಿಟರಿ ಹಿಂಸೆ, ಪ್ರತಿರೋಧ, ಕರ್ಫ್ಯೂ ಇವೆಲ್ಲವೂ ... ಕಾಶ್ಮೀರದ ಕನಸನ್ನು ಹೊಸಕಿ ಹಾಕಿದವು.

...ತೀಯ ತಿರುವು ಪಡೆದುಕೊಂಡು ಕಾಶ್ಮೀರದ ಚಳವಳಿಯು ...ಪಂಡಿತರನ್ನೂ ಗುರಿ ಮಾಡಿದ್ದರಿಂದ ದೊಡ್ಡ ಪ್ರಮಾಣದ ವಲಸೆಯೂ ...ಐ. ಸುಳ್ಳುಗಳ ವಿಚಿತ್ರ ಮೇಲಾಟದಲ್ಲಿ ಸತ್ಯ ಹೂತುಹೋಯಿತು.

...ಕಿಸ್ತಾನ ಪ್ರೇರಿತ ಭಯೋತ್ಪಾದನೆ, ಸ್ವತಂತ್ರ ಕಾಶ್ಮೀರದ ಹೋರಾಟ, ...ದೊರೆಗಳ ಅಧಿಕೃತ ಯುದ್ಧ ಮತ್ತು ಅನಧಿಕೃತವಾಗಿ ಚಾಲ್ತಿಯಲ್ಲಿಟ್ಟ ...ಗಾರ ಗುಂಪುಗಳು ಎಲ್ಲವೂ ಕಾಶ್ಮೀರದಲ್ಲಿ ಗುಂಡು ...ಬಾರಂಭಿಸಿದವು. ಹುಸಿ ಎನ್‌ಕೌಂಟರ್‌ಗಳಲ್ಲಿ ಯಾರ್ಯಾರನ್ನೋ ...ಉ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ದೆಹಲಿಯಲ್ಲೂ ಕಾಶ್ಮೀರಿ ...ಕರು ನೆಮ್ಮದಿಯಿಂದ ಜೀವಿಸುವುದು ಕಷ್ಟಕರವಾಗತೊಡಗಿತು. ... ಅಫ್ಜಲ್ ಗುರು ದೆಹಲಿಯಲ್ಲಿ ವಾಸಿಸುತ್ತಿದ್ದ ಕಾಶ್ಮೀರಿ ...ಕರಾದ್ದರಿಂದ ಅವರ ಬದುಕು ಅತಂತ್ರವೇ ಆಗಿತ್ತು.

...ಮಧ್ಯೆ 2001ರ ಡಿಸೆಂಬರ್ 13ರಂದು ಸಂಸತ್ತಿನ ಮೇಲೆ ...ೇತ್ಪಾದಕ ದಾಳಿ' ನಡೆಯಿತು.

...002ರ ಡಿ.18, ಕೆಳ ನ್ಯಾಯಾಲಯದ ತೀರ್ಪು– ಅಫ್ಜಲ್ ಗುರು, ...ಆರ್.ಗಿಲಾನಿ ಮತ್ತು ಶೌಕತ್ ಹುಸೇನ್ ಗುರುವಿಗೆ ಗಲ್ಲು ...003ರ ಅಕ್ಟೋಬರ್‌ನಲ್ಲಿ ದೆಹಲಿ ಹೈಕೋರ್ಟ್‌ನ ತೀರ್ಪು – ... ಹುಸೇನ್‌ನ ಶಿಕ್ಷೆಯನ್ನು 10 ವರ್ಷದ ಜೈಲು ಶಿಕ್ಷೆಗೆ ...ಲಾಯಿತು. (ನೇಣು ಶಿಕ್ಷೆಗೆ ಒಳಗಾಗಿದ್ದ) ಗಿಲಾನಿಯವರನ್ನು ...ಧಿಯಲ್ಲವೆಂದು ಬಿಡುಗಡೆಗೊಳಿಸಲಾಯಿತು. ಅಫ್ಜಲ್ ಗುರುವಿನ ... ಕಾಯಂ ಮಾಡಲಾಯಿತು. ಅದಕ್ಕೆ ಕಾರಣವನ್ನು ಹೀಗೆ ಹೇಳಲಾಯಿತು - 'ಸಂಸತ್ತಿನ ಮೇಲೆ ನಡೆದ ದಾಳಿಯು ಇಡೀ ದೇಶವನ್ನು ಅಲುಗಾಡಿಸಿದೆ ಮತ್ತು ಇದಕ್ಕೆ ಕಾರಣರಾದವನನ್ನು ಗಲ್ಲಿಗೇರಿಸಿದರೆ ಸಮಾಜದ ಸಮಷ್ಟಿ ಪ್ರಜ್ಞೆಯು ಸಂತೃಪ್ತಿ ಹೊಂದುತ್ತದೆ'. ನಾವೂ, ನೀವೂ ಇರುವ ಈ ದೇಶದ ಸಮಾಜದ ಸಮಷ್ಟಿ ಪ್ರಜ್ಞೆಯನ್ನು ತೃಪ್ತಿಪಡಿಸಲು!

ಆದರೆ 2005ರ ಆಗಸ್ಟ್ 5ರಂದು ಇದೇ ದೇಶದ ಸುಪ್ರೀಂಕೋರ್ಟ್ ಇದೇ ಮೊಕದ್ದಮೆಯಲ್ಲಿ ಒಂದು ತೀರ್ಪನ್ನು ನೀಡುತ್ತದೆ. ಅದರಲ್ಲಿ ಅಫ್ಜಲ್ ಗುರುವಿಗೆ ನೇಣನ್ನು ಇನ್ನೊಮ್ಮೆ ಕಾಯಂಗೊಳಿಸಲಾಗುತ್ತದೆ ಮತ್ತು ಘಟನೆಯಲ್ಲಿ ಆತನ ಪಾತ್ರದ ಕುರಿತು ಹೀಗೆ ಹೇಳಲಾಗುತ್ತದೆ. 'ಆತನು ಯಾವುದೇ ಭಯೋತ್ಪಾದಕ ಸಂಘಟನೆ ಅಥವಾ ಗುಂಪಿನಲ್ಲಿದ್ದನೆಂದು ಹೇಳುವುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ ಮತ್ತು ಅಫ್ಜಲ್ ಗುರುವಿನ ವಿರುದ್ಧದ ಸಾಕ್ಷ್ಯವು ಸಾಂದರ್ಭಿಕವಾದದ್ದು ಮಾತ್ರ'.


ಸಾಂದರ್ಭಿಕವಾದ ಕೆಲವು ಸಾಕ್ಷ್ಯಗಳನ್ನು ಕೆಳಗಿನ ನ್ಯಾಯಾಲಯವು ಗುರುತಿಸಿದ್ದುದು ನಿಜ. ಆದರೆ ಆತನಿಗಾಗಿ ಒಬ್ಬ ವಕೀಲರೂ ಇರದೇ ಇದ್ದುದು, ಯಾವ ವಕೀಲರನ್ನು ನ್ಯಾಯಾಲಯವು ನೀಡಿತೋ, ಆ ವಕೀಲರು ಆರೋಪಿಯನ್ನು ಭೇಟಿಯೇ ಮಾಡದಿದ್ದುದು ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ. ಆರೋಪಿಗಳಿಗೆ ತಾನು ಮಾಡಿದ ಸಹಾಯವನ್ನು 'ಕಾಶ್ಮೀರದ ಪೊಲೀಸ್ ಅಧಿಕಾರಿಯ ಸೂಚನೆಯ ಮೇರೆಗೇ' ಮಾಡಿದ್ದುದನ್ನ ಅಫ್ಜಲ್ ಗುರು ಸ್ಪಷ್ಟವಾಗಿ ಹೇಳಿದ್ದನು. ಅಂತಹ ಹಲವು ಸಂಗತಿಗಳ ಬಗ್ಗೆ ಯಾವ ವಿಚಾರಣೆಯೂ ನಡೆಯಲಿಲ್ಲ, ಏಕೆಂದರೆ 'ಈ ದೇಶದ ಸಮಷ್ಟಿಪ್ರಜ್ಞೆಯನ್ನು ಸಂತೃಪ್ತಿಗೊಳಿಸಬೇಕೆಂದು' ನ್ಯಾಯಾಲಯವು ಭಾವಿಸಿತ್ತು.

ಇದ್ಯಾವುದೂ ಗೊತ್ತೇ ಇಲ್ಲವೇನೋ ಎಂಬಂತೆ ಬಿಜೆಪಿ ಹಾಗೂ ಅದರ ಪರಿವಾರ ಬಿತ್ತರಿಸುವ ಸುಳ್ಳುಗಳನ್ನೇ ಮಾಧ್ಯಮಗಳು ಪುನರ್ ಉಲಿಯುತ್ತವೆ. ಒಬ್ಬ ವ್ಯಕ್ತಿ ನಿಜವಾಗಿಯೂ ಒಂದು ನಿರ್ದಿಷ್ಟ ಘಟನೆಯಲ್ಲಿ ಪಾಲ್ಗೊಂಡಿದ್ದನೋ ಇಲ್ಲವೋ ಎಂಬುದು ವಿವಿಧ ಹಂತಗಳ ನ್ಯಾಯಿಕ ಸಂಸ್ಥೆಗಳಲ್ಲಿ ಖಚಿತವಾಗಿ ತೀರ್ಮಾನವಾಗದೇ ಇದ್ದರೂ, ಆತನನ್ನು ನೇಣು ಹಾಕಲಾಯಿತು. ನ್ಯಾಯಿಕ ವಿಧಾನಗಳಿಗಿಂತ ದೇಶದ ಜನರನ್ನ ತೃಪ್ತಿಗೊಳಿಸಲಿಕ್ಕಾಗಿ! ಆದರೆ ಕಾಶ್ಮೀರದ ಬಹುಸಂಖ್ಯಾತ ಜನರು ಇದನ್ನು ಒಪ್ಪಿಲ್ಲ, ಅಂದರೆ ಕಾಶ್ಮೀರ ಈ ದೇಶದ ಭಾಗವಾಗಿಲ್ಲವೇ? ಈ ತೀರ್ಪನ್ನು ಕೊಡಲು ಅನುಸರಿಸಲಾದ ವಿಧಾನ ಮತ್ತು ಅದರ ಹಿಂದಿರುವ ಧೋರಣೆಯನ್ನು ಒಪ್ಪದವರನ್ನು ನ್ಯಾಯಾಲಯ ಏನೆಂದು ಪರಿಗಣಿಸಿದೆ?



1953ರಲ್ಲಿ ಷೇಕ್ ಅಬ್ದುಲ್ಲಾರನ್ನು ಬಂಧಿಸಿದಾಗ, 1984ರಲ್ಲಿ ಮಕ್ಬೂಲ್ ಬಟ್‌ರನ್ನು ಗಲ್ಲಿಗೇರಿಸಿದಾಗ, ಇವೆರಡೂ ಘಟನೆಗಳ ನಡುವೆ ಕಾಶ್ಮೀರದಲ್ಲಿ ಪ್ರಜಾಸತ್ತೆಯನ್ನು ನಾಶ ಮಾಡಿದಾಗ ಮತ್ತು 1984ರ ನಂತರ ಕಾಶ್ಮೀರವನ್ನು ಯುದ್ಧಭೂಮಿಯನ್ನಾಗಿ ಮಾಡಿದಾಗ 'ಭಾರತದ ಜನರ' ಹಿತಾಸಕ್ತಿಯನ್ನು ರಕ್ಷಿಸಲೆಂದೇ ಸರ್ಕಾರಗಳು ಕ್ರಮ ಕೈಗೊಂಡಿವೆ. ಈಗ ಅಫ್ಜಲ್ ಗುರುವಿನ ಗಲ್ಲು ಶಿಕ್ಷೆಯನ್ನೂ ನಮ್ಮ ಹೆಸರಿನಲ್ಲೇ ಜಾರಿಗೊಳಿಸಲಾಗಿದೆ. ಅಂದರೆ ನಮ್ಮ ಕೈಗೂ ರಕ್ತ ಮೆತ್ತಿಕೊಂಡಿದೆಯಲ್ಲವೇ? ●

ಸಾಮೂಹಿಕ ಅತ್ಯಾಚಾರಕ್ಕೆ ಪ್ರೇರೇಪಿಸುವ ಭಾರತೀಯ ಸಿನಿಮಾ-ಸಿಂಡ್ರೋಮ್‌ಗಳು



ಭಾರತದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರದ ಘಟನೆಗಳು ತುಂಬಾ ಹೆಚ್ಚಲು ನಮ್ಮ ಸಿನೆಮಾಗಳೂ ಕಾರಣವೆನ್ನಬಹುದು. ಭಾರತದ ಎಲ್ಲೆಡೆ ಕಾಲೇಜುಗಳಲ್ಲಿ ರ್‍ಯಾಗಿಂಗ್ (ragging) ಅನ್ನು ಸಂಪೂರ್ಣವಾಗಿ ನಿಷೇಧ ಮಾಡಲಾಗಿದ್ದರೂ ಬಹಳಷ್ಟು ಸಿನೆಮಾಗಳಲ್ಲಿ ಈಗಲೂ ರ್‍ಯಾಗಿಂಗ್ ದೃಶ್ಯಗಳನ್ನು ತೋರಿಸಲಾಗುತ್ತಿದೆ. ಪೋಲಿಯಂತಹ ನಾಯಕ ಮತ್ತು ಅವನ ಗೆಳೆಯರ ಗುಂಪು ನಾಯಕಿ ಮತ್ತು ಆಕೆಯ ಗೆಳತಿಯರಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಡುವ ದೃಶ್ಯಗಳನ್ನು ಪೋಲಿ-ಪ್ರೇಕ್ಷಕರಿಗೆ ಹೆಚ್ಚು ಇಷ್ಟವಾಗುವಂತೆ ಚಿತ್ರಿಸಲಾಗುತ್ತದೆ. ಇಷ್ಟೆಲ್ಲಾ ಕಿರುಕುಳದ ನಂತರವೂ ನಾಯಕಿ ಪೋಲಿ ಹೀರೋಗೆ ಒಲಿಯುವ ಕಥೆಗಳು ನಿಜಜೀವನದ ಪೋಲಿಗಳಿಗೆ ತಪ್ಪು ಸಂದೇಶ ರವಾನಿಸುತ್ತದೆ. ಹುಡುಗಿಯರಿಗೆ ಕಿರುಕುಳ ಒಳಗೊಳಗೆ ಇಷ್ಟವಾಗುತ್ತದೆ ಎಂಬ ತಪ್ಪುಕಲ್ಪನೆ ಪಡ್ಡೆಗಳ ಮನದಲ್ಲಿ ಅಚ್ಚಾಗುತ್ತದೆ.

ಇದಕ್ಕಿಂತಲೂ ಹೊಲಸಾದದ್ದು ಐಟಮ್ ಡ್ಯಾನ್ಸ್‌ಗಳು. ಈ ಅಸಹ್ಯ ಡ್ಯಾನ್ಸ್‌ಗಳಲ್ಲಿ ಅರೆಬೆತ್ತಲೆ ಹೆಣ್ಣು 25-30 ಕುಡುಕರ ನಡುವೆ ಹೊಲಸು ಹಾವಭಾವದೊಂದಿಗೆ ಬೇಕಾಬಿಟ್ಟಿ ಕುಣಿಯುತ್ತಾಳೆ. ಸುತ್ತಲೂ ಮುತ್ತಿಕೊಳ್ಳುವ ಪೋಲಿ ಪಾತ್ರಧಾರಿಗಳು ಅವಳನ್ನು ಹಸಿಯಾಗಿ ಹರಿದು ಮುಕ್ಕುವಂತೆ ಮುಗಿಬೀಳುತ್ತಾರೆ. ಆ ಹೆಣ್ಣು ಮತ್ತು ಗಂಡು ನರ್ತಕರ ಸೊಂಟ-ನಿತಂಬಗಳ ಚಲನೆ ಹೇಗಿರುತ್ತದೆಯೆಂದರೆ ಅವರು ಸಾಮೂಹಿಕ ಲೈಂಗಿಕ ಕ್ರಿಯೆಯಲ್ಲಿ ಅಥವಾ ನಿಂತುಕೊಂಡೇ ಸಂಭೋಗದಲ್ಲಿ ನಿರತರಾಗಿರುವಂತೆ ಅಸಹ್ಯವಾಗಿ ಚಿತ್ರಿಸಲಾಗುತ್ತದೆ. ಈ ಹೊಲಸು ಡ್ಯಾನ್ಸ್‌ಗೆ ಸರಿಹೊಂದುವಂತಹ ದ್ವಂದ್ವಾರ್ಥದ ಕೀಳು ಅಭಿರುಚಿಯ ಹಾಡನ್ನೂ ಜೋಡಿಸಲಾಗುತ್ತದೆ. ಈ ನೃತ್ಯಗಳು ಪಡ್ಡೆ ಪ್ರೇಕ್ಷಕರ ಅಂತರಾಳದಲ್ಲಿ ವಿಕಾರ ಹುಟ್ಟಿಸಿ, ಮಹಿಳೆಯರ ಕುರಿತು ಕೀಳುಭಾವನೆಯನ್ನು ಹುಟ್ಟು ಹಾಕುತ್ತದೆ. ಮೇಲಾಗಿ ಆಧುನಿಕ ಡ್ರೆಸ್ ಹಾಕುವ ಹೆಣ್ಣು ಚಂಚಲ ಬುದ್ಧಿಯವಳು, ಸುಲಭವಾಗಿ ದಕ್ಕುವವಳು ಎಂಬ ಮೂರ್ಖ ಕಲ್ಪನೆಯನ್ನು ಪಡ್ಡೆಗಳ ಮನದಾಳದಲ್ಲಿ ಸಿನೆಮಾಗಳು ಮೂಡಿಸುತ್ತಿವೆ.

ಒಂದು ಪತ್ರ

ಇದಕ್ಕೆ ವಿರುದ್ಧವಾದ ಇನ್ನೊಂದು 'ಮೈಂಡ್‌ಸೆಟ್' ಸಿನಿಮಾಗಳು ಅಚ್ಚು ಹಾಕುತ್ತಿವೆ. ಅದೇ 'ಭಾರತೀಯ ನಾರಿ' ಮಾನಸಿಕತೆಯ ತಪ್ಪು ಕಲ್ಪನೆ. ಅಂದರೆ ಗಂಡಸರು ನಾರಿಯರಿಗೆ ಹೊರಗಡೆ ಎಷ್ಟೇ ಕೀಳು-ಕ್ರೂರ ಹಿಂಸೆ ಕೊಟ್ಟರೂ ಮೃದು ಸ್ವಭಾವದ ಹೆಣ್ಣುಗಳು ತಾಳಿಕೊಳ್ಳುತ್ತಾರೆ, ಮನೆಯಲ್ಲಿ ತಮ್ಮ ಗಂಡಸರಿಗೆ ಅಥವಾ ಹಿರಿಯರಲ್ಲಿ ದೂರಿಕೊಳ್ಳುವುದಿಲ್ಲ ಎಂದು ಟಿವಿ ಸೀರಿಯಲ್‌ಗಳಲ್ಲಿ ತೋರಿಸಲಾಗುತ್ತದೆ. ಪರಿಣಾಮವಾಗಿ ಪುಂಡ ಯುವಕರಲ್ಲಿ ಸಾಧು ಸ್ವಭಾವದ ಮಹಿಳೆಯರಿಗೆ ಲೈಂಗಿಕ ಕಿರುಕುಳ ಕೊಡಲು ಭಂಡ ಧೈರ್ಯ ಹುಟ್ಟಿಸುತ್ತದೆ.

ಇದಕ್ಕೆ ಮನೋವೈಜ್ಞಾನಿಕ ಪರಿಹಾರವೆಂದರೆ ಲೈಂಗಿಕ ಕಿರುಕುಳದ ವಿರುದ್ಧ ಸಮಾಜದ ಎಲ್ಲ ಸ್ತರದ ಸ್ತ್ರೀಯರು (ಮೃದು ಸ್ವಭಾವದ ಮಹಿಳೆಯರು ಸಹಿತ) ತಕ್ಷಣ ಸಿಡಿದೇಳುತ್ತಾರೆ ಎಂದು ಕಠಿಣ ಸಂದೇಶ ಕಳುಹಿಸುವ ಕಥೆಯುಳ್ಳ ಟಿವಿ ಸೀರಿಯಲ್ ಹಾಗೂ ಸಿನಿಮಾಗಳು ಹೆಚ್ಚು ಹೆಚ್ಚು ಬರಬೇಕಾಗಿದೆ.

ಮನಶಾಸ್ತ್ರಜ್ಞರ ಪರಿಭಾಷೆಯಲ್ಲಿ 'ಡಿಪ್ರೈವ್ಡ್ ಸಿಂಡ್ರೋಮ್' ಅರ್ಥಾತ್ 'ಕೊರತೆ ಮನೋಸ್ಥಿತಿ' ಎಂಬ ಮನೋರೋಗವೊಂದಿದೆ. ಇದು ದೊಡ್ಡ ನಗರಗಳಲ್ಲಿ ಕೇವಲ ಗಂಡು ಹುಡುಗರಿಗೆ ಇರುವ ಶಾಲಾ-ಕಾಲೇಜುಗಳಲ್ಲಿ ಕಲಿತವರು ಅಥವಾ ಸಣ್ಣ ಊರುಗಳಲ್ಲಿ ಶಾಲಾ-ಕಾಲೇಜು ಕಲಿತ ಗಂಡು ಹುಡುಗರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಉತ್ತರ ಭಾರತದ ಸಣ್ಣ ನಗರಗಳಲ್ಲಿ ಇಂದಿಗೂ ಶಾಲಾ-ಕಾಲೇಜುಗಳಲ್ಲಿ ಹುಡುಗ- ಹುಡುಗಿಯರು ನೇರವಾಗಿ ಮಾತನಾಡುವಂತಿಲ್ಲ, ಅಲ್ಲಿ ಸಂಸ್ಕಾರದ ಹೆಸರಲ್ಲಿ ಹುಡುಗಿಯರು ನೇರವಾಗಿ ಗಂಡಸರ ಮುಖ ನೋಡಿ ಮಾತನಾಡದೇ ನೆಲ ನೋಡಿ ಮಾತನಾಡಬೇಕೆಂಬ ನಿರ್ಬಂಧಗಳಿವೆ. ಕೆಲವು ಮಡಿವಂತ ಕುಟುಂಬಗಳಲ್ಲಂತೂ ಸ್ವತಃ ಅಣ್ಣನೇ ತಂಗಿಯ ಮೈಮುಟ್ಟಿ ಮಾತನಾಡದಂತೆ ಹಿರಿಯರು ನಿರ್ಬಂಧಿಸುತ್ತಾರೆ. ಇಂತಹ ನಿರ್ಬಂಧಿತ ವಾತಾವರಣದಲ್ಲಿ ಬೆಳೆದ ಸಣ್ಣ ಊರಿನ ಯುವಕರಲ್ಲಿ ತಾವು ಜೀವನದಲ್ಲಿ ಅದೇನೋ ಮಹತ್ವವನ್ನು ಶಾಶ್ವತವಾಗಿ ಕಳೆದುಕೊಂಡ ಭಾವವಿರುತ್ತದೆ. ಈ ಅದುಮಿಟ್ಟ ಆಕಾಂಕ್ಷೆಗಳು ಅವರ ಮನದಲ್ಲಿ ಅವರಿಗೇ ಗೊತ್ತಿಲ್ಲದಂತೆ ವಿಕೃತಿಗಳನ್ನು ಹುಟ್ಟು ಹಾಕಿರುತ್ತವೆ.


ಸಲೀಸಾಗಿ ಇಂಗ್ಲಿಷ್ ಮಾತನಾಡಲು ಬಾರದ ಕೊರತೆಯೂ ಈ ಸಣ್ಣ ಊರಿನ ವಿದ್ಯಾವಂತ ಯುವಕರನ್ನು ಕಾಡುತ್ತಿರುತ್ತದೆ. ಇಂತಹವರು ದಿಲ್ಲಿ-ಮುಂಬೈಯಂತಹ ಆಧುನಿಕ ನಗರಗಳಿಗೆ ನೌಕರಿಗಾಗಿ ಬಂದಾಗ ಅಲ್ಲಿಯ ಮುಕ್ತ ವಾತಾವರಣ, ಹುಡುಗ-ಹುಡುಗಿಯರು ಫ್ರೀಯಾಗಿ ಬೆರೆಯುವುದು, ಸಿನಿಮಾ-ಶಾಪಿಂಗ್ ಮಾಲ್ ಸುತ್ತುವುದನ್ನು ನೋಡಿದಾಗ ಈ ಯುವಕರ ಅದುಮಿಟ್ಟ ಆಸೆಗಳು ಸ್ಫೋಟಗೊಳ್ಳುತ್ತವೆ. ಕೈಗೆಟುಕದ ದ್ರಾಕ್ಷಿ ಹುಳಿ ಎನ್ನುವಂತೆ ಮೊದಲು ಇದು 'ಈವ್ ಟೀಜಿಂಗ್'ಗೆ ಅವರನ್ನು ಪ್ರೇರೇಪಿಸುತ್ತದೆ. ನಂತರ ಇಂತಹವರಲ್ಲಿ ಹುಚ್ಚು ಧೈರ್ಯವಿದ್ದ ನಾಲ್ಕು ಜನ ವಿಕೃತರು ಕೂಡಿದಾಗ ಸಾಮೂಹಿಕ ಅತ್ಯಾಚಾರವೆಸಗುತ್ತಾರೆ.

ಇಂತಹ ಅತ್ಯಾಚಾರಗಳಲ್ಲಿ 90% ಅಪರಾಧಿಗಳು ಕೋರ್ಟ್‌ನಲ್ಲಿ ಖುಲಾಸೆಗೊಳ್ಳುತ್ತಿರುವುದು ವಿಕೃತ ಮನಸ್ಸಿನವರಿಗೆ ಹೆಚ್ಚಿನ ಮನೋಬಲ ಒದಗಿಸುತ್ತಿದೆ. ಹಾಗಾಗಿ ಕಾನೂನು ಬಲಗೊಂಡು ಅತ್ಯಾಚಾರಿಗಳು ಖುಲಾಸೆಗೊಳ್ಳುವುದು ಕಡಿಮೆಯಾದರೆ ಮಾತ್ರ ಖಂಡಿತ ಮುಂದೆ ಇಂತಹ ಘಟನೆಗಳಿಗೆ ಕಡಿವಾಣ ಬೀಳಬಹುದು.

ಮಂಗಳೂರಿನ ನೈತಿಕ ಪೊಲೀಸರೂ ಈ 'ಡಿಪ್ರೈವ್ಡ್ ಸಿಂಡ್ರೋಮ್' ಮನೋರೋಗ ಉಳ್ಳವರೇ ಆಗಿದ್ದಾರೆ. ಆದರೆ ಇದಕ್ಕೆ ಕೇವಲ ಸಂಸ್ಕೃತಿ ರಕ್ಷಣೆಯ ತೋರಲೇಪ ಇದೆ ಅಷ್ಟೇ. ಸಮಾಜಶಾಸ್ತ್ರಿಗಳು ಈ ಸಮಸ್ಯೆಗೆ ಪರಿಹಾರ ಹುಡುಕಲು ಸಹಾಯ ಮಾಡಬೇಕಿದೆ.

ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಪುಟ್ ಪುಟ್ ಸಂಗತಿಗಳ ಕತೆಗಾರ



ನಮ್ಮ ಸುತ್ತಮುತ್ತ ದೊಡ್ಡ ಸುದ್ದಿಯಾಗೋ ದೊಡ್ಡ ಸಂಗತಿಗಳು ನಡೀತವೆ. ಅವುಗಳ ನಡುವೆ ಅಂಥಾ ಸುದ್ದಿಯೇನಲ್ಲ ಅನ್ನಿಸೋ ಲೆಕ್ಕವಿಲ್ಲದಷ್ಟು ಪುಟ್ ಪುಟ್ ಸಂಗತಿಗಳು ನಡೀತಾವೆ-ನಮ್ಮ ಕಣ್ಣೆದುರಿಗೆ, ನಮ್ಮ ನಡುವೆ, ನಾವೇ ಭಾಗಿಯಾಗಿರೋ ಪುಟ್ ಪುಟ್ ಸಂಗತಿಗಳು, ಹರಿದು ಹಂಚಿ ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿರುವಂತೆ ಚೆಲ್ಲಿಕೊಂಡಿರೊ ಇಂಥ ಸಂಗತಿಗಳನ್ನು ಹೆಕ್ಕಿ ತಂದು 'ಇದರಲ್ಲೂ ನಮ್ಮ ಬದುಕು ಕಲಿಯೋಂಥದ್ದು ಏನೋ ಇದೆ ನೋಡ್ರಿ..' ಅಂತ ಜಾಣಜಾಣೆಯರಿಗೆ ಫಿಜೂಲ್ ಹರಟೆ ಹುರುದಲ್ಲಿ ಹೇಳ್ಳೋದಕ್ಕೆ ಈ ಬ್ಲಾಗ್ ಇರೋದು. ಲಾಗಾಯ್ತಿನ ನನ್ನ ಈ ನಂಬಿಕೆಯನ್ನು ಗಟ್ಟಿ ಮಾಡಿದ್ದು ತುಂಬಾ ಹಿಂದೆ ಓದಿದ ಗ್ಯಾಬೋನ (ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೇಜ್) ಪುಸ್ತಕ 'ಸ್ಟೋರಿ ಆಫ್ ಎ ಶಿಪ್ ವ್ರೆಕ್ಡ್ ಸೇಲರ್.'


ಗ್ಯಾಬೋ, ಕೊಲಂಬಿಯದಲ್ಲಿ 'ಎಲ್ ಎಸ್ಪೆಕ್ಟಡರ್' ಪತ್ರಿಕೆಯಲ್ಲಿ ವರ್ಷಾಂತರಗಳ ಕಾಲ ಪತ್ರಿಕಾ ವರದಿಗಾರನಾಗಿದ್ದ. ನೈಜ ಸುದ್ದಿ ಪ್ರಸಾರಕ್ಕೆ ಬದ್ಧವಾಗಿರುವ ಈ ಪತ್ರಿಕೆ, ಪ್ರಾರಂಭದಿಂದಲೂ (1887) ಪ್ರಭುತ್ವಗಳಿಗೆ ಅಪ್ರಿಯವಾಗಿದ್ದ ಪತ್ರಿಕೆಯಾಗಿದೆ. 1955, ಅಸಾಧ್ಯ ಕ್ರೌರ್ಯಕ್ಕೆ ಕುಖ್ಯಾತನಾಗಿದ್ದ ರೋಜಸ್ ಪಿನಿಲ್ಲಾನ ಮಿಲಿಟರಿ ಸರ್ವಾಧಿಕಾರದ ಕಾಲ. ಆ ವರ್ಷದ ಫೆಬ್ರವರಿಯಲ್ಲಿ ಇಡೀ ಕೊಲಂಬಿಯವನ್ನೇ ಗಮನ ಸೆಳೆದ ವಿದ್ಯಮಾನವೊಂದು ಘಟಿಸಿತು. ಕೊಲಂಬಿಯಾದ ನೌಕಾದಳದ ಯುದ್ಧ ನೌಕೆಯೊಂದು ರಿಪೇರಿಗಾಗಿ ಅಮೆರಿಕಾದ ಅಲ್ಬಾಮ ನೌಕನೆಲೆಗೆ ಹೋಗಿತ್ತು, ವಾಪಾಸು ಬರುವಾಗ ಕ್ಯಾರಬಿಯನ್ ಸಮುದ್ರದ ನಡುವೆ ಚಂಡಮಾರುತಕ್ಕೆ ಸಿಕ್ಕಿ ಅದರಲ್ಲಿದ್ದ ಎಂಟೂ ಜನ ನೌಕಾದಳದವರು ಸಮುದ್ರ ಪಾಲಾದರು. ನೌಕೆ ಮಾತ್ರ ಕೊಲಂಬಿಯಾದ ಬಂದರು ತಲುಪಿತು. ನಾಪತ್ತೆಯಾದವರಿಗಾಗಿ ನಾಲ್ಕು ದಿನ ಹುಡುಕಾಟ ನಡೆಯಿತು. ಪ್ರಯೋಜನವಾಗದೆ ಎಂಟೂ ಜನ ಜಲಸಮಾಧಿಯಾಗಿ ದ್ದಾರೆಂದು ಘೋಷಿಸಲಾಯಿತು. ಆದರೆ ಹತ್ತನೇ ದಿನ ಒಬ್ಬ ನಾವಿಕ, ಪುಟ್ಟ ಜೀವರಕ್ಷಕ ಹಡಗಿನಲ್ಲಿ ಅಲೆದಲೆದು ಕೊಲಂಬಿಯಾದ ದಡ ತಲುಪಿದ. ಹತ್ತು ದಿನ ಅವನು ಅನ್ನ ನೀರಿಲ್ಲದೆ ವಿಶಾಲ ಸಾಗರದಲ್ಲಿ, ಕಠಿಣ ಹವಾಮಾನದಲ್ಲಿ, ಏಕಾಂಗಿಯಾಗಿ ದಿಕ್ಕುಗಾಣದೆ ಅಲೆದು, ಉಳಿದು ದಡ ಸೇರಿದ್ದ ಅವನೇ ಇಪ್ಪತ್ತು ವರ್ಷದ ಲೂಯಿಸ್ ಅಲೆಸಾಂಡ್ರೋ ವೆಲಸ್ಕಾ, ರಾತ್ರೋರಾತ್ರಿ ಅವನು ರಾಷ್ಟ್ರದ ಕಣ್ಮಣಿಯಾಗಿಬಿಟ್ಟ; ಕೊಲಂಬಿಯಾದ ಪ್ರಭುತ್ವದ ಗಟ್ಟಿತನ, ದೇಶಾಭಿಮಾನಕ್ಕೆ ಸಂಕೇತವಾಗಿಬಿಟ್ಟ. ವೆಲಸ್ಕಾ ರೆಡಿಯೋದಲ್ಲಿ ದೇಶಾಭಿಮಾನದ ಮಾತಾಡಿದ, ಪ್ರಭುತ್ವದ ಹೊಗಳುಭಟ್ಟರಾಗಿದ್ದ ಪತ್ರಿಕೆಗಳು ಅವನ ಸಾಹಸದ ರಂಜಕ ಸುದ್ದಿಗಳನ್ನು ಪ್ರಕಟಿಸಿದವು. ತಾನು ಕಟ್ಟಿಕೊಂಡಿದ್ದ ವಾಚು ಒಂದು ಸೆಕೆಂಡು ಕೂಡ ನಿಲ್ಲದೆ ತನ್ನ ಕ್ಷಮತೆಯನ್ನು ಮೆರೆದಿದೆ ಎಂದೂ, ತಾನು ಹಾಕಿಕೊಂಡಿದ್ದ ಬೂಟು ಮುಕ್ಕಾಗದೆ ಉಳಿದಿದೆ ಎಂದೂ, ವೆಲಸ್ಕಾ, ಆಯಾ ಕಂಪೆನಿಗಳ ಜಾಹೀರಾತಿಗೆ ರೂಪದರ್ಶಿಯಾಗಿ ಕಾಸು ಮಾಡಿದ. ಕೊಲಂಬಿಯ ಸೌಂದರ್ಯರಾಣಿಯರು ಅವನಿಗೆ ಮುತ್ತಿಕ್ಕುವ ಫೋಟೋಗಳು ಪತ್ರಿಕೆಗಳ ಮುಖಪುಟದಲ್ಲಿ ಮಿಂಚಿದವು. ವೆಲಸ್ಕಾನಿಗೆ ನೌಕಾದಳದ ನೌಕರಿಯಲ್ಲಿ ಬಡ್ತಿ ಸಿಕ್ಕಿತು. ಹದಿನೈದು ದಿನಗಳ ಕಾಲ ಇಷ್ಟೆಲ್ಲಾ ನಡೆಯುತ್ತಿದ್ದಾಗ, 'ಎಲ್ ಎಸ್ಪೆಕ್ಟಡರ್' ನಂಥ ಸರಕಾರ ವಿರೋಧಿ ಪತ್ರಿಕೆಯ ವರದಿಗಾರರು ವೆಲಸ್ಕಾನ ಹತ್ತಿರ ಸುಳಿಯದಂತೆ ಸರಕಾರ ತಡೆಹಿಡಿದಿತ್ತು. ವೆಲಸ್ಕಾ ತನ್ನ ಸಾಹಸದ ಕಬ್ಬನ್ನು ಜಗಿದು ಜಗಿದು ರಸಪೂರ ರಂಜಕ ಸುದ್ದಿಯಾಗಿ, ನಿಧಾನಕ್ಕೆ ಬಣ್ಣ ಕಳೆದುಕೊಳ್ಳುತ್ತಿದ್ದಂತೆ, ಧುತ್ತನೇ 'ಎಲ್ ಎಸ್ಪೆಕ್ಟಡರ್' ಕಚೇರಿಗೆ ಬಂದು ತಾನು ಪತ್ರಿಕೆಗೆ ಕತೆ ಹೇಳೋದಕ್ಕೆ ಸಿದ್ಧ ಎಂದ. ವರದಿಗಾರನಾದ ಗ್ಯಾಬೋ, ಕತೆ ಎಕ್ಕ ಎದ್ದೋದ ಮೇಲೆ ಒಂಚೂರು ಕಾಸು ಮಾಡೋ ಆಸೆಯಿಂದ ಬಂದಿದ್ದಾನೆ ಅಂದುಕೊಂಡು 'ಬ್ಯಾಡ ಹೋಗಯ್ಯ' ಅಂದು ಕಳಿಸಿದ. ಆದರೆ ಪತ್ರಿಕೆಯ ನಿರ್ದೇಶಕನಾಗಿದ್ದ ಗಿಲ್ಮೋರೊ ಕ್ಯಾನೊಗೆ ಏನು ಹೊಳೆಯಿತೊ ಏನೋ, ವೆಲಸ್ಕಾನನ್ನು ವಾಪಸು ಕರ್ಕೊಂಡು ಬಂದು, ಅವನ ಕತೆ ಕೇಳಿ ಪತ್ರಿಕೆಯಲ್ಲಿ ಬರಿಯೋ ಭಾರವನ್ನು ಗ್ಯಾಬೋ ಮೇಲೆ ಹಾಕಿದ. ಗ್ಯಾಬೋ, ಒಲ್ಲದ ಮನಸ್ಸಿಂದ ವೆಲಸ್ಕಾನ ಜೊತೆ ಮಾತುಕತೆ ಶುರುವಿಟ್ಟುಕೊಂಡ.

ಗ್ಯಾಬೋ ದೊಡ್ಡ ಕತೆಗಾರ. ವೆಲಸ್ಕಾ ಮಾತು ಶುರುಮಾಡಿದ ಕೆಲವೇ ನಿಮಿಷಗಳಲ್ಲಿ ಅವನೆಂಥ ಚುರುಕಾಗಿ ಕತೆ ಹೇಳಬಲ್ಲ ಜಾಣ ಅಂತ ಗ್ಯಾಬೋಗೆ ತಿಳಿದುಹೋಯಿತು. ದಿನಕ್ಕೆ ಆರು ತಾಸು, ಹತ್ತು ದಿನ ಇಬ್ಬರೂ ಒಟ್ಟಿಗೆ ಕೂತರು. ವೆಲಸ್ಕಾ ಕತೆ ಹೇಳುತ್ತ ಹೋದ, ಗ್ಯಾಬೋ ಟಿಪ್ಪಣಿ ಮಾಡಿಕೊಳ್ಳುತ್ತಾ ಹೋದ. ಗ್ಯಾಬೋ ವೆಲಸ್ಕಾನಿಂದ ಹೊಸದೇನೇನೋ ಎಳೆಯಲು ತನ್ನೆಲ್ಲಾ



ವರದಿಗಾರನ ಚಾಣಾಕ್ಷತೆಯನ್ನೂ ಪ್ರಯೋಗಿಸಿ ಪ್ರಶ್ನೆ ಕೇಳುವನು. ವೆಲಸ್ಕಾ ತನ್ನ ಆರಾಮದಲ್ಲೇ ಕತೆ ಮುಂದುವರೆಸುವನು. ವೆಲಸ್ಕಾನಿಗೆ ಅದ್ಭುತ ನೆನಪಿನ ಶಕ್ತಿ, ಒಂದು ನಿಮಿಷದ ವಿವರಗಳನ್ನೂ ಮರೆಯದೆ ಅವನು ಕತೆ ಹೇಳುತ್ತಿದ್ದ. ಇಂತಿರಲು, ನಾಲ್ಕನೇ ದಿನ ಗ್ಯಾಬೋ ಕೇಳಿದ "ಆ ಚಂಡಮಾರುತದ ಬಗ್ಗೆ ಒಂಚೂರು ಹೇಳು". ವೆಲಸ್ಕಾ ತನ್ನ ನಿಧಾನದಲ್ಲಿ ಹೇಳಿದ "ಯಾವ ಚಂಡಮಾರುತದ ಬಗ್ಗೆ ಕೇಳುತ್ತಿದ್ದೀಯ! ಅಲ್ಲಿ ಅಂದು ಯಾವ ಚಂಡಮಾರುತವೂ ಬೀಸಿರಲಿಲ್ಲ, ಅದು ಸಾಮಾನ್ಯ ಸಮುದ್ರದ ನಡುವಣ ಬಿರುಗಾಳಿಯಷ್ಟೆ!" ಗ್ಯಾಬೋ ಆಶ್ಚರ್ಯಚಕಿತನಾಗಿ ಕೇಳಿದ-"ಅಲ್ಲಯ್ಯ! ಹಾಗಾದರೆ ನೌಕೆ ಆಯತಪ್ಪಿ ನೀವು ನೀರು ಪಾಲಾದದ್ದು ಹೇಗೆ?" ವೆಲಸ್ಕಾ ಹೇಳುತ್ತಾನೆ- "ಮಾರಾಯ! ಅದು ಯುದ್ಧ ನೌಕೆ. ಅದರಲ್ಲಿ ಅಮೆರಿಕದಿಂದ ಅಗ್ಗದಲ್ಲಿ ಸುಂಕ ತಪ್ಪಿಸಿ ತರಬಹುದು ಎಂಬ ಆಸೆಯಲ್ಲಿ ಟಿ.ವಿ., ಫ್ರಿಡ್ಜು 'ಮುಂತಾದುವನ್ನೆಲ್ಲಾ ಬೇಕಾಬಿಟ್ಟಿ ತುಂಬಲಾಗಿತ್ತು, ಆ ನೌಕೆ ಆ ಬಗೆಯ ಸರಂಜಾಮು ಸಾಗಣೆಗೆ ತಕ್ಕುದಾದ ನೌಕೆಯಲ್ಲವಾದ್ದರಿಂದ ತುಸು ಬಿರುಗಾಳಿಗೆ ಆಯ ತಪ್ಪಿತು. ನಾವೆಲ್ಲ ಸಮುದ್ರಕ್ಕೆ ಉರುಳಿದೆವು!" ಇದೊಂದನ್ನು ವೆಲಸ್ಕಾ ಯಾವ ಪ್ರಭುತ್ವ ಪರವಾದ ಪತ್ರಿಕೆಗಳಿಗೂ ಹೇಳಿರಲಿಲ್ಲ, 'ಎಲ್ ಎಸ್ಪೆಕ್ಟಡರ್'ನ ಗ್ಯಾಬೋನ ಮುಂದೆ ನಿರಾಳವಾಗಿ ಹೇಳಿದ! ಅದೊಂದು, ಅಲ್ಲಿಯವರೆಗಿನ ಅಬ್ಬರದ ತೋರಿಕೆಯ ಪ್ರಚಾರದ ರಂಗನ್ನೆಲ್ಲಾ ಉಡಾಯಿಸುವ ಸಾಮಾನ್ಯ ವಿವರವಾಗಿತ್ತು! ಗ್ಯಾಬೋ ಹವಮಾನ ಇಲಾಖೆಯ ವರದಿಯನ್ನು ಪರಿಶೀಲಿಸಿದ; ಹೌದು ಅಂದು ಕ್ಯಾರಬಿಯನ್ ಸಮುದ್ರದಲ್ಲಿ ಯಾವ ಚಂಡಮಾರುತವೂ ಎದ್ದಿರಲಿಲ್ಲ! ಹತ್ತು ದಿನಗಳ ಸಂದರ್ಶನದ ನಂತರ, ಹನ್ನೊಂದನೇ ದಿನದಿಂದ ಕಥಾನಕವು ವೆಲಸ್ಕಾನ ಹೆಸರಿನಲ್ಲೇ 'ಎಲ್ ಎಸ್ಪೆಕ್ಟಡರ್'ನಲ್ಲಿ ದೈನಿಕ ಧಾರಾವಾಹಿಯಾಗಿ ಪ್ರಕಟವಾಗತೊಡಗಿತು. ಜನ ಮುಗಿಬಿದ್ದು ಓದತೊಡಗಿದರು. ನಾಲ್ಕನೇ ದಿನದ ಕಥನದವರೆಗೂ ಸರಕಾರ, ತಾನು ಗಾಳಿ ತುಂಬಿಸಿ ಉಬ್ಬಿಸಿದ ಬಲೂನ್ ಪ್ರತಿಮೆ, ಅತ್ಯುತ್ತಮ ಕಥನ ಕಲೆಗಾರನೂ ಹೌದು ಎಂದು ಮೆಚ್ಚಿಗೆ ಸೂಸಿತು. ಆದರೆ ನಾಲ್ಕನೇ ದಿನದ 'ಚಂಡಮಾರುತವಿರಲೇ ಇಲ್ಲ' ಕತೆ ಪ್ರಕಟವಾದದ್ದೇ ಅಲ್ಲೋಲಕಲ್ಲೋಲ ಶುರುವಾಯಿತು. ಸರಕಾರ ಮೊದಲು 'ಎಲ್ ಎಸ್ಪೆಕ್ಟಡರ್'ನ ಪಿತೂರಿ ಎಂದಿತು. ವೆಲಸ್ಕಾ ತಾನೇ ಹೇಳಿದ್ದು ಎಂದ. ನಂತರ ಪ್ರಭುತ್ವ ವೆಲಸ್ಕಾನಿಗೆ ಆಮಿಷಗಳನ್ನು ಒಡ್ಡತೊಡಗಿತ್ತು. ಅವನು ಜಗ್ಗಲಿಲ್ಲ. ನಿನ್ನ ಕೆಲಸ ಕಳೆದುಕೊಂಡು ಬೀದಿಪಾಲಾಗುತ್ತೀಯ ಎಂದು ಧಮಕಿ ಹಾಕಿತು. ವೆಲಸ್ಕಾ ನಾನು ಸತ್ಯವನ್ನಲ್ಲದೇ ಬೇರೇನನ್ನೂ ಹೇಳಿಲ್ಲ ಎಂದ. ಸರಕಾರ ವೆಲಸ್ಕಾ ಮತ್ತು 'ಎಲ್ ಎಸ್ಪೆಕ್ಟಡರ್' ಪತ್ರಿಕೆ ಸೇರಿ ಅಪಪ್ರಚಾರ ಮಾಡುತ್ತಿವೆ, ಇದು ಸುಳ್ಳು ಕತೆ ಎಂದು ಬೊಬ್ಬೆ ಹೊಡೆಯತೊಡಗಿತು. ಅಷ್ಟು ಹೊತ್ತಿಗೆ ಜನ ಮುಗಿಬಿದ್ದು 'ಎಲ್ ಎಸ್ಪೆಕ್ಟಡರ್'ನ್ನು ಓದತೊಡಗಿದ್ದರು. ಬೇಡಿಕೆ ಹತ್ತುಪಟ್ಟು ಹೆಚ್ಚಿತು. ಕೊನೆಗೆ 'ಎಲ್ ಎಸ್ಪೆಕ್ಟಡರ್' ಈ ಕಥನದ್ದೇ ಒಂದು ವಿಶೇಷಾಂಕ ಹೊರತಂದಿತು. ಅಷ್ಟರಲ್ಲಾಗಲೇ, ಗ್ಯಾಬೋ ವೆಲಸ್ಕಾನಿಂದ ಅವನ ಸಹ ಪ್ರಯಾಣಿಕರ ವಿವರಪಡೆದು, ಅವರೆಲ್ಲಿದ್ದಾರೆ ಎಂದು ಪತ್ತೆ ಹಚ್ಚಿದ್ದ. ಅವರಿಂದ ಆ ನೌಕೆಯಲ್ಲಿ ಅವರು ತೆಗೆದುಕೊಂಡಿದ್ದ ಫೋಟೋಗಳನ್ನು ಪಡೆದ. ಆ ಫೋಟೋಗಳಲ್ಲಿ ಅವರು ನೌಕೆಯಲ್ಲಿ ತುಂಬಿದ್ದ ಟಿ.ವಿ., ಫ್ರಿಡ್ಜಿನ ಡಬ್ಬಾಗಳು ಉತ್ಪಾದಕರ ಛಾಪು ಢಾಣಾಗಿ ಕಾಣುವಷ್ಟು ನೀಟಾಗಿ ಕಾಣುತ್ತಿದ್ದವು. ಆ ಫೋಟೋಗಳನ್ನು ಕಥನದ ಜೊತೆ 'ಎಲ್ ಎಸ್ಪೆಕ್ಟಡರ್'ನ ವಿಶೇಷಾಂಕದಲ್ಲಿ ಪ್ರಕಟಿಸಲಾಯಿತು.

ಸರಕಾರ 'ಎಲ್ ಎಸ್ಪೆಕ್ಟಡರ್'ನ ಮೇಲೆ ಯಾವುದೋ



ಕೇಸು ಜಡಿದು, ಪತ್ರಿಕೆಯನ್ನು ಮುಚ್ಚಿಸಿತು. ವೆಲಸ್ಕಾನನ್ನು ನೌಕರಿಯಿಂದ ಕಿತ್ತು ಹಾಕಿತು. ಗ್ಯಾಬೋ ಕೊಲಂಬಿಯಾದಿಂದ ಗಡಿಪಾರಾಗಿ ಬೇರೆ ದೇಶಕ್ಕೆ ಓಡಿಹೋಗಬೇಕಾಯ್ತು. ಎರಡು ವರ್ಷಗಳ ನಂತರ ಪಿನಿಲ್ಲಾ ಪದಚ್ಯುತನಾದರೂ ಅಂಥದ್ದೇ ಮತ್ತೊಂದು ಸರಕಾರ ಅಸ್ತಿತ್ವಕ್ಕೆ ಬಂತು. ಇದಾದ ಹದಿನೈದು ವರ್ಷಗಳ ನಂತರ ಗ್ಯಾಬೋ ಈ ಕಥನವನ್ನು ಲೋಕಕ್ಕೆ ತಿಳಿಸಬೇಕು ಎಂಬ ಸದಾಶಯದಲ್ಲಿ ಒಬ್ಬ ಪ್ರಕಾಶಕರ ಜೊತೆ ಒಪ್ಪಂದ ಮಾಡಿಕೊಂಡ. ಗ್ಯಾಬೋ ಇದು ವೆಲಸ್ಕಾನ ಹೆಸರಲ್ಲಿ ಪ್ರಕಟವಾಗಬೇಕು ಎಂದ. ಅಷ್ಟರಲ್ಲಾಗಲೇ ಗ್ಯಾಬೋ ಪ್ರಸಿದ್ಧ ಸಾಹಿತಿಯಾಗಿದ್ದರಿಂದ ಗ್ಯಾಬೋನ ಹೆಸರಲ್ಲಿ ಪ್ರಕಟವಾಗುವುದಿದ್ದರೇ ಮಾತ್ರ ಪ್ರಕಟ ಮಾಡುತ್ತೇವೆ ಎಂದರು. ಗ್ಯಾಬೋಗೆ ಇದೆಂಥಾ ನಿರರ್ಥಕ ಕೆಲಸ ಎಂದು ಅನಿಸಿತು. ಆದರೆ ಒಪ್ಪಿಕೊಳ್ಳದಿದ್ದರೆ ಈ ಕಥನ ಪ್ರಕಟವಾಗುತ್ತಿರಲಿಲ್ಲ. ಕೊನೆಗೆ ತನ್ನ ಹೆಸರಲ್ಲಿ ಪ್ರಕಟಿಸಲು ಒಪ್ಪಿಕೊಂಡ. ಆದರೆ ಈ ಸತ್ಯಾಂಶವನ್ನು ಗ್ಯಾಬೋ ಮರೆಮಾಚದೆ ಪುಸ್ತಕದ ಮುನ್ನುಡಿಯಲ್ಲಿ ಬರೆದು, ನಿಜವಾದ ಕತೆಗಾರ ಲೂಯಿಸ್ ಅಲೆಜಾಂಡ್ರೋ ವೆಲಸ್ಕಾ ತಾನಲ್ಲ ಎನ್ನೋದನ್ನು ವಿವರಿಸಿದ್ದಾನೆ. ಜೊತೆಗೆ ಗ್ಯಾಬೋ ಬರೆಯುತ್ತಾನೆ-"ಘಟನೆ ನಡೆದ ಕೆಲವೇ ದಿನಗಳಲ್ಲಿ ವೆಲಸ್ಕಾ ಸಾಮಾನ್ಯ ಜೀವನದೊಳಗೆ ಬೆರೆತು ಮರೆತುಹೋದ. ಅವನೆಲ್ಲಿದ್ದಾನೆ, ಏನಾದ ಎನ್ನೋದು ನನಗೆ ತಿಳಿಯುವಂತಿರಲಿಲ್ಲ. ಹಲವು ತಿಂಗಳ ನಂತರದಲ್ಲಿ ವೆಲಸ್ಕಾನನ್ನು ಪತ್ರಕರ್ತನೊಬ್ಬ ಒಂದು ಬಸ್ಸು ಕಂಪೆನಿಯ ಏಜೆಂಟನ ಕುರ್ಚಿಯಲ್ಲಿ ಕಂಡ. ವೆಲಸ್ಕಾ ಸ್ವಲ್ಪ ದಪ್ಪವಾಗಿದ್ದ. ಕಾಲದ ವಿಷಣ್ಣತೆ ಅವನ ಮೂಲಕ ಹಾದುಹೋಗಿತ್ತು. ಆದರೆ ತನ್ನ ಮೂರ್ತಿಯನ್ನು ತಾನೇ ಡೈನಮೈಟ್ ಇಟ್ಟು ಉಡಾಯಿಸಿಕೊಳ್ಳಬಲ್ಲ ಅವನ ವ್ಯಕ್ತಿತ್ವದ ಪ್ರಭಾವಳಿ ಮಾತ್ರ ಅಚ್ಚಳಿಯದೆ ಉಳಿದಿತ್ತು."

ವೆಲಸ್ಕಾ ಒಬ್ಬ ಸಾಮಾನ್ಯನಾಗಿದ್ದ. ಪುಟ್ಟ ಸತ್ಯವೊಂದನ್ನು, ತನ್ನ ಜೊತೆಗಿದ್ದವರು ಹೇಳದ ಪುಟ್ಟ ಸತ್ಯವೊಂದನ್ನು ಹೇಳಲು ಎಂಥಾ ಬೆದರಿಕೆಯ ನಡುವೆಯೂ ಹಿಂಜರಿಯಲಿಲ್ಲ, ಮತ್ತೂ ಎಲ್ಲವನ್ನು ಕಳೆದುಕೊಂಡು ಕೊಲಂಬಿಯಾದ ಇತರೆಲ್ಲರಂತೆ, ಸಾಮಾನ್ಯ ಬವಣೆಯ ಬದುಕಿಗೆ ಒಗ್ಗುವುದು ಅವನಿಗೆ ಕಷ್ಟ ಅನ್ನಿಸಲಿಲ್ಲ. ಇಂಥ ಸಾಮಾನ್ಯನ ಸಹಜ ಸಂಕಲ್ಪ ಪಿನಿಲ್ಲಾನಂಥ ಸರ್ವಾಧಿಕಾರಿಯ ಪ್ರಭುತ್ವಕ್ಕೂ ಸವಾಲಾಯಿತಲ್ಲ! ವೆಲಸ್ಕಾನಂಥ ಸಾಮಾನ್ಯರು, ಹೀಗೆ ಅವನನ್ನು ಮಾದರಿಯಾಗಿಟ್ಟುಕೊಂಡು ಅಧಿಕಾರಿ ಎದುರು ನಿಂತರೆ ಹೇಗೆ ಎಂದು ಎಲ್ಲ ಪ್ರಭುತ್ವಗಳೂ ಆತಂಕಗೊಳ್ಳುತ್ತವೆ; ಸಾಮಾನ್ಯರು ಎದೆ ಎತ್ತಿ ನಿಲ್ಲುವಂಥ ಛಾತಿ ತೋರದಂತೆ ಬಗ್ಗುಬಡಿಯುವ ದಂಡನೆಯ ಮಾರ್ಗಗಳನ್ನು ಪ್ರಯೋಗಿಸುತ್ತವೆ. ಸಾಮಾನ್ಯರ ಜನರ ಈ ಛಾತಿಯೂ, ಪ್ರಭುತ್ವದ ದಂಡನೆಯ ವರಸೆಯೂ ಪುಟ್ ಪುಟ್ ಸಂಗತಿಗಳೇ ಇರಬಹುದು. ಸರಿ. ಆದ್ರೆ ಅವು ಆಳುವವರ ರಾಜಕೀಯ-ಆಳಿಸಿಕೊಳ್ಳುವವರ ಬುದ್ಧಿಭಾವದ ಬಗ್ಗೆ ತಿಳಿವಳಿಕೆಯನ್ನು ನೀಡೋದಿಲ್ಲವೇನ್ರಿ! ಹೌದು ಅನಿಸಿದರೆ ವೆಲಸ್ಕಾನಿಗೊಂದು ಸಲಾಂ ಹೇಳಿ. ಇಂಥ ಪುಟ್ಟ ಸಾಮಾನ್ಯ ಸಂಗತಿಗಳಲ್ಲಿ ಹುದುಗಿರುವ ಅಸಾಮಾನ್ಯತೆಯನ್ನು ಕಥಿಸಿದ ಗ್ಯಾಬೋಗೆ ಈಗ್ ಡಿಮಿನ್ಷಿಯ (ಶಾಶ್ವತ ಮರೆವಿನ ರೋಗ) ಅಂತೇ! ವೆಲಸ್ಕಾನಂಥವರ ಕತೆಯನ್ನು ಅರಿತು ಹೇಳುವ ಕಥನಾ ಶಕ್ತಿ ನನ್ನಂಥ ಸಾಮಾನ್ಯನಿಗೆ ದಕ್ಕಲಿ ಎಂದು ಹರಸಿ.

ರಾವಣಾಯನ

1
ಮೂಗು, ಕಿವಿ, ಹೃದಯ ಹರಿದುಕೊಂಡು
ಆಕ್ರಂದನವಿಡುತ್ತಿದ್ದ
ವಿಧವೆ ಶೂರ್ಪನಖಿಯ
ನೋಡಿ ನಕ್ಕಳು ಸೀತೆ
ಅದಕ್ಕಾಗಿ ತೆತ್ತ ಬೆಲೆ
ರಾಮಾಯಣ!

2
ಯಾರು ಹೇಳಿದರು
ರಾಮಾಯಣ ಹುಟ್ಟಿದ್ದು
ವಾಲ್ಮೀಕಿಯ 'ಮಾನಿಷಾದ'
ಎಂಬ ವಿಷಾದದೊಂದಿಗೆ ಎಂದು...?
ರಾಮಾಯಣ ಹುಟ್ಟಿದ್ದು
ಶೂರ್ಪನಖಿಯ 'ಅಣ್ಣಾ...'
ಎಂಬ ಆಕ್ರಂದನದೊಂದಿಗೆ
ಶೂರ್ಪನಖಿಯ ಶೋಕ
ರಾಮಾಯಣದ ಶ್ಲೋಕವಾಯಿತು

3
'ಅಣ್ಣಾ...' ಎಂಬ ಆಕ್ರಂದನಕ್ಕೆ
ರಾವಣ 'ಏನಾಯ್ತು ಬಂಗಾರ...?'
ಎಂದು ಧಾವಿಸಿದ
ಕಿವಿ, ಮೂಗು, ಮುಖ ಕಳೆದುಕೊಂಡ
ತಂಗಿಯ ಕಣ್ಣಲ್ಲಿ ಕಣ್ಣೀರಿನಂತೆ
ರಕ್ತ ಸುರಿಯುತ್ತಿತ್ತು!
'ಇದೇನಿದು ಬಂಗಾರ...'
ರಾವಣ ಮಡಿಲಲ್ಲಿಟ್ಟು ಕೇಳಿದ
'ನಾಡಿನಿಂದ ಬಂದವರು
ಈ ಸ್ಥಿತಿಗೆ ತಂದರು'
ಶೂರ್ಪನಖಿ ಗಳಗಳನೆ ಅತ್ತಳು
'ನೀನೇನು ತಪ್ಪು ಮಾಡಿದೆ'
'ನಾನವರ ಇಷ್ಟ ಪಟ್ಟೆ'

ಅಷ್ಟೇ...
ಮುಂದೆ ರಾಮಾಯಣ ನಡೆಯಿತು
ತಂಗಿಗಾಗಿ ಪ್ರಾಣ ಕೊಟ್ಟ
ಅಣ್ಣನ ಕತೆ
ಜನಮನದಲ್ಲಿ ಹಾಡಾಯಿತು....!!

● ಬಿ.ಎಂ.ಬಷೀರ್



...ರಾಮುಲು ಮುಖ್ಯಮಂತ್ರಿಯಾದ್ರೆ ರಾಮರಾಜ್ಯ ಗ್ಯಾರಂಟಿ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಯಾಕಪ್ಪ ಯಲ್ಲಾರು ಹಿಂಗೆ ಡಲ್ಲಾಗಿ ಕುಂತಿದ್ದಿರಿ?" ...ಮ ವಾಟಿಸ್ನೆ ಬಂದ.

"ಇನ್ನೇನು ಮಾಡನ್ನ, ನಿನಿಗಾರ ಕರಕಂಡೋಗಿ ಕುಸಿ ...ತೋರವುರೆ. ನಮಿಗ್ಯಾರಿದ್ದರು" ಎಂದಳು ಜುಮ್ಮಿ.

"ಅಂಥೋರ್‍ಯಾರು ಅವುನಿಗೆ ಸಿಕ್ಕದ್ರೀಗ?" ಎಂದ ಉಗ್ರಿ.

"ಅವುನು ರಾಮುಲು ಪಾರ್ಟಿಯೋರ ಜ್ವತೆ ಓಡಾಡ್ತ ...ನೆ ಕಂಡ್ಳ."

"ಅಂಗಾದ್ರೆ ಜೋರಾಗ್ಯವುನೆ ಬುಡು. ಇನ್ನು ಮುಂದೆ ...ನ್ನ ಮಾತಾಡಸಕ್ಕಾಗದಿಲ್ಲ, ಅಲವೇನೊ ವಾಟಿಸ್ನೆ?"

"ನಾನು ಯಲ್ಲಾ ಪಾರ್ಟಿಯೋರ ಜೊತೆ ಇರತಿನಿ ...ಾ ಉಗ್ರಿ. ಒಂಥರಾ ಜರ್ನಲಿಸ್ಟಿದ್ದಂಗೆ. ನನಿಗೆ ಯಲ್ಲಾ ...ರ್ಟಿಯೋರ ಮಾತೂ ಬೇಕು. ಅದ್ಕೆ ರಾಮುಲು ...ರ್ಟಿಯೋರ ಜೊತೆ ರಾಯಚೂರಿಗೋಗಿದ್ದೆ."

"ತಗಳಪ್ಪ ಅಲ್ಲಿಗಂಟ ಹೋಗಿದ್ದಾ?"

"ಊ ಕಣೊ. ಅದೂ ಇನೋವಾದಲ್ಲಿ ಹೋಗಿದ್ದೆ ...ತ್ತೆ."

"ಅಲ್ಲಿಗ್ಯಾಕೋಗಿದ್ದೆ?"

"ನಮ್ಮ ರಾಮುಲು ಇದ್ದಕ್ಕಿದ್ದಂಗೆ ಗಣಿ ಧೂಳಿಂದ ...ಷ್ಠವಿಸಿರೊ ಹಿಂದುಳಿದ ವರ್ಗಡ ನಾಯಕ. ಅಂಗಾಗಿ ...ಬರಿಗಿಂತ ಕ್ಯಳಗಿರೊ ಯಲ್ಲಾ ಹಿಂದುಳಿದ ಜನಗಳ ... ಮಾಡು ಅಂತ ಓಲ್ಡ್ ಜರ್ನಲಿಸ್ಟೊಬ್ಬ ಸಲಹೆ ...ಟ್ಟನಂತೆ."

"ಕುರುಬರನ್ಯಾಕೆ ಬುಟ್ಟಾ?"

"ಕುರುಬ್ರು ಸಿದ್ದರಾಮಯ್ಯನ ಹಿಂದೆ ಕುರಿ ಮಂದೆ ...ವಂಟವುರಂತೆ. ಅಂಗಾಗಿ ಅವುರಿಗೆ ಕುಡಿಸಿ, ತಿನ್ನಿಸಿ, ...ಚಾರ್ಜು ಕೊಟ್ಟು ಕರಕಂಡು ಬಂದು ಕಳಸದು ...ಟ್ಟು ಅಂತ ಹೇಳಿದರಂತೆ. ಅದ್ಕೆ ಅವುರ ಬುಟ್ಟು ...ಲ್ಲಾ ಜಾತಿ ಜನಗಳ ಸಭೆ ಕರದಿದ್ದ. ರಾಯಚೂರಿಗೆ ...ೂ ಹೋಗಿದ್ದೆ."

"ಸಭೆ ಜೋರಾಗಿತ್ತೆ?"

"ಜೋರಾಗಿತ್ತು ಅಂತ ಕೇಳ್ತಿರಾ? ಅಂಥಾ ಬಿಸಿಲಲ್ಲೂ ...ಲ್ಲೊಂದು ಜನ ಸೇರಿದ್ರು."

"ಈಗೇನು ಜನ ಸೇರಿಸಬವುದು ಬುಡೊ. ನೀನು ...ವುದೇ ಪಾರ್ಟಿ ಸಭೆ ಮಾಡು. ಕರಿಯದು, ಕಳುಸದರ ...ತಿಗೆ ಒಳ್ಳೆ ಬಟಾವಡೆ ಇದ್ರೆ ಜನ ಸೇರ್ತರೆ."

"ಅದಿನ್ನೆಷ್ಟು ದುಡ್ಡಿದ್ದತ್ಲ ಅವುಂತ?" ಎಂದ ಕಾಳಮಾವ.

"ಅದೆಷ್ಟು ದುಡ್ಡು ಅಂತ ಕಂಡೋರಿಲ್ಲ ದೊಡ್ಡಪ್ಪ. ...ಯಚೂರು ಇತಿಹಾಸ ಕಂಡರಿಯದಷ್ಟು ಜನ ಸೇರಿಸಿದ್ದ. ...ರಿಗ್ಯಲ್ಲ ದುಡ್ಡು. ಇನ್ನು ಸ್ಟೇಜಂತೂ ನಮ್ಮೂರಗಲ ...ತ್ತು. ಅದಕ್ಕೆ ದುಡ್ಡು, ಅದರ ಮ್ಯಾಲಿದ್ದ ಜನಗಳಿಗೆ ...ಡ್ಡು, ಯಲ್ಲಾರಿಗೂ ದುಡ್ಡು. ಅಂತೂ ಅವುನು ಪಾರ್ಟಿ ...ಡಿದಾಗಿಂದ ಇಲ್ಲಿವರಿಗೆ ಖರ್ಚು ಮಾಡಿರೊ ದುಡ್ಡ ...ೀಡಿದ್ರೆ- ಬಳ್ಳಾರಿ ಗಣಿ ಗುಂಡಿ ಅಳಿಬೇಕಾಯ್ತದೆ ...ೊಡ್ಡಪ್ಪ."

"ಸರಿ. ಇವುನ್ಯಾಕೆ ಜೈಲಿಗೋಗಲಿಲ್ಲಾ?"

"ಯಾಕೋಗಲಿಲ್ಲ ಅಂದ್ರೇ, ಸಂತೋಷ್ ಹೆಗಡೆ ಕೊಟ್ಟ ...ದಿಲಿ ಇವುನ ಹೆಸರಿತ್ತೇ ಹೊರತು ರೆಡ್ಡಿ ತರ ಅಕ್ರಮ ...ಪ್ರಸ್ತಾಪ ಇರಲಿಲ್ಲವಂತೆ. ರೆಡ್ಡಿ ಅಧಿಕಾರ ಮಾಡಬೇಕಾದ್ರೆ ...ಮುಲು ಜಾತಿ ಓಟು ಬೇಕಾಗಿತ್ತು. ಅದ್ಕೆ ...ನೆಸರೇಳಿಕೊಂಡು ಅವುರು ಮೇದ್ರು, ಸಿಗಾಯ್ಕಂಡ್ರು. ...ಕಾರ ಏನಾದ್ರು ಸಂತೋಷ್ ಹೆಗಡೆ ವರದಿ ತಗಂಡು ಕ್ರಮ ತಗಂಡ್ರೆ ರಾಮುಲು ಹೋಗಿ ರೆಡ್ಡಿ ಜೊತೆ ಸೇರಿಕಳದು ಗ್ಯಾರಂಟಿ."

"ಸರಕಾರೆಲ್ಲಿ ಕ್ರಮ ತಗತ್ತದೊ? ಇಲ್ಲೆ ರಾಮುಲು ತರದೋರು ಬೇಕಾದಷ್ಟು ಜನ ಬಿದ್ದವುರೆ. ಅಲವೇನೊ?" ಎಂದ ಉಗ್ರಿ.

"ಎಜ್ಯಾಕ್ಟ್ಲಿ ಕರಟ್ ಕಣೊ. ರಾಮುಲು ಮೀರುಸೋರು ಭಾಳ ಜನವುರೆ. ಆದ್ರು ಸದ್ದಿಕೆ ರಾಮುಲು ಹಾರಾಡ್ತಯಿರದು ರೆಡ್ಡಿ ದುಡ್ಡಿನಿಂದ."

"ಅಜ್ಜಿ ಹೊಸ್ತಿದ್ಯಲ್ಲ ಅಜ್ಜನ ಉಡುದಾರಕ್ಕಾಯ್ತು ಅನ್ನಂಗೆ, ರೆಡ್ಡಿ ದುಡದದ್ದೆಲ್ಲಾ ರಾಮುಲು ಪಾರ್ಟಿಗಾಯ್ತು ಅನ್ನಂಗಾಯ್ತಲ್ಲೊ."

"ಮುಂದೆ ಪವರಿಗೆ ಬರಬೇಕು ಅಂದ್ರೆ ಖರ್ಚು ಮಾಡ್ಬೇಬೇಕಪ್ಪ."

"ಅಂಗರೆ ರಾಮುಲು ಪಾರ್ಟಿ ಪವರಿಗೆ ಬತ್ತದಾ?"

"ಯಾಕೆ ಡವುಟೇನೊ ಉಗ್ರಿ? ಮುಂದಿನ ಮುಖ್ಯಮಂತ್ರಿ ರಾಮುಲು ಅಂತ ಅನವುನ್ಸ್ ಮಾಡಿ ಯಾವ ಕಾಲಾಯ್ತು, ಇತ್ತೀಚೆಗೆ ಅವುನ ಪಾರ್ಟಿ ಕೆಲವುರು ಖಾತೆನೆ ಹಂಚಗಂಡ್‌ವುರೆ, ಏನೇ ಆದ್ರು ಅವುನೊಂದು ಸರ್ತಿ ಮುಖ್ಯಮಂತ್ರಿ ಆಗಬೇಕು ಕಣೊ."

ಅದು ಅಧಿಕಾರಕ್ಕೆ ಬಂದಾಗ ಹೆಗಡೆ ಸಿಎಮ್ಮಾದ್ರು. ನಂತರ ಬಮ್ಮಾಯಿ ಆದ. ಆನಂತರ ತಿರಗ ಪವರಿಗೆ ಬಂದಾಗ, ದ್ಯಾವೇಗೌಡಾದ. ನಂತರ ಪಟೇಲಾದ. ಆಮ್ಯಾಲೆ ಬಿ.ಜೆ.ಪಿ ಜೊತೆ ಸೇರಿಕಂಡಾಗ ಕುಮಾರಣ್ಣ, ಎಡೂರಪ್ಪ, ಸದಾನಂದ, ಶೆಟ್ಟರ್. ನಾಚಿಗಾಗಬೇಕು ಈ ಸೂಳೆ ಮಕ್ಕಳಿಗೆ ಅಂತ ರಾಮುಲು ಕೇಳದು ನ್ಯಾಯದಾಗ್ಯದೆ."

"ಆ ತರ ಕೇಳತಾಯಿದ್ದನಾ ಅವುನು?"

"ಅವುನಿಗೆಲ್ಲಿ ಅವ್ಯಲ್ಲ ಹೊಳೀತವೊ. ಅವುನತ್ರ ಸಂಬಳಕಿರೊ ಜನ ಹೇಳಿಕೊಡ್ತರೆ. ಹೇಳಕ್ಕೆ ಬರಲಿಲ್ಲ ಅಂದ್ರೆ ಬರಕೊಟ್ಟು ಬಾಯಿಪಾಠ ಮಾಡುಸ್ತರೆ."

"ಅಂಗರೆ ಬಾಯಿಪಾಠ ಮಾಡುಸ್ತರೇನ್ಲ?"

"ಊ ಕಣಕ್ಕ. ಆದ್ರು ಪಾಪ ರಾಷ್ಟ್ರೀಯ ಪಕ್ಷ ಅನ್ನಕ್ಕೆ ರಾಷ್ಟ್ರಪಕ್ಷಿ ಅಂತನೆ. ಮುನಿ ಪುಂಗವರು ಅನ್ನಕ್ಕೆ ಮನಿಪುಂಗಿಗಳು ಅಂತನೆ. ಅವುನ ಕನ್ನಡ ಮಾತು ಕೇಳಿದ್ರೆ ದಿನವ್ಯಲ್ಲ ನಗತಿ ಕಣಕ್ಕ ನೀನು."

"ಆದ್ಯಾಕಂಗೆ ಮಾತಾಡ್ತನೆ?"

"ಅವುನು ಮನೆಲಿ ಮಾತಾಡದು ತೆಲುಗು, ಬೀದಿಲಿ



"ನಿನಿಗೇನಾಯ್ತೋ?!"

"ನನಿಗೇನೂ ಆಗಿಲ್ಲ, ಅಂಗೇ ಸುಮ್ಮನೆ ಚರ್ಚೆ ಮಾಡದಾದ್ರೆ, ಕರ್ನಾಟಕದಲ್ಲಿ ದೇವರಾಜ ಅರಸು ಬರೋದಕ್ಕಿಂತ ಮದ್ಲು ಲಿಂಗಾಯತರದ್ದೇ ರಾಜ್ಯಭಾರಾಗಿತ್ತು, ನಮ್ಮ ಪೈಕಿ ಕ್ಯಂಗಲ್ ಹನುಮಂತಯ್ಯ ಇದ್ರು. ಅವುನು ವಿಧಾನಸೌಧ ಕಟ್ಟಿದ್ರೂ ಅದರೊಳಿಕೆ ಹೋಗಕ್ಕೆ ಬುಡ್ಲಿಲ್ಲ."

"ಅದೇನೊ ನಿಜ."

"ಒಂದು ಮೂರು ತಿಂಗಳು ಕಡಿದಾಳು ಮಂಜಪ್ಪ ಇದ್ರು. ಅವುರು ಹಿಂದೆ ಬಂದರೆ ಹಾಯದ, ಮುಂದೆ ಬಂದರೆ ಒದೆಯದ ಗೋವಿನ ಗೀತೆ ರಾಜಕಾರಣಿಯಾಗಿದ್ರು. ಅವುರಾದ ಮ್ಯಾಲೆ ತಿರಗ ಇನ್ನೊಬ್ಬ ಒಕ್ಕಲಿಗರೋನು ಮುಖ್ಯಮಂತ್ರಿ ಆಗಬೇಕಾದ್ರೆ ದೇವೇಗೌಡ್ರೇ ಬರಬೇಕಾಯ್ತು. ಜನತಾದಳ ಮಾಡಿರದು ಮೇಲುಜಾತಿ ರಾಜಕಾರಣ ಕಣೊ.

ಮಾತಾಡದು ಕನ್ನಡ. ಅಂಗಾಗಿ ಆಕಡಿಂದ ಬತ್ತರಲ್ಲಿ ಕುರುಮಾಮರು ಅಂಗೆ ಮಾತಾಡ್ತನೆ. ಆದ್ರು ಹೃದಯ ವಳ್ಳೆದಂತೆ. ಕೇಳಿದಷ್ಟು ದುಡ್ಡು ಕೊಡ್ತನೆ. ಅದ್ಕೆ ಅವುನತ್ರಕ್ಕೆ ಕಳ್ಳರು, ಸುಳ್ಳರು, ಲಫಂಗರು, ನೀಚರು, ಪೇಪರ್‌ನವುರು, ಕೆಲುವು ಲಾಯರ್‌ಗಳು ಹೋಗಿ ಸಂತಿಗಿಂತ ಮೊದಲೇ ಗಂಟುಕಳ್ಳರು ಸೇರಿದಂಗೆ ಮುತ್ತಿಗಂಡವುರಂತೆ ಕಣಕ್ಕ. ನಮ್ಮಂಥೋರಿಗೆ ಜಾಗನೆಯಿಲ್ಲ ಅಲ್ಲಿ."

"ಜಾಗ ಸಿಕ್ಕಿದ್ರೆ ಹೋಯ್ತಿದ್ದಾ?"

"ಹೋದ್ರು ಅಲ್ಲಿ ಇರಕ್ಕಾಗದಿಲ್ಲ ಕಣಕ್ಕ ಅಲ್ಲಿ ಲಂಕೇಶ್ ಪತ್ರಿಕೆ ರವೀಂದ್ರ ರೇಷ್ಮೆ ಅಂತ ಅವುನೆ. ಅವುನೇನು ಮಾಡ್ತನವ್ನ ಅಂದ್ರೇ 'ರಾಮುಲು ಬ್ರದರ್, ನಿಮಗೆ ಸಾಮಾಜಿಕವಾಗಿ ಮರಿಯಾದಿ ಸಿಗಬೇಕು ಅಂದ್ರೇ ಈ ವಾಟಿಸ್ನೆ ತರದವುರಿಂದ ದೂರ ಇರಿ' ಅಂದುಬುಡ್ತನೆ. ಆಗ ನಾನು ಅನಿವಾರ್ಯವಾಗಿ ಜಾಗ ಖಾಲಿ ಮಾಡಬೇಕಾಯ್ತದೆ."

"ಅದ್ಯಾಕಂಗಂತನೋ. ನೀನೇನು ರೇಷ್ಮೆ ಮಟ್ಟೆ ಮ್ಯಾಲೆ ವಡಿತಿಯ? ನಿನ್ನ ಕೂಲಿ ನಿಂದು, ಅವುನ ಕೂಲಿ ಅವುಂದು. ಅದಕ್ಯಾಕೆ ಜಗಳ?" ಎಂದ ಉಗ್ರಿ.

"ಅಂಗಾಗದಿಲ್ಲ ಕಣೊ ಉಗ್ರಿ. ನನಿಗೆ ಸ್ವಾಭಿಮಾನ ಇರದರಿಂದ, ಅಲ್ಲಿ ಭಾಳ ವೊತ್ತು ನಿಲ್ಲಕ್ಕಾಗದಿಲ್ಲ, ಆದ್ರು ರಾಮುಲು ಮುಖ್ಯಮಂತ್ರಿ ಆದ್ರೆ ರಾಮ ರಾಜ್ಯ ಗ್ಯಾರಂಟಿ ಬತ್ತದಂತೆ ಕಣಕ್ಕ."

"ಯಾರ್ಲ ಅಂಗಂದೋರು?"

"ರಾಮುಲುನೆ ಅಂಗಂದವುನೆ ಕಣಕ್ಕ. ಅವುನು ಮುಖ್ಯಮಂತ್ರಿ ಆದ್ರೆ, ಆದ್ರೇ ಏನು ಆಗೇ ಆಯ್ತನಂತೆ. ಆದಮೇಲೆ ಯಲ್ಲಾ ಹಿಂದುಳಿದ ಜಾತಿ ಮಕ್ಕಳನ್ನು ಸ್ಕೂಲಿಗೆ ಸೇರುಸ್ತನಂತೆ. ಸೇರಿಸಿದ ಮ್ಯಾಲೆ ಆ ಹುಡುಗ ಅಥವ ಹುಡುಗಿ ತಾಯಿ ಹೆಸರಿಗೆ ಪ್ರೈಮರಿ ಸ್ಕೂಲಾದ್ರೆ ಐನೂರುಪಾಯಿ ಬ್ಯಾಂಕಿಗೆ ಬಂದು ಜಮಾ ಆಯ್ತದೆ. ಹೈಸ್ಕೂಲು ಸೇರಿದ್ರೆ ಏಳುನೂರುಪಾಯಿ ಬಂದು ಜಮಾ ಆಯ್ತದೆ. ಕಾಲೇಜುಡುಗರಿಗೆ ಪ್ರತಿ ತಿಂಗಳ ಸಾವುರುಪಾಯಿ ಕೈಗೇ ಬತ್ತದೆ. ಯಂಗದ್ಯಕ್ಕ ಪ್ರೊಗ್ರಾಮು?"

"ಒಡೊ ಹುಡುಗರ ಖರ್ಚಿಗಾಯ್ತು, ಉಳದೋರಿಗೆ?"

"ಇಡೀ ಕರ್ನಾಟಕದ ಬಡವರಿಗೆ ಎರಡೆಕರೆಯಂಗೆ ಹೊಲ ಕೊಡ್ತನಂತೆ. ಅದಕ್ಕೆ ಬೀಜ, ಗೊಬ್ಬರ, ಮಾರ್ಕೆಟಿಂಗ್, ಟ್ವೆಂಟಿಫೋರ್ ಅವರ್ ಕರಂಟ್ ಯಲ್ಲಾ ಕೊಡ್ತನಂತೆ. ಜನಗಳಿಗೆ ಉಷಾರಿಲ್ಲ ಅಂದ್ರೆ ಆಂಬುಲೆನ್ಸ್ ಬಂದು ಆಸುಪತ್ರಿಗೆ ತಗಂಡೋಗಿ ತಂದುಬುಡ್ತದಂತೆ."

"ಜೀವಸಯಿತ?"

"ಏನಾದ್ರು ಆಗಬವುದು ಕಣೊ ಉಗ್ರಿ. ಈವನ್ ದನಗಳಿಗೆ ನೋವು ಬಂದ್ರೆ, ಜ್ವರ ಬಂದ್ರೆ, ರೆಡ್ಡಿ ಆಂಬುಲೆನ್ಸ್ ಬಂದು ತಗಂಡೋಗಿ ಉಸಾರು ಮಾಡಿ ತಂದುಬುಡ್ತದಂತೆ."

"ತಮಾಸಿ ಮಾಡಬಾರದು ಕಂಡ್ಲ."

"ತಮಾಸಿಯಲ್ಲ ಕಣಕ್ಕ. ಅವುನ ಪ್ರಣಾಳಿಕೆನೆ ಅದಂತೆ. ಇದಿಷ್ಟೇ ಅಲ್ಲ, ಅರವತ್ತಾದ್ರೆ ಸಾಕು, ಹೆಂಗಸು ಗಂಡಸು ಅಂತ ಮುಖ ನೋಡದೆ ಪೋಸ್ಟು ಮ್ಯಾನು ಬಂದು ಸಾವುರುಪಾಯಿಕೊಟ್ಟು, ಸಯಿನು ತಗಂಡೋಯ್ತನೆ. ಆಗ ಇಡೀ ಕರ್ನಾಟಕದ ಏಜಡ್ ಪರಸನ್ನು, ಇದೇತರ ಕುಂತಗಂಡು ಮಾತಾಡಬವುದು. ಕಾಲ ಕಳಿಬವುದು. ಸುಖವಾಗಿರಬವುದು."


"ಸರಿ, ಅದಕ್ಯಲ್ಲ ದುಡ್ಡ ಎಲ್ಲಿಂದ ತಂದನೊ?"

"ಕರ್ನಾಟಕದಲ್ಲಿ ಏನು ಒಸಿ ಗಣಿ ಇದ್ದವೆ. ಬಳ್ಳಾರಿ, ತುಮಕೂರು, ಕುದ್ರೆಮುಖ ಇಲ್ಯಲ್ಲ ಇನ್ನೂ ಭಾರಿ ಐರನ್ ಓರದೆ. ಆದ್ರಿಂದ ರಾಮರಾಜ್ಯ ಬಂದೇ ಬತ್ತದೆ. ನೊಡವುಟ್!" ■

ಯುದ್ಧ ಮತ್ತು ಶಾಂತಿ



ಮೊನ್ನೆ ಶಿವಮೊಗ್ಗದ ಕೆಲವರು ಗೆಳೆಯರು ನನಗೆ ಕಾಗದ ಬರೆದು, ...ನವ್ರು, ತೇಜಸ್ವಿ, ಅನಂತಮೂರ್ತಿ ಎಲ್ಲರೂ ಒಂದು ಕಡೆ ಸೇರಿ ನಿಮ್ಮಲ್ಲಿರುವ ...ದ್ವೇಷ, ಮನಸ್ತಾಪವನ್ನು ನಿವಾರಿಸಿಕೊಳ್ಳಬೇಕು' ಎಂದು ಹೇಳಿದರು. ನನಗೆ ಅವರ ಮಾತನ್ನು ಗಮನಿಸಿ ನಗೆಬಂತು: 'ನಾನು ಯಾರೊಂದಿಗೂ ಜಗಳ ಆಡಿಲ್ಲವಾದ್ದರಿಂದ ಆದರಿಂದಾದ ಮನಸ್ತಾಪವನ್ನು ಬಗೆಹರಿಸಿಕೊಳ್ಳಲು ಯತ್ನಿಸುವುದು ಹಾಸ್ಯಾಸ್ಪದ' ಅಂದೆ. ನಿಮಗೆ ಗೊತ್ತಿಲ್ಲದೆ ಇರಬಹುದು. ನಾನು ಅನಂತಮೂರ್ತಿ, ತೇಜಸ್ವಿ ಮುಂತಾದವರ ಬಗ್ಗೆ ಒಳ್ಳೆಯ ಮಾತಾಡಿ ಅವರ ಕೃತಿಗಳನ್ನು, ವ್ಯಕ್ತಿತ್ವವನ್ನು ವಿಮರ್ಶಿಸುತ್ತೇನೆ. ನಾನು ಅನಗತ್ಯವಾಗಿ ದ್ವೇಷಿಸಲು ಶುರುಮಾಡಿದರೆ ಆದರಿಂದ ನನಗೇ ಅನ್ಯಾಯವಾಗುತ್ತದೆ; ನನ್ನ ಗ್ರಹಿಕೆಯ ಶಕ್ತಿ ಕಡಿಮೆಯಾದರೆ ಅದು ಕೆಟ್ಟದಲ್ಲದೇ ಮತ್ತೇನು?



ಕೆಲವರಿಗೆ ಅಧಿಕಾರದ ಆಶೆ ಇರುತ್ತದೆ, ಕೆಲವರಿಗೆ ಆಸ್ತಿ, ಹಣದ ಆಶೆ. ಇಲ್ಲಿ ನಮ್ಮ ನಿರುಮ್ಮಳ ಬದುಕಿಗಾಗಿ ಖ್ಯಾತಿ, ಅಧಿಕಾರ, ಆಸ್ತಿ, ಹಣ ಎಲ್ಲ ಬೇಕು ಎನ್ನುವುದು ಸರಳ ಸತ್ಯ. ಇವೆಲ್ಲವುಗಳ ನಡುವೆ ಸಿಕ್ಕಿಹಾಕಿಕೊಂಡ ನಾವೆಲ್ಲ ವಿಶಿಷ್ಟ ರೀತಿಯಲ್ಲಿ ವರ್ತಿಸಿರುತ್ತೇವೆ. ಇದರಿಂದೆಲ್ಲಾ ಕೆಲವೊಮ್ಮೆ ನಮ್ಮ ಕ್ರಿಯಾಶೀಲತೆ ಕಮ್ಮಿಯಾಗುತ್ತದೆ; ಕೆಲವೊಮ್ಮೆ ಅವೆಲ್ಲವುಗಳ ಹೊರಗೆ ನಿಂತು ನೋಡಿಕೊಂಡಾಗ ನಮ್ಮ ಅಸ್ತಿತ್ವ ರಚನಾತ್ಮಕವಾಗುತ್ತದೆ. ಫ್ರಾನ್ಸಿಸ್ ಬೇಕನ್ ಹಾಗಿದ್ದ; ಅಂಥ ನೂರಾರು ಜನರಿದ್ದಾರೆ.

ನಮ್ಮ ಸಾಮಾಜಿಕ ಬದುಕು, ಇಲ್ಲಿ ಬದುಕುವುದಕ್ಕಾಗಿ ನಾವು ಕಲಿಯುವ ಮುತ್ಸದ್ದಿತನ, ಗಿಲೀಟು, ಆಕರ್ಷಣೆ, ತಂತ್ರ... ಇವೆಲ್ಲ ಜುಜುಬಿ ಅನ್ನಿಸುತ್ತದೆ.

ಹಾಗೆಯೇ ರಾಜಿ ಅಥವಾ ಜಗಳ ಕೂಡ.

ರಾಮ ಮತ್ತು ಕೃಷ್ಣ ಸೇರಿದ ಜಾಗ

ವಿಚಿತ್ರ ವ್ಯಕ್ತಿಗಳು ವಾಸಿಸುವ ಹುತ್ತದಂತಿರುವ ಸಂಸ್ಥೆಗಳಲ್ಲಿ ಕೆಲವು: ಗಾಂಧೀಭವನ, ಖಾದೀ ಭಂಡಾರ, ರಾಮಕೃಷ್ಣಾಶ್ರಮ ಇತ್ಯಾದಿಗಳು. ಬಸವನಗುಡಿಯಲ್ಲಿರುವ ರಾಮಕೃಷ್ಣಾಶ್ರಮದೊಳಕ್ಕೆ ಕಾಲಿಟ್ಟೊಡನೆ ನಮ್ಮನ್ನು ಪರದೇಶಗಳ ಗೂಢಚಾರರೋ ಎಂಬಂತೆ ನೋಡುವ ಹದ್ದುಗಳಿರುತ್ತವೆ. ಗಂಟೆಗಟ್ಟಲೆ ಸಂಸ್ಕೃತ, ಕನ್ನಡದಲ್ಲಿ ಉಪನ್ಯಾಸದ ಬೊಗಳೆ ಹರಿಸುವ ಇಲ್ಲಿಯ ಶ್ರದ್ಧಾನಂದ, ಹದ್ದಾನಂದಗಳು ಆಶ್ರಮದ ಮಧ್ಯೆ ಯಾರಾದರೂ ತೂಸಬರು ಕಾಣಿಸಿಕೊಂಡೊಡನೆ ಬಂದು, 'ಇದು ಖಾಸಗಿ ಜಾಗ', 'ಇಲ್ಲಿಂದ ಮುಂದೆ ಹೋಗಕೂಡದು', 'ಇದು ನಿಮ್ಮ ವಾಕ್‌ಗಾಗಿ ಇರುವ ಪ್ರದೇಶವಲ್ಲ' ಎಂದು ಇಂಗ್ಲಿಷಿನಲ್ಲಿ ಚೀಟಿ ಕೊಟ್ಟು ನಿಮ್ಮನ್ನು ಇರಿಯುವಂತೆ ನೋಡುತ್ತಾರೆ. 'ನಾವು ವಾಕ್ ಮಾಡುತ್ತಿಲ್ಲ, ನಿಮ್ಮ ಗುರುವಿನ ಭಾಷಣ ಸವಿಯುತ್ತಿದ್ದೇವೆ' ಎಂದರೆ ಅನುಮಾನಿಸುತ್ತಾರೆ. ಇವರಿಗೆ ತಮ್ಮ ಭಕ್ತರಲ್ಲದ ಯಾರನ್ನು ನೋಡಿದರೂ ಅನುಮಾನ. ಈ ರಾಮಕೃಷ್ಣಾಶ್ರಮ ಈಗ ಪಾಕಶಾಸ್ತ್ರ ಮತ್ತು ಭೂರಿಭೋಜನಕ್ಕೆ ಪ್ರಖ್ಯಾತವಾಗಿದೆ ಎಂದು ಅವರ ಶಿಷ್ಯರು ಭೋಜನದಿಂದ ಸಂತುಷ್ಟರಾಗಿ ಗಡರು ತೊಡೆಯುತ್ತಾ ಪಿಸುಗುಟ್ಟುತ್ತಾರೆ. 'ಅದನ್ನು ನಾವು ಸವಿಯುವ ಅವಕಾಶವಿರಲಿ, ನೋಡುವ ಅವಕಾಶ ಕೂಡ ಇಲ್ಲವಲ್ಲ' ಎಂದು ನೀವು ಗೊಣಗಿದರೆ ಅದ್ವಾನಿ, ವಾಜಪೇಯಿಗಳಂತೆ 'ಅರ್ಥಪೂರ್ಣ' ಮೌನದಲ್ಲಿ ಮುಳುಗುತ್ತಾರೆ.

• ಜೂನ್ 17, 1998

ನೆಗಡಿ ನಿಲ್ಲಿಸಲು ಮೂಗು ಕೊಯ್ದರು!

ವೈದ್ಯರ ಬಳಿಗೆ ಹೋಗಲೇಬಾರದು. ಅನಿವಾರ್ಯ ಸಂದರ್ಭ ಬಂತು. ಹೋಗಲೇಬೇಕಾಗುತ್ತೆ, ಹೋಗುತ್ತೇವೆ. ಯಾವುದೋ ಖಿಕ ಬಂದಿದೆ ಅಂತ ಅವರು ನೂರೆಂಟು ಪರೀಕ್ಷೆ ಮಾಡುತ್ತಾರೆ. ಇಷ್ಟೆಲ್ಲ ಆದನಂತರ ಸುಮ್ಮನೆ ಚಿಕಿತ್ಸೆ ನೀಡಲ್ಲ! 'ನೀವು ಡ್ರಿಂಕ್ಸ್ ತೆಗೊಳ್ತೀರ' ಅಂತ ಕೇಳ್ತಾರೆ. ಅವರ ಹತ್ತಿರ ಸುಳ್ಳು ಹೇಳಬಾರದು. ನಿಜಾನೆ ಹೇಳ್ತೀರಿ. 'ತೆಗೊಳ್ತೀನಿ' ಅಂತೀವಿ. 'ಸ್ಮೋಕ್ ಮಾಡ್ತೀರಾ' ಅಂತ ಕೇಳ್ತಾರೆ. 'ಹೌದು' ಅಂತೀವಿ. 'ಅವನ್ನ ಬಿಡಿ' ಅನ್ನುತ್ತಾರೆ. ಬಿಡದೆ ಮುಂದುವರೆಸಿದರೆ ಬರಬಹುದಾದ ಮಾರಕರೋಗಗಳ ಯಾದಿಯನ್ನೇ ನೀಡಿ ದಿಗಿಲುಬೀಳಿಸುತ್ತಾರೆ. ಅವರು ಕೊಡುವ ತಪಾಸಣಾ ಪತ್ರದಲ್ಲಿ **chronic alcoholic and smoking** ಎಂದೆಲ್ಲ ನಮೂದಿಸಿ ಮುಜುಗರ ಹುಟ್ಟಿಸುತ್ತಾರೆ. ಈ ಎಲ್ಲ ಆತಂಕ ಯಾಕೆ ಬೇಕು ಅಂತ ಏನಾದರೂ ಅವರ ಸಲಹೆಗಳನ್ನು ತಪ್ಪದೆ ನಡೆಸುತ್ತಾ ಬಂದರೆ ಜೀವಂತ ಇರುವುದಕ್ಕಿಂತ ಸಾಯುವುದೇ ಲೇಸು ಅನ್ನಿಸಿದರೂ ಆಶ್ಚರ್ಯ ಇಲ್ಲ. ಜೀವನದಲ್ಲಿ ಸುಖ, ಸಂತೋಷ ತರುವ ವಸ್ತುಗಳನ್ನೆಲ್ಲ ವರ್ಜಿಸಿ ಅಂತ ಹೇಳ್ತಾರಲ್ಲ ಈ ಡಾಕ್ಟರುಗಳು ಅವರ ಸಹವಾಸವೇ ಬೇಡ ಅಂತ ದೂರ ಇದ್ದರೂ ನೆಮ್ಮದಿ ಇರುವುದಿಲ್ಲ. ಕಾಫಿ ಜೊತೆ, ಡ್ರಿಂಕ್ಸ್ ಸಂಗಡ ಸಿಗರೇಟು ಇದ್ದರೆ ಅದರ ಮಜವೇ ಬೇರೆ. ಇತ್ತೀಚೆಗೆ ಅದಕ್ಕೂ ಕಲ್ಲು ಹಾಕುತ್ತಿದ್ದಾರೆ. ಬಾರು, ಹೋಟೇಲುಗಳಲ್ಲಿ 'ಧೂಮಪಾನ ನಿಷೇಧಿಸಿದೆ' ಅನ್ನುವ ಬೋರ್ಡು ನೇತು ಹಾಕಿರುತ್ತಾರೆ. ಇವರ ಕಾಟದಿಂದ ಒಳಗಿನಿಂದ ಬರುವ ಒತ್ತಡವನ್ನು ಹೇಗೋ ನಿಭಾಯಿಸಿಕೊಂಡು ಬೀದಿಗೆ ಇಳಿದ ತಕ್ಷಣ ಸಿಗರೇಟು ಹಚ್ಚೋಣ ಅಂದರೆ ಅಲ್ಲೂ ಸಲೀಸಾಗಿ ಸೇದುವಂತಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಬಾರದು ಅನ್ನುವ ಕಾನೂನು ಅಡ್ಡಬರುತ್ತೆ. ಪೊಲೀಸ್ ಯಾವ ಯಾವ ಮಾಯದಲ್ಲೋ ಪ್ರತ್ಯಕ್ಷ ಆಗಿ ಗೋಳುಯ್ದುಕೊಳ್ಳುತ್ತಾನೆ. ಯಾಕಪ್ಪ ಹಿಂಗೆ ಧೂಮಪಾನಿಗಳನ್ನ ಹಿಂಸಿಸುತ್ತಾರೆ ಅಂದರೆ ಇದರ ಅಭ್ಯಾಸ ಇಲ್ಲದವರಿಗೆ ಪರೋಕ್ಷವಾಗಿ ಧೂಮಪಾನ ಮಾಡಿದಂತೆ ಆಗುತ್ತಂತೆ; ಧೂಮಪಾನ ಮಾಡುವವರಿಗಿಂತ ಇದು ಅವರಿಗೆ ಹೆಚ್ಚು ಅಪಾಯಕಾರಿಯಂತೆ. ಹಾಳಾಗಿ ಹೋಗಲಿ ನಿಗದಿತ ಸ್ಥಳಗಳಲ್ಲೇ ಆರಾಮವಾಗಿ ದಮ್ ಹೊಡೆಯೋಣ ಅಂದರೆ ಭಜರಂಗದಳ, ದುರ್ಗಾ ವಾಹಿನಿಯವರಂತಹ ನೈತಿಕ ಪೊಲೀಸರ ಕಾಟ ತಪ್ಪಿದ್ದಲ್ಲ. ಅವರನ್ನು ಸುಮ್ಮನೆ ದೂರ ಬಾರದು, ಇರುವ ವಿಷಯ ಹೇಳಿದರೆ ಉತ್ತಮ. ಪುರುಷರ ಕಡೆ ಅವರ ಗಮನ ಹೆಚ್ಚು ಇರುವುದಿಲ್ಲ. ಹೇಗಾದರೂ ಕುಡಿದು, ಸೇದಿ ಸಾಯಲಿ ಅಂತಾನೋ ಏನೋ ಗೊತ್ತಿಲ್ಲ. ಮಹಿಳೆಯರು ಅಂದರೆ ಅವರಿಗೆ ದೇವತೆ ಸಮಾನ ಅಲ್ಲವಾ. ಹಾಗಾಗಿ ಅವರ ಆರೋಗ್ಯ, ನೈತಿಕತೆ ಕುರಿತು ಬಹಳ ಕಾಳಜಿ ವಹಿಸುತ್ತಾರೆ. ಇವೆಲ್ಲ ದುರಭ್ಯಾಸ ಎಂಬುದೇ ಅವರ ನಂಬಿಕೆ ಎನ್ನುವುದು ನಿರ್ವಿವಾದ. ಇಂತಹವನ್ನು ಮಾಡದಂತೆ ತಡೆ ಒಡ್ಡುವುದು ತಮ್ಮ ಕರ್ತವ್ಯ ಎಂದು ನಂಬಿದ್ದಾರೆ.

ನೈತಿಕ ಪೊಲೀಸರ ಈ ನೈಜ ಕಾಳಜಿಯು ಕೆಲವು ಮಹಿಳೆಯರಿಗೆ ಅರ್ಥವೇ ಆಗುವುದಿಲ್ಲ ಎಂದು ತೋರುತ್ತದೆ. ಅಂತಹವರ ಎದುರೇ ಎಗ್ಗಿಲ್ಲದೆ ಧೂಮಪಾನ ಮಾಡುತ್ತಾರೆ ಎಂದರೆ...!

ಮಂಗಳೂರಿನಲ್ಲಿಯೂ ಅವತ್ತು ಅಂತಹದ್ದೇ ಆಯಿತಂತೆ. ಕೆಲವು ಯುವತಿಯರು ತಮ್ಮ ಪುರುಷ ಸಂಗಾತಿಗಳೊಂದಿಗೆ ಸೇರಿ ಯಾವುದೋ ಐಸ್‌ಕ್ರೀಂ ಪಾರ್ಲರ್‌ನಲ್ಲಿ ಇಂತಹ ದುಸ್ಸಾಹಸಕ್ಕೆ ಕೈಹಾಕಿದ್ದರಂತೆ. ನೈತಿಕ ಪೊಲೀಸಿಗೆ ಈ ಅಸಭ್ಯ ವರ್ತನೆ ರಾಕ್ಷಸೀಕೃತ್ಯವಾಗಿ ಕಾಣಿಸಿತಂತೆ. ಇಂತಹ ರಾಕ್ಷಸಿಯರ ಸಂಹಾರ ಅಲ್ಲೇ ನಡೆಸುವ ಶಕ್ತಿ ಅವರಿಗಿತ್ತು, ಆದರೆ ಅವರ ಉತ್ತಮಾದರ್ಶನಗಳನ್ನು ಅರ್ಥಮಾಡಿಕೊಳ್ಳಲಾಗದವರು 'ಮಹಿಳೆಯ ಮೇಲೆ ದೌರ್ಜನ್ಯ' ಹಾಗೆಹೀಗೆ ಎಂದು ಹುಯಿಲೆಬ್ಬಿಸುತ್ತಿದ್ದರು. ತಮ್ಮ ಸಂಘಟನೆಗಳಿಗೆ ಕೆಟ್ಟ ಹೆಸರು ತರುತ್ತಿದ್ದರು. ಅದಕ್ಕೆ ಮನಸ್ಸು ಮಾಡಲಿಲ್ಲ. ಆದರೆ ಇದನ್ನು ತಡೆಯುವುದು ಅನಿವಾರ್ಯವಾಗಿತ್ತು. ಆದುದರಿಂದ ಬಲ್ಲ ಪೊಲೀಸರಿಗೆ ವಿಷಯ ಮುಟ್ಟಿಸಿದರು.



ಯುವತಿಯರು ಧೂಮಪಾನ ಮಾಡಬಾರದು ಎನ್ನುವ ಕಾನೂನು ಇಲ್ಲ ನಿಜ. ಹಾಗೆ ಮಾಡುವಾಗ ಯುವಕರ ಸಂಗಡ ಇರಬಾರದು ಎಂದೂ ಹೇಳಿಲ್ಲ ಅದೂ ನಿಜವೆ. ಧೂಮಪಾನಕ್ಕೆಂದು ನಿಗದಿಪಡಿಸಿದ ಸ್ಥಳದಲ್ಲೇ ಅದನ್ನು ಮಾಡುತ್ತಿದ್ದರು ಎಂಬುದೂ ನಿಜವೆ. ಆದರೆ ನೈತಿಕತೆ ಅಂತ ಒಂದು ಇದೆಯಲ್ಲ, ಅದೇ ಅಲ್ಲಿನ ಪೊಲೀಸರಿಗೆ ಮುಖ್ಯವಾಗಿರಬೇಕು. ದೂರು ತಲುಪಿದ್ದೇ ತಡ; ಧಾವಿಸಿ ಹೋದರಂತೆ. ಆರೋಪಿ ಯುವಕಯುವತಿಯರನ್ನು ಪೊಲೀಸ್ ಸ್ಟೇಷನ್ನಿಗೆ ಕರೆದೊಯ್ದರಂತೆ. ಕಾನೂನುರೀತಿ ಕೇಸು ದಾಖಲಿಸಲು ಅವರು ಅಪರಾಧ ಎಸಗಿರಲೇ ಇಲ್ಲ! ಆದರೂ ಅವರು ಪೊಲೀಸಿನವರು ಅಲ್ಲವಾ. ಯಾವುದೋ ಒಂದು ಕೇಸು ಜಡಿದು ಒಳಗೆ ಹಾಕಬಹುದಿತ್ತು. ಮಕ್ಕಳೊಂದಿಗರು ಇರಬೇಕು. ಹಾಗೇನೂ ಮಾಡಲಿಲ್ಲವಂತೆ. ಒಂದು ಐದಾರು ಗಂಟೆ ಸ್ಟೇಷನ್ ಆತಿಥ್ಯ ನೀಡಿ ಬಿಡುಗಡೆ ಮಾಡಿದರಂತೆ.

'ಇದು ಯಾವ ಸೀಮೆ ನ್ಯಾಯ ಪೊಲೀಸ್ನೋರೆ. ಅಮಾಯಕ ಮಕ್ಕಳನ್ನು ಹೀಗೆ ಯಾಕ್ರಿ ಪೊಲೀಸ್ ಸ್ಟೇಷನ್ನಿಗೆ ಎಳೆದು ತಂದ್ರಿ' ಅಂತ ಯಾರೋ ದಬಾಯಿಸಿದ್ದಕ್ಕೆ ಅವರು 'ನಾವು ಹಾಗೆ ಮಾಡದೆ ಇದ್ದರೆ ಅಲ್ಲಿ ದೊಂಬಿ ನಡೆಯುತ್ತಾ ಇತ್ತು, ಅವರ ಮೇಲೆ ದೌರ್ಜನ್ಯ ನಡೀತಿತ್ತು, ಹೀಗೆ ಕರೆತಂದದ್ದರಿಂದ ಅದು ತಪ್ಪಿತು' ಅಂದರಂತೆ!

ಅಲ್ಲ ಪೊಲೀಸ್ ಸ್ಟೇಷನ್ನಿಗೆ ಎಳೆದು ತರಬೇಕಾದ್ದು ದೊಂಬಿ, ದೌರ್ಜನ್ಯಕ್ಕೆ ಸಿದ್ಧರಾಗಿದ್ದರೆಂದು ಹೇಳಲಾದ ಧಾಂಡಿಗರನ್ನೋ ಅಥವಾ ಅಮಾಯಕ ಯುವಕ ಯುವತಿಯರನ್ನೋ ಅಂತ ಕೇಳುವುದೇ ಅಪರಾಧವೇನೋ ಈ ರಾವಣ ರಾಜ್ಯದಲ್ಲಿ ಅನ್ನಿಸುತ್ತಲ್ಲಾ...!

ಹೌದು. ಅಲ್ಲಿ ಇಲ್ಲಿ 'ಧೂಮಪಾನ ಮಾಡಬಾರದು' ಅನ್ನುವ ಬೋರ್ಡ್ ನೇತಾಕಿರುತ್ತಾರಲ್ಲ... ನಮ್ಮ ಪೊಲೀಸ್ನೋರ ಬಿಟ್ಟರೆ ಧೂಮಪಾನ ಮಾಡದವರನ್ನೆಲ್ಲ ಸ್ಟೇಷನ್ನಿಗೆ ಎಳೆದುಕೊಂಡು ಹೋಗಿ, ಮಾಡುವವರನ್ನ ಹೊರಗೇ ಬಿಡುತ್ತಾರಾ ಅಂತಾವ...!

* * * * *

ವಿಶ್ವರೂಪಂ ಚಿತ್ರ ವಿವಾದ ಮನೆ ಮಾತಾಗಿದೆ.


ಕಮಲ ಹಾಸನ್ ಅವರ ಈ ಚಿತ್ರಕ್ಕೆ ಸೆನ್ಸಾರ್ ಮಂಡಳಿ ಪ್ರದರ್ಶನಕ್ಕೆ ಅನುಮತಿ ನೀಡಿದೆ ಎಂದಮೇಲೆ ಇದು ಪ್ರದರ್ಶನಕ್ಕೆ ಅರ್ಹ ಎಂದಾಯಿತು.

ಆಕ್ಷೇಪಾರ್ಹ ಸಂಗತಿಗಳು ಆ ಚಿತ್ರದಲ್ಲಿವೆ ಎಂಬುದು ಕೆಲವು ಮುಸ್ಲಿಂ ಸಂಘಟನೆಗಳ ಆರೋಪ. ಇದು ಸತ್ಯವೇ ಇರಬಹುದು. ಪ್ರದರ್ಶನ ಬೇಡ ಎಂದರು. ಗಲಭೆ ಎಬ್ಬಿಸಿದರು.

ತಮಿಳುನಾಡು ಸರ್ಕಾರ ನಿಷೇಧ ಹೇರಿತು!

ಅಲ್ಲಿನ ಮುಖ್ಯಮಂತ್ರಿ ಜಯಲಲಿತಾ ಕೊಟ್ಟ ಕಾರಣ? ಕಾನೂನು ಸುವ್ಯವಸ್ಥೆ ಕಾಪಾಡಲು ಇದು ಅನಿವಾರ್ಯ!

ಅಣಕ



• ಎಚ್.ಎಲ್.ಕೇಶವಮೂರ್ತಿ

ಮುಖ್ಯಮಂತ್ರಿಯವರ ಕಾಳಜಿ ಅರ್ಥವಾಗುವಂತಹದ್ದು ಆದರೆ ಕೆಲವರ ವಿರೋಧ ಇದೆ ಎಂದು ಚಿತ್ರ ಪ್ರದರ್ಶನವನ್ನೇ ನಿಷೇಧಿಸಬೇಕೆ? ಇದು ಸರಿಯೇ? ಶಾಂತಿ ಕದಡುವವರನ್ನು ನಿಯಂತ್ರಿಸಿ ಚಿತ್ರಮಂದಿರಗಳಿಗೆ ಭದ್ರತೆ ನೀಡುವುದು ಸರ್ಕಾರದ ಕರ್ತವ್ಯ ಅಲ್ಲವೆ? ಹೀಗೆ ಮಾಡದೆ ನಿಷೇಧ ಮಂತ್ರ ಜಪಿಸಿದರೆ ನೆಗಡಿ ಬಂತು ಎಂದು ಮೂಗನ್ನೇ ಕೊಯ್ದಂತಾಗುವುದಿಲ್ಲವೆ?

ಶತ್ರುವಿನ ಶತ್ರು ಮಿತ್ರ!

ಕಮಲಹಾಸನ್ ಅವರ 'ವಿಶ್ವರೂಪಂ' ಚಿತ್ರ ಬಿಡುಗಡೆ ವಿಶ್ವರೂಪ ವಿವಾದವನ್ನೇ ಪ್ರದರ್ಶಿಸಿದೆ. ಸಿನಿಮಾ ಹೆಸರು ಕೇಳಿದರೇ ಮೂಗು ಮುರಿಯುತ್ತಿದ್ದವರೂ ಈ ಸಿನಿಮಾ ಬಿಡುಗಡೆ ಮಾಡ್ತೀನಿ ಅಂದಾಗಲೇ ಇಷ್ಟೊಂದು ವಿವಾದ ಎಬ್ಬಿಸಿದೆಯಲ್ಲ ಅದರಲ್ಲೇನಿದೆಯೋ ನೋಡೇಬಿಡೋಣ ಅನ್ನುತ್ತಿದ್ದಾರಂತೆ. ಅದು ಹಾಗಿರಲಿ. ಚಿತ್ರ ಬಿಡುಗಡೆಗೆ ತಮಿಳುನಾಡು ಸರ್ಕಾರ ನಿಷೇಧ ಹೇರಿದ್ದು ಕಮಲಹಾಸನ್ ಅವರಿಗೆ ನೋವು ತಂದಿರಬೇಕು. 95 ಕೋಟಿ ವ್ಯವಹಾರ. ಹೀಗಾಗುವುದು ಸಹಜವೇ ಅನ್ನಿ. ಮಾಧ್ಯಮ ಗೋಷ್ಠಿ ಕರೆದು ತಮ್ಮ ಅಳಲನ್ನು ತೋಡಿಕೊಂಡರು. ಕೋಮುವಾದಿಗಳು ಇರುವ ಕಡೆ ನಾನು ಇರಲಾರೆ. ಯಾವುದಾದರೂ ಜಾತ್ಯತೀತ ರಾಜ್ಯಕ್ಕೆ ವಲಸೆ ಹೋಗುವೆ. ದೇಶದಲ್ಲಿ ಅಂತಹ ರಾಜ್ಯವೇ ಇಲ್ಲ ಎಂದಾದರೆ ಬೇರೆ ದೇಶಕ್ಕೇ ಹೋಗಿ ನೆಲೆಸುತ್ತೇನೆ ಎಂದು ಮುಂತಾಗಿ ಹೇಳಿದರು.

ಈ ಮಾತು ಇತ್ತಲ್ಲ ಹೊರರಾಜ್ಯ ಅಥವ ಹೊರದೇಶಕ್ಕೆ ಹೋಗಿ ನೆಲೆಸುತ್ತೇನೆ ಎಂದು ಹೇಳಿದ್ದು, ಅದ ಕೇಳಿ ನಮ್ಮ ಉಪಮುಖ್ಯಮಂತ್ರಿ ಅಶೋಕರ ಕಿವಿ ನೆಟ್ಟಗಾಯಿತಂತೆ. 'ಅಷ್ಟು ದೂರ ಯಾಕೆ ಹೋಗ್ತೀರಿ ಮಾರಾಯರೆ. ನಮ್ಮ ಕಲ್ಯಾಣ ರಾಜ್ಯಕ್ಕೇ ಬನ್ನಿ. ನಿಮಗೆ ಬೇಕಾದ ಸೌಲಭ್ಯ ಒದಗಿಸ್ತೀವಿ!' ಎಂದು ಬಹಿರಂಗ ಕರೆ ನೀಡಿದರು.

ಅರೆರೆ ಇದೇನಪ್ಪ ಇದು. ಅಶೋಕರಿಗೆ ಕಮಲಹಾಸನ್ ಮೇಲೆ ಈಪಾಟಿ ಪ್ರೀತಿ ಉಕ್ಕಿ ಹರೀತಿದೆಯಲ್ಲಾ ಇವರೇನು ನಮ್ಮ ರಾಜ್ಯಾನೂವೆ ಜಾತ್ಯತೀತ ಅಂದುಕೊಂಡರಾ ಹೇಗೆ ಅಂದರೆ ಹಂಗೇನೂ ಅಲ್ಲವಂತೆ. ಮುಸಲ್ಮಾನರು ವಿವಾದ ಎಬ್ಬಿಸಿರುವ ಸಿನಿಮಾ ತೆಗೆದವರೆ ಅಂದರೆ ಅವರ ಗೋತ್ರವೂ ನಮ್ಮ ಗೋತ್ರವೂ ಒಂದೇ ಇದ್ದಂಗದೆ ಅಂತಾನಂತೆ!

ಸಿಹಿ ಹಂಚಿದ ಜನ ತಾಲಿಬಾನಿಗಳಿಗಿಂತ ಹೇಗೆ ಭಿನ್ನ?

ಅಂತೂ ಮತ್ತೊಂದು ಕ್ರಿಮಿ ಹೆಣವಾಯ್ತು!

ಇದು ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದ ಸುದ್ದಿಗೆ ಸುವರ್ಣವಾಹಿನಿ ನೀಡಿದ ಉಪಶೀರ್ಷಿಕೆ! ನಮ್ಮ ಮಾಧ್ಯಮಗಳಲ್ಲಿ ಎಂತಹ ರೋಗಗ್ರಸ್ತ ಮನಸುಗಳು ಸೇರಿಕೊಂಡಿವೆ ನೋಡಿ. ಶತ್ರುವೇ ಆದರೂ ಜೀವ ಕಳೆದುಕೊಂಡ ಬಳಿಕ ಆತ ಕೇವಲ ಒಂದು ಶವ. ಆತನ ಸಾವನ್ನು ಸಂಭ್ರಮಿಸುವುದು ಮನುಷ್ಯರೆನಿಸಿದವರಿಗೆ ಶೋಭೆ ತರುವ ಸಂಗತಿಯಲ್ಲ. ಜೀವರಹಿತವಾದ ಆತನ ದೇಹವನ್ನು ಗೌರವಿಸುವುದು ನಿಜವಾದ ಮನುಷ್ಯ ಸಂಸ್ಕೃತಿ. ಆದರೆ ನಮ್ಮ ಕೆಲ ಮಾಧ್ಯಮಗಳು, ಬಲಪಂಥೀಯ ಸಂಘಟನೆಗಳು ಒಂದು ಜೀವಹರಣದ ಪ್ರಕರಣವನ್ನು ಸಂಭ್ರಮಿಸಿದ ರೀತಿ ಹೇಗಿದೆ? ತಥಾಕಥಿತ ವಿದ್ಯಾವಂತರಾದ ಈ ಮಂದಿ ಇಷ್ಟೊಂದು ಸಂವೇದನಾಶೂನ್ಯರೂ, ಪೂರ್ವಗ್ರಹಪೀಡಿತರೂ ಆಗಿರುವುದಾದರೂ ಹೇಗೆ? ಇವರನ್ನು ಹೀಗೆ ರೂಪಿಸಿದ ಸಮಾಜವಾದರೂ ಯಾವುದು?

ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಕ್ರೌರ್ಯ ಮುಗಿಲುಮುಟ್ಟಿದ್ದ ಒಂದು ದಿನ, ಏನೋ ಆರೋಪದ ಮೇಲೆ ಇಬ್ಬರು ಯುವಕರ ಕತ್ತಿಗೆ ನೇಣು ಬಿಗಿದು ಕ್ರೇನ್ ಮೂಲಕ ಎತ್ತಿ ಅವರನ್ನು ಕೊಂದು ಹಾಕಲಾಯಿತು. ಸಾರ್ವಜನಿಕರ ಸಮ್ಮುಖದಲ್ಲೇ ನಡೆದ ಈ ಗಲ್ಲು ಶಿಕ್ಷೆಯ ದೃಶ್ಯವನ್ನು ಇಡೀ ಜಗತ್ತಿನ ಟಿವಿಗಳು ಪ್ರಸಾರ ಮಾಡಿದವು. ಎಂಥ ಕಲ್ಲು ಮನಸುಗಳನ್ನೂ ಕರಗಿಸುವಂತಿತ್ತು ಆ ಘಟನೆ. ಅದನ್ನು ಉಲ್ಲೇಖಿಸುತ್ತಾ ಕನ್ನಡದ ಪ್ರಸಿದ್ಧ ಸಾಹಿತಿ ಜಯಂತ ಕಾಯ್ಕಿಣಿಯವರು ನೋವಿನೊಂದಿಗೆ "ಒಂದು ಕ್ಷಣ ಜಗತ್ತು ಕಣ್ಣುಮುಚ್ಚಿಕೊಳ್ಳಬಾರದೇ?" ಎಂದು ಮಾರ್ಮಿಕವಾಗಿ ಪ್ರತಿಕ್ರಿಯಿಸಿದ್ದರು.

ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದ್ದಕ್ಕೆ ಸಂತಸಪಟ್ಟಿದ್ದೂ ಸಾಲದೆಂಬಂತೆ ಬೀದಿಯಲ್ಲಿ ನಿಂತು ಸಿಹಿ ಹಂಚುತ್ತಿದ್ದ ನಮ್ಮ ಜನರು ತಾಲಿಬಾನಿಗಳಿಗಿಂತ ಹೇಗೆ ಭಿನ್ನ ಎನ್ನುವುದು ಅರ್ಥವಾಗುತ್ತಿಲ್ಲ. ನಮ್ಮ ಜನ ಎತ್ತ ಸಾಗುತ್ತಿದ್ದಾರೆ? ನಮ್ಮ ಸಾಮೂಹಿಕ ಸಾಕ್ಷಿಪ್ರಜ್ಞೆ ಎತ್ತ ಸಾಗುತ್ತಿದೆ?

- ಶ್ರೀನಿವಾಸ ಕಾರ್ಕಳ, ಮಂಗಳೂರು



ಕಮಲ್ ಒಬ್ಬ ಅತ್ಯುತ್ತಮ ನಟ ಆದರೆ ಕೆಟ್ಟ ಕಥೆಗಾರ




ನಟ ಕಮಲ್ ಹಾಸನ್ 'ವಿಶ್ವರೂಪಂ' ರಾದ್ಧಾಂತದಿಂದಾಗಿ ದೇಶ ಬಿಟ್ಟು ಹೋಗುವೆ ಎಂಬಷ್ಟರವಟ್ಟಿಗೆಗೆ ವಿವಾದಕ್ಕೊಳಗಾಗಿದ್ದರು. ಆದರೂ ಇದೀಗ 'ವಿಶ್ವರೂಪಂ 2ನೇ ಭಾಗ'ದ ಬಗ್ಗೆ ಅವರು ಮಾತನಾಡುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಇದನ್ನು ಬರೆಯುತ್ತಿದ್ದೇನೆ.

ಕಮಲ್ ಹಾಸನ್‌ರ ಪಕ್ಕಾ ಅಭಿಮಾನಿಗಳಲ್ಲಿ ನಾನೂ ಒಬ್ಬ. ಹಿಟ್ಟೋ-ಫ್ಲಾಪೋ ಥಿಯೇಟರ್‌ಗೆ ಬಂದ ಆತನ ಪ್ರತಿಯೊಂದು ಚಿತ್ರಗಳನ್ನೂ ಬಿಡದೇ ನೋಡಿದ್ದೇನೆ. 'ಸಾಗರಸಂಗಮ್', 'ನಾಯಗನ್', 'ಪುನ್ನಗೈಮನ್ನನ್', 'ಪುಷ್ಪಕ ವಿಮಾನ', 'ಸದ್ಮಾ (ಮೂನ್ರಾಮ್ ಪಿರೈ)'ಗಳನ್ನು ಹಲವು ಬಾರಿ ನೋಡಿದ್ದರೂ ಇಂದಿಗೂ ತೃಪ್ತಿ ಸಿಕ್ಕಿಲ್ಲ.

'ನಾಯಗನ್'ನಲ್ಲಿ ಸಹೋದರನ ಸಾವಿನ ಸಿಟ್ಟಿಗೆ ಮನೆ ಬಿಟ್ಟುಹೋದ ಮಗಳನ್ನು ಪೊಲೀಸ್ ಅಧಿಕಾರಿಯ ಮನೆಯಲ್ಲಿ ಅನಿರೀಕ್ಷಿತವಾಗಿ ಭೇಟಿಯಾಗುವ ಸನ್ನಿವೇಶ, ಬಾಂಬೆಯನ್ನೇ ಮುಷ್ಟಿಯಲ್ಲಿಟ್ಟುಕೊಂಡ ಡಾನ್ ಇದ್ದರೂ ಅದೇ ಕುಖ್ಯಾತಿಯ ಕಾರಣಕ್ಕೆ ತನ್ನ ಮೊಮ್ಮಗುವನ್ನು ನೋಡಲಾಗದ ಹೀನಸ್ಥಿತಿ, ಎಷ್ಟೇ ಬೇಡಿಕೊಂಡರೂ ಮಗುವನ್ನು ಮುಚ್ಚಿಡುವ ಮಗಳು... ವಾಹ್.. ಎಂತಹ ಮನಮಿಡಿಯುವ ಸನ್ನಿವೇಶಗಳು..!! ಇವೆಲ್ಲವನ್ನು 'ನಾಯಗನ್', 'ಸದ್ಮಾ'ದಂತಹ ಕಮಲ್‌ರ ಹಿಂದಿನ ಹಲವಾರು ಚಿತ್ರಗಳಲ್ಲಿ ನಿರೀಕ್ಷಿಸಬಹುದಿತ್ತು.

ನಗುನಗಿಸುತ್ತಲೇ ಬದುಕಿನ ಅಸ್ಥಿರತೆಯ ತತ್ತ್ವೋಪದೇಶವನ್ನು ಮಾಡುವ 'ಪುಷ್ಪಕ ವಿಮಾನ', ತೀರಾ ಚಿಕ್ಕ ಕಥಾಹಂದರವಾದರೂ ಕಮಲ್‌ರ ಮನೋಜ್ಞ ಅಭಿನಯವನ್ನೇ ಬಂಡವಾಳವಾಗಿಟ್ಟುಕೊಂಡು ಗೆದ್ದ 'ಸದ್ಮಾ', 'ಸಾಗರಸಂಗಮಮ್', 'ಸಾಗರ್', 'ಮರೋಚರಿತ್ರ'ದಂತಹ ಚಿತ್ರಗಳಲ್ಲಿನ ಕಮಲ್‌ರ ಅದ್ಭುತ ನಟನೆ ಮತ್ತು ಇಳಯರಾಜಾರ ಸಂಗೀತ ಅಂದರೆ ಪ್ರೇಕ್ಷಕನಿಗೆ ಹಬ್ಬವೋ ಹಬ್ಬ.

ಆದರೆ ಈಗ ಕಮಲ್ ಚಿತ್ರಗಳೆಂದರೆ ಬರೀ ಗಿಮಿಕ್ಸ್‌ಗಳೇ ತುಂಬಿ ಹಳೆಯ ಕಮಲ್ ಮರೆಯಾಗುತ್ತಿದ್ದಾರೆ. ಯಾಕೆ ಹೀಗೆ?



ಕಮಲ್‌ರ ಗೊಗ್ಗರಧ್ವನಿ ಚಿತ್ರವೊಂದಕ್ಕೆ ಮಾಡಿಕೊಂಡ ತಯಾರಿಯ ದುಷ್ಪರಿಣಾಮ ಎನ್ನಲಾಗುತ್ತಿದೆ. ನಟನೆಯನ್ನೇ ಜೀವಾಳವನ್ನಾಗಿಸಿಕೊಂಡ ಆತ ಅದಕ್ಕಾಗಿ ಮೈಯನ್ನು ಯಾವ ಮಟ್ಟದಲ್ಲಿ ದಂಡಿಸುವುದಕ್ಕೂ ಹೇಸುವುದಿಲ್ಲ. ಪ್ರಯೋಗಶೀಲನಾದ ಕಮಲ್ ಗ್ರಾಫಿಕ್ ಜಮಾನ ಶುರುವಾಗದ ಆ ಕಾಲದ 'ಅಪ್ಪು ರಾಜಾ' ಚಿತ್ರದಲ್ಲಿ ಕುಳ್ಳನಾಗಿ ಅಭಿನಯಿಸಿದ ಬಳಿಕ 'ಇಂದ್ರುಡು ಚಂದ್ರುಡು'ವಿನಲ್ಲಿ ದೊಡ್ಡ ಹೊಟ್ಟೆಯ ಉಬ್ಬುಹಲ್ಲಿನ ಮೇಯರ್ ಸಾಬನಾದ (ಮಾಮೂಲಿ ಬಟ್ಟೆ ತುಂಬಿ ಮಾಡಿದ ಹೊಟ್ಟೆಯಲ್ಲ ಎಂದು ತೋರಲು ಬೆತ್ತಲೆ ಹೊಟ್ಟೆಗೆ ಮಸಾಜ್ ಮಾಡುವ ದೃಶ್ಯವಿದೆ). ನಂತರ ಇದೇ ಮೇಕಪ್ 'ಇಂಡಿಯನ್' ಮೂಲಕ ಮುಖಕ್ಕೆ ಬಂತು. ಬಹುಶಃ ಕಮಲ್‌ರ ಆ ವಿದೇಶೀ ಮೇಕಪ್ ಮ್ಯಾನ್ ಇಂಡಿಯಾದಲ್ಲೇ ಉಳಿದನೇನೋ!!?

ಅದೇ ಗಿಮಿಕ್ ಪುನಃ ಪುನಃ 'ಅವ್ವೈ ಷಣ್ಮುಗಿ', 'ದಶಾವತಾರಂ' (ಬೋರ್ ಹೊಡೆಸುವ ಸಂಖ್ಯೆಯಲ್ಲಿ) ನಲ್ಲೂ ಮುಂದುವರೆಯಿತು. ಈ ಮೇಕಪ್-ಗಿಮಿಕ್ (ಸೈಕೋ 'ಆಳವಂದಾನ್-ಅಭಯ್'ನ ಬೆತ್ತಲೆ ನಟನೆ) ಗಳೆದುರು ಹಳೆಯ ಮನೋಜ್ಞ ನಟ ಕಮಲ್ ಕಾಣೆಯಾಗಿಯೇ ಬಿಟ್ಟರು. ಇವೆಲ್ಲ ಆತನ ಸ್ವಂತ ನಿರ್ಮಾಣ-ನಿರ್ದೇಶನದಲ್ಲಿ ತಯಾರಾದಂತಹ ಚಿತ್ರಗಳು.

ಕಮಲ್ ಚಿತ್ರ ಜಗತ್ತು ಕಂಡ ಅದ್ಭುತ ನಟನೇ ಹೊರತು ಒಳ್ಳೆಯ ನಿರ್ದೇಶಕ ಅಥವಾ ಕಥೆಗಾರನಾಗಿರಲಿಲ್ಲ. 'ಇಂಡಿಯನ್' ನಂತಹ ಚಿತ್ರ ಹೊಸ ಮೇಕಪ್ ತಂತ್ರಜ್ಞಾನ ಹಾಗು ಕಮಲ್ ಹೆಸರಿನ ಬಲದಲ್ಲಿ ಓಡಿತೇ ವಿನಃ ಗಟ್ಟಿ ಕತೆಯ ಮೇಲಲ್ಲ. ಹಿಟ್ ಚಿತ್ರ 'ಅವ್ವೈ ಷಣ್ಮುಗಿ' (ಹಿಂದಿಯ 'ಚಾಚಿ 420') ಕಮಲ್ ರ ಕಥೆಯಲ್ಲ. ಇಂಗ್ಲಿಷ್ ಚಿತ್ರ 'ಮಿಸೆಸ್ ಡೌಟ್‌ಫಾಯರ್'ನ ಇಂಡಿಯನ್ ವರ್ಷನ್ (ಗೋವಿಂದನ 'ಆಂಟಿ ನಂ 1' ಕೂಡ) ಅಷ್ಟೆ.

ಕಮಲ್ ಏನಿದ್ದರೂ ಹಿಂದಿನಂತೆ ಬೇರೆ ನಿರ್ದೇಶಕ-ಕಥೆಗಾರರಡಿಯಲ್ಲಿ ನಟಿಸುವುದೇ ಚೆಂದ. ಆದರೆ ಕಮಲ್ ಈಗ ಬೇರೆಯದೇ ಲೋಕದಲ್ಲಿದ್ದಂತಿದ್ದಾರೆ.

ಹಣ-ಖ್ಯಾತಿಯಲ್ಲಿ ಮುಳುಗಿದ ನಟರು ಯಾವುದೇ ಹಂಗಿಗೊಳಗಾಗದೇ ಬಾಕ್ಸಾಫೀಸ್ ಸೂತ್ರಗಳನ್ನು ಬದಿಗಿಟ್ಟು ತಮ್ಮ ಬದುಕು ಹಾಗು ನಂಬಿದ ತತ್ವಗಳನ್ನು ಸಾರುವ ಚಿತ್ರಗಳನ್ನು ಮಾಡುವ ರಿಸ್ಕ್ ತೆಗೆದುಕೊಳ್ಳುವುದುಂಟು. ರಜನಿಕಾಂತ್ ತಮ್ಮ ಆಧ್ಯಾತ್ಮ ನಂಬಿಕೆಗೆ ಸಂಬಂಧಿಸಿ 'ಬಾಬಾ' ಮಾಡಿ ಯಾವ ಮಟ್ಟದ ಪ್ರಚಾರ ನೀಡಿದ್ದರೂ ಜನ ಅದನ್ನು (ಹಂಚಿಕೆದಾರರಿಗೆ ಹಣ ಹಿಂದಿರುಗಿಸುವಷ್ಟರ ಮಟ್ಟಿಗೆ) ಮೂಸಿ ನೋಡಲಿಲ್ಲ. ಕಮಲ್ ಹಾಸನ್ ಕೂಡ 'ಹೇರಾಮ್'ನಲ್ಲಿ ಇಂತದ್ದೇ ತನ್ನ ಸಿದ್ಧಾಂತ ಸಾರುವ ಪ್ರಯೋಗಕ್ಕಿಳಿದಿದ್ದರು. ಭಾರತ ವಿಭಜನೆ, ಗೋಡ್ಸೆ ಸಿದ್ಧಾಂತ ಇತ್ಯಾದಿಗಳ ಬಗ್ಗೆ ಗೋಜಲುಗೋಜಲಾದ ನಿರೂಪಣೆ ಅದರಲ್ಲಿತ್ತು. ನಂತರದ ಬಹು ನಿರೀಕ್ಷಿತ 'ದಶಾವತಾರಂ' ಕೂಡ ಶೈವ-ವೈಷ್ಣವ ಹೆಸರಲ್ಲಿ ಅದೇ ಹಾದಿಯಲ್ಲಿತ್ತು. ಈಗ 'ವಿಶ್ವವಿರೂಪಂ' ಅಲ್ಲದೇ ಅದರ ಎರಡನೇ ಭಾಗವಂತೆ ಕೂಸು ಹುಟ್ಟುವ ಮುನ್ನವೇ ಕುಲಾವಿ...!! ಕೆಟ್ಟ ಕಥೆಗಾರ - ನಿರ್ದೇಶಕ ಕಮಲ್‌ರಿಂದ ಪ್ರೇಕ್ಷಕರನ್ನು ಆ ದೇವರೇ ಕಾಪಾಡಬೇಕು.

- ರವಿ ಪುತ್ತೂರ, ದಕ

ಲಕ್ಷ್ಮಿ, ಪಾರ್ವತಿ, ಸರಸ್ವತಿಯರ ನಿಟ್ಟುಸಿರು

ಲಕ್ಷ್ಮಿ, ಪಾರ್ವತಿ, ಸರಸ್ವತಿಯರು ಹೆಣ್ಣುಮಕ್ಕಳಿಲ್ಲ ಎಂದು ಕೋಟ್ಯಂತರ ವರ್ಷಗಳಿಂದ ಕೊರಗುತ್ತಿದ್ದರು, ಹೆಣ್ಣುಮಗುವಿಗಾಗಿ ತಮ್ಮ ಗಂಡಂದಿರನ್ನು ಪೀಡಿಸುತ್ತಿದ್ದರು. ಲಂಪಟ ಇಂದ್ರನೇ ತಮ್ಮ ದೇವಲೋಕದ ರಾಜನಾಗಿದ್ದರೂ ಅವರು ಭಯಪಡಲಿಲ್ಲ. ಗಣಪತಿಯ ಪತ್ನಿಯರಾದ ರಿದ್ಧಿ ಮತ್ತು ಸಿದ್ಧಿ, ಕುಮಾರನ ಪತ್ನಿಯರಾದ ದೇವಯಾನಿ ಮತ್ತು ವಲ್ಲಿ . . ಇವರೆಲ್ಲ ಮಕ್ಕಳೇ ಇಲ್ಲದೆ ಬಂಜೆಯರಾದೆವಲ್ಲಾ ಎಂದು ಕೊರಗುತ್ತಿದ್ದರು. ತಿರುಪತಿ ತಿಮ್ಮಪ್ಪನ ಪತ್ನಿಯರಾದ

...ಟ್ಟಹಾಸದ ಪ್ಲಸ್ ಪಾಯಿಂಟ್!



ಈ ವಾರ ತೆರೆ ಕಾಣಲಿರುವ ಎ.ಎಂ.ಆರ್.ರಮೇಶ್ ನಿರ್ದೇಶನದ 'ಅಟ್ಟಹಾಸ' ...ಗ್ಗೆ ಕನ್ನಡಿಗರಲ್ಲಿ ಕುತೂಹಲ ಇದ್ದೇ ಇದೆ. ಇದಕ್ಕೆ ಮುಖ್ಯ ಕಾರಣ ಇದು ...ನ ಜೀವನ ಕಥೆ ಆಧರಿಸಿರುವ ಚಿತ್ರವೆಂಬುದು ಮಾತ್ರವಲ್ಲ, ಜೊತೆಗೆ ...ಕುಮಾರ್ ಅವರ ಪಾತ್ರವೂ ಇದರಲ್ಲಿರುವುದು. ಈತನಕ ಕನ್ನಡ ಸಿನಿಮಾಗಳಲ್ಲಿ ... ಅವರ ಯಾವುದಾದರೂ ಹಳೆಯ ಚಿತ್ರದ ವಾಲ್‌ಪೋಸ್ಟರ್‌ಗಳನ್ನು ...ತ್ತಿದ್ದರು. ಆಗ ಅಣ್ಣಾವ್ರ ಆರಾಧಕರು ಸಿಳ್ಳೆ ಹಾಕಿ ತಮ್ಮ ಅಭಿಮಾನವನ್ನು ...ಸುತ್ತಿದ್ದರು. ಆದರೆ ಇದೀಗ ಮೊತ್ತಮೊದಲ ಬಾರಿಗೆ ರಾಜ್‌ಕುಮಾರ್ ...ಪಾತ್ರವನ್ನು ಮತ್ತೊಬ್ಬ ಕಲಾವಿದ ನಿರ್ವಹಿಸುತ್ತಿದ್ದಾರೆ. ಅದೂ ಹಿಂದಿಯ ... ಸುರೇಶ್ ಒಬೇರಾಯ್. ಕನ್ನಡ ಚಿತ್ರರಂಗದಲ್ಲಿ ಈ ರೀತಿ ಕಲಾವಿದನೊಬ್ಬನನ್ನು ... ಕಲಾವಿದ ಬೆಳ್ಳಿ ಪರದೆಯ ಮೇಲೆ ಪ್ರತಿನಿಧಿಸುತ್ತಿರುವುದು ಇದೇ ...ಬಾರಿ. ಅದೂ ರಾಜ್‌ಕುಮಾರ್‌ರಂತಹ ದಂತಕಥೆಯ ವ್ಯಕ್ತಿಯನ್ನು ಬೆಳ್ಳಿತೆರೆಯ ...ತೋರಿಸುವುದೆಂದರೆ ನಿಜಕ್ಕೂ ನಿರ್ದೇಶಕನಾದವರಿಗೆ ದಿಲ್ ಬೇಕೇಬೇಕು. ...ವರೆ ರಾಜ್‌ಕುಮಾರ್ ಅವರನ್ನು ಸಮರ್ಥವಾಗಿ ಒಬೇರಾಯ್ ಪ್ರತಿಬಿಂಬಿ... ...ಖಂಡಿತವಾಗಿಯೂ ಅದು ಚಿತ್ರಕ್ಕೆ ಪ್ಲಸ್ ಪಾಯಿಂಟ್ ಆಗುತ್ತದೆ. ಇಲ್ಲದಿದ್ದರೆ ... ಚಿತ್ರಕ್ಕೆ ತೊಂದರೆಯಾಗುವ ಸಾಧ್ಯತೆಯೂ ಇದೆ. ಏಕೆಂದರೆ ರಾಜ್‌ಕುಮಾರ್ ...ಹಾವಭಾವ, ನಡೆನುಡಿ ಎಲ್ಲವೂ ಅದರದ್ದೇ ಆದ ವೈಶಿಷ್ಟ್ಯತೆಯನ್ನು ಹೊಂದಿದ್ದವು. ...ಅವರಕ್ಕೆ ವಿಶಿಷ್ಟವಾದ ಆಕರ್ಷಣೆಯ ಗುಣ ಇತ್ತು. ಇವೆಲ್ಲವನ್ನು 'ಅಟ್ಟಹಾಸ' ... ನಿರ್ದೇಶಕ ರಮೇಶ್ ಹೇಗೆ ಬಳಸಿಕೊಂಡಿದ್ದಾರೆ ಎಂಬುದರ ಮೇಲೆ ...ಫಲಿತಾಂಶ ಅವಲಂಬಿತವಾಗಿದೆ ಎಂದೂ ಹೇಳಬಹುದು. ●

ಗ್ಲಾಮರ್-ಡಿ-ಗ್ಲಾಮರ್

ರಾಧಿಕಾ ಪಂಡಿತ್ ಸದ್ಯಕ್ಕೆ ಕನ್ನಡ ಚಿತ್ರರಂಗದಲ್ಲಿ ನಂಬರ್ 1 ತಾರೆ ಮಾತ್ರವಲ್ಲ, ಆಕೆ ಹೊಸ ಪಾತ್ರಗಳಿಗೆ ತನ್ನನ್ನು ಅರ್ಪಿಸಿಕೊಳ್ಳುವುದರ ಮೂಲಕ ಪ್ರಯೋಗಶೀಲ ನಟಿ ಎಂದೂ ಅನ್ನಿಸಿಕೊಂಡಿದ್ದಾರೆ. ಈಕೆ ಅಪ್ಪಟ ಕಮರ್ಷಿಯಲ್ ನಟಿಯಾದರೂ ಪ್ರಶಸ್ತಿಗಳನ್ನೂ ಪಡೆದಿರುವ ತಾರೆಯಾಗಿದ್ದಾಳೆ. ಈ ತರಹ ಪ್ರಶಸ್ತಿ ಮತ್ತು ಗ್ಲಾಮರ್ ಎರಡನ್ನೂ ಸರಿದೂಗಿಸುವ ನಾಯಕಿಯರು ನಮ್ಮ ಕನ್ನಡ ಚಿತ್ರರಂಗದಲ್ಲಿ ಬಹಳ ಕಡಿಮೆ.


ಸದ್ಯಕ್ಕೆ ರಾಧಿಕಾ ಪಂಡಿತ್ ಸೂರಿ ನಿರ್ದೇಶನದ 'ಕಡ್ಡಿಪುಡಿ' ಮತ್ತು ಶೈಲೇಂದ್ರಬಾಬು ನಿರ್ಮಾಣದ 'ದಿಲ್‌ವಾಲಾ' ಚಿತ್ರಗಳಲ್ಲಿ ನಟಿಸುತ್ತಿದ್ದಾಳೆ. 'ಕಡ್ಡಿಪುಡಿ' ಚಿತ್ರದಲ್ಲಿ ಶಿವರಾಜ್‌ಕುಮಾರ್ ಎದುರು ನಾಯಕಿಯಾಗಿ ನಟಿಸುತ್ತಿರುವ ರಾಧಿಕಾ ಪಂಡಿತ್ ಯಾವುದೇ ಮೇಕಪ್ ಇಲ್ಲದೇ, ತಳುಕುಬಳುಕಿನ ಬಟ್ಟೆಗಳನ್ನು ಹಾಕದೆ ಸಿಂಪಲ್ ಆದ ಕಾಟನ್ ಸೀರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ. ಅಂದರೆ, ಈಕೆ ಡಿ-ಗ್ಲಾಮರ್ಸ್ ಪಾತ್ರದಲ್ಲಿ ನಟಿಸುತ್ತಿದ್ದಾಳೆ ಎಂದಾಯಿತು.



'ದಿಲ್‌ವಾಲಾ' ಚಿತ್ರದಲ್ಲಿ ಆಕೆ ಸಂಪೂರ್ಣವಾಗಿ ಮಾಡರ್ನ್ ಹುಡುಗಿಯ ಪಾತ್ರದಲ್ಲಿ ಮಿಂಚುತ್ತಿದ್ದಾರೆ. ಈ ಚಿತ್ರದಲ್ಲಿ ನಿರ್ಮಾಪಕ ಶೈಲೇಂದ್ರಬಾಬುರವರ ಮಗ ಸುಮಂತ್ ಎದುರು ಈಗಿನ ಜಮಾನದ ಹುಡುಗಿಯರು ಹಾಕುವಂತಹ ಮಿಡಿ ಮತ್ತು ಮಿನಿ ಸ್ಕರ್ಟ್‌ಗಳಲ್ಲಿ ಕಾಣಿಸುತ್ತಿದ್ದಾರೆ. ಅಂದರೆ ಏಕಕಾಲದಲ್ಲಿ ಒಂದು ಕಡೆ ಕಲಾತ್ಮಕ ಎನಿಸಬಹುದಾದ ಪಾತ್ರ, ಮತ್ತೊಂದು ಕಡೆ ಅಪ್ಪಟ ಕಮರ್ಷಿಯಲ್ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿರುವ ರಾಧಿಕಾ ಪಂಡಿತ್ ಖಂಡಿತವಾಗಿಯೂ ಪ್ರಯೋಗಶೀಲೆ ಅಲ್ಲವೆ? ●

ಅಂಬಿ ಡಾಕ್ಟರಾದರು!

ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ 'ಡಾಕ್ಟರ್' ಬಂದಿದ್ದಾರೆ. ಅವರ ಹೆಸರು ಡಾಕ್ಟರ್ ಅಂಬರೀಷ್.



ಮೊನ್ನೆ ಕರ್ನಾಟಕ ವಿಶ್ವವಿದ್ಯಾಲಯ ಅಂಬರೀಷ್ ಅವರಿಗೆ ಡಾಕ್ಟರೇಟ್ ಪದವಿಯನ್ನು ನೀಡಿದ್ದು ನಿಮಗೆಲ್ಲ ಗೊತ್ತಿದೆ. ಇತ್ತೀಚೆಗೆ ಕನ್ನಡ ಚಿತ್ರರಂಗದ ತಾರೆಯರು ಡಾಕ್ಟರೇಟ್ ಪದವಿ ಪಡೆಯುವುದು ಮಾಮೂಲಿಯಾಗಿದೆ. ಹಾಗೆ ನೋಡಿದರೆ ಅಂಬರೀಷ್ ಅವರು 'ಡಾಕ್ಟರ್' ಆಗುತ್ತಾರೆಂದು ಕಳೆದ 2-3 ವರ್ಷಗಳಿಂದ ಆಗಾಗ್ಗೆ ಸುದ್ದಿ ಕೇಳಿಬರುತ್ತಲೇ ಇತ್ತು. ಸುಮಾರು 200 ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಅಂಬರೀಷ್ ಸದ್ಯಕ್ಕೆ ಕನ್ನಡ ಚಿತ್ರರಂಗದ ಹಿರಿಯ ನಟ ಮತ್ತು ಅಜಾತಶತ್ರು ಎಂಬುದರ ಬಗ್ಗೆ ಯಾವುದೇ ಸಂಶಯವಿಲ್ಲ.

ಆದರೆ ಮೊನ್ನೆ ಸಮಾರಂಭವೊಂದರಲ್ಲಿ ಅಂಬರೀಷ್ ಅವರ ಸಮಕಾಲೀನ ಶ್ರೀನಿವಾಸಮೂರ್ತಿಯವರು ಭಾಷಣ ಮಾಡುತ್ತ "ಬೀಡಿ, ಸಿಗರೇಟ್ ಸೇದುವವರಿಗೆಲ್ಲ ಇತ್ತೀಚೆಗೆ ಡಾಕ್ಟರೇಟ್ ಸಿಗುತ್ತಿದೆ" ಎಂದು ಪರೋಕ್ಷವಾಗಿ ಅಂಬರೀಷ್ ಅವರಿಗೆ ಟಾಂಗ್ ಕೊಟ್ಟಿದ್ದು ಕುತೂಹಲಕಾರಿಯಾಗಿದೆ. ಶ್ರೀನಿವಾಸಮೂರ್ತಿಯವರ ಈ ಹೇಳಿಕೆ ದೊಡ್ಡ ವಿವಾದವಾಗಬಹುದೆಂದು ಎಲ್ಲರೂ ನಿರೀಕ್ಷಿಸಿದ್ದರು. ಆದರೆ ಸದ್ಯಕ್ಕೆ ಈ ಬಾಂಬ್ ಠುಸ್ ಆಗಿದೆ.

ಏನೇ ಆದರೂ ಅಂಬರೀಷ್‌ಗೆ ಡಾಕ್ಟರೇಟ್ ಪದವಿ ಸಿಕ್ಕಿರುವುದು ಅವರ ಅಭಿಮಾನಿಗಳಿಗೆ ಸಂತೋಷ ನೀಡಿದೆ. ಆದರೆ ಅದರಾಚೆ ಇರುವ ಜನರಲ್ಲಿ ವಿಶ್ವವಿದ್ಯಾಲಯಗಳು ಹೀಗೆ ಸಿನಿಮಾ ತಾರೆಯರಿಗೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಡಾಕ್ಟರೇಟ್ ಪದವಿ ನೀಡುತ್ತಿರುವ ಬಗ್ಗೆ ಅಸಮಾಧಾನ ಹೆಚ್ಚುತ್ತಿದೆ. ●

ಸರ್ಕಾರದ ತಾರಾ ಕಾಳಜಿ!



ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆ ತಾರಾ ಗಂಡು ಮಗುವಿಗೆ ಜನ್ಮ ನೀಡಿದರು. ಬಹುಶಃ ಈಕೆಗೆ ಮಗು ಆದ ನಂತರ ಕರ್ನಾಟಕ ಸರ್ಕಾರ ಕೂಡ ಎಚ್ಚೆತ್ತುಕೊಂಡಿದೆ ಎಂದೆನಿಸುತ್ತಿದೆ. ಕಳೆದ ಎಂಭತ್ತು ತಿಂಗಳುಗಳಿಂದ ಗರ್ಭಿಣಿ ತಾರಾ ಅಕಾಡೆಮಿಯ ಕೆಲಸಗಳಲ್ಲಿ ಏಕಾಂಗಿಯಾಗಿ ನಿರ್ವಹಿಸುತ್ತಿದ್ದರೂ ಸರ್ಕಾರ ಆ ಅಕಾಡೆಮಿಗೆ ಸದಸ್ಯರನ್ನು ನೇಮಿಸುವ ಗೋಜಿಗೆ ಹೋಗಿರಲಿಲ್ಲ. ಈಗ ಪ್ರಸ್ತುತ ಬಿಜೆಪಿ ಸರ್ಕಾರದ ಆಯಸ್ಸು ಇನ್ನು ಕೇವಲ ಮೂರು ತಿಂಗಳು ಇರುವಾಗ ಇದ್ದಕ್ಕಿದ್ದಂತೆ ಅಕಾಡೆಮಿಗೆ ಒಂದಿಷ್ಟು ಹೊಸ ಸದಸ್ಯರನ್ನು ಆಯ್ಕೆ ಮಾಡಲಾಗಿದೆ. ಚುನಾವಣೆಗೂ ಮುನ್ನ ಕೊನೆಕ್ಷಣದಲ್ಲಿ ಅಕಾಡೆಮಿಗೆ ಸದಸ್ಯರನ್ನು ಆಯ್ಕೆ ಮಾಡಿರುವುದು ಅನೇಕಾನೇಕ ಕುತೂಹಲಗಳಿಗೆ ಎಡೆಮಾಡಿದೆ. ಮುಂದಿನ ಮೂರು ತಿಂಗಳುಗಳ ಕಾಲ ತಾರಾ ಮನೆಯಿಂದ ಹೊರಬಂದು ಅಕಾಡೆಮಿಯ ಕೆಲಸ ಮಾಡುವಂತಹ ಪರಿಸ್ಥಿತಿಯಲ್ಲಿಲ್ಲ. ಇಂತಹ ಸಂದರ್ಭದಲ್ಲಿ ಅಧ್ಯಕ್ಷರ ಗೈರುಹಾಜರಿಯಲ್ಲಿ ಈ ಸದಸ್ಯರು ಏನು ಕೆಲಸ ಮಾಡುತ್ತಾರೆ? ಹೇಗೆ ಕೆಲಸ ಮಾಡುತ್ತಾರೆ? ಅಂದಹಾಗೆ ತಾರಾ ಅವರ ಒಪ್ಪಿಗೆಯಿಲ್ಲದೆ ಈ ಸದಸ್ಯರನ್ನು ಆಯ್ಕೆ ಮಾಡಿದ ಬಗ್ಗೆ ಆಕೆಗೂ ಒಂದಿಷ್ಟು ಅಸಮಾಧಾನವಿದೆ. ●

...ಮಾದವರ ಪ್ರೇಮಿಗಳ ದಿನಪ್ರೇಮ

...ಪ್ರೇಮಿಗಳ ದಿನದಂದು ಏಳೆಂಟು ಪ್ರೇಮಕಥಾವಸ್ತುವಿನ ಚಿತ್ರಗಳು ತೆರೆಕಾಣು...ವು ಭಾರೀ ಪ್ರಚಾರವಾಗಿತ್ತು. ಆದರೆ ಈಗ ಬಿಡುಗಡೆಯಾಗುತ್ತಿರುವುದು ...ಮೂರು ಚಿತ್ರಗಳು ಮಾತ್ರ. ಅವುಗಳೆಂದರೆ 'ಅಟ್ಟಹಾಸ', ರವಿಶಂಕರ್‌ಗೌಡ ... 'ದೇವರಾಣೆ' ಎಂಬ ಕಾಮಿಡಿ ಚಿತ್ರ ಮತ್ತು ತರುಣ್‌ಚಂದ್ರ ಎಂಬ ...ನಟಿಸಿರುವ 'ಪದೇಪದೇ' ಎಂಬ ರೊಮ್ಯಾಂಟಿಕ್ ಚಿತ್ರ.

...ಹಿಂದೆ ವರಮಹಾಲಕ್ಷ್ಮಿ ಹಬ್ಬದ ದಿನದಂದು ಸಿನಿಮಾದವರು ಇದೇ ರೀತಿ ...ದ್ದು ತಮ್ಮ ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಲು ಕಷ್ಟಪಡುತ್ತಿದ್ದರು. ...ವರ್ಷ ಮೊದಲ ಬಾರಿಗೆ ಪ್ರೇಮಿಗಳ ದಿನಾಚರಣೆಗೂ ಚಿತ್ರರಂಗದವರಿಂದ ಇಷ್ಟೊಂದು ಡಿಮಾಂಡ್ ಬಂದಿದೆ.

ಅಂದಹಾಗೆ ಫೆಬ್ರವರಿ 14ರಂದು ತನ್ನ ಚಿತ್ರವನ್ನು ಬಿಡುಗಡೆ ಮಾಡಬೇಕೆಂದು ಹೊರಟಿದ್ದ 'ಸಿಂಪಲ್ ಆಗಿ ಒಂದು ಲವ್ ಸ್ಟೋರಿ' ತಂಡದವರು ತಮ್ಮ ಯೋಜನೆಯನ್ನು ಮುಂದೂಡಿದ್ದಾರೆ. ಹಾಗೆಯೇ ಫಿಲಂ ಛೇಂಬರ್‌ನ ಮಾಜಿ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ಕೂಡ ತಮ್ಮ ಸಿನಿಮಾಗಳ ಬಿಡುಗಡೆಯನ್ನು ಮುಂದೂಡಿದ್ದಾರೆ. ಅವರ ನಿರ್ಮಾಣದ, ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಕೂರ್ಮಾವತಾರ' ಮತ್ತು ರಾಮದಾಸ್ ನಾಯ್ಡು ನಿರ್ದೇಶನದ 'ಹೆಜ್ಜೆಗಳು' ಚಿತ್ರಗಳು ಕೂಡ ಪ್ರೇಮಿಗಳ ದಿನಕ್ಕಾಗಿ ಕಾದುಕುಳಿತಿದ್ದವು. ಈಗ ಈ ಮೂರು ಚಿತ್ರಗಳು ಅನಿರ್ದಿಷ್ಟ ಕಾಲಾವಧಿ ಮುಂದೂಡಲ್ಪಟ್ಟಿವೆ.

● ಶೆಣೈ

... ಮತ್ತು ಭೂದೇವಿಯರು ಪ್ರತಿ ವರ್ಷ ...ದುವೆ ಅರ್ಥಾತ್ ಕಲ್ಯಾಣೋತ್ಸವವನ್ನು ...ು ಮತ್ತೆ ಮತ್ತೆ ಮಾಡಿದರೂ ತಮಗೆ ...ವಿಲ್ಲ ಎಂದು ಕೊರಗುತ್ತಿದ್ದರು. ಜಗತ್ತಿನ ...ಲ್ಲಿ ನಿಮ್ಮ ಮಕ್ಕಳೇ ಎಂದು ...ದರೂ ಅವರಿಗೆ ಸಮಾಧಾನ ...ವಿಲ್ಲ. ಹೀಗೆ ಕೋಟ್ಯಾಂತರ ವರ್ಷಗಳು



...ಿ ಈಗ ಭಾರತದೆಲ್ಲೆಡೆ ನಡೆಯುತ್ತಿರುವ ...ಕ ಅತ್ಯಾಚಾರದ ವರದಿ ಓದಿದಮೇಲೆ ...ಯರೆಲ್ಲ ಹೇಳತೊಡಗಿದರು - 'ಥ್ಯಾಂಕ್ ...ನಮಗೆ ಹೆಣ್ಣು ಮಕ್ಕಳು ಇಲ್ಲದಿದ್ದದ್ದು ...ೇ ಆಯಿತು!'

...ತದ ಗಂಡಸರ ಅತ್ಯಾಚಾರಿ ಬುದ್ಧಿ ನೋಡಿ ...ಮ್ಮಿ, ದೇವಯಾನಿ, ವಳ್ಳಿ, ಶ್ರೀದೇವಿ, ಭೂದೇವಿ "ಇಂತಹಾ ಗಂಡುಮಕ್ಕಳಿಲ್ಲದೆ ನಾವು ...ರಾಗಿದ್ದದ್ದೇ ಒಳ್ಳೆಯದಾಯಿತು, ಥ್ಯಾಂಕ್ ಗುಡ್ ...ಎಂದು ಸಮಾಧಾನದ ನಿಟ್ಟುಸಿರುಬಿಟ್ಟರು.

- ರವಿ ಭಾಸ್ಕರ್ ಶೆಣವ, ಮುಂಬೈ

ಕಾಂಗ್ರೆಸ್ ಮಾತ್ರವಲ್ಲ ...ಜೆಪಿಯೂ ದ್ರೋಹ ಬಗೆದಿದೆ

...ಕೆಯ ಫೆಬ್ರವರಿ 20, 2013ರ ಸಂಚಿಕೆಯಲ್ಲಿ ...ರನ್ನು ವಂಚಿಸಿದ ಕಾಂಗ್ರೆಸ್' ಎಂಬ 'ಕಂಡಹಾಗೆ' ... ನನ್ನ ಪ್ರತಿಕ್ರಿಯೆ:

...ಗಿಕ ದೌರ್ಜನ್ಯ ಕಾಯಿದೆ ವಿಷಯದಲ್ಲಿ ಕಾಂಗ್ರೆಸ್ ...ರೋಧ ಪಕ್ಷವಾದ ಬಿಜೆಪಿ ಕೂಡ ದೇಶಕ್ಕೆ ... ಬಗೆದಿದೆ. ಹಂತಕಪ್ರಿಯ ಬಿಜೆಪಿಗಳಿಗೆ ಈ ...ಯಲ್ಲಿ ಅತ್ಯಾಚಾರಿಗಳಿಗೆ ಮರಣದಂಡನೆಗೆ ...ಿದೆ ಎಂಬ ಒಂದು ಅಂಶವೇ ಖುಷಿ ಕೊಟ್ಟಿದೆ. ...ಳೆಯರ ವಿಷಯದಲ್ಲಿ ಸೋನಿಯಾ ಮತ್ತು ಸುಷ್ಮಾ ...ಆಗಿರುವುದು ಬೇಸರ ತರಿಸಿದೆ. ಈ ದೇಶದಲ್ಲಿ ...ಯತೆಯು ಯಾವುದೇ ಕಾಯಿದೆಯಿಂದಲೂ ...ನೆಗೆ ಬರುವುದಿಲ್ಲ ಬಿಡಿ. ಏನೆಂದರೂ ಹೆಣ್ಣು ...ಸ್ಕೆ ಭೋಗದ ವಸ್ತು ಮತ್ತು ದೇವತೆ ಅಷ್ಟೇ. ... ದುನುಷ್ಯರಾಗಿರಲಿ ಸರ್ಕಾರಗಳಾಗಲಿ, ...ಾಗಲಿ ಬದಲುವುದಿಲ್ಲ. ಅಂದಹಾಗೆ, ಆಗ ಆರೆಸ್ಸೆಸ್‌ನ ... ಕಾರ್ಯಕರ್ತ ನಾಥೂರಾಮ್ ಗೋಡ್ಸೆ ಮಹಾತ್ಮ ...ಗಾಂಧಿಯವರನ್ನು ಕೊಂದಾಗ ಆರೆಸ್ಸೆಸ್‌ನ ನಾಯಕರು ...ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದ್ದರು. ಈಗ ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದಾಗಲೂ ಅವರೆಲ್ಲ ಸಿಹಿ ತಿಂದು ಆನಂದಿಸಿದ್ದಾರೆ. ಎಂತಹ ವಿಪರ್ಯಾಸವಲ್ಲವೇ!

ಯಾರದ್ದೇ ಸಾವನ್ನು ಸಂಭ್ರಮಿಸುವವರು ಸೈತಾನರೇ ಆಗಿರುತ್ತಾರೆ. ಆರೆಸ್ಸೆಸ್‌ನ ಸಿದ್ಧಾಂತ ಯಾವುದೇ ಭಯೋತ್ಪಾದಕ ಸಿದ್ಧಾಂತಕ್ಕಿಂತ ಭಿನ್ನವಾಗಿಲ್ಲ.

- ರವಿಕುಮಾರ್, ಹಾಸನ

ಹೊಟ್ಟೆಹುಣ್ಣಾಗುವಂತೆ ನಗಿಸಿದ 'ಕಟ್ಟೆಪುರಾಣ

ಪತ್ರಿಕೆಯ 2013ರ ಫೆಬ್ರವರಿ 13ರ ಸಂಚಿಕೆ 8ನೇ ತಾರೀಖು ನನಗೆ ತಲುಪಿದ್ದು ಸಮಯದ ಅಭಾವದಿಂದ ಅದನ್ನು ಓದಲಾಗಿರಲಿಲ್ಲ. ಆದರೆ ಇವತ್ತು ಬೆಳಗ್ಗೆ ತಿಂಡಿ ತಿನ್ನುತ್ತಿರುವಾಗ ನನ್ನ ಅಚ್ಚುಮೆಚ್ಚಿನ ಕಟ್ಟೆಪುರಾಣ ಅಂಕಣವನ್ನು ಓದಲಾರಂಭಿಸಿದೆ. ಬಿ.ಚಂದ್ರೇಗೌಡರು ಬರೆದಿದ್ದ "ಈ ಶತಮಾನದಲ್ಲಿ ಇಂತಹ ತಿಥಿ ನೋಡಿರಲಿಲ್ಲ" ಓದುತ್ತಾ ಹೋದಂತೆ ನಾನೆಷ್ಟು ನಗಲಾರಂಭಿಸಿದೆನೆಂದರೆ ನನ್ನ ಆರು ವರ್ಷ ವಯಸ್ಸಿನ ಮಗಳು ನಿಧಿ "ಯಾಕಪ್ಪ ಅಷ್ಟು ನಗುತ್ತಿದ್ದೀಯ" ಎಂದು ಕೇಳಿದಳು. ಆಕೆಗೆ ನನ್ನಿಂದ ಉತ್ತರಕೊಡಲಾಗಲಿಲ್ಲ.

ಇಷ್ಟು ಚಂದದ ಪತ್ರಿಕೆಯನ್ನು ತರುತ್ತಿರುವ ನಿಮ್ಮ ತಂಡಕ್ಕೂ, ಬಿ.ಚಂದ್ರೇಗೌಡರಿಗೂ ನನ್ನ ಅಭಿನಂದನೆಗಳು.

- ಚಂದ್ರಕಾಂತ್ ಅಂಗಡಿ, ಈ ಮೇಲ್ ಮೂಲಕ

ಯಾಕೆ ಈ ತಾರತಮ್ಯ?

ದುನಿಯಾ ವಿಜಿಯ ಡೈವರ್ಸ್ ಬಗ್ಗೆ ಯಾಕೆ ಒಂದು ಅಕ್ಷರವನ್ನೂ ಪತ್ರಿಕೆ ಬರೆಯಲಿಲ್ಲ? ಗಂಡನ ಜೊತೆ ಆರಾಮಾಗಿರುವ ವಿಜಯಲಕ್ಷ್ಮಿ ಎಂಬ ನಸುಗುನ್ನಿ ಹೆಂಗಸಿನ ಬಗ್ಗೆ ಕರುಣೆಯ ಕೋಡಿಯನ್ನೇ ಹರಿಸಿದ ಪತ್ರಿಕೆಗೆ ವಿಜಯ್‌ನ ಅಮಾಯಕ ಹೆಂಡತಿ ನಾಗರತ್ನಳ ಬಗ್ಗೆ ಕಾಳಜಿ ಯಾಕಿಲ್ಲ? ನೀವು ಹೀಗೆ ಪಾರ್ಶಿಯಾಲಿಟಿ ಮಾಡಕೂಡದು. ಇದನ್ನು ನೋಡಿ ನನ್ನ ಮಿತ್ರರು ನಿಮ್ಮ ಬಗ್ಗೆ ವಿಚಿತ್ರವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಇದು ನಿಮಗೆ ಎಚ್ಚರಿಕೆ.

- ಚಂದ್ರಜ್ಯೋತಿ, ತುಮಕೂರು

ಶಾರುಖ್‌ನ 'ನಾನೊಬ್ಬ ಖಾನ್ ಲೇಖನ ಚೆನ್ನಾಗಿತ್ತು

ಫೆಬ್ರವರಿ 13, 20103ರ ಸಂಚಿಕೆಯಲ್ಲಿನ 'ಕಂಡಹಾಗೆ' ಓದಿದೆ. ಅದರಲ್ಲಿ 'ಇಬ್ಬರು ನಟರ ನಡುವಿನ ವ್ಯತ್ಯಾಸ'ದ ಬಗ್ಗೆ ಚೆನ್ನಾಗಿ ವಿಶ್ಲೇಷಣೆ ಮಾಡಿ ಗೌರಿ ಬರೆದಿದ್ದಾರೆ. ಅದರಲ್ಲೂ ಶಾರೂಖ್ ಖಾನ್‌ರ 'ನಾನೊಬ್ಬ ಖಾನ್' ಲೇಖನದ ಅನುವಾದ ಮಾಡಿ ಶಾರೂಕನ ಬಗ್ಗೆ ನನಗಿದ್ದ ಕೆಲವು ಪೂರ್ವಾಗ್ರಹ ಹೋಗಲಾಡಿಸಿದ್ದಕ್ಕೆ, ಥ್ಯಾಂಕ್ಸ್!

ಕಮಲ್‌ನಂತಹ ಮೇರುನಟನೊಬ್ಬ 'ವಿಶ್ವರೂಪಂ' ನಂತಹ ಚಿತ್ರ ಮಾಡುವಾಗ ಇನ್ನಷ್ಟು ಸೂಕ್ಷ್ಮತೆ ತೋರಿಸಬೇಕಿತ್ತು ಅನಿಸುತ್ತೆ. ಆದರೆ ದುರಂತ ನೋಡಿ: ಅವೈದಿಕರ ಬಗ್ಗೆ ಅಸಹನೆ ಇಟ್ಟುಕೊಂಡಿರುವ, ವೈದಿಕಶಾಹಿಯ ಪ್ರತಿಪಾದಕಿಯಾಗಿರುವ ಹಾಗು ಎಂದೂ ಮುಸ್ಲಿಂರ ಬಗ್ಗೆ ಕನಿಷ್ಠ ಕಾಳಜಿ ತೋರಿಸದ ಜಯಲಲಿತಾನಂಥವರು ಈ ಚಿತ್ರವನ್ನು ಉಪಯೋಗಿಸಿಕೊಂಡು ಮಾಡಿದ ಮತೀಯ ರಾಜಕೀಯ ತೀರಾ ಕೆಳಮಟ್ಟದ್ದಾಗಿದೆ.

ಈ ಪತ್ರವನ್ನು ಟೈಪಿಸುವಾಗಲೆ ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದ ಸಮಾಚಾರ ಬಂದಿದೆ. ಇಷ್ಟು ದಿನ ಅವನನ್ನು ಗಲ್ಲಿಗೇರಿಸುತ್ತಿಲ್ಲವೆಂಬ ವಿಷಯದ ಬಗ್ಗೆ ಭಾರತೀಯ ಜನತಾ ಪಕ್ಷ ರಾಜಕೀಯ ಮಾಡುತ್ತಿತ್ತು. ಈಗ ಒಮ್ಮಿಂದೊಮ್ಮೆಲೆ ಕಸಬ್ ಮತ್ತು ಗುರುವನ್ನು ಗಲ್ಲಿಗೇರಿಸುವ ಮೂಲಕ ಭಾಜಪಕ್ಕೆ ಉತ್ತರ ಕೊಡುವಂತಹ ವೋಟ್ ಬ್ಯಾಂಕಿನ ರಾಜಕೀಯಕ್ಕೆ ಯು.ಪಿ.ಎ. ಸಹ ಸಿದ್ಧವಾದಂತಿದೆ. ಕೋಮು ದ್ವೇಷದ ದಳ್ಳುರಿಯಲ್ಲಿ ಈ ನಾಡಿನ ಅಧಿಕಾರದ ಚುಕ್ಕಾಣಿ ಹಿಡಿಯಲು ಹೊರಟಿರುವ ಪಕ್ಷಗಳು ರಾಜಕಾರಣವನ್ನು ಮತ್ತು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಾರೋ ತಿಳಿಯದಾಗಿದೆ.

ಮತೀಯ ರಾಜಕಾರಣದ ಕೆಸರಿನ ನಡುವೆಯೂ ಸೌಹಾರ್ದದ ಹೂವನ್ನು ಅರಳಿಸಲು ಯತ್ನಿಸುತ್ತಿರುವ ನಿಮ್ಮ ಮತ್ತು ಪತ್ರಿಕಾ ಬಳಗದ ಪ್ರಯತ್ನಕ್ಕೆ ನಮ್ಮಂತವರ ಬೆಂಬಲವಿದೆ.

ಪತ್ರಿಕೆಯ ಸದಾಶಯಗಳು ಈಡೇರಲೆಂದು ಹಾರೈಸುತ್ತೇನೆ!

- ಅನಿತಾ ಮಧುಸೂದನ್ ಗೌಡ, ಈ ಮೇಲ್ ಮೂಲಕ

ಜನರ ಹಣ ಪಡೆಯುವ ಮಠಗಳಿಗೆ ಮರ್ಯಾದೆ ಇದೆಯೇ?

ಕರ್ನಾಟಕ ರಾಜ್ಯ ಸರ್ಕಾರದ ಬಜೆಟ್ ಮಂಡನೆಯಾಗಿದೆ. ನಿರೀಕ್ಷೆಯಂತೆ ಜನಸಾಮಾನ್ಯರ ತೆರಿಗೆ ಹಣವನ್ನು ಮಠಮಾನ್ಯಗಳಿಗೆ ಉದಾರವಾಗಿ, ಈ ಹಿಂದೆ ನೀಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನೀಡಲಾಗಿದೆ.

ಮಠಮಾನ್ಯಗಳಿಗೆ - ಅದರಲ್ಲೂ ಜಾತೀಯತೆಯನ್ನು ಪ್ರೋತ್ಸಾಹಿಸುವ, ಪಂಕ್ತಿ ಭೇದವನ್ನು ಆಚರಿಸುವ ಮಠಗಳಿಗೆ - ಎಲ್ಲಾ ಶೋಷಿತ ವರ್ಗಗಳ ಪರವಾಗಿ ನಾನು ಕೇಳುವುದೇನೆಂದರೆ: "ಸರ್ಕಾರವು ನಿಮ್ಮ ಮಠಗಳಿಗೆ ನೀಡುತ್ತಿರುವ ಹಣದಲ್ಲಿ ದಲಿತರ, ತಳಸಮುದಾಯದವರ, ಮಾಂಸಾಹಾರಿಗಳ, ಅದರಲ್ಲೂ ತಾವು ತೀವ್ರವಾಗಿ ವಿರೋಧಿಸುವ ಗೋಮಾಂಸ ಭಕ್ಷಿಸುವವರ ತೆರಿಗೆ ಹಣವೂ ಸೇರಿರುವುದರಿಂದ ನಿಮ್ಮ ಮಡಿವಂತಿಕೆಗೆ ಅಪಚಾರವಾಗುವುದಿಲ್ಲವೇ? ಈ ಎಲ್ಲಾ ವರ್ಗಗಳಿಗೆ ಸಮಾನತೆಯನ್ನು (ಮುಖ್ಯವಾಗಿ ಪಂಕ್ತಿ ಭೋಜನ) ನೀಡಲು ಒಪ್ಪದ ನಿಮ್ಮ ಮನಸ್ಸುಗಳು ಈ ತೆರಿಗೆ ಹಣವನ್ನು ಮಾತ್ರ ಸ್ವೀಕರಿಸಲು ಒಪ್ಪುವುದಾದರೂ ಹೇಗೆ?"

ರಾಜ್ಯವು ಈಗ ತೀವ್ರ ಬರಗಾಲ ಎದುರಿಸುತ್ತಿದೆ. ಆದ್ದರಿಂದ ಮಠಮಾನ್ಯಗಳು ಸರ್ಕಾರ ನೀಡಿರುವ ಈ ಕೋಟ್ಯಾಂತರ ಹಣವನ್ನು ಸ್ವೀಕರಿಸದೇ ಬರಪರಿಹಾರಕ್ಕೆ, ರಾಸುಗಳ ಮೇವು ಖರೀದಿಗೆ, ಕುಡಿಯುವ ನೀರಿಗೆ, ಇನ್ನಿತರ ಜನಹಿತ ಕಾರ್ಯಕ್ಕೆ ಆ ಹಣವನ್ನು ಬಳಸಿ ಎಂದು ಮಠಮಾನ್ಯಗಳೇ ನಯವಾಗಿ ತಿರಸ್ಕರಿಸಲಿ ಎಂದು ಆಶಿಸುವೆ.

ಆದರೆ ಮಾನಮರ್ಯಾದೆ ಇಲ್ಲದೆ ಜನರ ಹಣವನ್ನು ಸ್ವೀಕರಿಸುವ ಮಠಮಾನ್ಯಗಳಿಂದ ಅಂತಹ ಸೂಕ್ಷ್ಮತೆ ನಿರೀಕ್ಷಿಸಲಾಗುವುದಿಲ್ಲ ಎನಿಸುತ್ತದೆ.

- ಶ್ರೀನಿವಾಸಕರಿಯಪ್ಪ, ರಾಮನಗರ

ತಮಿಳು ನಾಡಿನ ಬೆಳ್ಳಿತೆರೆಯ ಭೈರಪ್ಪ (ಅಂದರೆ ಕಮಲ್ ಹಾಸನ್) ನಲ್ಲಿ ಒಂದು ಮನವಿ: "ನಿನ್ನ ಹೊಸ ಸಿನಿಮಾ 'ವಿಶ್ವರೂಪಂ-ಭಾಗ 2' ದಲ್ಲಿ ಹಿಂದೂ ಭಯೋತ್ಪಾದಕರನ್ನು ತೋರಿಸಿ ಬದುಕು ನೋಡೋಣ!"

- ಕಸ್ತೂರಿ, ತುಮಕೂರು

ತಮ್ಮನ್ನು ಟೀಕಿಸುವ ಪತ್ರಗಳನ್ನು 'ಕ.ಬು'ಗೆ ಹಾಕುವುದು ಬೇರೆ ಪತ್ರಿಕೆಗಳು ಮಾಡುವ ಮೊದಲ ಆದ್ಯತೆಯ ಕೆಲಸ. ಆದರೆ 2013ರ ಫೆಬ್ರವರಿ 20ರ ಸಂಚಿಕೆಯಲ್ಲಿ ಅಭಿನಂದನ ಬಳ್ಳಾರಿ ಅವರು ನಿಮ್ಮನ್ನು ಟೀಕಿಸಿ ಬರೆದಿರುವ ಪತ್ರ... ಪ್ರಕಟಿಸಿದ ನಿಮ್ಮ ಸಾಂವಿಧಾನಿಕ ನಡೆಗೆ ನನ... ಸಲಾಮ್ ಇರಲಿ.

- ರಂಗಸ್ವಾಮಿ, ಮೈಸೂ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ... ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 27-02-2013 RNI No. KARKAN2005/146

ಬಲು ಅಪರೂಪ ನಮ್ ಜೋಡಿ

"ಕರಿಂದಿ ಚಿತ್ರರಂಗದಲ್ಲಿ ದಾಖಲೆಯನ್ನು ನಿರ್ಮಿಸಿದ್ದ 'ಶೋಲೆ' ಚಿತ್ರವನ್ನು ದಕ್ಷಿಣ ಭಾರತದ ಐದು ಭಾಷೆಗಳಲ್ಲಿ ಮಾಡುವ ಆಸೆ ನನಗಿದೆ. ಈ ಚಿತ್ರಕ್ಕಾಗಿ ಸುದೀಪ್ ಮತ್ತು ದರ್ಶನ್ ಕಾಲ್‌ಶೀಟ್ ನೀಡಿದರೆ ನಾನು ಇದನ್ನು ಅತ್ಯಂತ ಅದ್ದೂರಿಯಾಗಿ ಮಾಡಲು ತಯಾರಿದ್ದೇನೆ" ಎಂದು ಮತ್ತೊಮ್ಮೆ ಘೋಷಿಸಿದ್ದಾರೆ ನಿರ್ಮಾಪಕ ಅಪ್ಪುಗೋಳ್. ಆದರೆ ಈ ಬಗ್ಗೆ ನಟ ದರ್ಶನ್ ಹೇಳಿದ್ದೇ ಬೇರೆ. "ನಾನು ಮತ್ತು ಸುದೀಪ್ ಶೋಲೆ ಚಿತ್ರವನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಏಕೆಂದರೆ ನಮ್ಮಿಬ್ಬರನ್ನು ಹ್ಯಾಂಡಲ್ ಮಾಡುವಂತಹ ನಿರ್ದೇಶಕ ಕನ್ನಡದಲ್ಲಿ ಸಿಗುವುದಿಲ್ಲ. ಹೀಗಾಗಿ ಸದ್ಯಕ್ಕೆ ಶೋಲೆಯಂತಹ ಚಿತ್ರದಲ್ಲಿ ನಟಿಸುವ ಸಾಧ್ಯತೆ ತೀರಾ ಕಡಿಮೆ" ಎಂದಿದ್ದಾರೆ ದರ್ಶನ್. ಅದೇನೇ ಇರಲಿ, ಅಪ್ಪುಗೋಳ್ ಮತ್ತು ದರ್ಶನ್ ನಡುವಿನ ಸಂಬಂಧ 'ಸಂಗೊಳ್ಳಿ ರಾಯಣ್ಣ' ಚಿತ್ರ ಬಿಡುಗಡೆಗೆ ಮುನ್ನವೇ ಮುರಿದುಬೀಳುತ್ತಿದೆ ಎಂದು ಭವಿಷ್ಯ ನುಡಿದಿದ್ದ ಗಾಂಧಿನಗರದವರು ಈಗ ಅವರಿಬ್ಬರ ಎರಡನೇ ಚಿತ್ರ ಆರಂಭವಾಗುತ್ತಿರುವ ಸುದ್ದಿ ಕೇಳಿ ಬೆಚ್ಚಿಬಿದ್ದಿದ್ದಾರೆ.

ಸಾಧಾರಣವಾಗಿ ಒಂದು ಚಿತ್ರ ಸೂಪರ್ ಹಿಟ್ ಆದನಂತರ ಅದರ ನಿರ್ಮಾಪಕ ಮತ್ತು ನಾಯಕ ನಟರ ನಡುವೆ ವೈಮನಸ್ಸು ಹುಟ್ಟಿಕೊಂಡು ಅವರ ಬೇರೆ ಬೇರೆ ಆಗುವುದು ಚಿತ್ರರಂಗದಲ್ಲಿ ಮಾಮೂಲು. ಉದಾಹರಣೆಗೆ 'ಮುಂಗಾರು ಮಳೆ'ಯ ಕೃಷ್ಣಪ್ಪ ಮತ್ತು ಗಣೇಶ್, 'ಆಪ್ತಮಿತ್ರ' ಚಿತ್ರ ದ್ವಾರಕೀಶ್ ಮತ್ತು ವಿಷ್ಣುವರ್ಧನ್. ಆದರೆ ಅಪ್ಪುಗೋಳ್-ದರ್ಶನ್ ಜೋಡಿ ಇಂತಹ ಅದ್ದೂರಿ ಚಿತ್ರ ನಿರ್ಮಿಸಿದ ನಂತರವೂ ಅಣ್ಣ-ತಮ್ಮಂದಿರಂತಿರುವುದು ನಿಜಕ್ಕೂ ಮೆಚ್ಚಬೇಕಾದ್ದು.





ರಾಯಣ್ಣನ ಸಂಭ್ರಮದಲ್ಲೇ ಅಪ್ಪುಗೋಳ್!

'ಸಂಗೊಳ್ಳಿ ರಾಯಣ್ಣ' ಚಿತ್ರ ಈಗ ಶತದಿನೋತ್ಸವ ಆಚರಿಸುತ್ತಿರುವುದು ನಿಮಗೆ ಗೊತ್ತೇ ಇದೆ. ಮೊನ್ನೆ ಇದಕ್ಕೆ ಸಂಬಂಧಪಟ್ಟಂತೆ ನಡೆದ ಪತ್ರಿಕಾಗೋಷ್ಠಿಯಲ್ಲಿ ನಿರ್ಮಾಪಕ ಆನಂದ್ ಅಪ್ಪುಗೋಳ್ "ಈ ಚಿತ್ರ 46 ಕೇಂದ್ರಗಳಲ್ಲಿ ಶತದಿನೋತ್ಸವ ಆಚರಿಸುತ್ತಿದೆ" ಎಂಬ ಸಿಹಿ ಸುದ್ದಿಯನ್ನು ಘೋಷಿಸಿದರು. ಅಷ್ಟೇ ಅಲ್ಲ, "ಸದ್ಯಕ್ಕೆ 106 ಚಿತ್ರಮಂದಿರಗಳಲ್ಲಿ 'ಸಂಗೊಳ್ಳಿ ರಾಯಣ್ಣ' ತುಂಬಿದ ಪ್ರದರ್ಶನವನ್ನು ಕಾಣುತ್ತಿದೆ. ಇದಕ್ಕಾಗಿ ಕನ್ನಡದ ಅಭಿಮಾನಿಗಳಿಗೆ ಮತ್ತು ರಾಯಣ್ಣನ ಅಭಿಮಾನಿಗಳಿಗೆ ತುಂಬುಹೃದಯದಿಂದ ಕೃತಜ್ಞತೆ" ಎಂದರು.

ಆದರೆ ಈ ಚಿತ್ರದಿಂದ ತಮಗಾಗಿರುವ ಲಾಭ-ನಷ್ಟದ ಬಗ್ಗೆ ಮಾತ್ರ ಅವರು ಬಾಯಿಬಿಡಲೇ ಇಲ್ಲ. "ಯಾರಾದರೂ ಹೆತ್ತವರು ತಮ್ಮ ಮಕ್ಕಳಿಗಾಗಿ ಖರ್ಚು ಮಾಡಿದ ಹಣದ ವಿವರವನ್ನು ನೀಡುತ್ತಾರೆಯೇ? 'ಸಂಗೊಳ್ಳಿ ರಾಯಣ್ಣ' ಚಿತ್ರ ನನ್ನ ಕೂಸು. ನಾನು ಹಣಕ್ಕಾಗಿ ಈ ಚಿತ್ರ ಮಾಡಿಲ್ಲ, ಹಾಗಾಗಿ ಲಾಭ-ನಷ್ಟದ ಪ್ರಶ್ನೆ ಇಲ್ಲಿ ಉದ್ಭವವಾಗುವುದೇ ಇಲ್ಲ" ಎಂದು ಹಾರಿಕೆಯ ಉತ್ತರ ನೀಡಿದರು. ಪತ್ರಕರ್ತರು ಒತ್ತಾಯ ಮಾಡಿದಾಗ "ನೋಡಿ, ಈ ಚಿತ್ರ ನಮ್ಮ ದೇಶದ ಎಲ್ಲಾ ಭಾಷೆಗಳಿಗೂ ಡಬ್ ಆಗುತ್ತಿದೆ. ಅದೆಲ್ಲವನ್ನೂ ಲೆಕ್ಕ ತೆಗೆದುಕೊಂಡರೆ 100 ಕೋಟಿ ರೂ. ಲಾಭ ಬರಬಹುದು" ಎಂದು ಹೇಳಿದರು. ಆದರೆ ಕನ್ನಡದಲ್ಲಿ ಈ ಚಿತ್ರಕ್ಕಾಗಿ ಅವರು ಸುರಿದ ಹಣವನ್ನು ಮತ್ತು ಈ ಚಿತ್ರದಿಂದ ಆಗಿರುವ ಲಾಭ-ನಷ್ಟದ ವಿಷಯವನ್ನು ಮಾತ್ರ ಗುಟ್ಟಾಗಿಯೇ ಇಟ್ಟುಕೊಂಡರು. ಮುಂದಿನ ವಾರ 22 ರಂದು ಅಪ್ಪುಗೋಳ್ ಅವರ ಹುಟ್ಟಿದ ಹಬ್ಬ. ಅಂದು 'ರಾಯಣ್ಣ' ಚಿತ್ರದ ಶತದಿನೋತ್ಸವ ಸಮಾರಂಭವನ್ನು ಬೆಂಗಳೂರಿನ ಪ್ಯಾಲೇಸ್ ಮೈದಾನದಲ್ಲಿ ಅತ್ಯಂತ ವೈಭವದಿಂದ ಆಚರಿಸುವ ಯೋಜನೆಯನ್ನು ಅಪ್ಪುಗೋಳ್ ಹಾಕಿಕೊಂಡಿದ್ದಾರೆ. ಒಂದಂತೂ ನಿಜ. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಚಿತ್ರಂಗದಲ್ಲಿ ಸಿನಿಮಾವೊಂದು ಶತದಿನೋತ್ಸವ ಆಚರಿಸುವುದೇ ಅಪರೂಪವಾಗಿದೆ.

ಹಾಗೊಂದು ವೇಳೆ ಶತದಿನೋತ್ಸವ ತಲುಪಿದರೂ ಅದರ ನಿರ್ಮಾಪಕ ಸೆಂಚುರಿ ಸಂಭ್ರಮವನ್ನು ಹಂಚಿಕೊಳ್ಳುವುದೇ ಇಲ್ಲ. ಇದಕ್ಕೆಲ್ಲ ಅಪವಾದ ಎಂಬಂತೆ ಅಪ್ಪುಗೋಳ್ ಇನ್ನೂ ನಗುನಗುತ್ತ 'ರಾಯಣ್ಣ'ನ ಸಂಭ್ರಮದಲ್ಲೇ ಕಾಲ ಕಳೆಯುತ್ತಿದ್ದಾರೆ.

ಕೂಸು ಹುಟ್ಟುವ ಮುನ್ನವೆ ಕುಲಾವಿ

ನಿರ್ಮಾಪಕ ಆನಂದ್ ಅಪ್ಪುಗೋಳ್ ಮತ್ತು ನಟ ದರ್ಶನ್ ಮತ್ತೊಂದು ಚಿತ್ರವನ್ನು ಮಾಡುತ್ತಿರುವುದು ಈಗ ಜಗಜ್ಜಾಹೀರಾಗಿದೆ. ಬರುವ ಆಗಸ್ಟ್ 15 ರಂದು - ಅಂದರೆ ಸಂಗೊಳ್ಳಿ ರಾಯಣ್ಣನ ಹುಟ್ಟುಹಬ್ಬದ ದಿನದಂದು- ಇವರಿಬ್ಬರ ಹೊಸ ಚಿತ್ರ ಸೆಟ್ಟೇರುತ್ತದಂತೆ. ವಿಚಿತ್ರವೆಂದರೆ ಅವತ್ತು ಸೆಟ್ಟೇರಲಿರುವ ಚಿತ್ರದ ಕತೆ ಏನು, ನಿರ್ದೇಶಕ ಯಾರು ಎಂಬುದು ಇಬ್ಬರಿಗೂ ಗೊತ್ತಿಲ್ಲ. ಅವುಗಳಿಗೆ ಇನ್ನೂ ತಲಾಷ್ ಮಾಡುತ್ತಿದ್ದಾರಂತೆ. ಕೂಸು ಹುಟ್ಟುವ ಮುನ್ನ ಕುಲಾವಿ ಎಂದರೆ ಇದೇ ಅಲ್ಲವೇ?



ರಾಯಣ್ಣ 100 ದಿನ 100 ಕೋಟಿ





ದರ್ಶನ್ ಮಗನ ಮಹತ್ತರ ಬದಲಾವಣೆ!

'ಸಂಗೊಳ್ಳಿ ರಾಯಣ್ಣ' ಚಿತ್ರದಿಂದ ಯಾರಿಗೆ ಲಾಭವಾಗಿದೆ? ಯಾರಿಗೆ ನಷ್ಟವಾಗಿದೆ? ಎಂಬ ಚರ್ಚೆಯಂತೂ ಗಾಂಧಿನಗರದಲ್ಲಿ ನಿತ್ಯವೂ ನಡೆಯುತ್ತಲೇ ಇದೆ. ಆದರೆ ನಿಜಕ್ಕೂ ಈ ಚಿತ್ರದಿಂದಾಗಿ ದರ್ಶನ್ ಅವರ ಪುತ್ರ ವಿನೀಶ್‌ನಲ್ಲಿ ಮಹತ್ತರವಾದ ಬದಲಾವಣೆಯಾಗಿದೆಯಂತೆ. ನಾಲ್ಕು ವರ್ಷದ ಈ ಪೋರ 'ಸಂಗೊಳ್ಳಿ ರಾಯಣ್ಣ' ಚಿತ್ರ ನೋಡಿದ ನಂತರ ಅಪ್ಪನ ತರಹ ಕುದುರೆ ಏರಿ "ಹರಹರ ಮಹದೇವ" ಎಂದು ಆರ್ಭಟಿಸುತ್ತ ಕುದುರೆ ಸವಾರಿ ಮಾಡುತ್ತಾನಂತೆ. ಅದನ್ನು ನೋಡಿ ದರ್ಶನ್ ಮತ್ತು ಆತನ ಪತ್ನಿ ವಿಜಯಲಕ್ಷ್ಮಿ ಅವರಿಗೆ ಆಶ್ಚರ್ಯವಾಗಿದೆ.

ದರ್ಶನ್ ಪುತ್ರ ವಿನೀಶ್ ಅನೇಕ ವಿಷಯಗಳಲ್ಲಿ ಅಪ್ಪನ ಹಾದಿಯಲ್ಲೇ ಸಾಗುತ್ತಿದ್ದಾನೆ. ಉದಾಹರಣೆಗೆ ಈತನಿಗೆ ಬೇರೆ ಮಕ್ಕಳಂತೆ ಕಾರು, ಮೋಟರ್ ಬೈಕ್ ಅಥವಾ ವಿಡಿಯೋ ಗೇಮ್ಸ್ ತರಹದ ಆಟದ ಸಾಮಾನುಗಳ ಬಗ್ಗೆ ಅಂತಹ ಆಸಕ್ತಿಯೇನೂ ಇಲ್ಲವಂತೆ. ಬದಲಿಗೆ ಆದಷ್ಟು ವನ್ಯಮೃಗಗಳ ಬೊಂಬೆಗಳನ್ನು ಸಂಗ್ರಹಿಸುವ ಬಗ್ಗೆ ಆತನಿಗೆ ಆಸಕ್ತಿಯಂತೆ. ಈ ಕಾರಣಕ್ಕೇ ದರ್ಶನ್ ವಿದೇಶಕ್ಕೆ ಶೂಟಿಂಗ್‌ಗೆ ಹೋದಾಗಲೆಲ್ಲ ವಾಪಸ್ ಬರುವಾಗ ವನ್ಯಮೃಗಗಳ ಬೊಂಬೆಗಳನ್ನು ತರಲು ಮರೆಯುವುದಿಲ್ಲವಂತೆ.

ಈಗಾಗಲೇ ವಿನೀಶ್ ಕಪಾಟಿನಲ್ಲಿ ಸುಮಾರು 3,000 ಹುಲಿಗಳಿವೆಯಂತೆ. 2000 ಸಿಂಹಗಳು, 1000 ಕ್ಕೂ ಹೆಚ್ಚು ಆನೆ, ಕರಡಿ, ಚಿರತೆ ಹೀಗೆ ಅನೇಕ ಪ್ರಾಣಿಗಳ ಬೊಂಬೆಗಳನ್ನು ಕೂಡಿಟ್ಟಿದ್ದಾನಂತೆ. ನಿಮಗೆ ಗೊತ್ತಿರಬಹುದು. ಮೈಸೂರಿನಲ್ಲಿರುವ ತಮ್ಮ ಎಸ್ಟೇಟ್‌ನಲ್ಲಿ ದರ್ಶನ್ ಕೂಡ ಇದೇ ರೀತಿ ಅನೇಕ ಪ್ರಾಣಿಗಳನ್ನು ಸಾಕುತ್ತಿದ್ದಾರೆ. ವಾಸ್ತವವಾಗಿ ದರ್ಶನ್ ಅವರ ತೋಟ ಒಂದು ರೆಸಾರ್ಟ್ ಅಥವಾ ಮೃಗಾಲಯ ಎಂದರೂ ತಪ್ಪಲ್ಲ. ಬಹುಶಃ ಇದರಿಂದ ಸ್ಫೂರ್ತಿಗೊಂಡು ವಿನೀಶ್ ಪ್ರಾಣಿಗಳ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿರಬಹುದೋ ಏನೊ. ಅದೇನೇ ಇರಲಿ ನಾಲ್ಕು ವರ್ಷದ ಪುಟಾಣಿ ಚೆಂಡು, ಬ್ಯಾಟ್ ಹಿಡಿಯುವ ಬದಲು ಕುದುರೆ ಸವಾರಿ ಮಾಡಿ "ಹರಹರ ಮಹಾದೇವ್" ಎಂದು ಆರ್ಭಟಿಸುವುದು ಮಜವಾಗಿದೆಯಲ್ಲವೇ?





ಅಭಿಮಾನಿಗಳಿಗೂ ಪುಳಕ.....

ಫೆಬ್ರವರಿ 16 ರಂದು ದರ್ಶನ್ ಅವರ ಹುಟ್ಟುಹಬ್ಬ. ಅಂದು ಆನಂದ್ ಅಪ್ಪುಗೋಳ್ ಮತ್ತು ಸಂದೇಶ್ ನಾಗರಾಜ್ ತಮ್ಮ ಹೊಸ ಚಿತ್ರಗಳ ಬಗ್ಗೆ ಘೋಷಿಸಲಿದ್ದಾರೆ. ಇವೆರಡರಲ್ಲೂ ದರ್ಶನ್ ನಟಿಸಲಿದ್ದಾರೆ. ಜೊತೆಗೆ ಅವತ್ತು ಸುರೇಶ್ ಗೌಡ ನಿರ್ಮಾಣದ, ದರ್ಶನ್ ನಟಿಸಲಿರುವ 'ಬೃಂದಾವನ' ಚಿತ್ರದ ಮುಹೂರ್ತವೂ ನಡೆಯಲಿದೆ.

ನಿಜಕ್ಕೂ ಒಬ್ಬ ನಟನ ಅಭಿಮಾನಿಗಳಿಗೆ ಇದಕ್ಕಿಂತ ಹೆಚ್ಚು ಪುಳಕವಾಗುವಂತಹ ವಿಷಯ ಇನ್ನೇನಿದೆ? ಇತ್ತೀಚೆಗೆ ಯಾವ ನಾಯಕನಟನೂ ತನ್ನ ಹುಟ್ಟುಹಬ್ಬವನ್ನು ಇಷ್ಟೊಂದು ಸಂತೋಷದಿಂದ ಆಚರಿಸಿದ್ದೇ ಇಲ್ಲ. ಸಾಧಾರಣವಾಗಿ ತನ್ನ ಚಿತ್ರ ಹಿಟ್ ಆಗದಿದ್ದರೆ ಯಾವ ನಟನೂ ತನ್ನ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವ ಸಾಹಸಕ್ಕೆ ಹೋಗುವುದೇ ಇಲ್ಲ. ಅಂತಹ ವಾತಾವರಣ ಕನ್ನಡದಲ್ಲಿರುವಾಗ ಈಗ ದರ್ಶನ್ 100 ದಿನದ ಸಂಭ್ರಮ ಮತ್ತು ಮೂರು ಹೊಸ ಚಿತ್ರಗಳ ಖುಷಿಯನ್ನು ಅನುಭವಿಸುತ್ತಿರುವುದು ವಿಶೇಷವಾಗಿ ಕಾಣಿಸುತ್ತಿದೆ.

● ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com